ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : 40 ಸಂಚಿಕೆ : 01 । ಜನವರಿ – ಜೂನ್ 2026

ಸಂಪಾದಕ

ಚಂದ್ರಶೇಖರ್ ನಾದೂರು

ಬಿ.ಎಂ.ಶ್ರೀ. ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ. ಕಲಾಭವನ (ರಿ.), ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ

೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦೦೦೪

ದೂರವಾಣಿ : ೯೯೭೨೮ ೧೨೧೨೭

ಮಿಂಚಂಚೆ : bmsritrust@gmail.com bmsrilochana@gmail.com

KARNATAKA LOCHANA : Half yearly Research Journal

Edited by
Chandrashekhar Nadur

Published by
B.M.Sri. Prathistana (R.)
M.V.Si. P.G. Research Centre
B.M.Sri. Kalabhavana, B.M.Sri. Trust Road
3rd Main Road, Narasimharaja Colony, Bangalore 560 004
Ph.No. 99728 12127
e-mail : bmsritrust@gmail.com, bmsrilochana@gmail.com

January - June 2026 (Vol. 40, No. 1)

Pages: 156

Subscription Details :
Five Years : Rs. 450/-
Life : Rs. 1500/-

ಚಂದಾ ವಿವರ

ಆಜೀವ : ರೂ. ೧೫೦೦/–

ಮುಖಪುಟ: 'ಜಿನವಲ್ಲಭ ಶಾಸನ' ಕೆತ್ತಿರುವ ಬೊಮ್ಮಲಗುಟ್ಟ

ಬಿ.ಎಂ.ಶ್ರೀ. ಪ್ರತಿಷ್ಠಾನದ ಪದಾಧಿಕಾರಿಗಳು

ಡಾ. ಆರ್. ಲಕ್ಷ್ಮೀನಾರಾಯಣ, ಗೌರವಾಧ್ಯಕ್ಷರು
ಡಾ. ಬೈರಮಂಗಲ ರಾಮೇಗೌಡ, ಅಧ್ಯಕ್ಷರು
ಡಾ. ಶಾಂತರಾಜು, ಗೌರವ ಕಾರ್ಯದರ್ಶಿ
ಚಂದ್ರಶೇಖರ್ ನಾದೂರು, ಗೌರವ ಕೋಶಾಧಿಕಾರಿ

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಸಂಪಾದಕರ ನುಡಿ

ಈ ಸಂಚಿಕೆ ತಡವಾಗಿ ಓದುಗರ ಕೈ ಸೇರುತ್ತಿದೆ, ಕ್ಷಮೆಯಿರಲಿ. ಪ್ರಸ್ತುತ ಸಂಚಿಕೆಯ ಲೇಖನಗಳ ಬಗ್ಗೆ ನಾಲ್ಕು ಮಾತುಗಳನ್ನು ಬರೆಯತ್ತಿದ್ದೇನೆ.

೨೦ನೆಯ ಶತಮಾನದ ಪ್ರಾರಂಭದಲ್ಲಿ ಬಂದ ಕನ್ನಡ ಕವಿಗಳು, ವಿದ್ವಾಂಸರಿಗೆ ದೊಡ್ಡ ಜವಾಬ್ದಾರಿ ಇತ್ತು. ನಡುಗನ್ನಡ ಭಾಷೆಯಿಂದ ಹೊಸಗನ್ನಡ ಭಾಷೆಗೆ ಜಿಗಿದ ಕಾಲ ಅದು. ಹಳಗನ್ನಡ ಸಾಹಿತ್ಯವನ್ನು ತಾಳೆಯೋಲೆಗಳಿಂದ ಪರಿಷ್ಕರಿಸಿ, ಸಂಪಾದಿಸಿ, ಪ್ರಕಟಿಸಲು, ಅನೇಕ ವಿದ್ವಾಂಸರು ತಮ್ಮ ತನು, ಮನ, ಧನಗಳನ್ನು ಅರ್ಪಿಸಿದರು. ೨೧ನೇ ಶತಮಾನದ ಆಧುನಿಕ ವಿಜ್ಞಾನಯುಗದಲ್ಲಿ ಇರುವ ನಾವು ಅಂದಿನ ವಿದ್ವಾಂಸರನ್ನು, ಅವರ ಕಾರ್ಯಸಾಧನೆಗಳನ್ನು ಗುರುತಿಸಿ ನೆನಪಿಸಿಕೊಳ್ಳುವ ಕಾಲ ಇದಾಗಿದೆ. ಈ ಮೂಲಕ ಅವರ ಸೇವೆಗೆ ಗೌರವ ಸಲ್ಲಿಸಬೇಕಾಗಿದೆ. ಬಿ.ಎಂ.ಶ್ರೀ. ಪ್ರತಿಷ್ಠಾನವು ಅಂತಹ ಹಿರಿಯರ ಜನ್ಮಶತಮಾನೋತ್ಸವ ಆಚರಿಸಿ ವಿಚಾರ ಸಂಕಿರಣಗಳನ್ನು, ಉಪನ್ಯಾಸಗಳನ್ನು ಏರ್ಪಡಿಸುವ ಮೂಲಕ ಗೌರವ ಸಲ್ಲಿಸುತ್ತಿದೆ. ಪ್ರಸ್ತುತ ಸಂಚಿಕೆಯಲ್ಲಿ ಅಂತಹ ಕೆಲವು ಮಹನೀಯರನ್ನು ಸ್ಮರಿಸಲಾಗಿದೆ.

೧೯೯೨ರಿಂದ ೨೦೦೧ರವರೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ಎನ್. ಬಸವಾರಾಧ್ಯರು ಹಸ್ತಪ್ರತಿ ಶಾಸ್ತ್ರಕ್ಕೆ ಗಣನೀಯ ಕೊಡುಗೆ ನೀಡಿದವರು. ಪ್ರೊ. ಎಂ.ವಿ.ಸೀ. ಅವರ ಆಶಯದಂತೆ ಕಾರ್ಯನಿರ್ವಹಿಸಿದವರು. ೨೦೨೬ ಅವರ ಜನ್ಮಶತಮಾನೋತ್ಸವ ವರ್ಷವಾದ್ದರಿಂದ ಅವರ ಸೇವೆಯನ್ನು ಸ್ಮರಿಸಿಕೊಳ್ಳುವ ಸಲುವಾಗಿ 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಅವರ ಬಗ್ಗೆ ಲೇಖನವೊಂದನ್ನು ಬರೆದು ಕೊಡಬೇಕೆಂದು ಡಾ. ಸಿ.ಯು. ಮಂಜುನಾಥ್ ಅವರನ್ನು ಕೋರಿಕೊಂಡಾಗ ಅತ್ಯಂತ ಸಂತೋಷದಿಂದ ಒಪ್ಪಿ ಬರೆದುಕೊಟ್ಟಿದ್ದಾರೆ. ಅವರ ಬಾಲ್ಯ, ವಿದ್ಯಾಭ್ಯಾಸ, ಗುರುಪರಂಪರೆ, ಸಾಹಿತ್ಯ, ಗ್ರಂಥ ಸಂಪಾದನೆ, ನಿಘಂಟು ಕ್ಷೇತ್ರಕ್ಕೆ ಅವರ ಕೊಡುಗೆಯನ್ನು ವಿವರವಾಗಿ ದಾಖಲಿಸಿದ್ದಾರೆ.

ಯುದ್ಧವೆಂಬುದು 'ಅಹಂ' ನ ಪ್ರಶ್ನೆಯಾದಾಗ ಸಾವು ನೋವುನ್ನು ಕೇಳುವವರಾರು? ಅಧಿಕಾರದ ಅಮಲು, ಸಂಪತ್ತಿನ ಮೋಹ, ಪ್ರತಿಷ್ಠೆ ಇವುಗಳು ತಲೆಗೇರಿದರೆ ವಿವೇಕವು ಮರೆಯಾಗುತ್ತದೆ. ವಿಜ್ಞಾನದ ಆವಿಷ್ಕಾರಗಳು, ವಿವೇಕಯುತ ಮನುಷ್ಯಸಮಾಜಕ್ಕೆ ಉಪಯುಕ್ತವಾಗುವುದರ ಜೊತೆಗೆ ಅವಿವೇಕಿಗಳ ಕೈಗೆ ಸಿಕ್ಕಿ ಪ್ರಪಂಚದ ನಾಶಕ್ಕೂ ಕಾರಣವಾಗುತ್ತಿವೆ. ಪ್ರಸ್ತುತ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧದ ಬಗ್ಗೆ ಕವಿಗಳ ಅಭಿಪ್ರಾಯ ಏನಿದೆ ಎಂಬುದನ್ನು ಕುರಿತು ಡಾ. ಓ.ಆರ್. ಪ್ರಕಾಶ್ ಅವರು 'ಇಂಗ್ಲಿಷ್ ಸಾಹಿತ್ಯದಲ್ಲಿ ಯುದ್ಧ ಕವಿಗಳು' ಎಂಬ ಬರಹದಲ್ಲಿ ವಿಶ್ಲೇಷಿಸಿದ್ದಾರೆ. ಯುದ್ಧದಲ್ಲಿ ಭಾಗಿಯಾಗಿದ್ದವರೇ ತಮ್ಮ ಅನುಭವಗಳನ್ನು ಹೇಳಿಕೊಂಡಿರುವುದು ವಿಶೇಷ.

ಪ್ರಾಚೀನವಾದ ಯಾವುದೇ ಪಠ್ಯವು ನಿರ್ದಿಷ್ಟ ಕಾರಣಕ್ಕೆ ರಚನೆಯಾಗಿದ್ದರೂ ಅದರಲ್ಲಿ ಆಯಾ ಕಾಲದ ಸಾಮಾಜಿಕ ಪರಿಸರದ ವಿವಿಧ ಚಿಂತನೆಗಳು ವ್ಯಕ್ತವಾಗಿರುತ್ತವೆ. ಜೈನ ಸಾಹಿತ್ಯ, ವಚನ ಸಾಹಿತ್ಯ, ಕೀರ್ತನ ಸಾಹಿತ್ಯವಾಗಲೀ ಅವು ತಮ್ಮ ಧರ್ಮದ ವಿಷಯಗಳಿಗೆ ಮಾತ್ರ ಸೀಮಿತವಾಗಿರದೆ ಅಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳೂ ಚರ್ಚೆಗೆ ಒಳಪಟ್ಟಿರುತ್ತವೆ. ಹಾಗೆಯೇ ತತ್ವಪದಕಾರರು ಸಹ ತಮ್ಮ ಪದಗಳಲ್ಲಿ ಸಮಕಾಲೀನ ವಿದ್ಯಮಾನಗಳ, ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ನಿರ್ಭಿಡೆಯಿಂದ ಹಾಡಿದ್ದಾರೆ. ಡಾ. ಎನ್.ಆರ್. ಲಲಿತಾಂಬ ಅವರು 'ತತ್ವಪದಗಳಲ್ಲಿ ಚಾರಿತ್ರಿಕ ನೋಟ– ತತ್ವಪದಗಳು ಪರ್ಯಾಯ ಇತಿಹಾಸದ ಕನ್ನಡಿಗಳು' ಲೇಖನದಲ್ಲಿ ತತ್ವಪದಗಳಲ್ಲಿ ಪರ್ಯಾಯ ಚರಿತ್ರೆಯ ನಿರೂಪಣೆ ಮೂಡಿಬಂದಿರುವ ಬಗೆಯನ್ನು ಚರ್ಚಿಸಿದ್ದಾರೆ. ಲೋಕಪರವಾದ, ಜೀವಪರವಾದ, ಪ್ರಕೃತಿಪರವಾದ ಮಾನವೀಯ ಮೌಲ್ಯವುಳ್ಳ ನೆಲಸಂಸ್ಕೃತಿಯ ಜೀವಧ್ವನಿಗಳಾಗಿ ಇದ್ದರೂ ತತ್ವಪದಗಳು ಅಲಕ್ಷ್ಯಕ್ಕೆ ಒಳಗಾದ ರಾಜಕಾರಣವನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

ಬೇಂದ್ರೆಯವರ ಬಹುಚರ್ಚಿತ ಕವನಗಳಲ್ಲಿ 'ಜೋಗಿ'ಯೂ ಒಂದು. ಹಿಂದಿನ ವಿಮರ್ಶಕರು ಮಾಡಿರುವ ವಿಶ್ಲೇಷಣೆಯನ್ನು ಗಮನಿಸಿ ಎಸ್.ಆರ್. ವಿಜಯಶಂಕರ ಅವರು ಈ ಕವಿತೆಯನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿದ್ದಾರೆ. ಪಠ್ಯಕೇಂದ್ರಿತ ವಿಶ್ಲೇಷಣೆ ವಿಮರ್ಶಕನಿಗೆ ಒಂದು ಸವಾಲಾಗಿರುವಂತದ್ದು. 'ಜೋಗಿ' ಕವಿತೆಯ ಆಂತರ್ಯವನ್ನು ಹೊಕ್ಕು ಬಿಡಿಬಿಡಿಯಾಗಿ ಇಲ್ಲಿ ಚರ್ಚಿಸಿದ್ದಾರೆ. ಅಂತರಂಗದ ತುಮುಲಗಳಿಗೆ ಸಂವಾದಿಯಾಗಿ ಬಾಹ್ಯಲೋಕದ ಭಯಾನಕ, ಮೂಕ ಚಿತ್ರಣವನ್ನು ಕವಿ ಪ್ರತಿಮಾತ್ಮಕವಾಗಿ ಕಟ್ಟಿಕೊಟ್ಟಿರುವ ರೀತಿಯನ್ನು ವಿವರವಾಗಿ ವಿಶ್ಲೇಷಿಸಿದ್ದಾರೆ.

'ವಚನ ಪಿತಾಮಹ' ಎಂದೇ ಹೆಸರಾದ ಫ.ಗು. ಹಳಕಟ್ಟಿಯವರು ಗ್ರಂಥ ಸಂಪಾದನಾ ಶಾಸ್ತ್ರ ಇನ್ನೂ ಬೆಳೆದಿರದ ಆ ಕಾಲದಲ್ಲಿ ಸ್ವಸಾಮರ್ಥ್ಯದಿಂದ ಪರಿಣಿತಿ ಸಾಧಿಸಿ, ಹಸ್ತಪ್ರತಿ ಸಂಗ್ರಹ, ಗ್ರಂಥ ಸಂಪಾದನೆ, ಪ್ರಕಟಣೆ ಕಾರ್ಯವನ್ನು ಮಾಡಿ ವಚನಗಳನ್ನು ಬೆಳಕಿಗೆ ತಂದ ಅಗ್ರಗಣ್ಯರು. ಡಾ. ಗುರುಪಾದ ಮರಿಗುದ್ದಿ ಅವರು ದೀರ್ಘ ಲೇಖನದ ಮೂಲಕ ಹಳಕಟ್ಟಿಯವರ ಸಂಪಾದನಾ ಕ್ರಮವನ್ನು ವಿವರವಾಗಿ ಪರಿಚಯಿಸಿದ್ದಾರೆ.

ಆದಿಕವಿ ಪಂಪನ ಬಗ್ಗೆ ಹೆಚ್ಚಿನ ಸಂಗತಿಗಳನ್ನು ತಿಳಿಸುವ 'ಜಿನವಲ್ಲಭ ಶಾಸನ' ದ ಬಗ್ಗೆ ಇಲ್ಲಿಯವರೆಗೂ ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ಡಾ. ಸಿ.ಕೆ. ಜಗದೀಶ್ ಅವರು ಈ ಶಾಸನದ ಬಗ್ಗೆ ಪ್ರತಿಷ್ಠಾನದಲ್ಲಿ ವಿವರವಾದ ಉಪನ್ಯಾಸ ನೀಡಿದ್ದರು. ಇದನ್ನೇ ಒಂದು ಲೇಖನವನ್ನಾಗಿ ಕೊಡಿ ಎಂಬ ಕೋರಿಕೆಯ ಮೇರೆಗೆ ಬರೆದುಕೊಟ್ಟಿದ್ದಾರೆ. ಶಾಸನದ ಪ್ರತಿ ಶಬ್ದಗಳಿಗೂ ವಿವರಣೆ ನೀಡಿದ್ದಾರೆ.

ಡಾ. ಎಸ್. ಪೂರ್ಣಿಮಾ ಅವರು ಭಕ್ತಕವಿ ಹರಿಹರನ 'ಕಾವ್ಯಗಳಲ್ಲಿ ಭಕ್ತಿಯ ನೆಲೆ'ಯ ಸ್ವರೂಪವು ಹೇಗೆ ವೈವಿಧ್ಯಮಯವಾಗಿ ಮೂಡಿಬಂದಿದೆ ಎಂಬುದನ್ನು ಕಾವ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಗುಪ್ತಭಕ್ತಿ, ರೌದ್ರಭಕ್ತಿ, ಕಾರಣಿಕ ಭಕ್ತಿ, ತ್ರಿವಿಧ ಭಕ್ತಿ, ಶರಣಸತಿ – ಲಿಂಗಪತಿ, ಕಾಯಕ, ದಾಸೋಹ ನಿಷ್ಠೆ ಮೊದಲಾದ ಭಕ್ತಿಯ ವಿವಿಧ ಸ್ವರೂಪಗಳು ಹರಿಹರ ಕವಿಯ ರಗಳೆಗಳಲ್ಲಿ ವ್ಯಕ್ತವಾದ ಬಗೆಯನ್ನು ಪರಿಚಯಿಸಿದ್ದಾರೆ,

'ಪಂಪ – ಕುಲಂ ಕುಲಮಲ್ತು ಎಂಬ ಪ್ರತಿರೋಧದ ದನಿ' ಎಂಬ ಲೇಖನದಲ್ಲಿ ಡಾ. ಎಚ್. ಜಯಪ್ರಕಾಶ್ ಶೆಟ್ಟಿಯವರು ಪಂಪನ ಕಾವ್ಯವನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. "ಪಂಪ ಭಾರತವು ಪಾಂಡವರ– ಕೌರವರ ನೆಲದ ಹಕ್ಕಿನ ಸೀಮಿತ ಕದನವಷ್ಟೇ ಅಲ್ಲ" ಎಂದು ಹೇಳುತ್ತ "ಕಾವ್ಯವನ್ನು ರಾಜಸತ್ತೆಯ ಆವರಣದಿಂದ ಲೋಕಸತ್ತೆಯ ಬಯಲಿಗೆ ತಂದುಕೊಳ್ಳಬೇಕಾಗಿದೆ" ಎಂಬ ನಿಲುವಿನೊಂದಿಗೆ ಚರ್ಚಿಸಿದ್ದಾರೆ. ಪಂಪಭಾರತದಲ್ಲಿ ಪದೇಪದೇ ಕಾಣಿಸಿಕೊಳ್ಳುವ ಕುಲದ ವಿಚಾರಗಳನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಶ್ರೇಷ್ಠ ಕಾವ್ಯವೊಂದು ಕಾಲಮಾನದ ಸಿದ್ಧಾಂತಗಳಿಗೆ ತಕ್ಕಂತೆ ಹೊಸ ಹೊಸ ಅರ್ಥಗಳನ್ನು ಬಿಟ್ಟುಕೊಡುತ್ತಾ ಹೋಗುತ್ತದೆ. ಸಾಂಪ್ರದಾಯಿಕ ಚಿಂತನಾ ಕ್ರಮಗಳನ್ನು ಬದಿಗಿಟ್ಟು ಹೊಸ ಅರ್ಥವನ್ನು ಗುರುತಿಸುವ ಲೇಖನ ಇದಾಗಿದೆ.

ಅತ್ಯಂತ ಜನಪ್ರಿಯ ಕಾವ್ಯವಾದ ಲಕ್ಷ್ಮೀಶನ 'ಜೈಮಿನಿ ಭಾರತ'ವು ಒಂದು ಕಥಾಗುಚ್ಛವೇ ಆಗಿದ್ದು ಹಲವಾರು ಯಕ್ಷಗಾನ ಪ್ರಸಂಗಗಳಿಗೆ ಮೂಲ ಆಕರವಾಗಿದೆ. ಯಕ್ಷಗಾನ ಕವಿಗಳು ಲಕ್ಷ್ಮೀಶನ ಪದ್ಯಗಳನ್ನು ಯಕ್ಷಗಾನ ಶೈಲಿಗೆ ಹೇಗೆ ಅಳವಡಿಸಿಕೊಂಡರು,

ಯಕ್ಷಗಾನ ಪ್ರಸಂಗಗಳ ಮೇಲೆ ಲಕ್ಷ್ಮೀಶನ ಪ್ರಭಾವ ಹೇಗೆ ಆಗಿದೆ ಎಂಬುದನ್ನು ಉಮೇಶ್ ಶಿರೂರು ಅವರು ಉದಾಹರಣೆ ಸಹಿತ ವಿವರಿಸಿದ್ದಾರೆ.

ಡಾ. ಶೋಭಾರಾಣಿ ಅವರು 'ಅಸಾಮಾನ್ಯರ ಅಬ್ಬರದಲ್ಲಿ ಶ್ರೀಸಾಮಾನ್ಯರ ಹುಡುಕಾಟ' ಎಂಬ ಲೇಖನದಲ್ಲಿ ಸಾವಿರಾರು ವರ್ಷಗಳ ಸಮೃದ್ಧ ಕನ್ನಡ ಕಾವ್ಯ ಪರಂಪರೆಯಲ್ಲಿ ಶ್ರೀಸಾಮಾನ್ಯನ ಚಿತ್ರಣದ ಹುಡುಕಾಟ ಮಾಡಿದ್ದಾರೆ. ರಾಜಮಹಾರಾಜರ, ಪುರಾಣ ಪಾತ್ರಗಳ ನಡುವೆ ಶ್ರೀಸಾಮಾನ್ಯನಿಗೆ ಕನಿಷ್ಠ ಗಮನಕೊಟ್ಟಿದ್ದಾರೆ ಎಂಬುದನ್ನು ಕಾವ್ಯಗಳನ್ನು ಅನುಲಕ್ಷಿಸಿ ಚರ್ಚಿಸಿದ್ದಾರೆ. ವಚನ ಚಳವಳಿ ಪ್ರಭಾವಕ್ಕೆ ಒಳಗಾದ ಪರಿಣಾಮ ಹರಿಹರ, ರಾಘವಾಂಕ ಮುಂತಾದ ಮುಂದಿನ ಕವಿಗಳ ಕಾವ್ಯಗಳಲ್ಲಿ ಶ್ರೀಸಾಮಾನ್ಯನ ಪ್ರಸ್ತಾಪ ಆಗಿರುವುದನ್ನು ತಿಳಿಸಿದ್ದಾರೆ.

ಈ ಸಂಚಿಕೆ ಹೊರಬರಲು ಸದಾ ಸೂಕ್ತ ಸಲಹೆ ನೀಡುತ್ತ ಬಂದಿರುವ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರಿಗೆ, ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರಿಗೆ, ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರಿಗೆ, ಕರಡಚ್ಚು ತಿದ್ದುವಲ್ಲಿ ಸಹಕರಿಸಿದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಬಿ.ಎಸ್. ಗುರುಪ್ರಸಾದ್ ಅವರಿಗೆ, ಲೇಖನಗಳನ್ನು ಸೂಕ್ತ ಸಮಯಕ್ಕೆ ಸಿದ್ಧಪಡಿಸಿ ಕಳುಹಿಸಿದ ವಿದ್ವಾಂಸರಿಗೆ, ಡಿಟಿಪಿ ಮಾಡಿ ಮುದ್ರಣಕ್ಕೆ ಸಿದ್ಧಮಾಡಿಕೊಟ್ಟ ಕಚೇರಿ ಸಿಬ್ಬಂದಿಯವರಿಗೆ, ಸುಂದರವಾಗಿ ಸಕಾಲಕ್ಕೆ ಮುದ್ರಿಸಿಕೊಟ್ಟ 'ಸ್ವಾ ್ಯನ್ ಪ್ರಿಂಟರ್ಸ್' ಅವರಿಗೆ ಕೃತಜ್ಞನಾಗಿದ್ದೇನೆ.

ಚಂದ್ರಶೇಖರ್ ನಾದೂರು
ಸಂಪಾದಕ

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ–ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ–ಅಂಚೆಗಳನ್ನು ತಪ್ಪದೆ ನೀಡಬೇಕು.

೬. ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭. ಲೇಖನಗಳನ್ನು ಪ್ರತಿಷ್ಠಾನದ ವಿಳಾಸಕ್ಕೆ ಅಥವಾ bmsrilochana@gmail.com ಈ ಮಿಂಚಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವು ಸಾಂಕೇತಿಕ ಗೌರವ ಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಆಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

೧೦. ಲೇಖನಗಳು ೧೫ ಪುಟಗಳ ಮಿತಿಯಲ್ಲಿರಬೇಕು.

ಈ ಸಂಚಿಕೆಯಲ್ಲಿ....

ಪುಟ ಸಂಖ್ಯೆ

೧. ಎನ್. ಬಸವಾರಾಧ್ಯ–ಶತಮಾನೋತ್ಸವ ಸ್ಮರಣೆ
– **ಡಾ. ಸಿ.ಯು. ಮಂಜುನಾಥ್** **೯**

೨. ತತ್ವಪದಗಳಲ್ಲಿ ಚಾರಿತ್ರಿಕ ನೋಟ–
ತತ್ವಪದಗಳು ಪರ್ಯಾಯ ಇತಿಹಾಸದ ಕನ್ನಡಿಗಳು
– **ಡಾ. ಎನ್. ಆರ್. ಲಲಿತಾಂಬ** **೨೨**

೩. ದ.ರಾ. ಬೇಂದ್ರೆಯವರ 'ಜೋಗಿ' ಕವನ
– **ಡಾ. ಎಸ್.ಆರ್. ವಿಜಯಶಂಕರ** **೩೮**

೪. ಹಳ್ಳಿಕಟ್ಟಿಯವರ ವಚನ ಸಂಪಾದನೆ ವಿಧಿವಿಧಾನಗಳು
– **ಡಾ. ಗುರುಪಾದ ಮರಿಗುದ್ದಿ** **೫೩**

೫. ಜಿನವಲ್ಲಭನ ಶಾಸನ – **ಡಾ. ಸಿ.ಕೆ. ಜಗದೀಶ್** **೬೫**

೬. ಹರಿಹರನ ಭಕ್ತಿಯ ನೆಲೆಗಳು – **ಡಾ. ಪೂರ್ಣಿಮಾ ಎಸ್.** **೮೮**

೭. ಪಂಪ : ಕುಲಂ ಕುಲಮಲ್ತು ಎಂಬ ಪ್ರತಿರೋಧದ ದನಿ
– **ಡಾ. ಜಯಪ್ರಕಾಶ್ ಶೆಟ್ಟಿ ಎಚ್.** **೯೩**

೮. ಜೈಮಿನಿ ಭಾರತ ಮತ್ತು ಯಕ್ಷಗಾನ ಪ್ರಸಂಗಗಳು
– **ಉಮೇಶ ಶಿರೂರು** **೧೬೬**

೯. ಅಸಾಮಾನ್ಯರ ಅಬ್ಬರದಲ್ಲಿ ಶ್ರೀಸಾಮಾನ್ಯರ ಹುಡುಕಾಟ
– **ಡಾ. ಶೋಭಾರಾಣಿ** **೧೨೭**

೧೦. ಇಂಗ್ಲಿಷ್ ಸಾಹಿತ್ಯದಲ್ಲಿ ಯುದ್ಧದ ಕವಿಗಳು
– **ಓ.ಆರ್. ಪ್ರಕಾಶ್** **೧೩೯**

ಎನ್. ಬಸವಾರಾಧ್ಯ– ಶತಮಾನೋತ್ಸವ ಸ್ಮರಣೆ

(೨೦.೦೨.೧೯೨೬–೦೬.೧೨.೨೦೧೩)

ಡಾ. ಸಿ.ಯು. ಮಂಜುನಾಥ್

❖

ಎನ್. ಬಸವಾರಾಧ್ಯರ 'ಆರಾಧ್ಯಸಿರಿ' ಅಭಿನಂದನ ಗ್ರಂಥದಲ್ಲಿ ಸರಿಸುಮಾರು ಅರವತ್ತಕ್ಕೂ ಹೆಚ್ಚು ವಿದ್ವಾಂಸರು, ಸಹಪಾಠಿಗಳು, ಸಹೋದ್ಯೋಗಿಗಳು, ಶ್ರೀಯುತರ ಸಂಪರ್ಕಕ್ಕೆ ಬಂದ ಹಿರಿಯರು, ಕಿರಿಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಬಹುತೇಕ ಎಲ್ಲರದೂ ಒಂದೇ ಅಭಿಪ್ರಾಯ. ಜಾತಿಭೇದ ಎಣಿಸದ, ಹಿರಿಕಿರಿಯರೆಂಬ ಭೇದಭಾವ ಮಾಡದ, ಶಿಸ್ತಿನ, ಸಹೃದಯ ಮನಸ್ಸಿನ ಎನ್. ಬಸವಾರಾಧ್ಯರು ಎಲ್ಲರಿಗು ಅಚ್ಚುಮೆಚ್ಚಿನವರು. ಅಷ್ಟೊಂದು ಜನರಿಂದ ಏಕ ರೀತಿಯ ಅಭಿಪ್ರಾಯ ಸಕಾರಣದಿಂದ ಪಡೆಯುವುದು ಸುಲಭದ ವಿಷಯವಲ್ಲ. ಅದೆಲ್ಲವನ್ನೂ ಹೌದಾಗಿರಿಸಿರುವುದು ಎನ್. ಬಸವಾರಾಧ್ಯರ ವ್ಯಕ್ತಿತ್ವದ ಮಹಿಮೆ. ಹೀಗೆ ಅಜಾತ ಶತ್ರುವಾಗಿ ಬಾಳಿದವರು ಬಹಳ ವಿರಳ. ಶ್ರೀಯುತರು ಎಂಬತ್ತನೆಯ ವಯಸ್ಸಿಗೆ ಪದಾರ್ಪಣೆ ಮಾಡಿದ ಸಂದರ್ಭದಲ್ಲಿ ಹೊರತಂದ 'ಆರಾಧ್ಯಸಿರಿ'ಯಲ್ಲಿ ಮೇಲೆ ಉಲ್ಲೇಖಿಸಿರುವವರಲ್ಲದೆ ಅವರ ಕುಟುಂಬದ ಸದಸ್ಯರಲ್ಲನೇಕರು ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದಾರೆ. ಎಲ್ಲರ ಲೇಖನಗಳನ್ನು ಗಮನಿಸಿದರೆ ಶ್ರೀಯುತರ ವ್ಯಕ್ತಿತ್ವ ಸ್ಫುಟವಾಗುತ್ತದೆ. ಅಲ್ಲದೆ ಅವರ ವಿಷಯದಲ್ಲಿ ಅಭಿಮಾನ, ಗೌರವಗಳು ಅಧಿಕವಾಗುತ್ತವೆ. ಅವರ ವಿದ್ವತ್ತು, ಪರಿಣತಿ, ಸಾಧನೆ, ಶಿಸ್ತುಗಳನ್ನು ತಿಳಿಯುವ ಮೊದಲು ಅವರ ಕೌಟುಂಬಿಕ ಹಿನ್ನೆಲೆ ಹಾಗೂ ಅವರ ಬದುಕು ಸಾಗಿ ಬಂದ ರೀತಿಯನ್ನು ಮೊದಲು ಸ್ಥೂಲವಾಗಿ ಗಮನಿಸುವುದು ಅಗತ್ಯ.

ಬಸವಾರಾಧ್ಯರ ಹೆಸರಿಗೆ ಮೊದಲು ಆದ್ಯಕ್ಷರವಾಗಿ ಬರುವ 'ಎನ್' ಶ್ರೀಯುತರ ತಂದೆಯವರಾದ ನಂಜುಂಡಾರಾಧ್ಯ ಅವರನ್ನು ಸೂಚಿಸುತ್ತದೆ. ತಾಯಿಯವರು ಗಿರಿಜಮ್ಮನವರು. ಬಸವಾರಾಧ್ಯರು ಜನಿಸಿದ್ದು ೨೦.೦೨.೧೯೨೬ರಂದು ನಾರಸಿಂಹನ ಹಳ್ಳಿಯಲ್ಲಿ. ಅದು ಗೌರಿಬಿದನುರು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಶ್ರೀಯುತರು ಸುಸಂಸ್ಕೃತ ವೀರಶೈವ ಅರಾಧ್ಯ ಕುಟುಂಬದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ತಾಯಿಯವರನ್ನು ಕಳೆದುಕೊಂಡ ನಂತರ ಅವರ ಚಿಕ್ಕಮ್ಮನವರು ಇವರನ್ನು ಸಾಕಿ ಸಲಹಿದರು. ಚಿಕ್ಕಮ್ಮನವರ ಪತಿ ವಾಟದ ಹೊಸಹಳ್ಳಿಯ ಮಠಾಧ್ಯಕ್ಷರಾಗಿದ್ದರಂತೆ. ಗೌರಿಬಿದನೂರಿನಲ್ಲಿ ಬಸವಾರಾಧ್ಯರ ದೊಡ್ಡಪ್ಪ ಉಪಾಹಾರ ಗೃಹವನ್ನು ಹಾಗೂ ಒಂದು ಚಿಕ್ಕ ಅಂಗಡಿಯನ್ನು ಇಟ್ಟುಕೊಂಡಿದ್ದರಂತೆ. ಆ ಉಪಾಹಾರ ಗೃಹದಲ್ಲಿ ಗ್ರಾಹಕರಿಗೆ ತಿಂಡಿತಿನಿಸು ಪದಾರ್ಥಗಳನ್ನು ಕೊಡುವ ಕೆಲಸವನ್ನು ಕೆಲಕಾಲ ಮಾಡಿ ಅನಂತರ ಶಾಲೆಗೆ ಕಲಿಯಲು ಹೋಗುತ್ತಿದ್ದರಂತೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಮುಗಿಸಿ ಬೆಂಗಳೂರಿಗೆ ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕಾಗಿ ಬರಬೇಕಾಯಿತು. ಕೋಟೆ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಮುಗಿಸಿದರು. ಆ ಅವಧಿಯಲ್ಲಿ ಸರ್. ಕೆ.ಪಿ. ಪುಟ್ಟಣ್ಣ ಚೆಟ್ಟಿ ವಿದ್ಯಾರ್ಥಿನಿಲಯದಲ್ಲಿ ತಂಗಿದ್ದರು.

ಇಂಟರ್ ಮೀಡಿಯಟ್ ವಿದ್ಯಾಭ್ಯಾಸದ ದಿನಗಳಲ್ಲಿ ಎಚ್.ಇ.ಎಸ್. ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಕನ್ನಡ ಬೋಧನೆಗೆ ಸರ್ವಶ್ರೀ ಡಿ.ಎಲ್.ಎನ್, ತೀ.ನಂ.ಶ್ರೀ, ಎಲ್. ಗುಂಡಪ್ಪ ಮತ್ತು ಜಿ.ಪಿ. ರಾಜರತ್ನಂ ಅವರು ಬರುತ್ತಿದ್ದರು. ಇತಿಹಾಸವನ್ನು ನಾ. ಕಸ್ತೂರಿ ಬೋಧಿಸುತ್ತಿದ್ದರು. ಕನ್ನಡ ಗುರುವರ್ಗದಲ್ಲಿ ಎಲ್ಲರೂ ಪ್ರಿಯರಾಗಿದ್ದರು. ಅವರಲ್ಲೆಲ್ಲ ಜಿ.ಪಿ.ರಾಜರತ್ನಂ ಅವರ ಬೋಧನೆ ಅತ್ಯಂತ ಪ್ರಭಾವ ಬೀರಿರುವುದನ್ನು ಬಸವಾರಾಧ್ಯರು ಸ್ಮರಿಸಿದ್ದಾರೆ.

ಬೆಂಗಳೂರಿನಿಂದ ಮುಂದಿನ ದಾರಿ ಮೈಸೂರಿನ ಮಹಾರಾಜ ಕಾಲೇಜು. ಇಂಟರ್ ಮೀಡಿಯೇಟ್ನಲ್ಲಿ ಲಾಜಿಕ್ ಮತ್ತು ಕನ್ನಡದಲ್ಲಿ ಹೆಚ್ಚು ಅಂಕಗಳು ಬಂದಿದ್ದವು. ಕನ್ನಡ ಮತ್ತು ಮನಃಶಾಸ್ತ್ರ ವಿಷಯಗಳಿಗೆ ಆನರ್ಸ್ ತರಗತಿಗೆ ಸೇರಲು ಅರ್ಜಿಸಲ್ಲಿಸಿದ್ದರು. ಕನ್ನಡ ಆನರ್ಸಿಗೆ ಸೇರಿದರೆ ಮಾತ್ರ ಸುತ್ತೂರು ಮಠದ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ನೀಡುವುದಾಗಿ ಶ್ರೀಗಳು ಹೇಳಿದ ಕಾರಣ ಕನ್ನಡ ಆನರ್ಸಿಗೆ ಸೇರಿಕೊಂಡರು. ವಿದ್ಯಾರ್ಥಿನಿಲಯದಲ್ಲಿ ಉಳಿಯಲು ಅವಕಾಶವಾಯಿತು, ಜೊತೆಯಲ್ಲಿ ಕನ್ನಡದಲ್ಲಿ ಹೆಚ್ಚು ಅಂಕಗಳು ಬಂದ ಕಾರಣ ಆ ವರ್ಷ ವಿದ್ಯಾರ್ಥಿವೇತನವೂ ದೊರೆತು ಬದುಕು ಒಂದು ನೆಲೆಗೆ ಬಂದಿತು.

ಬಿ.ಎ. ಆನರ್ಸ್ ೧೯೪೯ರಲ್ಲಿ ಮುಗಿಸಿ ಎಂ.ಎ. ತರಗತಿಗೆ ಸೇರಿದರು. ಕೆಲಸಮಯದ ನಂತರ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಕನ್ನಡ ಗ್ರಾಜುಯೇಟ್ ಸ್ಪೆಷಲಿಸ್ಟ್ ಹುದ್ದೆಯೂ ದೊರೆಕಿತು. ಕನ್ನಡ ಎಂ.ಎ. ಸ್ನಾತಕೋತ್ತರ ಪದವಿಯನ್ನೂ ಪಡೆದರು. ಆ ಹಂತದಿಂದ ಆರಾಧ್ಯರ ಗ್ರಂಥ ಸಂಪಾದನಾ ಕಾರ್ಯವೂ ಆರಂಭವಾಯಿತು. ತೊರವೆ ರಾಮಾಯಣದ ಓಲೆ ಪ್ರತಿಯಿಂದ ಪ್ರತಿ ಮಾಡುವ ಕಾರ್ಯವನ್ನು ಪ್ರಾರಂಭಿಸಿದರು. ಶ್ರೀಯುತರ ಉತ್ಸಾಹದ ಕಾರ್ಯ ಸಹೋದ್ಯೋಗಿಗಳಿಗೆ ಹಾಗೂ ಕೇಂದ್ರದ ನಿರ್ದೇಶಕರಾಗಿದ್ದ ಎಚ್. ದೇವೀರಪ್ಪನವರ ಮೆಚ್ಚುಗೆಗೆ ಒಳಗಾಯಿತು. ಅನಂತರದಲ್ಲಿ ತಮ್ಮ ಸಹೋದ್ಯೋಗಿ ಎಸ್. ಬಸಪ್ಪನವರೊಂದಿಗೆ ಹರಿಶ್ಚಂದ್ರಕಾವ್ಯವನ್ನು ಸಂಪಾದಿಸಲು ಪ್ರತಿನಿತ್ಯ ಕಛೇರಿಯ ಕಾರ್ಯ ಮುಗಿದ ಮೇಲೂ ಕುಳಿತು ಇಬ್ಬರೂ ಕಾರ್ಯಶೀಲರಾಗಿರುತ್ತಿದ್ದರು. ಡಿ.ಎಲ್.ಎನ್. ರವರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯ ಆಸುಪಾಸಿನಲ್ಲಿ ಅನ್ಯಕಾರ್ಯ ನಿಮಿತ್ತ ಓಡಾಡುವಾಗ ರಾತ್ರಿಯಾದರೂ ಪ್ರಾಚ್ಯವಿದ್ಯಾಸಂಸ್ಥೆಯಲ್ಲಿ ದೀಪಗಳು ಉರಿಯುತ್ತಿರುವುದನ್ನು ಗಮನಿಸಿ ಒಳಗೆ ಬಂದು 'ಏನು ಮಾಡುತ್ತಿದ್ದೀರಿ' ಎಂದು ಕೇಳಿ, ಅವರಿಬ್ಬರೂ ಹರಿಶ್ಚಂದ್ರ ಕಾವ್ಯವನ್ನು ಸಂಪಾದಿಸುವ ಕಾರ್ಯದಲ್ಲಿ ತೊಡಗಿರುವುದನ್ನು ತಿಳಿದು ಅವರಿಬ್ಬರಿಗೂ ಪ್ರೋತ್ಸಾಹದ ಮಾತುಗಳನ್ನು ಹೇಳಿ ತೆರಳಿದರಂತೆ. ಸಂಪಾದನೆಯ ಕಾರ್ಯ ಮುಗಿದ ನಂತರ ಡಿಎಲ್ಎನ್ ಅವರಿಗೆ ಪರಿಶೀಲನೆಗಾಗಿ ಒಪ್ಪಿಸಿದರಂತೆ. ಅವರು ಪರಿಶೀಲಿಸಿ ಪೀಠಿಕೆ ಹಾಗೂ ಅಗತ್ಯ ಮಾಹಿತಿಗಳನ್ನು ಒದಗಿಸಿದರಂತೆ. ಹೀಗಾಗಿ ಹರಿಶ್ಚಂದ್ರಕಾವ್ಯ ಶಾಸ್ತ್ರೀಯವಾಗಿ ಸಂಪಾದನೆಗೊಂಡು ಪ್ರಕಟವಾಯಿತು.

ಪ್ರಾಚ್ಯವಿದ್ಯಾಸಂಸ್ಥೆಗೆ ಆಗಾಗ್ಗೆ ಬಂದು ಹೋಗುತ್ತಿದ್ದ ಡಿಎಲ್ಎನ್ ಅವರು ಒಂದು ದಿನ ಬಸವಾರಾಧ್ಯರನ್ನು ಕುರಿತು 'ಬೆಂಗಳೂರಿಗೆ ಬರುತ್ತೀ ಏನಯ್ಯಾ' ಎಂದು ಕೇಳಿದರಂತೆ. ವಿವರಗಳೇನನ್ನೂ ಕೇಳದೆ ಬಸವಾರಾಧ್ಯರು ಆಗಲಿ 'ಬರ್ತೀನಿ ಸಾರ್' ಎಂದರಂತೆ. ಕೆಲ ಸಮಯದ ನಂತರ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಾರ್ಯಕ್ಕೆ ಪ್ರಧಾನ ಸಂಪಾದಕರಾಗಿ ಡಿಎಲ್ಎನ್ ಅವರು ನೇಮಕಗೊಂಡು, ಬಸವಾರಾಧ್ಯರನ್ನು ನಿಘಂಟಿನ ಕಾರ್ಯಕ್ಕೆ ಎರವಲು ಸೇವೆಯ ಮೇಲೆ ಸೇರಿಸಿಕೊಂಡರು. ಪ್ರಧಾನ ಸಂಪಾದಕರಿಗೆ ಸಹಾಯಕರಾಗಿ ನಿಯುಕ್ತಿ ಹೊಂದಿದರು. ಮುಂದೆ ಶಾಸನಗಳಿಂದ ನಿಘಂಟಿಗಾಗಿ ಶಬ್ದ ಸಂಗ್ರಹಕ್ಕಾಗಿ ಉದಕ ಮಂಡಲದಲ್ಲಿದ್ದ ಕೇಂದ್ರ ಶಾಸನ ಕಛೇರಿಗೆ ಕಳುಹಿಸಿದರಂತೆ. ಅಪ್ರಕಟಿತ ಶಾಸನಗಳಿಂದ ಸಹಸ್ರಾರು ಶಬ್ದಸಂಗ್ರಹ ಮಾಡಿಕೊಂಡು ಅಲ್ಲಿಂದ ಹಿಂತಿರುಗಿದರು.

ಸುಮಾರು ಒಂದು ವರ್ಷ ಆಗುತ್ತಲೇ ಡಿಎಲ್‌ಎನ್ ಅವರು ಮಹಾರಾಜ ಕಾಲೇಜಿಗೆ ಪ್ರಾಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ತೆರಳಿದರು. ಎ.ಆರ್. ಕೃಷ್ಣಶಾಸ್ತ್ರಿಗಳು ಡಿ.ಎಲ್.ಎನ್. ಅವರು ನಿರ್ವಹಿಸುತ್ತಿದ್ದ ಪ್ರಧಾನ ಸಂಪಾದಕ ಹುದ್ದೆಯನ್ನು ಸ್ವೀಕರಿಸುವಂತೆ ಹೇಳಿದರಾದರೂ ಬಸವಾರಾಧ್ಯರು ಆ ಜವಾಬ್ದಾರಿ ಹೊರುವ ಯೋಗ್ಯತೆ ತಮಗಿಲ್ಲವೆಂದು ನಿರಾಕರಿಸಿದರು. ಎಲ್. ಗುಂಡಪ್ಪನವರು ಪ್ರಧಾನ ಸಂಪಾದಕರಾಗಿ ನೇಮಕಗೊಂಡರು. ಮುಂದೆ ಐದಾರು ವರ್ಷಗಳ ನಂತರ ಬಸವಾರಾಧ್ಯರನ್ನು ಸಂಪಾದಕರನ್ನಾಗಿ ನೇಮಿಸಲಾಯಿತು. ಕೆಲವು ಘಟನೆಗಳ ನಂತರ ಬಸವಾರಾಧ್ಯರು ನಿಘಂಟಿನ ಕೆಲಸದಿಂದ ಬಿಡುಗಡೆ ಪಡೆದು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ಉಪನಿರ್ದೇಶಕರಾಗಿ ತಮ್ಮ ಮೂಲ ಸಂಸ್ಥೆಗೆ ಹಿಂತಿರುಗಿದರು. ಆ ದಿನಗಳಲ್ಲಿ ಆಡಳಿತಾತ್ಮಕವಾಗಿ ಕೆಲವು ಬದಲಾವಣೆಗಳಾಗಿ ಪ್ರಾಚ್ಯವಿದ್ಯಾಸಂಸ್ಥೆ ಸಂಸ್ಕೃತ ಕನ್ನಡ ಎಂದು ವಿಭಾಗ ಹೊಂದಿ, ಕನ್ನಡ ಹಸ್ತಪ್ರತಿಗಳನ್ನು ನಿರ್ವಹಿಸುತ್ತಿದ್ದ ಪಂಡಿತ ವರ್ಗ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲ್ಪಟ್ಟಿತು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿದ್ದ ಹಸ್ತಪ್ರತಿಗಳನ್ನು ಕಾಲಾನುಕ್ರಮವಾಗಿ ವಿಂಗಡಿಸಿ, ತಮ್ಮಲ್ಲಿರುವ ಹಸ್ತಪ್ರತಿಗಳು ಹಾಗೂ ಬೇರೆ ಯಾವ ಯಾವ ವಿಶ್ವವಿದ್ಯಾಲಯಗಳಲ್ಲಿ ಯಾವ ಯಾವ ಹಸ್ತಪ್ರತಿಗಳು ಇವೆ ಎಂಬುದನ್ನು ಪರಿಶೀಲಿಸಿದರು. ಎಲ್ಲ ಸಿಬ್ಬಂದಿ ವರ್ಗದವರಿಗೂ ಅಪ್ರಕಟಿತ ಕೃತಿಗಳನ್ನು ಸಂಪಾದಿಸಲು ಹಂಚಿಕೆ ಮಾಡಿ ತಾವೂ ಉದ್ಯೋಗಸಾರ, ಅಬ್ಬಲೂರು ಚರಿತೆ, ಧರ್ಮನಾಥಪುರಾಣ, ಆರಾಧ್ಯಚಾರಿತ್ರ, ಚತುರಾಚಾರ್ಯ ಚಾರಿತ್ರ ಮುಂತಾದವನ್ನು ಸಂಪಾದಿಸಿ ಪ್ರಕಟಿಸಿದರು. ಡಾ. ಹಾಮನಾ ಅನಂತರ ಡಾ. ತಿಪ್ಪೇರುದ್ರಸ್ವಾಮಿ ಅವರ ಪೂರ್ಣ ಸಹಕಾರದಿಂದ ನೂರಕ್ಕೂ ಹೆಚ್ಚು ಕೃತಿಗಳು ಪ್ರಕಟವಾದವು. ಈ ಅವಧಿ ಸಂಪಾದನಾ ವಿಭಾಗದ ಸುವರ್ಣಯುಗವೆಂದು ಪರಿಗಣಿತವಾಗಿದೆ.

ಇಲ್ಲಿ ಒಂದು ಸಂದರ್ಭವನ್ನು ಉಲ್ಲೇಖಿಸಬಹುದು. ಸಂಪಾದನ ವಿಭಾಗದ ವರ್ಗವನ್ನು ಬೋಧಕೇತರ ವರ್ಗವೆಂದು ಪರಿಗಣನೆಗೆ ತೆಗೆದುಕೊಂಡು ೫೫ ವರ್ಷಗಳಿಗೆ ನಿವೃತ್ತಿ ಮಾಡಲಾಗುತ್ತಿತ್ತು. ಬೋಧಕ ವರ್ಗದವರಿಗೆ ನಿವೃತ್ತಿ ವಯಸ್ಸು ೬೦ವರ್ಷಗಳವರೆಗೆ ಇದ್ದಿತು. ಅದರಂತೆ ಬಸವಾರಾಧ್ಯರನ್ನು ೫೫ ವರ್ಷಗಳಿಗೆ ನಿವೃತ್ತಿಗೊಳಿಸಲು ಆದೇಶ ಬಂದಾಗ ಅವರು ಅದನ್ನು ಪ್ರತಿಭಟಿಸಿ ತಮ್ಮದೆಲ್ಲ ಶೈಕ್ಷಣಿಕ ಹುದ್ದೆಯೇ ಹೊರತು ಆಡಳಿತಾತ್ಮಕ ಹುದ್ದೆಯಲ್ಲವೆಂದು ಮತ್ತು ತಮ್ಮನ್ನೂ ೬೦ವರ್ಷಗಳವರೆಗೆ ಸೇವೆಯಲ್ಲಿ ಮುಂದುವರಿಸಬೇಕೆಂದು ಉಚ್ಚನ್ಯಾಯಾಲಯದಿಂದ ಆದೇಶಕ್ಕೆ ತಡೆಯಾಜ್ಞೆ ತಂದು ೬೦ ವರ್ಷಗಳವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು. ಬಸವಾರಾಧ್ಯರು ಸಾತ್ವಿಕ

ಮನೋಭಾವದವರಾದರೂ ಅನ್ಯಾಯ ಸಹಿಸದೆ ನ್ಯಾಯಾಲಯದಲ್ಲಿ ಹೋರಾಡಿ ಸೇವಾವಧಿಯನ್ನು ನ್ಯಾಯಯುತವಾಗಿ ಉಳಿಸಿಕೊಂಡದ್ದು ಅವರ ಬದುಕಿನಲ್ಲಿ ಗಮನಾರ್ಹ ಸಂಗತಿ.

ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಬಹುದೊಡ್ಡ ಸಾಧನೆಯನ್ನು ಮಾಡುವುದರ ಮೂಲಕ ಕನ್ನಡ ವಿದ್ವತ್ ಪರಂಪರೆಗೆ ಹಾಗೂ ತಮ್ಮ ಗುರುಪರಂಪರೆಗೆ ಬಹು ದೊಡ್ಡ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸುವುದು ಸುಲಭದ ಕಾರ್ಯವಲ್ಲ. ನಾಲ್ಕು ಕೃತಿಗಳು ಮಾತ್ರ ಇತರರೊಂದಿಗೆ ಸಂಪಾದಿಸಿದ ಕೃತಿಗಳು, ಉಳಿದುವೆಲ್ಲ ಸ್ವತಂತ್ರವಾಗಿ ಸಂಪಾದಿಸಿದ ಕೃತಿಗಳಾಗಿವೆ. ತೊರವೆ ರಾಮಾಯಣದ ಸಂಗ್ರಹ ಕೃತಿಯೊಂದನ್ನು ಪರಿಷ್ಕರಿಸುವುದರ ಮೂಲಕ ಶ್ರೀಯುತರ ಸಂಪಾದನ ಕಾರ್ಯ ಆರಂಭವಾಯಿತು. ಈ ಕೃತಿ ಇತರರೊಂದಿಗೆ ಸಂಪಾದಿಸಿದ ಕೃತಿ. ಎರಡು ಸಂಪುಟಗಳಲ್ಲಿ ಪ್ರಕಟವಾದ ಈ ಕೃತಿ ೧೯೫೩ರಲ್ಲಿ ಹೊರಬಂದಿತು. ಬೇರೆ ಬೇರೆ ರಾಮಾಯಣ ಕೃತಿಗಳ ವಿವರವಾದ ಚರ್ಚೆಯನ್ನು ಒಳಗೊಂಡ ಸುದೀರ್ಘವಾದ ಪೀಠಿಕಾಭಾಗ ವಿಶೇಷ ಗಮನ ಸೆಳೆಯುತ್ತದೆ. ಮುಂದೆ ಪಂಡಿತ ಎಸ್. ಬಸಪ್ಪ ಅವರೊಂದಿಗೆ ಸಂಪಾದಿಸಿದ ರಾಘವಾಂಕನ ಹರಿಶ್ಚಂದ್ರ ಕಾವ್ಯ ಬಸವಾರಾಧ್ಯರಿಗೆ ವಿಶೇಷವಾಗಿ ಸವಾಲನ್ನು ಕೊಟ್ಟ ಕೃತಿಯೆಂದು ಹೇಳಬಹುದು. ಹಸ್ತಪ್ರತಿಗಳ ಗೊಂದಲ, ಸಂಗ್ರಹಪಾಠ, ವಿಸ್ತೃತಪಾಠ, ಶಬ್ದರೂಪಗಳು –ಜಟಿಲತೆ ಇವೆಲ್ಲವೂ ಗ್ರಂಥ ಸಂಪಾದನೆಯ ತೊಡಕುಗಳೆಲ್ಲವನ್ನೂ ತೆರೆದಿಟ್ಟವು. ಆ ಸಂದರ್ಭದಲ್ಲಿ ಎಚ್. ದೇವೀರಪ್ಪ ಮತ್ತು ಡಿಎಲ್ಎನ್ ಅನೇಕ ರೀತಿಯಲ್ಲಿ ನೆರವಾದ ವಿಷಯವನ್ನು ಸ್ಮರಿಸಿದ್ದಾರೆ. ಇದು ಪ್ರಕಟವಾದದ್ದು ೧೯೫೫ರಲ್ಲಿ.

ನಿಘಂಟು ಕ್ಷೇತ್ರಕ್ಕೆ ಬಸವಾರಾಧ್ಯರ ಕೊಡುಗೆ ತುಂಬಾ ಮಹತ್ವಪೂರ್ಣವಾದುದು. ಈಕ್ಷೇತ್ರಕ್ಕೆ ಅವರ ಸೇವೆ ಡಿಎಲ್ಎನ್ ಅವರಿಂದ ಪ್ರೇರಣೆ ಪಡೆದದ್ದನ್ನು ಹಿಂದೆಯೇ ಗಮನಿಸಲಾಗಿದೆ. ಡಿಎಲ್ಎನ್ ಅವರಿಗೆ ಪ್ರಕಾಶಕರೊಬ್ಬರು ಹಳಗನ್ನಡ ನಿಘಂಟುಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿಕೊಡುವಂತೆ ಕೇಳಿಕೊಂಡರಂತೆ. ಆಗ ಅವರು ಆ ಕೆಲಸವನ್ನು ಬಸವಾರಾಧ್ಯರಿಗೆ ವಹಿಸುವಂತೆ ಹೇಳಿದ್ದರಂತೆ. ಅದರಂತೆ ಪ್ರಕಾಶಕರು ಬಸವಾರಾಧ್ಯರನ್ನು ಆ ಕಾರ್ಯವನ್ನು ಮಾಡುವಂತೆ ಕೇಳಿಕೊಂಡರು. ಹೀಗೆ ಸಿದ್ಧವಾದದ್ದು ೧೯೭೪ರಲ್ಲಿ ಹೊರಬಂದ ಹಳಗನ್ನಡ ನಿಘಂಟು. ಡಿಎಲ್ಎನ್ ಮತ್ತು ತೀನಂಶ್ರೀ ಅವರ ಗೌರವಾರ್ಥ ಗುರುದ್ವಯರಿಗೆ ಈ ಕೃತಿಯನ್ನು ಸಮರ್ಪಿಸಿದ್ದಾರೆ. ಕನ್ನಡ ನಿಘಂಟು ಕಾರ್ಯದಲ್ಲಿ ತೊಡಗಿದ್ದಾಗ ಅನೇಕ ಹಳಗನ್ನಡ ನಿಘಂಟುಗಳನ್ನು ಮತ್ತೆ ಮತ್ತೆ ಪರಾಮರ್ಶಿಸುತ್ತಿದ್ದರು. ಆ ನಿಘಂಟುಗಳಲ್ಲಿ ಇದ್ದ ಅಸಂಗತ ವಿಷಯಗಳು, ಅಶುದ್ಧರೂಪಗಳು, ಪಾಠಗಳ ತೊಡಕುಗಳು ಮುಂತಾದವುಗಳನ್ನು ಸರಿಪಡಿಸಿ ಸುಮಾರು ೩೯ ಹಸ್ತಪ್ರತಿಗಳನ್ನು

ಸಂಗ್ರಹಿಸಿ ಅಪಾರ ಶ್ರಮದಿಂದ ಈ ನಿಘಂಟನ್ನು ಸಂಪಾದಿಸಿದರು. ರನ್ನಕಂದ, ಶಬ್ದಮಣಿ ದರ್ಪಣ, ಕರ್ನಾಟಕ ಶಬ್ದಸಾರಂ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ, ಕರ್ನಾಟಕ ಸಂಜೀವನಂ, ಕರ್ನಾಟಕ ಭಾರತನಿಘಂಟು, ಕವಿಕಂಠಹಾರಂ ಶಬ್ದಾರ್ಥಕೋಶ ಎಂಬ ಹತ್ತು ನಿಘಂಟುಗಳು ಈ ಸಂಪುಟದಲ್ಲಿ ಸೇರಿವೆ. ಅಧಿಕೃತವಾದ ವಿದ್ವತ್ ಪೂರ್ಣವಾದ ಸುದೀರ್ಘವಾದ ಪೀಠಿಕೆ ಇದರಲ್ಲಿದೆ. ನಿಘಂಟು ಕ್ಷೇತ್ರದಲ್ಲಿ ಸಂಶೋಧನೆ ಮಾಡುವವರಿಗೆ ಅತ್ಯಂತ ಪ್ರಮುಖ ಆಕರಗ್ರಂಥ ಇದಾಗಿದೆ. ಇನ್ನೂ ಮುಂದಿನ ಸಂಶೋಧನೆಗೆ ಇದು ಒಂದು ಹೆಬ್ಬಾಗಿಲು.

ಯಾವುದೇ ಕನ್ನಡದ ಅಪ್ರಕಟಿತ ಕೃತಿ ಶಾಸ್ತ್ರೀಯವಾಗಿ ಸಂಪಾದನೆಗೊಂಡು ಪ್ರಕಟವಾದಾಗ ಹೊಸಹೊಸ ಸಂಶೋಧನೆಗಳಿಗೆ ದಾರಿ ಮಾಡಿಕೊಡುತ್ತದೆ. ಕರ್ನಾಟಕ ಧಾರ್ಮಿಕ ಇತಿಹಾಸದಲ್ಲಿ ವೀರಶೈವ ಪಂಚಾಚಾರ್ಯರ ವಿಷಯ ತುಂಬಾ ವಿಶಿಷ್ಟ ಸ್ಥಾನವನ್ನು ಪಡೆದಿದೆ. ನೀಲಕಂಠಾಚಾರ್ಯ ಪಂಡಿತನ 'ಆರಾಧ್ಯಚಾರಿತ್ರ' ಪಂಚಾಚಾರ್ಯರನ್ನು ಕುರಿತು ತಿಳಿಸುವ ಬೃಹದ್ಗ್ರಂಥ. ಒಂದು ಮುದ್ರಿತ ಪ್ರತಿ ಸೇರಿದಂತೆ ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಈ ಕೃತಿಯನ್ನು ಪರಿಷ್ಕರಿಸಿದ್ದಾರೆ. ೬೫ ಸಂಧಿಗಳ ಮೂರು ಸಾವಿರಕ್ಕೂ ಅಧಿಕ ಪದ್ಯಗಳನ್ನು ಒಳಗೊಂಡ ಈ ಕೃತಿಯ ಸಂಪಾದನೆಯನ್ನು ಅತ್ಯಂತ ಶ್ರಮವಹಿಸಿ ಮಾಡಿದ್ದಾರೆ. ವಿಸ್ತಾರವಾದ ಪ್ರಸ್ತಾವನೆಯಲ್ಲಿ ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಬಂದಿರುವ ಪಂಡಿತಾರಾಧ್ಯರನ್ನು ಕುರಿತು ತೌಲನಿಕ ವಿವೇಚನೆಯನ್ನು ಮಾಡಿದ್ದಾರೆ. ಪದ್ಯಗಳ ಅಕಾರಾದಿ, ಪಾರಿಭಾಷಿಕ ಪದಕೋಶ, ಶಬ್ದಾರ್ಥಕೋಶ ಹಾಗೂ ವಿಶಿಷ್ಟ ಪದಸೂಚಿಯನ್ನು ನೀಡಿ ತುಂಬಾ ಉಪಯುಕ್ತ ಕೃತಿಯನ್ನು ಸಿದ್ಧಪಡಿಸಿದ್ದಾರೆ, ಇದರ ಜೊತೆಯಲ್ಲೇ ಉಲ್ಲೇಖಿಸಬೇಕಾಗಿರುವ ಮತ್ತೊಂದು ಕೃತಿಯೆಂದರೆ ಚತುರಾಚಾರ್ಯ ಚಾರಿತ್ರ. ಈ ಕೃತಿಯಲ್ಲಿ ರೇಣುಕ, ಮರುಳಸಿದ್ಧ, ಏಕೋರಾಮಿ ಮತ್ತು ಪಂಡಿತಾರಾಧ್ಯರೆಂಬ ನಾಲ್ವರು ಆಚಾರ್ಯರ ಜೀವನ ಸಾಧನೆಗಳನ್ನು ತಿಳಿಸುವ ಬೃಹತ್ ಕಾವ್ಯ. ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿತವಾದ ಕೃತಿ ಇದು. ೧೫೫ ಪುಟಗಳ ಪೀಠಿಕಾ ಭಾಗ ವಿದ್ವತ್ ಪೂರ್ಣವಾಗಿ ಮೂಡಿ ಬಂದಿದೆ. ಕವಿ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಪ್ರಭಾವ ಈ ಕೃತಿಯ ಮೇಲೆ ಆಗಿರುವುದನ್ನು ಸೋದಾಹರಣ ಪೂರ್ವಕವಾಗಿ ತೋರಿಸಿ ಕೊಟ್ಟಿದ್ದಾರೆ. ವೀರಶೈವ ಧರ್ಮವನ್ನು ಕುರಿತು ಸಂಶೋಧನೆ ಕೈಗೊಳ್ಳುವವರಿಗೆ ಮೇಲಿನ ಎರಡು ಕೃತಿಗಳು ಆಕರ ಕೃತಿಗಳಾಗಿವೆ.

ಬಸವಾರಾಧ್ಯರು ಸಂಪಾದಿಸಿರುವ ಕೃತಿಗಳಲ್ಲಿ ಇನ್ನುಳಿದ ಕೆಲವು ಕೃತಿಗಳನ್ನು ಗಮನಿಸುವುದಾದರೆ ಚೇರಮಕಾವ್ಯ, ತ್ರಿಪುರದಹನ ಸಾಂಗತ್ಯ, ಗುರುಭಕ್ತಾಂಡಾರಿ ಚರಿತೆ, ನವರತ್ನಮಾಲಿಕೆ(ಇತರರೊಂದಿಗೆ) ಧರ್ಮನಾಥ ಪುರಾಣ, ನವಮುಗ್ಧಲೀಲೆ, ಶತಕ

ಸಾಂಗತ್ಯಗಳು, ಉದ್ಭಟದೇವ ಚರಿತೆ, ಸಿದ್ಧಲಿಂಗೇಶ್ವರ ಸಾಂಗತ್ಯ, ಅಬ್ಬಲೂರು ಚರಿತೆ, ಹೀಗೆ ಸಾಲುಸಾಲಾಗಿ ಕೃತಿಗಳು ಪ್ರಕಟವಾಗಿವೆ.

ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಸಾಧನೆಯನ್ನು ಮಾಡಿರುವ ಬಸವಾರಾಧ್ಯರನ್ನು ಕುರಿತ ಅದೇ ಕ್ಷೇತ್ರದಲ್ಲಿ ಮಹತ್ವದ ಸಾಧನೆಯನ್ನು ಮಾಡಿರುವ ಡಾ. ವೈ.ಸಿ. ಭಾನುಮತಿಯವರು ಹೇಳಿರುವ ಕೆಲವು ಮಾತುಗಳು ಗಮನಾರ್ಹ. "ಬಸವಾರಾಧ್ಯರು ಸಂಪಾದಿಸಿರುವ ಗ್ರಂಥಗಳ ಪೈಕಿ ಧಾರ್ಮಿಕ ಕಾವ್ಯಗಳಿವೆ, ಶಾಸ್ತ್ರಕೃತಿಗಳಿವೆ, ಐತಿಹಾಸಿಕ ಕಾವ್ಯಗಳಿವೆ, ಸಂಗ್ರಹಗಳಿವೆ. ಪಂಚಾಚಾರ್ಯರಿಗೆ ಸಂಬಂಧಿಸಿದಂತಹ ಉದ್ಗ್ರಂಥಗಳನ್ನು ಸಂಪಾದಿಸಿದ ಕೀರ್ತಿ ಇವರ ಮಡಿಲಿಗಿದೆ. ಇವರ ಕೃತಿಗಳು ಚಂಪೂ, ಷಟ್ಪದಿ, ಸಾಂಗತ್ಯ ಪ್ರಕಾರಗಳಿಗೆ ಸೇರಿದ್ದು, ಗ್ರಂಥ ಸಂಪಾದನಾ ಶಾಸ್ತ್ರಕ್ಕನುಗುಣವಾಗಿ ಪರಿಷ್ಕಾರಗೊಂಡಿವೆ. ವೈವಿಧ್ಯಮಯ ಗ್ರಂಥಗಳನ್ನು ತಂದರೆಂಬುದು ಇವರಿಗೆ ಮತ್ತಷ್ಟು ಹೆಗ್ಗಳಿಕೆ ನೀಡುವ ಅಂಶವಾಗಿದೆ. ಉತ್ತಮ ಪಾಠಗಳನ್ನು ಕೊಡಬೇಕೆಂಬ ಕಳಕಳಿ ಅವರ ಎಲ್ಲ ಕೃತಿಗಳಲ್ಲಿ ಅನುರಣಿತವಾಗಿದೆ. ಒಟ್ಟಿನಲ್ಲಿ ಪರಿಶ್ರಮ, ಪ್ರಾಮಾಣಿಕತೆಗಳಿಂದ ಕಾರ್ಯನಿರ್ವಹಿಸಿ ವಿದ್ವತ್ತಿನ ಬಲದಿಂದ ಶಾಸ್ತ್ರೀಯವಾಗಿ ಸಂಪಾದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಂಥಸಂಪಾದನೆ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ" ಎಂಬ ಮಾತುಗಳು ಬಸವಾರಾಧ್ಯರು ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಸೂಕ್ತರೀತಿಯಲ್ಲಿ ಸಂಗ್ರಹಿಸಿವೆ ಹಾಗೂ ಪ್ರಶಂಸಿವೆ.

ಯಾವುದೇ ಗ್ರಂಥ ಸಂಪಾದನೆಯ ಕೆಲಸ ವಹಿಸಿಕೊಂಡರೂ ಅದನ್ನು ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ, ನಿಷ್ಠೆಯಿಂದ ಮಾಡುವುದು ಬಸವಾರಾಧ್ಯರ ಕಾರ್ಯವಿಧಾನ. ಅವರು ಸಂಪಾದಿಸಿದ ಕನ್ನಡ ಗದ್ಯವಿಕಾಸ, ಕನ್ನಡ ಗದ್ಯಾವಲೋಕನಗಳು ಪಠ್ಯಪುಸ್ತಕಗಳಾಗಿ ಅನೇಕ ತಲೆಮಾರುಗಳಿಗೆ ಕನ್ನಡ ಗದ್ಯದ ರುಚಿಯನ್ನು ಉಣಬಡಿಸಿವೆ. ತಮ್ಮ ಪ್ರಿಯ ಗುರುಗಳಾದ ಡಿಎಲ್‌ಎನ್ ಅವರಿಗೆ ಸಮರ್ಪಿಸಿದ ಸಂಭಾವನಾಗ್ರಂಥ 'ಉಪಾಯನ' ವಿದ್ವತ್ಪೂರ್ಣವಾದ ಗುರುಕಾಣಿಕೆಯಾಗಿದೆ(೧೯೬೭). 'ದೇವಗಂಗೆ' ಡಾ. ಬಿ. ಶಿವಮೂರ್ತಿ ಶಾಸ್ತ್ರೀ ಅವರಿಗೆ ಅರ್ಪಿಸಿದ ಸಂಭಾವನಾ ಗ್ರಂಥ(೧೯೬೮). 'ಅಮರವಾಣಿ' ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ ಅವರಿಗೆ ಅರ್ಪಿಸಿದ ಸಂಸ್ಮರಣ ಗ್ರಂಥ (೧೯೯೧) ದೇಗುಲಮಠ ಹೊರ ತಂದಿರುವ 'ನಿರ್ವಾಣಶ್ರೀ' ಈ ನಾಲ್ಕು ಸಂಪಾದಿತ ಕೃತಿಗಳು.

ಶ್ರೀಯುತರು ನಿವೃತ್ತಿಯ ನಂತರ ಯುಜಿಸಿ ಯೋಜನೆಯಲ್ಲಿ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ ಪರಿಷ್ಕರಣಕ್ಕೆ ಕೈಹಾಕಿದರು. ಒಂದು ವರ್ಷ ಈ ಕಾರ್ಯದಲ್ಲಿ ತೊಡಗಿದ್ದಾಗ, ಕುಟುಂಬ ಬೆಂಗಳೂರಿಗೆ ಸ್ಥಳಾಂತರಗೊಂಡಾಗ

ಆ ಪರಿಷ್ಕರಣ ಯೋಜನೆಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಿಸಿಕೊಂಡು ಎರಡು ವರ್ಷಗಳು ಇಲ್ಲಿ ಕಾರ್ಯ ನಿರ್ವಹಿಸಿದರು.

ಶ್ರೀಯುತರ ಗ್ರಂಥ ಸಂಪಾದನಾ ಕಾರ್ಯ ಕನ್ನಡ ವಿದ್ವತ್ ಲೋಕಕ್ಕೆ ಅತ್ಯಂತ ಮೌಲಿಕ ಕೊಡುಗೆಯನ್ನು ನೀಡಿದಂತೆಯೇ, ಅವರ ಕಾರ್ಯವನ್ನು ಅನೇಕ ಉನ್ನತ ಸಂಸ್ಥೆಗಳು ಗೌರವಿಸಿವೆ ಹಾಗೂ ಮಾನ್ಯ ಮಾಡಿವೆ. ತೊರವೆ ರಾಮಾಯಣ ಕೃತಿಯನ್ನು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ನೀಡಿ ಗೌರವಿಸಿದೆ. ಅವರು ಸಂಪಾದಿಸಿದ ಧರ್ಮನಾಥ ಪುರಾಣಂ ಕೃತಿಗೆ ಮೈಸೂರು ವಿಶ್ವವಿದ್ಯಾಲಯದ ತೀನಂಶ್ರೀಕಂಠಯ್ಯ ಸ್ಮಾರಕ ಪ್ರಶಸ್ತಿ ದೊರೆತಿದೆ. ಹರಿಶ್ಚಂದ್ರಕಾವ್ಯಂ, ಚೇರಮಕಾವ್ಯಂ, ಉದ್ಭಟದೇವ ಚರಿತೆ ಕೃತಿಗಳು ದೇವರಾಜ ಬಹದ್ದೂರ್ ಸಾಹಿತ್ಯಿಕ ಸಮಿತಿಯ ಬಹುಮಾನಗಳನ್ನು ಪಡೆದಿವೆ. ಚತುರಾಚಾರ್ಯ ಚಾರಿತ್ರ ಸಂಪಾದಿತ ಕೃತಿಗೆ 'ವೀರಶೈವ ಸಾಹಿತ್ಯ ಶ್ರೇಷ್ಠ ಕೃತಿ' ಪ್ರಶಸ್ತಿ ಮೈಸೂರಿನ ಸುತ್ತೂರು ಮಠದಿಂದ ಪ್ರಾಪ್ತವಾಗಿದೆ.

ಬಸವಾರಾಧ್ಯರು ಕೇವಲ ವಿದ್ವತ್ ವಲಯದಲ್ಲೇ ತಲ್ಲೀನರಾದವರಲ್ಲ. ಚಿಕ್ಕ ಮಕ್ಕಳಿಗಾಗಿ 'ಜ್ಯೋತಿಷಿಯ ಮಗ ಮತ್ತು ಕೊಡದಣ್ಣ ಬಿಡದಣ್ಣ', ಹಾಗೂ 'ಅಪ್ಪಯ್ಯ ಮತ್ತು ಬಾಯಿಶೂರ ಕೈಶೂರ' ಕೃತಿಗಳನ್ನು ನೀಡಿದ್ದಾರೆ. ಮಕ್ಕಳಿಗಾಗಿ ಭಾಷಾಂತರ ಮಾಡಿದ ಸಚಿತ್ರ ಶಾಲಾ ನಿಘಂಟು ಒಂದು ಉಪಯುಕ್ತ ಕೃತಿಯಾಗಿದೆ.

ಕನ್ನಡ ನಿಘಂಟು ಕ್ಷೇತ್ರಕ್ಕೆ ಬಸವಾರಾಧ್ಯ ಅವರದು ಬಹು ಮುಖಸೇವೆ. ಡಿಎಲ್ಎನ್ ಅವರು ಬಸವಾರಾಧ್ಯರ ಕರ್ತೃತ್ವ ಶಕ್ತಿಯನ್ನು ಗುರುತಿಸಿ ಮೈಸೂರಿನ ಸೇವೆಯಿಂದ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಛೇರಿಗೆ ಕರೆತಂದ ವಿಷಯವನ್ನು ಈಗಾಗಲೇ ಗಮನಿಸಿದೆ. ಶಬ್ದ ಸಂಗ್ರಹ ಮಾಡುತ್ತಾ ಪ್ರಧಾನ ಸಂಪಾದಕರ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಲೇ ನಿಘಂಟು ಶಾಸ್ತ್ರದ ಎಲ್ಲ ಸೂಕ್ಷ್ಮಗಳನ್ನು ಡಿಎಲ್ಎನ್ ಅವರ ಸಮರ್ಥ ಮಾರ್ಗದರ್ಶನದಲ್ಲಿ ಕರಗತಮಾಡಿಕೊಂಡರು. ೧೯೫೫ರಿಂದ ೧೯೭೧ರವರೆಗೆ ಕನ್ನಡ ನಿಘಂಟಿನ ಸಂಪಾದಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದರು. ಉಪನಿರ್ದೇಶಕರಾಗಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ (೧೯೭೧ರಿಂದ ೧೯೮೬)ನಿವೃತ್ತಿಯವರೆಗೆ ಗ್ರಂಥ ಸಂಪಾದನೆಯ ಕಾರ್ಯವನ್ನು ನಿಷ್ಠೆಯಿಂದ ಹಾಗೂ ಜವಾಬ್ದಾರಿಯಿಂದ ನಿರ್ವಹಿಸಿದರು. ಶ್ರೀಯುತರು ಮೈಸೂರಿಗೆ ತೆರಳಿದ ಮೇಲೆಯೂ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿ ಮುಂದುವರಿದಿದ್ದರು. ನಿಘಂಟಿನ ಕಾರ್ಯ ಬಹಳ ನಿಧಾನ ಗತಿಯಲ್ಲಿ ನಡೆಯುತ್ತಿದೆ ಎಂದೂ ಕೆಲವು ಆಕ್ಷೇಪಣೆ ಬರುತ್ತಿದ್ದವು. ಅಷ್ಟು ಹೊತ್ತಿಗೆ

ಬಸವಾರಾಧ್ಯರು ನಿವೃತ್ತಿಯ ನಂತರ ಬೆಂಗಳೂರಿಗೆ ಹಿಂತಿರುಗಿದ್ದರು. ನಿಘಂಟಿನ ನಿಧಾನಗತಿಗೆ ವೇಗ ಹೆಚ್ಚಿಸಲು ಸಂಪಾದಕ ಸಮಿತಿಯಲ್ಲಿ ವಿವರವಾಗಿ ಚರ್ಚಿಸಿ ಪ್ರಧಾನ ಸಂಪಾದಕರೂ ಹಾಗೂ ಸಂಪಾದಕ ಸಮಿತಿಯ ಅಧ್ಯಕ್ಷರೂ ಒಬ್ಬರೇ ಆಗಿರುವುದರಿಂದ ಕಾರ್ಯಭಾರವನ್ನು ವಿಭಜಿಸಿದರೆ ಅನುಕೂಲವೆಂದು ನಿರ್ಧಾರವಾಯಿತು. ಎರಡೂ ಹುದ್ದೆಯಲ್ಲಿದ್ದ ಹಿರಿಯ ವಿದ್ವಾಂಸರು ಇದನ್ನು ಇಷ್ಟಪಡದೆ ಹುದ್ದೆಗಳನ್ನು ತ್ಯಜಿಸಿದರು. ಆಗ ಬಸವಾರಾಧ್ಯರನ್ನು ಪ್ರಧಾನ ಸಂಪಾದಕರನ್ನಾಗಿಯೂ ಡಾ.ಜಿ.ಸ್. ಗಾಯಿ ಅವರನ್ನು ಸಂಪಾದಕ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿತು. ಕೆಲ ಕಾಲಾನಂತರ ಗಾಯಿ ಅವರು ದೈವಾಧೀನರಾದ ಕಾರಣ ಆ ಎರಡೂ ಜವಾಬ್ದಾರಿಗಳನ್ನು ಬಸವಾರಾಧ್ಯರೇ ನಿರ್ವಹಿಸಬೇಕಾಯಿತು. ಕೊನೆಯ ಎರಡು ಸಂಪುಟಗಳ ಕಾರ್ಯವನ್ನು ಮುಗಿಸಿ ಬಿಡುಗಡೆ ಮಾಡಲಾಯಿತು. ಒಟ್ಟಾಗಿ ಎಂಟೂ ಸಂಪುಟಗಳು ಕನ್ನಡಿಗರಿಗೆ ಲಭ್ಯವಾಗುವಂತಾಯಿತು. 'ನನ್ನ ಗುರುಗಳು ನನ್ನನ್ನು ಈ ಕಾರ್ಯಕ್ಕೆ ನಿಯೋಜಿಸಿದ್ದರಿಂದ ಗುರು ಕಾಣಿಕೆಯನ್ನು ಸಲ್ಲಿಸಿದ ತೃಪ್ತಿ ಉಂಟಾಯಿತು" ಎಂಬ ಮಾತುಗಳು ಅವರ 'ನೆನಪಿನಂಗಳದಲ್ಲಿ' ವ್ಯಕ್ತವಾಗಿವೆ.

ಬಸವಾರಾಧ್ಯರು ನಿಘಂಟುಗಳನ್ನು ರೂಪಿಸುವುದರಲ್ಲಿ ಪರಿಣತಿ ಪಡೆದಿದ್ದಂತೆ ನಿಘಂಟು ಶಾಸ್ತ್ರವನ್ನೂ ಆಳವಾಗಿ ಬಲ್ಲವರಾಗಿದ್ದರು. ನಾಡಿನ ಬೇರೆಬೇರೆ ಪತ್ರಿಕೆಗಳಲ್ಲಿ, ಅಭಿನಂದನ ಗ್ರಂಥಗಳಲ್ಲಿ ಹಾಗೂ ಸಂಸ್ಮರಣ ಗ್ರಂಥಗಳಲ್ಲಿ ನಿಘಂಟನ್ನು ಕುರಿತು ಉತ್ತಮವಾದ ಲೇಖನಗಳನ್ನು ರಚಿಸಿದ್ದಾರೆ. ಅವರ ಕೆಲವು ಲೇಖನಗಳ ಶೀರ್ಷಿಕೆಗಳನ್ನು ಗಮನಿಸಿದರೆ ಶ್ರೀಯುತರು ನಿಘಂಟು ರಚನೆ ಮತ್ತು ನಿಘಂಟು ಶಾಸ್ತ್ರದ ಬಗ್ಗೆ ಅವರಿಗಿದ್ದ ಪ್ರಭುತ್ವ ಸ್ಪಷ್ಟವಾಗುತ್ತದೆ. 'ಕನ್ನಡ ನಿಘಂಟು ಕ್ಷೇತ್ರಕ್ಕೆ ತೀನಂಶ್ರೀ ಅವರ ಕೊಡುಗೆ', 'ಕನ್ನಡ ನಿಘಂಟುಗಳು', 'ನಿಘಂಟು ಶಾಸ್ತ್ರ ಮತ್ತು ಕನ್ನಡ ನಿಘಂಟುಗಳು', 'ನಿಘಂಟು ಕ್ಷೇತ್ರಕ್ಕೆ ಕಿಟ್ಟೆಲ್ಲರ ಕಾಣಿಕೆ', ಪ್ರೊ. ಎಂ. ಮರಿಯಪ್ಪ ಭಟ್ಟರು ಪರಿಷ್ಕರಿಸಿದ ಕಿಟಲ್ ನಿಘಂಟಿನ ನಾಲ್ಕು ಸಂಪುಟಗಳನ್ನು ಕುರಿತು 'ಕಿಟೆಲ್ಲರ ಕನ್ನಡ ಇಂಗ್ಲಿಷ್ ನಿಘಂಟು –ಒಂದು ಅವಲೋಕನ', ಭಾರತೀಯ ಭಾಷೆಗಳ ಕೇಂದ್ರ ಸಂಸ್ಥಾನವು ೧೯೮೦ರಲ್ಲಿ ಪ್ರಕಟಿಸಿದ Lexicography in India ಗ್ರಂಥದಲ್ಲಿ ಬಸವಾರಾಧ್ಯರ Preparation of Kannada Dictionary on Historical Principles ಲೇಖನ ಪ್ರಕಟವಾಗಿದೆ. ಇದು ಸಿಐಐಎಲ್ ಸಂಸ್ಥೆ ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನವಾಗಿದೆ. 'ಕನ್ನಡ ನಿಘಂಟು ಕನ್ನಡ ಸಾಹಿತ್ಯ ಪರಿಷತ್ತಿನ ಅಪೂರ್ವ ಸಾಧನೆ', 'ಕನ್ನಡ ನಿಘಂಟು ಶಾಸ್ತ್ರ' ಇನ್ನೂ ಮುಂತಾದ ಲೇಖನಗಳನ್ನು ಪ್ರಕಟಿಸಿ ಕನ್ನಡ ನಿಘಂಟು ಶಾಸ್ತ್ರ ಮತ್ತು ಕನ್ನಡ ಕೋಶ ರಚನೆಗೆ ಮಹತ್ವದ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಬಸವಾರಾಧ್ಯರ ಸೇವೆ ಅನೇಕ ಸಂಸ್ಥೆಗಳಲ್ಲಿ ಕಂಡು ಬರುತ್ತದೆ. ಶ್ರೀಯುತರು ಯಾವುದೇ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದರೂ ಯಾವುದೇ ಕಪ್ಪುಚುಕ್ಕೆ ಇಲ್ಲದಂತೆ ಪರಿಶುದ್ಧವಾಗಿ ಹೊರಬಂದಿರುವುದು ಅವರ ಹೆಗ್ಗಳಿಕೆ. ಬಿ. ಶಿವಮೂರ್ತಿಶಾಸ್ತ್ರಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಉತ್ತಮವಾದ ಸೇವೆಯನ್ನು ಸಲ್ಲಿಸಿದ್ದಾರೆ. ಬಿಎಂಶ್ರೀ ಪ್ರತಿಷ್ಠಾನದಲ್ಲಿ ಅಧ್ಯಕ್ಷರಾಗಿ ದೀರ್ಘಕಾಲದ ಸೇವೆಯನ್ನು ಸಲ್ಲಿಸಿದ್ದಾರೆ (೧೫.೦೩.೧೯೯೨ ರಿಂದ ೧೮.೧೦.೨೦೦೧) ಹಸ್ತಪ್ರತಿಗಳನ್ನು ಉತ್ತಮಮಟ್ಟದಲ್ಲಿ ಸಂಗ್ರಹಿಸಿರುವ ಬಿಎಂಶ್ರೀ ಪ್ರತಿಷ್ಠಾನ ೧೯೮೧ ಜನವರಿ ತಿಂಗಳಲ್ಲಿಯೇ ಹಸ್ತಪ್ರತಿಶಾಸ್ತ್ರವನ್ನು ೩ ದಿನಗಳ ವಿಚಾರ ಸಂಕಿರಣ ಏರ್ಪಡಿಸಿ, ಪ್ರೊ. ಎಂವಿಸೀ ಮತ್ತು ಡಾ. ಎಂ. ಚಿದಾನಂದ ಮೂರ್ತಿಯವರು ಸಂಪಾದಿಸಿದ 'ಹಸ್ತಪ್ರತಿಶಾಸ್ತ್ರ' ವೆಂಬ ಮೌಲಿಕ ಗ್ರಂಥವನ್ನು ೧೯೮೩ರಲ್ಲಿ ಪ್ರಕಟಿಸಿತ್ತು. ಫ.ಗು. ಹಳಕಟ್ಟಿಯವರ ಸಂಸ್ಮರಣ ಸಂಪುಟವಾಗಿ ೧೯೮೨ರಲ್ಲಿ 'ಮಣಿಹ' ಗ್ರಂಥವನ್ನು ಪ್ರಕಟಿಸಿತ್ತು. ಈ ಪರಂಪರೆಯನ್ನು ಬಸವಾರಾಧ್ಯರು ಅದ್ಯಕ್ಷರಾದ ಮೇಲೆ ಸಮರ್ಥವಾಗಿ ಮುಂದುವರಿಸಿದರು. ಹಲವು ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸಲು ಶ್ರಮಿಸಿದ್ದಾರೆ. ಹಸ್ತಪ್ರತಿ ಸಂಗ್ರಹ, ಗ್ರಂಥ ಸಂಪಾದನೆ, ಗ್ರಂಥ ಪ್ರಕಟಣೆ, ಹಸ್ತಪ್ರತಿ ಕುರಿತ ತರಬೇತಿ ಶಿಬಿರ, ಕಮ್ಮಟಗಳು, ವಿಚಾರ ಸಂಕಿರಣಗಳು ಪ್ರತಿಷ್ಠಾನದ ಮೂಲಕ ಸಂಯೋಜನೆಗೊಂಡು ಹಸ್ತಪ್ರತಿಶಾಸ್ತ್ರ ಒಂದು ವಿಸ್ತಾರ ಜ್ಞಾನಶಾಖೆಯಾಗಿ ಬೆಳೆಯಲು ಕಾರಣಕರ್ತರಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸಂಬಂಧ ಬಸವಾರಾಧ್ಯರಿಗೆ ಬಹಳ ಕಾಲದಿಂದಲೂ ಇದ್ದಿತು. ಅದು ವಿಶೇಷವಾಗಿ ನಿಘಂಟು ಕಛೇರಿಗೆ ಸಂಬಂಧಿಸಿದ ಹಾಗೆ ಇದ್ದದ್ದು. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆ ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವ ಸಂದರ್ಭ ಅವರ ಜೀವನದಲ್ಲಿ ಅನಿರೀಕ್ಷಿತವಾಗಿ ಒದಗಿ ಬಂದದ್ದು ವಿಸ್ಮಯಕಾರಿ ಸಂಗತಿ. ೧೯೮ನೆಯ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚುನಾವಣೆ ಬಂದಿತು. ಕೆಲವರು ಅವರನ್ನು ಸಂಪರ್ಕಿಸಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಅವರಿಗೆ ಪರಿಚಯದವರು ಇರುವುದರಿಂದ ಗೆಲ್ಲುವುದು ಸುಲಭವೆಂದು ಪ್ರೋತ್ಸಾಹಿಸಿದರು. ಆಗ ಅವರು ಮನೆಯವರ ವೈದ್ಯಕೀಯ ಚಿಕಿತ್ಸೆಗಾಗಿ ಪಟ್ಟ ಕಷ್ಟವನ್ನು ವಿವರಿಸಿ ಹಣ ಉಳ್ಳವರು ಮಾತ್ರ ಸ್ಪರ್ಧಿಸುವ ಚುನಾವಣಾ ಕಣಕ್ಕೆ ತಾವು ಇಳಿಯುವುದಿಲ್ಲವೆಂದು ನಿರಾಕರಿಸಿದರು. ಅನೇಕ ಒತ್ತಡಗಳ ಮಧ್ಯೆ ಮತ್ತು ಅವರ ಗುರುಗಳಿಂದ ಪ್ರೊ. ಎ.ಎನ್. ಮೂರ್ತಿರಾವ್, ಹಿರಿಯರಾದ ನಿಟ್ಟೂರು ಶ್ರೀನಿವಾಸರಾವ್ ಹಾಗೂ ಎಚ್.ಎಲ್. ನಾಗೇಗೌಡರು ಹಾಗೂ ಆಪ್ತೇಷ್ಟರರ ಮತ್ತು ಮಿತ್ರರ ಪ್ರೋತ್ಸಾಹದಿಂದ ಒಪ್ಪಿ ಸ್ಪರ್ಧಿಸಿ ಜಯಶೀಲರಾದರು. ಅಧ್ಯಕ್ಷತೆ ವಹಿಸಿಕೊಂಡ ಮೇಲೆ ಚುರುಕಾಗಿ ಕಾರ್ಯಕ್ರಮಗಳನ್ನು

ಹಾಕಿಕೊಂಡರು. ಅವರು ಮಾಡಿದ ಮುಖ್ಯ ಕೆಲಸಗಳಲ್ಲಿ ಕೆಲವನ್ನು ಗಮನಿಸಬಹುದು. ಪರಿಷತ್ತಿನ ಆವರಣದಲ್ಲಿದ ಬಿಎಂಶ್ರೀ ಅಚ್ಚುಕೂಟವನ್ನು ಆಧುನಿಕವಾಗಿ ನವೀಕರಿಸಿ 'ಆಫ್ ಸೆಟ್' ಮುದ್ರಣ ವ್ಯವಸ್ಥೆಯನ್ನು ತಂದದ್ದು ಕೂಡ ಇತಿಹಾಸದ ದಾಖಲೆಯಾಗಿದೆ. ಸಾಹಿತ್ಯ ಪರಿಷತ್ತು ಆರ್ಥಿಕವಾಗಿ ಆದಷ್ಟು ಸ್ವಾವಲಂಬಿ ಆಗಬೇಕೆಂಬ ಮನೋಭಾವದಿಂದ ಪರಿಷತ್ತಿನ ಪುಸ್ತಕ ಮಾರಾಟ ವಿಭಾಗದಲ್ಲಿ ವಿಸ್ತಾರವಾಗಿದ್ದ ಸ್ಥಳವನ್ನು ವಿಭಜಿಸಿ ರಸ್ತೆಗೆ ಹೊಂದಿಕೊಂಡಂತೆ ಇದ್ದ ಸ್ಥಳವನ್ನು ಸಿಂಡಿಕೇಟ್ ಬ್ಯಾಂಕಿಗೆ ಬಾಡಿಗೆ ನೀಡಿದರು. ಪ್ರತಿ ತಿಂಗಳ ಬಾಡಿಗೆಯಿಂದ ಪರಿಷತ್ತಿನ ಆರ್ಥಿಕ ಸ್ಥಿತಿ ಬಲಪಡಿಸಲು ಸಹಾಯವಾಯಿತು. ಆಗಿನ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿ ನೀಡಿದ ಸಹಕಾರ ದೊಡ್ಡದು.

ಬಸವಾರಾಧ್ಯರಿಗೆ ನಿಘಂಟು, ಹಸ್ತಪ್ರತಿ ಕ್ಷೇತ್ರ ತುಂಬಾ ಪ್ರಿಯವಾದವು. ಕನ್ನಡ ರತ್ನಕೋಶ ೧೯೭೭ರಲ್ಲಿ ಮೊದಲ ಮುದ್ರಣದ ೨ ಲಕ್ಷ ಪ್ರತಿಗಳು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದ್ದವು. ೧೯೯೪ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ೫ ಲಕ್ಷ ಪ್ರತಿಗಳು ಮುದ್ರಣವಾದವು. ಮೂರನೆಯ ಪರಿಷ್ಕೃತ ಮುದ್ರಣ ಕನ್ನಡ ಸಾಹಿತ್ಯ ಪರಿಷತ್ತಿನಿಂದ ೨೦೦೧ರಲ್ಲಿ ಒಂದು ಲಕ್ಷ ಪ್ರತಿಗಳನ್ನು ಬಸವಾರಾಧ್ಯರು ಆಸಕ್ತಿವಹಿಸಿ ಮುದ್ರಿಸಿದರು. ಸಂಕ್ಷಿಪ್ತ ಕನ್ನಡ ನಿಘಂಟು ಕನ್ನಡದ ಬಹು ಬೇಡಿಕೆಯ ನಿಘಂಟುಗಳಲ್ಲಿ ಒಂದು. ಮೊದಲ ಮುದ್ರಣ ೧೯೭೫ರಲ್ಲಿ ಆಗಿತ್ತು. ಎರಡನೆಯ ಮುದ್ರಣ ೧೯೭೭ರಲ್ಲಿ ಆಗಿತ್ತು. ಮೂರನೆಯ ಮುದ್ರಣ (ಪರಿಷ್ಕೃತ) ೨೦೦೧ರಲ್ಲಿ ಪ್ರಕಟವಾಯಿತು. ಎರಡನೆಯ ಮುದ್ರಣದಲ್ಲಿ ೯೬೪ ಪುಟಗಳಿದ್ದದ್ದು ಪರಿಷ್ಕೃತ ಮುದ್ರಣದಲ್ಲಿ ೧೪೫೬ ಪುಟಗಳಾಯಿತು. ಇದೂ ಕೂಡ ಒಂದು ಲಕ್ಷ ಪ್ರತಿಗಳು ಮುದ್ರಣವಾಗಿವೆ. ಹಳಗನ್ನಡ ಸಾಹಿತ್ಯದಲ್ಲಿ ಯಥೇಚ್ಛವಾಗಿ ಬಳಕೆಯಾಗುವ 'ಱೞ' ಅಕ್ಷರಗಳು ಆಧುನಿಕ ಕನ್ನಡದಲ್ಲಿ ಮರೆಯಾಗಿವೆ. ಈ ಅಕ್ಷರಗಳನ್ನು ಸರಿಯಾಗಿ ಗ್ರಹಿಸಿ ಅರ್ಥಮಾಡಿಕೊಳ್ಳಲು ಹಾಗೂ ಹಳಗನ್ನಡ ಸಾಹಿತ್ಯಾಭ್ಯಾಸಿಗಳಿಗೆ ಅನುಕೂಲವಾಗುವಂತೆ ಱ ೞ ನಿಘಂಟಿನ ಒಂದು ಕೋಶವನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಪ್ರಕಟಿಸಲಾಯಿತು(೨೦೦೦). ಶಾಸ್ತ್ರೀಯವಾದ ರೀತಿಯಲ್ಲಿ ಱ ೞ ಶಬ್ದಗಳನ್ನು ಕಲೆಹಾಕಿ ಅರ್ಥ ವಿವರಣೆಯನ್ನು ನೀಡಿ ಪ್ರಯೋಗ ಸಹಿತವಾಗಿ ಪರಿಪೂರ್ಣ ನಿಘಂಟನ್ನಾಗಿ ರೂಪಿಸಲಾಗಿದೆ. ಅವಳಿ ಪಡೆನುಡಿ ಕೋಶ, ಜೈನಪಾರಿಭಾಷಿಕ ಕೋಶ, ಕೊಡವ–ಕನ್ನಡ ನಿಘಂಟುಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನವನ್ನು ನಡೆಸುವುದು ಅತ್ಯಂತ ಜವಾಬ್ದಾರಿಯುತ ಕೆಲಸ. ಅಖಿಲಭಾರತ ಅರವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೆಂಗಳೂರು ಗ್ರಾಮಾಂತರದ ಕನಕಪುರದಲ್ಲಿ ನಡೆಯಿತು. ಕೆಲವರು ಅಭಿಪ್ರಾಯ ಪಡುವಂತೆ 'ನ ಭೂತೋ ನಭವಿಷ್ಯತಿ' ಎಂಬಂತಹ ಸಮ್ಮೇಳನವಾಗಿ ಅದು ಪ್ರಸಿದ್ಧವಾಗಿದೆ. ಆ

ಸಂದರ್ಭದಲ್ಲಿ ೬೭ ಮಹತ್ವದ ಗ್ರಂಥಗಳು ಪ್ರಕಟವಾದವು. ಉತ್ತರ ಕರ್ನಾಟಕ ಭಾಗದ ಅಖಿಲಭಾರತ ಅರವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮುಳುಗಡೆಗೆ ಒಳಗಾಗಲಿದ್ದ ಬಾಗಲಕೋಟೆಯಲ್ಲಿ ನಡೆಯಿತು. ನವ ಬಾಗಲಕೋಟೆ ನಿರ್ಮಾಣಕ್ಕೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಈ ಸಮ್ಮೇಳನ ಮಹತ್ವದ ಪಾತ್ರವನ್ನು ಮಾಡಿದಂತಿದೆ.

ಬಸವಾರಾಧ್ಯರು ವಯಸ್ಸಿನ ಪರಿವೆಯನ್ನು ಇಟ್ಟುಕೊಳ್ಳದೆ ಯುವಕರಂತೆ ನಾಡಿನಾದ್ಯಂತ ಪ್ರವಾಸಮಾಡಿದರು. ಕನ್ನಡದ ಕೆಲಸಗಳಿಗೆ ಹೊಸ ಹುರುಪನ್ನು ತಂದರು; ನವ ಚೈತನ್ಯ ಮೂಡಿಸಿದರು. ಅಧ್ಯಕ್ಷ ಸ್ಥಾನದಲ್ಲಿದ್ದರೂ ಅವರಿಗೆ ಸಹಜವಾದ ಸರಳ ಸಜ್ಜನಿಕೆಯನ್ನು ನಿರಂತರವಾಗಿ ಉಳಿಸಿಕೊಂಡು ಬಂದು ನಾಡಿನ ಅಸಂಖ್ಯ ಜನರ ಮೆಚ್ಚುಗೆಗೆ ಪಾತ್ರವಾಗಿದ್ದರು. ವಿದ್ವತ್ತು, ವಿನಯ, ಶಿಸ್ತುಗಳು ಅವರ ವ್ಯಕ್ತಿತ್ವದ ಭಾಗಗಳಾಗಿದ್ದವು. ಹಿರಿ ಕಿರಿಯರಲ್ಲಿ ಭೇದಭಾವವಿಲ್ಲದೆ ಸೌಜನ್ಯದಿಂದ ವ್ಯವಹರಿಸುತ್ತಿದ್ದರು. ಉದಾರ ಮನಸ್ಸಿನ ಪಕ್ವ ವ್ಯಕ್ತಿತ್ವದ ಬಸವಾರಾಧ್ಯರು ಮುಂದಿನ ತಲೆಮಾರುಗಳಿಗೆ ಆದರ್ಶವಾಗಿದ್ದಾರೆ.

ಎನ್. ಬಸವಾರಾಧ್ಯರು ಹೊರ ಜಗತ್ತಿಗೆ ಮಾತ್ರ ಶಿಸ್ತಿನ ಸಿಪಾಯಿ ಆಗಿರಲಿಲ್ಲ. ಕುಟುಂಬದಲ್ಲಿಯೂ, ಮಕ್ಕಳಲ್ಲಿಯೂ ಶಿಸ್ತಿನ ಜೀವನವನ್ನು ನಿರೀಕ್ಷಿಸುತ್ತಿದ್ದರು. ಶ್ರೀಯುತರ ಮಡದಿ ಶ್ರೀಮತಿ ಸರ್ವಮಂಗಳಮ್ಮನವರು ಅತಿಥಿ ಸತ್ಕಾರಕ್ಕೆ ಅನ್ನಪೂರ್ಣೇ ಸ್ವರೂಪರು. ತುಂಬು ಕುಟುಂಬದ ಮನೆಗೆ ಬರುತ್ತಿದ್ದ ಪತಿಯ ಸಾಹಿತಿ ಮಿತ್ರರು, ವಿದ್ಯಾರ್ಥಿಗಳು, ಸ್ನೇಹಿತರು, ಬಂಧು ಬಾಂಧವರನ್ನು ಪ್ರೀತ್ಯಾದರಗಳಿಂದ ಕಂಡವರು. ನಾಲ್ಕು ಜನ ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು. ಇವರನ್ನೆಲ್ಲ ದಂಪತಿಗಳು ವಿದ್ಯಾವಂತರನ್ನಾಗಿ ಸತ್ಪ್ರಜೆಗಳನ್ನಾಗಿ ರೂಪಿಸಿದ್ದಾರೆ. ಮಕ್ಕಳನ್ನು ಸೊಸೆಯರನ್ನು ವಾತ್ಸಲ್ಯದಿಂದ ಕಂಡವರು. ಆದರ್ಶ ವ್ಯಕ್ತಿಗಳಾಗಿ ಬದುಕನ್ನು ರೂಪಿಸಿಕೊಂಡವರು ಹಾಗೆಯೇ ಕುಟುಂಬವನ್ನೂ ರೂಪಿಸಿದವರು.

ಶ್ರೀಯುತರಿಗೆ ಎಂಬತ್ತು ವರ್ಷಗಳು ತುಂಬುವ ಹೊಸ್ತಿಲಿನಲ್ಲಿ ಅಭಿನಂದನ ಗ್ರಂಥಗಳನ್ನು ಸಮರ್ಪಿಸಲಾಯಿತು. 'ಆರಾಧ್ಯಸಿರಿ' ಅಭಿನಂದನ ಗ್ರಂಥವಾದರೆ, 'ಆರಾಧ್ಯ ಸಂಪದ–೨' ಮತ್ತು 'ಆರಾಧ್ಯ ಸಂಪದ' ಅವರ ೫೦ ವರ್ಷಗಳಿಗೂ ಮೀರಿದ ಬರೆವಣಿಗೆಯ ಸಮಗ್ರ ಸಂಕಲನಗಳಾಗಿವೆ. 'ಆರಾಧ್ಯಸಿರಿ' ೨೬೨ ಪುಟಗಳನ್ನು ಒಳಗೊಂಡಿದ್ದರೆ, ಉಳಿದೆರಡು ಸಂಪುಟಗಳು ಒಟ್ಟಾಗಿ ೧೫೦೦ ಪುಟಗಳನ್ನು ಮೀರಿವೆ.

ಗುರುಪರಂಪರೆಯ ಹಾದಿಯಲ್ಲಿ ದೊಡ್ಡ ವಿದ್ವಾಂಸರಾಗಿ, ನಿಘಂಟು ತಜ್ಞರಾಗಿ ಬೆಳೆದ ಶ್ರೀಯುತರು ಅನೇಕ ವಿಶ್ವವಿದ್ಯಾಲಯಗಳಲ್ಲಿ, ಜ್ಞಾನಕೇಂದ್ರಗಳಲ್ಲಿ, ವಿದ್ವತ್ ಸಮಿತಿಗಳಲ್ಲಿ ಉನ್ನತ ಜ್ಞಾನ ನಿಕಾಯಗಳಲ್ಲಿ, ರಾಷ್ಟ್ರಮಟ್ಟದ ವಿಚಾರಗೋಷ್ಠಿಗಳಲ್ಲಿ, ಪರೀಕ್ಷಾ ಮಂಡಳಿಗಳಲ್ಲಿ ಉತ್ತಮ ಮಟ್ಟದ ಸೇವೆಯನ್ನು ಸಲ್ಲಿಸಿದ್ದಾರೆ.

ಕನ್ನಡದ ವಿದ್ವತ್ ಲೋಕದಲ್ಲಿ ದೀರ್ಘಕಾಲ ವಿಹರಿಸಿದ ಎನ್. ಬಸವಾರಾಧ್ಯರಿಗೆ ಪ್ರಶಸ್ತಿಗಳ, ಗೌರವಗಳ ಸಾಲು ಸಾಲೇ ಹರಿದು ಬಂದಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಬಹುದು. ಗ್ರಂಥ ಸಂಪಾದನೆಗೆ ದೊರಕಿದ ಪ್ರಶಸ್ತಿಗಳನ್ನು ಹಿಂದೆಯೇ ಹೆಸರಿಸಲಾಗಿದೆ. ಬಂಗಾರಪೇಟೆ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ, ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನೀಡಿದ 'ಶ್ರೇಷ್ಠ ಸಾಹಿತಿ' ಪ್ರಶಸ್ತಿ, ಅಖಿಲ ಭಾರತೀಯ ಭಾಷಾಸಾಹಿತ್ಯ ಸಮ್ಮೇಳನದಲ್ಲಿ 'ಭಾರತ ಭಾಷಾಭೂಷಣ ಪ್ರಶಸ್ತಿ', ೧೯೯೭ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ೨೦೦೪ರಲ್ಲಿ ಸಿದ್ಧಗಂಗಾ ಮಠಾಧ್ಯಕ್ಷರಾದ ಶಿವಕುಮಾರ ಸ್ವಾಮಿಯವರ ಜನ್ಮದಿನದ ವಿಶೇಷ ಸಂದರ್ಭದಲ್ಲಿ 'ಶಿವರತ್ನ ಪ್ರಶಸ್ತಿ', ೨೦೦೫ರಲ್ಲಿ ಕಾಶೀ ಜಗದ್ಗುರುಗಳಿಂದ 'ಶಿವಕಮಲ ಪ್ರಶಸ್ತಿ' ಮುಂತಾದ ಹಲವು ಹತ್ತು ಪ್ರಶಸ್ತಿಗಳು ಲಭಿಸಿವೆ.

ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದು ಶ್ರೇಷ್ಠ ಗುರು ಪರಂಪರೆಯ ಪ್ರೋತ್ಸಾಹದಲ್ಲಿ, ಸತತ ದುಡಿಮೆಯಿಂದ ಶಿಸ್ತು ಸಂಯಮಗಳಿಂದ ಬೆಳೆದು ಶ್ರೇಷ್ಠ ವಿದ್ವಾಂಸರಾಗಿ, ನಿಘಂಟು ತಜ್ಞರಾಗಿ, ಕನ್ನಡ ವಿದ್ವತ್ತಿನ ರಥವನ್ನು ಮುನ್ನಡೆಸಿದ ಎನ್. ಬಸವಾರಾಧ್ಯರು ಸರ್ವಕಾಲಕ್ಕೂ ಗೌರವಾರ್ಹರು. ಶ್ರೀಯುತರ ಶತಮಾನೋತ್ಸವ ವರ್ಷದಲ್ಲಿ ಅವರ ನಿರಂತರ ಸ್ಮರಣೆ ಎಲ್ಲ ಕನ್ನಡಿಗರ ಪೂಜ್ಯ ಕರ್ತವ್ಯ.

ಕೆಲವು ಮುಖ್ಯ ಆಕರಗಳು :

೧. ಸಂ. ಡಾ. ಸಿ. ಶಿವಕುಮಾರಸ್ವಾಮಿ : ಆರಾಧ್ಯಸಿರಿ.
(ಎನ್. ಬಸವಾರಾಧ್ಯ–೮೦ ಅಭಿನಂದನ ಸಂಪುಟ)

೨. ಡಾ. ಸಿ. ಶಿವಕುಮಾರ ಸ್ವಾಮಿ
ಪ್ರೊ. ಎಂ. ಪ್ರಸನ್ನಕುಮಾರ್ : ಆರಾಧ್ಯ ಸಂಪದ–೨
(ಎನ್. ಬಸವಾರಾಧ್ಯರ ಸಾಹಿತ್ಯ ಸಂಪುಟ)

೩. ಡಾ. ಎಸ್. ವಿದ್ಯಾಶಂಕರ : ಆರಾಧ್ಯ ಸಂಪದ
(ಎನ್. ಬಸವಾರಾಧ್ಯ ಸಮಗ್ರ ಸಾಹಿತ್ಯ ಸಂಪುಟ)

೪. ಡಾ. ವೈ.ಸಿ. ಭಾನುಮತಿ : ಗ್ರಂಥ ಸಂಪಾದನೆ ವಿವಕ್ಷೆ

೫. ಬಸವಾರಾಧ್ಯರ ಬಗ್ಗೆ ಕೆಲವು ಮಾಹಿತಿಗಳನ್ನು ನೀಡಿದ ಬಿಎಂಶ್ರೀ ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಶ್ರೀ ಬಿ.ಎಸ್. ಗುರು ಪ್ರಸಾದ್ ಅವರಿಗೆ ಕೃತಜ್ಞತೆಗಳು

❐❐

ತತ್ವಪದಗಳಲ್ಲಿ ಚಾರಿತ್ರಿಕ ನೋಟ – ತತ್ವಪದಗಳು ಪರ್ಯಾಯ ಇತಿಹಾಸದ ಕನ್ನಡಿಗಳು

ಡಾ. ಎನ್. ಆರ್. ಲಲಿತಾಂಬ

❖

ಕರ್ನಾಟಕದ ೧೭, ೧೮ ಮತ್ತು ೧೯ನೇ ಶತಮಾನಗಳ ಸಾಹಿತ್ಯ–ಸಂಸ್ಕೃತಿ ಇತಿಹಾಸವನ್ನು ಪರಿಶೀಲಿಸಿದಾಗ, 'ತತ್ವಪದ'ಗಳಂತಹ ಕಾವ್ಯಪ್ರಕಾರಗಳು ಕೇವಲ ಭಕ್ತಿ ಅಥವಾ ಆಧ್ಯಾತ್ಮಿಕ ಗೀತೆಗಳಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅವು ತಾವು ಹುಟ್ಟಿಕೊಂಡ ಕಾಲದ ಸಾಮಾಜಿಕ–ಆರ್ಥಿಕ–ರಾಜಕೀಯ–ಸಾಂಸ್ಕೃತಿಕ ಬದಲಾವಣೆಗಳನ್ನು ಬಿಂಬಿಸುವ ಚಾರಿತ್ರಿಕ ಸಾಕ್ಷ್ಯಗಳು. ಈ ಅವಧಿ ಸಾಮ್ರಾಜ್ಯಶಾಹಿಯ ಆರ್ಥಿಕ–ಸಾಂಸ್ಕೃತಿಕ ಪ್ರವೇಶ, ರಾಜಪ್ರಭುತ್ವಗಳ ಒಳಒಪ್ಪಂದ, ಧಾರ್ಮಿಕ–ಸಾಮಾಜಿಕ ಬಿಗಿಕಟ್ಟಿನ ನಡುವಣ ಸಂಘರ್ಷದ ಸಮಯವಾಗಿತ್ತು. ಹೀಗಾಗಿ ತತ್ವಪದಗಳನ್ನು ಕೇವಲ ಅನುಭಾವಿಗಳ ವೈಯಕ್ತಿಕ ಆಧ್ಯಾತ್ಮಿಕ ಅನಿಸಿಕೆಗಳೆಂದು ಓದುವ ಬದಲು, ಅವುಗಳನ್ನು ಆ ಕಾಲಘಟ್ಟದ ಜನಸಮುದಾಯದ ಒತ್ತಡ–ಪ್ರತಿರೋಧ–ಸಂಘರ್ಷದ ಪ್ರತಿಫಲನವೆಂದು ಪರಿಗಣಿಸುವ ಅಗತ್ಯವಿದೆ.ಅವುಗಳನ್ನು ಒಂದು ಸಾಂಸ್ಕೃತಿಕ ಪಠ್ಯವೆಂದು ಅಧ್ಯಯನಕ್ಕೆ ಒಳಪಡಿಸಿದಾಗ ಅವುಗಳಲ್ಲಿನ ವಿಭಿನ್ನ ನೋಟಗಳು ಅನಾವರಣಗೊಳ್ಳುತ್ತವೆ.

ಮೊದಲಿಗೆ 'ಚಾರಿತ್ರಿಕ ನೋಟ' (Historical Approach / Historical Perspective) ಎಂದರೆ ಏನೆಂಬುದನ್ನು ಗಮನಿಸೋಣ. ಸಾಹಿತ್ಯವನ್ನು ಅದರ ಕಾಲಘಟ್ಟ, ಸಮಾಜ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಮತ್ತು ವೈಯಕ್ತಿಕ ಹೋರಾಟಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ವಿಧಾನ. ಅಂದರೆ, ಕೃತಿ ಯಾವ ಕಾಲದಲ್ಲಿ ಬರೆಯಲ್ಪಟ್ಟಿದೆ 'ಆ ಕಾಲದ ಸಮಾಜ, ರಾಜಕೀಯ, ಧರ್ಮ, ಆರ್ಥಿಕ ಸ್ಥಿತಿಗತಿ ಕೃತಿಯಲ್ಲಿ ಹೇಗೆ ಪ್ರತಿಫಲಿಸಿದೆ? ರಚಯಿತನ ಜೀವನಾನುಭವ, ಆತ್ಮಕಥನಾತ್ಮಕ ಅಂಶಗಳು, ಇತಿಹಾಸದ ಘಟನೆಗಳ ವ್ಯಕ್ತಿಗಳ ಪ್ರಭಾವ ಎಷ್ಟಿದೆ' ಎಂಬುದನ್ನು ಗಮನಿಸಿ ಸಾಹಿತ್ಯವನ್ನು 'ಇತಿಹಾಸದ ಸಾಕ್ಷ್ಯ' ಅಥವಾ 'ಕಾಲದ ಕನ್ನಡಿ' ಎಂಬ ದೃಷ್ಟಿಯಿಂದ ಓದುವುದು.

ಚಿಂತಕ ಮಿಶೇಲ್ ಫೂಕೋನ ದೃಷ್ಟಿಯಲ್ಲಿ, ಇತಿಹಾಸವೆಂದರೆ 'ಅಮರ ಸತ್ಯದ ದಾಖಲೆ' ಅಲ್ಲ; ಅದು ಸದಾ ಅಧಿಕಾರ ಮತ್ತು ಜ್ಞಾನಗಳ ಸಂಬಂಧದಿಂದ ರೂಪುಗೊಳ್ಳುವ ಉತ್ಪನ್ನ. ಅಂದರೆ ಅಧಿಕಾರ ಮತ್ತು ಜ್ಞಾನಗಳ ಸಂಬಂಧದ ಆಚೆಗೂ ಚರಿತ್ರೆ ಇರುತ್ತದೆ. ಈ ದೃಷ್ಟಿಕೋನದಿಂದ ನೋಡಿದರೆ, ತತ್ವಪದಗಳು ಸಮಾಜದ ಅಡಗಿದ ಧ್ವನಿಗಳಿಗೂ, ಪ್ರತಿರೋಧ ಚರಿತ್ರೆಗೂ ಸಾಕ್ಷಿಯಾಗುತ್ತವೆ. ಮುಖ್ಯವಾಹಿನಿಯು ಅಲಕ್ಷ್ಯಮಾಡಿದ ಆ ಕಾಲಘಟ್ಟದ ಜನಕಥನವಾಗುತ್ತವೆ.

ಫೂಕೊನ ಚಿಂತನೆಯು ಹೇಳುವ ಅಧಿಕಾರ–ಜ್ಞಾನ ಸಂಬಂಧ (Power/ Knowledge) – ಯಾವ ಜ್ಞಾನವನ್ನು 'ಸತ್ಯ' ಎಂದು ಪರಿಗಣಿಸಬೇಕು ಎಂಬುದನ್ನು ಅಧಿಕಾರ ನಿರ್ಧರಿಸುತ್ತದೆ.– ಪ್ರತಿಯೊಂದು ಕಾಲದಲ್ಲಿ ನಿರ್ದಿಷ್ಟ ರೀತಿಯ ಭಾಷ್ಯಗಳು (ಕಥನಗಳು) ಅತೀತವನ್ನು ಕಟ್ಟಿಕೊಡುತ್ತವೆ ಎಂಬುದು ಆತನ ಡಿಸ್ಕೋರ್ಸ (Dis-course) ಪರಿಕಲ್ಪನೆಯಾಗಿದೆ. ಅಧಿಕೃತ ಇತಿಹಾಸದಿಂದ ಮೌನಗೊಳಿಸಲ್ಪಟ್ಟ, ಅಡಗಿಸಲ್ಪಟ್ಟ ಜ್ಞಾನಗಳು (Subjugated knowledges) ಇದ್ದೇಇರುತ್ತದೆ. "ಚರಿತ್ರೆಯಲ್ಲಿ ನಿರಂತರತೆ ಇಲ್ಲ; ಬದಲಾಗಿ ಅದರಲ್ಲಿ ಬಿರುಕು, ಪಲ್ಲಟ, ವೈವಿಧ್ಯ ಅಡಗಿರುತ್ತದೆ, ಎಂಬ ಮತ್ತೊಂದು ವಿಚಾರವನ್ನು (Genealogy) ಮುಂದಿಡುತ್ತಾನೆ ಫೂಕೋ. ಈ ದೃಷ್ಟಿಕೋನದಿಂದ ತತ್ವಪದಗಳನ್ನು ನೋಡಿದರೆ, ಅವುಗಳು ರಾಜ್ಯ–ಸಾಮ್ರಾಜ್ಯಶಾಹಿಗಳ ಅಧಿಕೃತ ಇತಿಹಾಸಕ್ಕೆ ಬೇರೆಯಾದ 'ಪ್ರತಿರೋಧದ ಇತಿಹಾಸ' ವೆಂಬುದು ತಿಳಿಯುತ್ತದೆ. ಇದರಲ್ಲಿ ಸಾಮಾನ್ಯರ ಬದುಕಿನ ಅಸ್ಥಿರತೆ, ರೈತರ, ಜನಸಾಮಾನ್ಯರ ದಾರುಣತೆ, ಧಾರ್ಮಿಕ ಅಸಮತೆ, ವಸಾಹತುಶಾಹಿಯ ದಬ್ಬಾಳಿಕೆ–ಎಲ್ಲವೂ ಕಾವ್ಯಾತ್ಮಕ ಕಥನವಾಗಿ ಅಭಿವ್ಯಕ್ತಿಯಾಗಿ ಧ್ವನಿ ಪಡೆದಿವೆ.

ತತ್ವ ಪದಗಳಲ್ಲಿ ಕೈವಲ್ಯ ಗೀತೆಗಳು ಅಥವಾ ಅನುಭಾವದ ಗೀತೆಗಳೇ ಹೆಚ್ಚು. ಪ್ರಮುಖವಾಗಿ ಅವುಗಳು ಜೀವಾತ್ಮ, ಪರಮಾತ್ಮ , ಷಟ್ಸ್ಥಲ, ಭಕ್ತಿ, ಯೋಗ, ಮೋಕ್ಷ, ಪಾಪ–ಪುಣ್ಯ ಮೊದಲಾದ ನೆಲೆಗಳು, ಬದುಕಿನ ವಿವರಗಳೊಂದಿಗೆ ಹೆಣೆದು ರಚಿತವಾಗಿವೆ. ಹಾಗಾಗಿ ಸಾವಿರಾರು ತತ್ವಪದಗಳಿದ್ದರೂ ಅವುಗಳಲ್ಲಿ ಚಾರಿತ್ರಿಕ ನೋಟವನ್ನು ಹೊಂದಿರುವವು ಕಡಿಮೆಯೇ. ಅಲ್ಲದೆ ಇವೆಲ್ಲವುಗಳಲ್ಲಿ ಸಾಮ್ರಾಜ್ಯಶಾಹಿ, ವೈದಿಕಶಾಹಿ ಹಾಗೂ ವಸಾಹತುಶಾಹಿ ವಿರೋಧವಿದೆ ಎನ್ನುವುದೂ ಸರಿಯಲ್ಲ. ಅವುಗಳಲ್ಲಿ ವೈದಿಕಶಾಹಿಯ ಶ್ರೇಣೀಕೃತ ಸಾಮಾಜಿಕ ಕಟ್ಟುನಿಟ್ಟುಗಳನ್ನು ವಿರೋಧಿಸಿರುವುದು ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೆ ಬ್ರಿಟಿಷ್ ವಸಾಹತು ನೀತಿಗೆ ಮುಖಾಮುಖಿಯಾದ ಸಂದರ್ಭಗಳಂತೂ ಕೆಲವು ತತ್ವಪದಕಾರರನ್ನು ಹೊರತು ಪಡಿಸಿ ಇಲ್ಲವೆಂದೇ ಹೇಳಬೇಕು. ಶಿಶುನಾಳ ಶರೀಫ, ಕೈವಾರದ ನಾರಾಯಣ ತಾತನವರು ಮಾತ್ರ ವಸಾಹತುಶಾಹಿಯ

ಬಗ್ಗೆ ನೇರವಾದ ಮಾತುಗಳನ್ನಾಡಿದ್ದಾರೆ. ಶರೀಫ್ ಸಾಹೇಬರದು ಈ ನಿಟ್ಟಿನಲ್ಲಿ ಗಟ್ಟಿ ಮತ್ತು ಪ್ರಾತಿನಿಧಿಕ ಧ್ವನಿಯೆನ್ನಬಹುದು.

ತತ್ವಪದಗಳ ಹುಟ್ಟಿಗೆ ಕಾರಣವಾದ ಅಂಶಗಳಲ್ಲಿ ಭಾರತದಲ್ಲಿ ನಿರಂತರವಾಗಿ ಹರಿದು ಬರುತ್ತಿರುವ ಭಕ್ತಿ ಮತ್ತು ಆಧ್ಯಾತ್ಮಿಕ ಅನುಭಾವದ ಪರಂಪರೆ ಮುಖ್ಯವಾದುದು. ಇದರೊಂದಿಗೆ ಅಯಾ ಕಾಲಘಟ್ಟದ ಚಾರಿತ್ರಿಕ ಘಟನಾವಳಿಗಳ ಪಾತ್ರವೂಯಿದೆ. ಉತ್ತರ ಕರ್ನಾಟಕವೇ ಅನುಭಾವಿಗಳ ದಟ್ಟ ಪರಂಪರೆಯೊಂದನ್ನು ರೂಪಿಸಿದ್ದರ ಹಿಂದೆ ಅಲ್ಲಿನ ಪ್ರಾದೇಶಿಕವಾದ ಜೀವನ ವಿಧಾನ ಮತ್ತು ಸಂಸ್ಕೃತಿ ಕಾರಣವಾಗಿದ್ದಿರಬಹುದಾದಂತೆಯೇ ಅಲ್ಲಿನ ಕ್ಷಿಪ್ರಗತಿಯ ರಾಜಕೀಯ ಬದಲಾವಣೆಗಳದ್ದೂ ಮುಖ್ಯಪಾಲು ಇದೆ. ಆ ಕಾಲದ ಅಲ್ಲಿನ ರಾಜಕೀಯ ಅಸ್ಥಿರತೆ, ದಾರಿದ್ರ್ಯ, ಯುದ್ಧ, ಆತಂಕದಂತಹ ಅನಿಷ್ಟಗಳು ವಸಾಹತುಶಾಹಿ ಬೇರೂರುತ್ತಿದ್ದ ಸಂಧಿಕಾಲದ ಪರಿಣಾಮಗಳೇ ಆಗಿದ್ದವು. ಈ ಎಲ್ಲಾ ಪ್ರಾದೇಶಿಕ ಅರಾಜಕತೆ ಸ್ಥಳೀಯ ಸಾಂಸ್ಕೃತಿಕವಲಯದಲ್ಲೂ ಅರಾಜಕ ಪ್ರತಿಫಲನಗಳನ್ನುಂಟುಮಾಡಿದ್ದವು. ಇದರೊಂದಿಗೆ "ಈ ಕಾಲಮಾನದಲ್ಲಿ ಭಾರತ ದೇಶದಲ್ಲಿ ಹಬ್ಬುತ್ತಿದ್ದ ವೈಜ್ಞಾನಿಕ ಬೆಳವಣಿಗೆ ತತ್ವಪದಗಳ ಆಲೋಚನೆಯನ್ನು ಆವರಿಸಿಕೊಂಡಿದೆ. ಶಿಶುನಾಳ ಶರೀಫರಂತಹ ತತ್ವಪದಕವಿಗಳಲ್ಲಿ ವೈಜ್ಞಾನಿಕ ಬೆಳವಣಿಗೆಯ ಚಿತ್ರಗಳು ಬಳಕೆಯಾಗಿವೆ." ಗ್ರಾಮೀಣ ಪರಿಸರದಲ್ಲಿ ವೈಜ್ಞಾನಿಕತೆ ಯಂತ್ರ ಸಂಸ್ಕೃತಿಯು ಒಂದು ಸೋಜಿಗ, ಬೆರಗನ್ನೂ ತಂದುದಲ್ಲದೆ ಸಂಕಟವನ್ನೂ ತಂದಿದ್ದು ಸುಳ್ಳಲ್ಲ. ಈ ಅವಧಿಯಲ್ಲಿ ಸಾಮ್ರಾಜ್ಯ ಶಾಹಿಯ ಹಿಡಿತಕ್ಕೆ ಸಿಕ್ಕಿ ನೆಲದ ಸಾಂಸ್ಕೃತಿಕತೆ ಸತ್ವ ಕಳೆದುಕೊಳ್ಳಲು ತೊಡಗಿದ್ದ ಕಾಲ. ನಮ್ಮ ಬುದ್ಧಿ ಭಾವಗಳ ಬೇರನ್ನೇ ಆವರಿಸುವ, ಪರಕೀಯತನವನ್ನು ಅನುಭವಿಸುವಂತಹ ವಾತಾವರಣ ಸೃಷ್ಟಿಯಾಗಿತ್ತು. ವೈದಿಕ ಶಾಹಿಯ ಹಿಡಿತದಿಂದಾಗಿ ನಿರಂತರವಾಗಿ ಒತ್ತಡಕ್ಕೆ ಸಿಕ್ಕಿದ್ದ ಸಮುದಾಯದ ಬದುಕು ಸಾಮ್ರಾಜ್ಯಶಾಹಿ ಹಿಡಿತ ದೃಢಗೊಂಡ ಬಳಿಕ ಮತ್ತಷ್ಟು ಅಸ್ಥಿರತೆಯನ್ನು ಅನುಭವಿಸುವಂತಾಗಿತ್ತು.

ಸಾಮ್ರಾಜ್ಯಶಾಹಿ ಆರ್ಥಿಕ ಯೋಜನೆಗಳು ವೇಗವಾಗಿ ಪಟ್ಟಣಗಳ ಬೆಳವಣಿಗೆಗೆ, ವಲಸೆಗಳಿಗೆ ಕಾರಣವಾದವು. ಗ್ರಾಮೀಣ ಬದುಕು ನಿಧಾನವಾಗಿ ವಿಘಟನೆಗೊಳ್ಳತೊಡಗಿತ್ತು. ಜೊತೆಗೆ ಆ ಕಾಲಘಟ್ಟದಲ್ಲಿ ಮತ್ತೆ ಮತ್ತೆ ಕಾಡಿದ ಬರಗಾಲ, ಕ್ಷಾಮಗಳಿಂದಾಗಿ ಜನರು ತೀವ್ರವಾಗಿ ತಲ್ಲಣಗೊಂಡಿದ್ದರು. ಇಂತಹ ಗೊಂದಲದ ಸಾಮಾಜಿಕ ಬದುಕಿನಲ್ಲಿ ಒಂದು ಸಾಂತ್ವನವನ್ನೂ ಐಕ್ಯತೆಯನ್ನು ತರಬಯಸಿದವರು ತತ್ವಪದಕಾರರು. ಅವರ ತತ್ವಪದಗಳಲ್ಲಿ ಇದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಸಮುದಾಯದ ಬದುಕಿನೊಂದಿಗೆ ಒಡನಾಡುತ್ತಿದ್ದ ಈ ತತ್ವಪದಕಾರರು ತಮ್ಮ ಪದಗಳಲ್ಲಿ ಎಂತಹ ಚಾರಿತ್ರಿಕನೋಟವನ್ನು ನೀಡಿದ್ದಾರೆ, ಆ ಕಾಲದ ಯಾಜಮಾನ್ಯಕ್ಕೆ ಯಾವ ಬಗೆಯ

ಪ್ರತಿಕ್ರಿಯೆಯನ್ನು ಕೊಟ್ಟಿದ್ದಾರೆ ಎಂಬುದನ್ನು ನಾವು ಹಲವು ಉದಾಹರಣೆಗಳೊಂದಿಗೆ ಅರಿಯಬಹುದು.

ವಸಾಹತುಶಾಹಿಯ ಆರ್ಥಿಕ-ರಾಜಕೀಯ ಪರಿಣಾಮ : ಚಾರಿತ್ರಿಕ ನೋಟ

ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಕುರಿತು ತತ್ವ ಪದಕಾರರ ದೃಷ್ಟಿಕೋನವೇನು ಹೇಗೆ ಪ್ರತಿಕ್ರಿಯೆ ನೀಡಿದ್ದಾರೆ ಎಂಬುದನ್ನು ಗಮನಿಸಬಹುದು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಆರ್ಥಿಕ ನೀತಿಗಳು ಗ್ರಾಮೀಣ ಬದುಕನ್ನು ೧೮ ಮತ್ತು ೧೯ನೇ ಶತಮಾನದಲ್ಲಿ ತೀವ್ರವಾಗಿ ತಲ್ಲಣಕ್ಕೆ ಒಡ್ಡಿತ್ತು. ಪಟ್ಟಣಗಳ ಬೆಳವಣಿಗೆ, ರೈತರ ಮೇಲೆ ಸುಲಿಗೆ, ಜಮೀನುದಾರರ ಶೋಷಣೆ-ಎಲ್ಲವೂ ಈ ಕಾಲದಲ್ಲಿ ಬಿರುಸುಗೊಂಡ್ಡಿದ್ದವು. ಶರೀಫರು ತಮ್ಮೊಂದು ತತ್ವಪದದಲ್ಲಿ

"ಜಟ್ಟಿಯ ಹುಳುಗಳೆದ್ದವು ನೋಡು
ಸೃಷ್ಟಿಪತಿ ಅರಸರಿಗೆಲ್ಲ ಕೇಡು
ದೇಶ ದೇಶವ ನುಂಗುವ ಕ್ರೂರ
ರೋಸಪ್ಯಾರಿಸ ಇಂಗ್ಲಿಷ್ ದೇಶಾಧಿಪರು" ಎಂದು ಹೇಳಿದ್ದಾರೆ.

ಇಲ್ಲಿ ಇಂಗ್ಲಿಷ್ ದೇಶಾಧಿಪರು ಎಂಬ ನೇರ ಉಲ್ಲೇಖವು ವಸಾಹತುಶಾಹಿಯ ಕಪಟ ನೀತಿಗಳ ಬಗ್ಗೆ ಅನುಭವಿಯಾದ ತತ್ವಪದಕಾರನ ಕಳವಳ ಮತ್ತು ಅವರೀಗ ದೇಶಾಧಿಪರು ಎಂಬ ಆತಂಕವನ್ನು ವ್ಯಕ್ತಪಡಿಸುತ್ತದೆ.

ತತ್ವಪದಕಾರರಲ್ಲೆಲ್ಲ ಬ್ರಿಟಿಷ್ ವಸಹಾತುಶಾಹಿಯ ಬಗ್ಗೆ ನೇರವಾಗಿ ಮಾತನಾಡಿದವರು ಶಿಶುನಾಳ ಶರೀಷ ಮತ್ತು ಕೈವಾರದ ನಾರಾಯಣಪ್ಪನವರು ವಿಶೇಷ. ಉಳಿದವರ ರಚನೆಗಳಲ್ಲಿ ರಾಜ ಪ್ರಭುತ್ವದ ಬಗೆಗಿನ ಅವರ ನಿಲುವುಗಳು ಬಹಳವಾಗಿ ಕಾಣಿಸಿಕೊಂಡಿವೆ. ಅವರ ಹಾಡುಗಳಲ್ಲಿ ವಿಲಾಯತಿ, ಸರಕಾರ, ಟುಬಾಕಿ, ಗುಂಡು, ರಂಜಕ, ಫೌಜು, ಮುಂತಾದ ಕೆಲವು ಪದಗಳ ಪ್ರಯೋಗಗಳನ್ನು ಗುರುತಿಸಬಹುದು. ತಿಂಥಿಣಿಯ ಮೌನೇಶ್ವರ ಧರ್ಮ ಸಮನ್ವಯದ ಅನುಭಾವಿಯಾಗಿದ್ದು, ಆಳರಸರ ಸಿಟ್ಟಿಗೆ ಗುರಿಯಾಗಿದ್ದರೆಂದು ತಿಳಿದುಬರುತ್ತದೆ. ಕ್ರಾಂತಿಕಾರೀ ಮನೋಭಾವದ ತತ್ವಪದಕಾರ ಕಡಕೋಳ ಮಡಿವಾಳೇಶ್ವರರ ಒಂದು ರಚನೆಯಲ್ಲಿ ಆ ಕಾಲದ ದುಡಿಮೆಗಾರ ಜನರ ಪಾಡು ಚಿತ್ರಣಗೊಂಡಿರುವುದನ್ನು ಗಮನಿಸಬಹುದು.

"ಏನಾಗತದ ಎಂತಾಗತದೊ ।
ಈ ನಾಡ ನೀನೋಡ ತಮ್ಮ ।
ದುಡಿದುಣ್ಣುವ ರೈತರಿಗೆ ಏನಿಲ್ಲ ರೊಕ್ಕ ।

ದುಡಿಯದ ಭಂಟರಿಗೆ ಭಾರಿ ಬಿಂಕ ।
ದುಡಿಸಿಕೊಳ್ಳುವ ಜನಕೆ ಭಾರಿ ಸೊಕ್ಕ ।ಅಂತವರ ಆಳಾಕ ಬರತಾರ ದೇಶ ।
ಕಳ್ಳರೆಲ್ಲ ಕೂಡಿ ನಾಡನಾಳುವ ಸರತಿ ಬರತದೊ? ।

ಈ ಪದದಲ್ಲಿ ದುಡಿದುಣ್ಣುವವನ ಆರ್ಥಿಕ ಮುಗ್ಗಟ್ಟು, ಕುಂತು ತಿನ್ನುವ ಸಿರಿವಂತರ ಬಿಂಕ ಮತ್ತು ದುಡಿಸಿಕೊಳ್ಳುವವರ ಸೊಕ್ಕು ಆ ಕಾಲದ ಆರ್ಥಿಕ ಸಂಪತ್ತಿನ ಹಂಚಿಕೆಯಲ್ಲಾಗಿರುವ ಅಸಮಾನತೆ ಮತ್ತು ಶ್ರೇಣೀಕರಣವನ್ನು ಹೇಳುವುದರೊಂದಿಗೆ ಇವರೆಲ್ಲರನ್ನು ಆಳುತ್ತಿರುವ, ಆಳುವ ದೊರೆಗಳು ಸಾಮ್ರಾಜ್ಯಶಾಹಿಗಳೆಲ್ಲರನ್ನೂ ಕಳ್ಳರ ಸಮೂಹವೆಂದಿರುವುದನ್ನು ಗಮನಿಸಬೇಕು. ಈ ಪದಬಳಕೆಯು ಎಂತಹ ಅರಾಜಕತೆ ಮತ್ತು ದಬ್ಬಾಳಿಕೆ ಇತ್ತೆಂಬುದನ್ನು ಹೇಳುತ್ತಿದೆ. ಈ ತತ್ವಪದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಬರೆದದ್ದೋ ಅಥವಾ ಸ್ಥಳೀಯ ರಾಜ ಪ್ರಭುತ್ವಕ್ಕೆ ಅನ್ವಯಿಸಿ ಹೇಳಿದ್ದೋ ಸ್ಪಷ್ಟವಾಗದಿದ್ದರೂ ಇಲ್ಲಿ ಆಳುವವರನ್ನು ಕುರಿತ ಭಯ, ಆತಂಕಗಳು ಅಭಿವ್ಯಕ್ತವಾಗಿರುವುದನ್ನು ಗಮನಿಸಬಹುದು. ಮತ್ತೊಂದು ಕಡೆ 'ಕೇಳೋ ಜಾಣ' ಎಂಬ ತತ್ವಪದದಲ್ಲಿ 'ಸರಕಾರ ಕಂಡರೆ ಸಲಾಮು ಮಾಡೋ' ಎಂಬಂತಹ ಕಿವಿಮಾತನ್ನೂ ಮಡಿವಾಳಪ್ಪ ಹೇಳಿದ್ದಾರೆ. ಇಂತಹ ಬದುಕಿನ ಜಾಣತನಗಳನ್ನು ಕಲಿಯದಿದ್ದರೆ ಕಷ್ಟವನ್ನು ಅನುಭವಿಸಬೇಕಾಗುತ್ತದೆಂಬ ಒಳಧ್ವನಿ ಇಲ್ಲಿದೆ. ಇದು ಆಳು ಅರಸರ ನಡುವಿನ ಸಂಬಂಧವನ್ನು ತೋರಿಸುತ್ತಿದೆ. ಇಲ್ಲಿ ವ್ಯಂಗ್ಯ ಕಾಣುತ್ತಿದ್ದರೂ ತೀವ್ರ ವಿರೋಧವೇನೂ ಇಲ್ಲ.

ತತ್ವಪದಕಾರ ಬಾಲಲೀಲ ಮಹಾಂತ ಶಿವಯೋಗಿಗಳ ರಚನೆಗಳಲ್ಲಿ ಆಳರಸರ ಚಿತ್ರಣ ಕಾಣಿಸಿಕೊಂಡರೂ ಅದರಲ್ಲಿ ಯಾವುದೇ ಪ್ರತಿರೋಧವಾಗಲೀ ತಾತ್ವಿಕವಿರೋಧಗಳಾಗಲೀ ಕಾಣಿಸಿಕೊಳ್ಳುವುದಿಲ್ಲ. ಇವರು ಮುಮ್ಮಡಿ ಕೃಷ್ಣರಾಜ ಒಡೆಯರ ಗೌರವಕ್ಕೆ ಪಾತ್ರರಾಗಿದ್ದು ಅವರಿಂದ ಆಹ್ವಾನವನ್ನು ಸ್ವೀಕರಿಸಿದ್ದರು. ಉದಾಹರಣೆಯಾಗಿ ಆ ಸಂದರ್ಭದಲ್ಲಿ ಅವರು ಬರೆದ ಪದವೊಂದನ್ನು ಗಮನಿಸಬಹುದು.

ನೀನೆಲ್ಲಿ ನಿನ್ನ ದೇಶೆಲ್ಲಿ – ಕೇಳಲೆ ರಾಜ ।
ನಾನೆಲ್ಲಿ ನಾನಿರುವ ಸುಡಗಾಡ ಠಾವೆಲ್ಲಿ
ಏನಾಶೆ ಪಾಶದಲ್ಲಿ ಬಿಗಿದೆನ್ನ ಕಟ್ಟಿದೆಯೋ ಕಳ್ಳರನು ಕಟ್ಟು ರೂಢಿ ।
ಧರೆಯೊಳಿಹ ಸಕಲ ನರಪತಿಗಳೊಳಗೆಲ್ಲ ನೀ ।
ಶರಣರಡಿ ಧೂಳಿಯೇ ದೊರೆಯಾದ ಕಾರಣಂ ।
ಹರಜ್ಞಾನರತ್ನ ನಿನಗಿರುತಿಹುದು ಎಲೆ ರಾಜ ಸರ್ವರಿಗೆ ದೊರಕುದುಂಟೆ ।
ಹೇಳುವದೇನು ತಿಳಿವಳಿಕೆ ರಾಜನಿಗೆ ।

"ಮೇಲೆ ಚಂದದ ಸುಖವು ಒಳಗೇನು ಸುಖವಿಲ್ಲ ಮೈಸೂರ ಮೈಚೂರವೋ।'" ಇಲ್ಲಿ ಪ್ರಭುತ್ವದ ಕುರಿತು ಆಕ್ರೋಷವಿಲ್ಲ ಬದಲಿಗೆ ಇದು ಅರಸೊತ್ತಿಗೆಗಳು, ವಾಡೆಗಳು, ಸ್ಥಳೀಯ ಆಡಳಿತವ್ಯವಸ್ಥೆ ಪೊಳ್ಳಾಗುತ್ತಿದ್ದುದನ್ನು ಅವರ ಧಾರ್ಮಿಕತೆ ಏರುಪೇರು ಆಗುತ್ತಿದ್ದುದನ್ನೂ ಸೂಚಿಸುತ್ತೆ. ರಾಜಪ್ರಭುತ್ವ ಮತ್ತು ವಸಾಹತುಶಾಹಿಗಳ ಒಳ ಒಪ್ಪಂದಗಳಿಂದಾದ ಪರಿಣಾಮಗಳ ಕಡೆಗೆ ಇಲ್ಲಿ ಗಮನವಿಲ್ಲ. ಪಾರತಂತ್ರ್ಯ ಮತ್ತಿತ್ಯಾದಿ ಅಂಶಗಳು ಜನಸಾಮಾನ್ಯರ ಮೇಲೆ ತಳಮಟ್ಟದಲ್ಲಿ ಬೀರುತ್ತಿರುವ ಪರಿಣಾಮಗಳು ಇಂತಹವರ ರಚನೆಗಳಲ್ಲಿ ವಿಶೇಷವಾಗಿ ಕಾಣುವುದಿಲ್ಲ. ತಳಸ್ಥರದಿಂದ ಬಂದ ತತ್ವ ಪದಕಾರರಲ್ಲಿ ಆ ಸೂಕ್ಷ್ಮತೆಗಳು ಹೆಚ್ಚು ಕಾಣುತ್ತವೆ.

ಕೈವಾರ ನಾರಾಯಣಪ್ಪನವರು ತಮ್ಮ ಶತಕತ್ರಯಗಳಲ್ಲಿ ವಸಾಹತುಶಾಹಿಯ ಬಗ್ಗೆ ಕರಾರುವಾಕ್ಕಾದ ಅಭಿಪ್ರಾಯಗಳನ್ನು ನೀಡಿದ್ದಾರೆ. ಅವರು ವಸಾಹತುಶಾಹಿಯ ಫಲವಾದ ಬಲಾತ್ಕಾರದ ಮತಾಂತರವನ್ನು ಖಂಡಿಸಿದ್ದಾರೆ. "ಪರಂಗಿಯವರಿಗೆ ಮಣ್ಣಿನ ಋಣತೀರಿದೆ. ಅವರ ವಿಸ್ತಾರವಾದ ಸಾಮ್ರಾಜ್ಯ ಮೊಟಕಾಗಲೇಬೇಕು. ಆಕ್ರಮಿಸಿರುವ ಭೂಮಿಯನ್ನು ಬಿಟ್ಟು ಅವರು ಜನ್ಮಭೂಮಿಗೆ ಓಡಿ ಹೋಗುವರು" ಎಂದಿದ್ದಾರೆ.

ಅಧಿಕಾರ ವರ್ಗದಲ್ಲಿನ ಲಂಚ, ಧನದಾಹ ಹೆಚ್ಚಿರುವ ಬಗೆಗೆ ಹಾಗೂ ಪ್ರಕೃತಿ ಸಂಪನ್ಮೂಲಗಳು ಸಿರಿವಂತರ ಖಾಸಗಿ ಸ್ವಾಮ್ಯಕ್ಕೊಳಪಟ್ಟು ಕೃತಕ ಅಭಾವ ಸೃಷ್ಟಿಯಾಗಿ ಎಲ್ಲದರ ಮೇಲೆಯೂ ತೆರಿಗೆ ವಿಧಿಸಲ್ಪಡುವುದನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಆ ಕಾಲದ ಜನಸಾಮಾನ್ಯನ ಆರ್ಥಿಕ ಬದುಕಿನಲ್ಲಾಗುತ್ತಿದ್ದ ಕ್ಷಿಪ್ರಗತಿಯ ಪಲ್ಲಟಗಳು ಹೇಗೆ ಸಂಕಟವನ್ನೂ ಒತ್ತಡವನ್ನು ಉಂಡುಮಾಡಿದ್ದವೆಂಬುದು ಇವರ ತತ್ವಪದಗಳಿಂದ ತಿಳಿಯುತ್ತದೆ.

ಚೆಡ್ಡ ಸ್ತ್ರೀಲು ಗುತ್ತ, ಚೆಟ್ಟು ಗುತ್ತ– ಪಶುಲಮೇತ ಭೂಮಿಗುತ್ತ–ಅಡವಿಗುತ್ತ
ಫಲವೃಕ್ಷಮುಲು ಗುತ್ತ– ಪಂಡ್ಲು ಕಾಯಲು ಗುತ್ತ
ಭಿಕ್ಷಗಾಂಡ್ಲುಕು ಗುತ್ತ–ಬೀಡುಗುತ್ತ
ಚಾಕಿರಿವಾಂಡ್ಲಕು ಗುತ್ತ–ಸಾರಾಯಿ ವಕ ಗುತ್ತ
ಮಾಲಮಗ್ಗವು ಗುತ್ತ, ಮಾನ್ಯಗಾಂಡ್ಲುಕು ಗುತ್ತ, ಚೌಟಮಂಟಿಕಿ ಗುತ್ತ –ಚಮರು ಗುತ್ತ.

ಈ ಶತಕದಲ್ಲಿ ಆಳುವ ಪ್ರಭುಗಳು ಹೇಗೆ ಎಲ್ಲದರ ಮೇಲೆ ತೆರಿಗೆ (ಗುತ್ತ) ವಿಧಿಸಿದ್ದರೆಂಬುದು ತಿಳಿಯುತ್ತದೆ. ಧರ್ಮ, ಪ್ರಕೃತಿಯಿಂದ ಮೊದಲ್ಗೊಂಡು ಮನುಷ್ಯ ಸಂಬಂಧಗಳವರೆಗೂ ಎಲ್ಲವನ್ನೂ ಹೇಗೆ ವಾಣಿಜ್ಯೀಕರಣಗೊಳಿಸಿದ್ದರೆಂಬುದನ್ನು ವಸಾಹತುಶಾಹಿ ಕಾಲಿಟ್ಟಮೇಲೆ ಸರಕು ಸಂಸ್ಕೃತಿಯೊಂದು ನಿಧಾನವಾಗಿ ದೇಸೀ ಬದುಕಿನಲ್ಲಿ ಪ್ರವೇಶಿಸುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಿದ್ದರೆಂಬುದು ತಿಳಿಯುತ್ತದೆ.

ಕೈವಾರ ತಾತಯ್ಯನಂತಹ ಒಬ್ಬ ಅನುಭಾವಿಯು ಕೇವಲ ಕೈವಲ್ಯದ ಚಿಂತನೆಮಾಡುತ್ತಿರಲಿಲ್ಲ ಅವರ ಅನುಭಾವ ಪರಲೋಕದ ಚಿಂತೆಯೊಂದಿಗೆ ಇಹಲೋಕದಲ್ಲಿ ಬಿಡುಗಡೆ, ನೆಮ್ಮದಿಯ ಬದುಕು ಬಡವನಿಗೆ ದೊರಕಬೇಕೆಂದೂ ಹಂಬಲಿಸುತ್ತಿದ್ದಂತೆ ತೋರುತ್ತದೆ. ತಮ್ಮ ಕಾಲದ ಪಲ್ಲಟಗಳನ್ನು ಕುರಿತಂತೆ ಅವರು ಹೊಂದಿದ್ದ ಚಾರಿತ್ರಿಕ ನೋಟ ಇಲ್ಲಿ ಸ್ಪಷ್ಟವಾಗಿದೆ. ಬ್ರಿಟೀಷ್ ಆಡಳಿತವು ಆ ಮೊದಲಿನ ಅರಸರು ವಿಧಿಸುತ್ತಿದ್ದ ತೆರಿಗೆಗಳೊಂದಿಗೆ ನಮ್ಮ ಗೋಮಾಳದಿಂದ ಮೊದಲ್ಗೊಂಡು ವೇಶ್ಯೆಯರು, ಗಿಡ–ಮರ ಅರಣ್ಯಗಳು, ಹಣ್ಣುಕಾಯಿಗಳು, ಭಿಕ್ಷುಕರು, ಬಂಜರು ಭೂಮಿಗಳು, ಆಳುಕಾಳು, ನೌಕರರು, ಸಾರಾಯಿ, ದತ್ತಿ ಮಾನ್ಯಗಳೆಲ್ಲವನ್ನೂ ತೆರಿಗೆಯ ಪಟ್ಟಿಗೆ ಎಳೆದು ಬಿಟ್ಟರೆಂಬುದನ್ನು, ಕಡೆಗೆ ಹೊಲೆಯರ ಮಗ್ಗಗಳು (ಮಾಲಮಗ್ಗ), ಚೌಳು ಮಣ್ಣು (ಚೌಟಮಂಟಿ =ಸವಳುಭೂಮಿ) ಮತ್ತು ಎಣ್ಣೆಯವರೆಗೂ ಎಲ್ಲವೂ ಗುತ್ತಿಗೆಗೆ ಒಳಪಟ್ಟು ತೆರಿಗೆಯ ವ್ಯಾಪ್ತಿಗೆ ಬರುವುದೆಂಬುದು ಈ ಕಾಲಜ್ಞಾನ ಶತಕದ ಮುನ್ಸೂಚನೆಯಾಗಿದೆ. ಯಾವ ಕಾಲದಲ್ಲೂ ಅರಸೊತ್ತಿಗೆಗಳು ತೆರಿಗೆಗಳ ಮೂಲಕ ಹೇಗೆ ಜನಸಾಮಾನ್ಯರನ್ನು ದೋಚುತ್ತಿದ್ದವೆಂಬುದು ಕನ್ನಡ ಶಾಸನಗಳನ್ನು ಗಮನಿಸಿದರೆ ತಿಳಿಯುತ್ತದೆ. ಅದು ವಸಾಹತು ಕಾಲದಲ್ಲಿ ಮತ್ತಷ್ಟು ವ್ಯಾಪಕವಾಗಿ ವಿಸ್ತರಿಸುವುದನ್ನು ತಾತಯ್ಯ ಮುಂಗಂಡಿದ್ದಾರೆ.

ವಾನರುಲ ವಸುಧ–ಪಾಲನ ತೀರೆನು। ಇಕಮೀದ ಲೇದುವಚ್ಚೆನು ಅಂತ್ಯಂ ಪೋದುರು ॥
ಪಲಾಯನ ತಮಲೋನೆ ತಮುಕು ಕಲಹಮು ಪಡಿ। ಚತ್ತರು ಪರಂಗಿವಾರು–ಪಟ್ಟಮು ಪಾಡೇನು ॥
ಪಂಟ ಪಂಡಿನ ಕರುವು–ಪಂಟ ಯೆಂಡಿನ ಕರುವು। ಪ್ರಜಲೆಟ್ಲ ಬದಿಕೇರು–ಪ್ರಾಪಂಚಮುಂದು
ಶರಣುಲ ವಾಕ್ಯಾಲು ಚೇರ್ಚ ವಚ್ಚೆನು ಸುಮೀ। ಚೋರುಲ ಪಟ್ಟಂಬಾಯೆನು–ರಾಜೇವ್ವಡು॥
ಲೇಕಪೋಯ ರಾಜ್ಯಮು ಜೆಡೆರಾ– ದೊಂಗಲ ದೋಪ್ಪೆಯುನ್ನದಿ ॥
ವಿಪ್ರುಲ ಪಾಲಾಯು ಇರಸಾಲು ನಾಣ್ಯಲು। ನಾಲ್ಡಿಂಟ ವಕಪಾಲು–ನಗರು ಚೇರು।
ವ್ಯದವ ದೊರೆತನಮಾಯು–ಏಮನವಚ್ಚುರಾನಿಂಡಾ। ಪರತತ್ವ ಪ್ರಚಂಡ ನಾರೇಯಣ ಕವಿ॥

ಇಂತಹ ಅವರ ಶತಕಗಳಲ್ಲಿ ಪರಂಗಿ ಕೋತಿಗಳ ಆಳ್ವಿಕೆ ಮುಗಿದು ಅವರು, ಪಲಾಯನಮಾಡುವುದರೊಂದಿಗೆ, ತಮ್ಮಲ್ಲೇ ಕಲಹವುಂಟಾಗಿ ಸಾಯುವವರೆಂದು ಬ್ರಿಟಿಷ್ ವಸಾಹತುಶಾಹಿಯ ಬಗ್ಗೆಯೇ ನೇರವಾಗಿ ಕ್ರೋಧಪೂರಿತ ಭವಿಷ್ಯ ನುಡಿಗಳನ್ನು ಸಹ ಅವರು ಆಡಿದ್ದಾರೆ.

ಅಯೋಗ್ಯರ ದೊರೆತನದಿಂದಾಗುವ ಪ್ರಜೆಗಳ ಸಂಕಷ್ಟವನ್ನು ತಾತಯ್ಯನವರು ಇಲ್ಲಿ ಹೇಳಿದ್ದಾರೆ. "ಬೆಳೆ ಬೆಳೆದರೂ ಕೃತಕ ಅಭಾವ ತಲೆದೋರಿ ಪ್ರಜೆಗಳು ಬದುಕುವುದು ಕಷ್ಟವಾಗುವುದೆಂಬ ಶರಣರ ಮಾತುಗಳು ನಿಜವಾಗುತ್ತದೆಂಬುದು ಅವರ ವಚನದ ಸಾರಾಂಶವಾಗಿದೆ. ಕಳ್ಳರ ಪಾಲಾದ ರಾಜ್ಯಾಧಿಕಾರದ ಬಗ್ಗೆ, ಕಂದಾಯವಾಗಿ ವಸೂಲಾಗುವ

ಹಣ ವಿಪ್ರಪಾಲಾಗಿ ಸರಕಾರಕ್ಕೆ ಕೇವಲ ಒಂದುಪಾಲು ಸಂದಾಯವಾಗುವುದನ್ನು ಹೇಳುತ್ತಾ ಇದೆಲ್ಲವೂ ಅಯೋಗ್ಯರ 'ವ್ಯದವ ದೊರೆತನ'ದಿಂದಾಗುತ್ತಿರುವ ಪರಿಣಾಮವೆಂದು ಪ್ರಭುತ್ವವನ್ನು ಖಂಡಿಸಿದ್ದಾರೆ. ನಮ್ಮ ದೇಸೀ ಪ್ರಭುತ್ವದ, ವೈದೀಕಶಾಹಿ, ಪುರೋಹಿತಶಾಹಿಗಳ ರಾಜ್ಯಭಾರದ ಅನ್ಯಾಯವನ್ನು ಅವರು ಕಂಡಿದ್ದರು.

ತಾತಯ್ಯನವರ ಕಾಲಕ್ಕಿನ್ನೂ ವಸಾಹತುಶಾಹಿಯು ಉಂಟುಮಾಡಿದ ರಾಜಕೀಯ ಮತ್ತು ಆರ್ಥಿಕ ದೌರ್ಜನ್ಯದ ತೀವ್ರತೆ ದುಷ್ಟ ಚಹರೆಯು ಪೂರ್ಣವಾಗಿ ಅನಾವರಣಗೊಂಡಿರಲಿಲ್ಲವಾದರು ತಾತಯ್ಯನವರ ಆರ್ಥಿಕ ರಾಜಕೀಯ ಪರಿಸ್ಥಿಗಳ ಚಾರಿತ್ರಿಕ ನೋಟ, ಮುಂಗಾಣ್ಕೆ, ಸೂಕ್ಷ್ಮ ಚಿಂತನೆಗಳು ನಮಗೆ ಅಚ್ಚರಿಯನ್ನು ಮೆಚ್ಚುಗೆಯನ್ನೂ ಉಂಟುಮಾಡುತ್ತವೆ.

ವೈಜ್ಞಾನಿಕತೆ ಮತ್ತು ಯಂತ್ರಯುಗದ ಚಾರಿತ್ರಿಕ ಹೆಜ್ಜೆಗುರುತುಗಳು: ತತ್ವಪದಕಾರರ ಚಿಂತನೆಗಳು

ಶರೀಫರ ಚಿಂತನೆ, ಲೋಕಜ್ಞಾನ ಇತರ ತತ್ವಪದಕಾರರಿಗಿಂತ ಈ ನಿಟ್ಟಿನಲ್ಲಿ ಸೂಕ್ಷ್ಮವಾಗಿದೆ.ಅವರು ತನ್ನ ಸುತ್ತ ಆಗುತ್ತಿರುವ ಪಲ್ಲಟಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ, ಬೆರಗಾಗಿದ್ದಾರೆ, ಆತಂಕಪಟ್ಟಿದ್ದಾರೆ. ವಸಾಹತುಶಾಹಿಯ ಯಂತ್ರ ನಾಗರಿಕತೆ ಮತ್ತು ವಿಜ್ಞಾನದ ಪರಿಣಾಮಗಳನ್ನು ಹೆಚ್ಚು ಆಳವಾಗಿ ಅವರು ಆಲೋಚಿಸಿ. ಅದರ ಬಗ್ಗೆ ಜನರನ್ನು ಎಚ್ಚರಿಸಿದರು.

ವಸಾಹತುಶಾಹಿಯ ಪರಿಣಾಮದಿಂದಾದ ನಗರೀಕರಣದ ಆರಂಭದ ಬೆರಗನ್ನೂ ಶರೀಫರು ಗ್ರಹಿಸಿದ್ದಾರೆ. "ಎಷ್ಟಂತ ಹೇಳಲಿ ಸೃಷ್ಟಿಯೊಳಗೆ ಪ್ಯಾಟ । ಶ್ರೇಷ್ಠವೆಂದೆನಿಸಿತು ಮೇಲೆ ಸಖಿ । ಅಷ್ಟ ದಿಕ್ಕಿನ ಜನರು ಕೂಡಿ । ಹೊಟ್ಟೆಗನ್ನವ ದುಡಿದು ತಿಂಬುವರು । ಸೃಷ್ಟಿಯೊಳು ಶಿಶುನಾಳಧೀಶನ ಪಟ್ಟಾಗಿ ಮುಟ್ಟುವ ತನಕ" । ಎಂದು ಗೇಲಿ ಮಾಡಿದ್ದಾರೆ. ಈ ಯಂತ್ರ ನಾಗರಿಕತೆಯ ಅನಿಷ್ಟದ ಸೂಚನೆಯನ್ನು ಶರೀಫರು 'ಬಂದಿತು ಬರಬಹುದು' ಎಂಬ ಗೀತೆಯಲ್ಲಿ ಹೀಗೆ ಹೇಳಿದ್ದಾರೆ.

'ಘೋರವಾಗಿ ಮಹಾ ಮುಂಬೈಯೊಳು
ಏರಿಗಟ್ಟಿ ಯಂತ್ರದ ಗಿರಣಿಗಳು
ಮಾರಿಕಾ ಆಗಿ ಮೈಬಣ್ಣದ ಗುಳ್ಳೆಗಳಿಗೆ
ಕುಳ್ಳ ಜನರು ನಷ್ಟಾದರು ಸಖಿಯೆ' ।

ಇದರಲ್ಲಿ ಮುಂಬೈ ಪಟ್ಟಣವು ನವನಗರೀಕರಣದ ಲಕ್ಷಣ ಪಡೆದುಕೊಳ್ಳುವುದನ್ನು ಹೇಳುವುದರ ಜೊತೆಗೇ ಈ ಮಾಂತ್ರಿಕ ಬೆರಗಿನ ಯಂತ್ರ ನಾಗರಿಕತೆಯ ಕೆಡಕನ್ನು ಗ್ರಹಿಸಿದ ಶರೀಫರ ಚಾರಿತ್ರಿಕ ಮುನ್ನೋಟ ದೂರದೃಷ್ಟಿ ವಿಶೇಷವಾದುದು.

ತಮ್ಮ ಕಾಲದಲ್ಲಿ ನಡೆದ ನಿಸರ್ಗದ ಏರುಪೇರನ್ನು ಕಂಡು, ಅದರ ಕೇಡನ್ನು ಸಹ ಶರೀಫರು ಹೀಗೆ ಹೇಳಿದ್ದಾರೆ.

ಜಿಟ್ಟ ಹುಳುಗಳು ಎದ್ದಾವು ಇದು ನೋಡು। ಸೃಷ್ಟಿಪತಿ ಅರಸರಿಗೆಲ್ಲಾ ಕೇಡು
ಅಷ್ಟದಿಕ ಮಧ್ಯದಲ್ಲಿ ಒಪ್ಪುವ ನೆಟ್ಟನಾದಿ । ಶ್ರೇಷ್ಠ ಕ್ರಿಸ್ತಾನ ಬಾದಶಾ ಪಟ್ಟಗಟ್ಟಲು
ದೇಶ ದೇಶದ ನುಂಗುವ ಕ್ರೂರ । ರೂಪ ಪ್ಯಾರಿಸ್ ಇಂಗ್ಲೀಷ್ ದೇಶಾಧಿಪರು ...

ಹೀಗೆ ಮುಂದುವರಿಯುವ ಈ ತತ್ವಪದದಲ್ಲಿ ವಸಾಹತುಶಾಹಿ ರಾಷ್ಟ್ರಗಳು ಎಷ್ಟುಕ್ರೂರರೆಂಬ ಸತ್ಯವನ್ನು ಹೇಳಿದ್ದಾರೆ.

ಶರೀಫರ ಕಾಲಕ್ಕೆ ಯಂತ್ರ ನಾಗರಿಕತೆ ಎನ್ನುವುದು ವಸಾಹತು ಭಾರತದಲ್ಲಿ ವೇಗದಲ್ಲಿ ಬೆಳೆಯುತ್ತಿತ್ತು. ಆ ವಿಜ್ಞಾನದ ಬೆರಗುಗಳನ್ನು ಅನುಭಾವದ ನೆಲೆಯಲ್ಲಿ ಸ್ವೀಕರಿಸುತ್ತಾರೆ.

ಗಿರಣಿ ವಿಸ್ತಾರ ನೋಡಮ್ಮಾ ಇದಕ್ಕೆ ಪರಾಕು ಮಾಡಮ್ಮಾ
ಧರಣಿಪತಿ ಮಹಾರಾಣಿ ದೊರೆಗಳು ಕರ್ನಾಟಕ ರಾಜ್ಯದಿ
ಮೆರೆಸಿದ ಮಹಾಚೋದ್ಯವಿದ್ಯ ಅರಿಯದಾಯಿತು ನರರಿಗೆಲ್ಲಾ
ಜಲ ಅಗ್ನಿವಾಯು ಒಂದಾಗಿ ಕಲೆತು ಬೆಂದಾಗಿ
ನೆಲದಿಂದ ಗಗನಕ್ಕೆ ಮುಟ್ಟಿದಂತೆ ಕಾಂಬುದು
ಚೆಲುವ ವಾದ್ಯದ ಕಂಬವೋ ಹೊಗಿ ಬಿಂಬವೋ ಒಳಗೊಂದು ಬೇರೆ ಆಕಾರ
ತಿಳಕೋ ಚಮತ್ಕಾರ ದಳಗಳೊಂಭತ್ತು ಚಕ್ರ ಸುಳಿವ ಸೂತ್ರದ ದಾರದಲ್ಲಿ
ಒಳಗೆ ಹೊರಗೆ ನವಕೊಳಿವೆಯೋ ಇದರಳಿವಿಯೋ ॥
ಆಲಿಯೊಳಿಟ್ಟರಳಿ ಹಿಂಜಿ ಅಲ್ಯಾದವೋ ಹಂಜಿ
ಗಾಲಿಯೊಂದರ ಮೇಲೆ ಬ್ರಹ್ಮದ ಕೀಲ
ಮೂಲ ಸುಷಮ್ನದಲ್ಲಿ ಜೋಲುತಿರುವುದು ನಾಡಿ ಅಲ್ಯಾಯ್ತು ಕುಕ್ಕಡಿ...

ಈ ದೇಹವೇ ದೇವ ನಿರ್ಮಿತವಾದ ಗಿರಣಿಯಾಗಿರುವುದನ್ನು ಸೂಚ್ಯವಾಗಿ ಹೇಳುತ್ತ ಅನುಭಾವದ ಪದವನ್ನು ಕಟ್ಟಿದ್ದಾರೆ. ವಿಜ್ಞಾನದ ಗಿರಣಿಯ ಪ್ರತಿಮೆಯನ್ನು ಅಂತರಂಗದೊಳಗಿನ ಗಿರಣಿಗೆ ಬೆಸೆದುಬಿಟ್ಟಿದ್ದಾರೆ. ಅದೇ ರೀತಿ ಶರೀಫರು ಸೂಜಿಯಂತಹ ಒಂದು ವಸ್ತುವನ್ನು ತಮ್ಮ ಅನುಭಾವದ ಅಭಿವ್ಯಕ್ತಿಯಲ್ಲಿ ಪ್ರತಿಮೆಯಾಗಿ ಬಳಸಿರುವುದು ಆಶ್ಚರ್ಯವನ್ನುಂಟುಮಾಟುತ್ತದೆ. ಇಲ್ಲಿ ಸೂಜಿಯು ಯಂತ್ರನಾಗರೀಕತೆಯ ಅಪೂರ್ವವಾದ ಸರಕು.

ಸೂಜಿಯೇ ನೀನು ಸೂಜಿಯೇ ಈ
ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ

ಹರಿಯ ಶಿರದ ಮ್ಯಾಲೆ ಮೆರೆದಂಥ ಸೂಜಿಯ
ಹರನ ಕಪಾಲದಿ ಬೆರೆದಂಥ ಸೂಜಿಯೆ
ತಂಪುಳ್ಳ ಉಕ್ಕಿನೋಳ್ ಹುಟ್ಟಿದ ಸೂಜಿಯೆ
ಕಂಪನಿ ಸರಕಾರದ ವಶವಾದ ಸೂಜಿಯೇ...

"ಇಲ್ಲಿ ಸೂಜಿ ರೂಪಕವು ಕೈಗಾರಿಕಾ ಉತ್ಪನ್ನಗಳ ಪ್ರತಿನಿಧಿಯಾಗಿ ಬರುತ್ತದೆ. ಇದು ವೈಜ್ಞಾನಿಕ ಸಾಧನೆಯೂ ಆಗಿದೆ, ಆದರೆ "ಕಂಪನಿ ಸರಕಾರ"ದ ಕೈಯಲ್ಲಿ ಅದು ಶೋಷಣೆಯ ಸಾಧನವಾಗುತ್ತದೆ." ಯಾವ ಸೂಜಿ ನಮ್ಮ ದೇಸೀ ಕಲಾತ್ಮಕತೆಯ ಸಾಧನವಾಗಿತ್ತೋ ಅದು ಕಂಪನಿ ಸರಕಾರದ ವಶವಾದುದನ್ನು ಹೇಳುತ್ತಲೇ ವಸಾಹತುಶಾಹಿಯ ಆಕ್ರಮಣದ ಪರಿಣಾಮವು ನೆಲಮೂಲ ಸಂಸ್ಕೃತಿಯಮೇಲೆ ಮಾಡಿದ ಪರಿಣಾಮವನ್ನು ಸೂಚಿಸಿದ್ದಾರೆ. ವಶವಾದದ್ದು ಬರೀ ಸೂಜಿಯಲ್ಲ ನಮ್ಮೆಲ್ಲಾ ಕಲಾವಂತಿಕೆ, ತಮ್ಮೆಲ್ಲಾ ಗುಡಿ ಕೈಗಾರಿಕೆಗಳು, ವೃತ್ತಿ ನೈಪುಣ್ಯಗಳನ್ನು ಸೂಚಿಸುತ್ತಿದೆ." ಎನ್ನುತ್ತಾರೆ ಲಕ್ಷ್ಮೀಪತಿ ಕೋಲಾರ.

ತಿಂಥಿಣಿಯ ಮೌನೇಶ್ವರರು ಈ ಸೂಜಿಯನ್ನೇ ಪ್ರತಿಮಾತ್ಮಕವಾಗಿ ಬಳಸಿ ತಮ್ಮ ಕಾಲಜ್ಞಾನ ಪದವೊಂದರಲ್ಲಿ ದೆಹಲಿಯ ಖಾನರ ಆಳ್ವಿಕೆ ಅಳಿದು ಬ್ರಿಟೀಷ್ ವಸಾಹತು ಆಡಳಿತ ಬಂದು ಉಂಟಾಗಿದ್ದ ಆರ್ಥಿಕ ಪಲ್ಲಟಗಳು ಮಾರುಕಟ್ಟೆಯ ಹೊಸ ಒಲವು, ಮಾದರಿಗಳನ್ನು ಸೂಕ್ಷ್ಮವಾಗಿ ಹೇಳಿದ್ದಾರೆ..

ದಿಳ್ಳಿನ ಖಾನರ ಅಳಿವಾದಿನ ಬಂತು ಸುದ್ದಿ ।
ಬಾಜಾರ ಬಂದಿತು ವ್ಯಾಜ್ಯ ಉಂಟಾದೀತು ।
ಸೂಜಿ ಹೊನ್ನಿಗೊಂದು ಮಾರೀತು ಸುದ್ದಿ ।
ಮರ್ತ್ಯದ ಸೋಜಿಗವ ನೋಡೋ ಬಸವಣ್ಣ ।

ಎಂಬುದರಲ್ಲಿ ಒಂದು ಆಶ್ಚರ್ಯ, ಎಂಥ ಕಾಲ ಬಂದಿತೆಂಬ ಸೋಜಿಗವಿದೆ. ರಾಜಪ್ರಭುತ್ವಗಳಲ್ಲಿನ ಏರುಪೇರುಗಳು ಸಮಾಜದಲ್ಲಿ ಉಂಟುಮಾಡುತ್ತಿರುವ ಬದಲಾವಣೆಯನ್ನು ಇಲ್ಲಿ ಸೂಜಿಯ ಬೆಲೆಯಲ್ಲಿ ಆಗಿರುವ ಆಶ್ಚರ್ಯಕರ ಹೆಚ್ಚಳವು ಸೂಚಿಸುತ್ತಿದೆ. "ಹೊನ್ನಿಗೊಂದು ಸೂಜಿ ಮಾರಲ್ಪಡುವ ಬಜಾರು ಆಧುನಿಕತೆಯನ್ನು ಹೇಳುತ್ತಿರುವುದಲ್ಲದೆ. ಸೂಜಿಕಾಯಕವನ್ನೇ ನಂಬಿಕೊಂಡಿದ್ದ ಕಸೂತಿಯವರು, ದರ್ಜಿಗಳಿಗೆ ಬೇಡಿಕೆ ಹೆಚ್ಚಾಗಿದ್ದನ್ನೂ ಮತ್ತು ಸಿದ್ಧ ಉಡುಪುಗಳಿಗೆ ಬೇಡಿಕೆ ಹೆಚ್ಚಿದುದನ್ನು ಹೇಳುತ್ತಿದೆ." ಇಲ್ಲಿ ಹೇಳುತ್ತಿರುವ ಬಜಾರು ನಮ್ಮ ಸಮಾಜದ ಪಾರಂಪರಿಕ ಬಜಾರಾಗಿಲ್ಲ ಅದು ಬ್ರಿಟಿಷರ ಬಜಾರಾಗಿದೆಯೆಂದೂ ಮತ್ತು ಸರಳ ತಾಂತ್ರಿಕತೆಯ ಯಕಃಶ್ಚಿತ್ ಸೂಜಿಯೊಂದು ಬೆಲೆ ಬಾಳುವ ಹೊನ್ನಿಗೆ ಬದಲಾಯಿಸಲ್ಪಡುವ ವಂಚನೆಯ ಬಗ್ಗೆಯೂ ತತ್ವಪದಕಾರ

ಗಮನ ಸೆಳೆದಿದ್ದಾರೆ. ದಾಪುಗಾಲು ಇಡಲಾರಂಭಿಸಿರುವ ವಸಾಹತುಶಾಹಿಯ ಯಂತ್ರ ನಾಗರಿಕತೆಯ ಹೆಜ್ಜೆ ಗುರುತುಗಳನ್ನು ನಿಖರವಾಗಿಯೇ ಗುರುತಿಸಿದ್ದಾರೆ”

ವೈಜ್ಞಾನಿಕತೆ ಯಂತ್ರಗಳ ಮಾಂತ್ರಿಕತೆಯ ಲಾಭವನ್ನೂ ಕೆಡುಕನ್ನು ಹೇಳುತ್ತಾ ಶರೀಫರು ಆಂಗ್ಲ ಸರ್ಕಾರವು ತಂದ ವೈದ್ಯಕೀಯ ಚಿಕಿತ್ಸಾ ಕ್ರಮ, ಪದ್ಧತಿಗಳ ಬಗೆಗೆ ಮೆಚ್ಚುಗೆಯನ್ನೇ ಸೂಚಿಸಿದ್ದಾರೆ. ಪ್ಲೇಗಿನಂತಹ ಮಹಾಮಾರಿಯಿಂದ ಜನ ತಲ್ಲಣಿಸುತ್ತಿದ್ದಾಗ ಜತೆಗಿದ್ದ ಇಂಗ್ಲೀಷ್ ಸರಕಾರದ ಉಸ್ತುವಾರಿಯನ್ನು ಕುರಿತು ‘ಅತ್ಯಧಿಕ’ ಪೃಥ್ವಿಪತಿ ಇಂಗ್ಲಿಷ್ ಸರಕಾರ ಗೊತ್ತು ಮಾಡುವರು ಪ್ಲೇಗುಯೆಂತೆಂದು” ಹೊಗಳಿದ್ದಾರೆ.

ಮತ್ತೊಂದು ತತ್ವ ಪದದಲ್ಲಿ ಪರಂಗಿಯವರನ್ನು ಪರಮಪುರುಷ ವಾಸುದೇವನೆಂದು ಕರೆದಿದ್ದಾರೆ

ಕುಶಲಗಾರ ಕಂಪೆನಿಯರಮ್ಮ
ವಾಸುದೇವನ ಅವತಾರ ಜನಿಸಿದರಮ್ಮ।
ದೊರಿಗಳನೆಲ್ಲಾ ಮುರಿವನು ತಂಗಿ ।
ಪರಮಪುರುಷ ಪರಂಗಿಯವರು ।

ಆದರೆ ಮತ್ತೊಂದು ತತ್ವಪದದಲ್ಲಿ **ನರಕ ಕರ್ಮಕ್ಕೆ ತಕ್ಕ ದಿನ ಬಂತು ರಮಣಿ, ಅರಸಾದ ರಾಜ ಕ್ರಿಸ್ತಾನ ರಾಣಿ ।**

ಹದ್ದು ಮಾಂಸಕ ಬಂದು ಎರಗಿದ ತೆರದಿ

ಎಂದು ವಸಾಹತುಶಾಹಿಯನ್ನು ಧಿಕ್ಕರಿಸಿದ್ದಾರೆ. ‘ರಾಜನೀತಿಯಲ್ಲಿ ಜಯವೋ’ ಎಂಬ ಗೀತೆಯಲ್ಲಂತೂ –

ಬಂತೋ ಇಂಗ್ಲೆಂಡ ದೇಶಕೆ ಬೆಂಕಿಯ ಮಳಿಯೋ ।
ರಾಣಿ ರಾಜರ ವೈಭವಕೆ । ಪ್ರಾಣಹಾನಿಗಳಾದವು ಎಣೆ ಇಲ್ಲ ಇದಕ್ಕೆ ।

ಎಂದು ವಸಾಹತುಶಾಹಿ ಕುರಿತು ಆಕ್ರೋಶ ತೋರಿದ್ದಾರೆ.

ವಸಾಹತುಶಾಹಿಯ ಆರ್ಥಿಕ ಹಾಗೂ ಕೈಗಾರಿಕಾ ಯೋಜನೆಗಳು ನಗರಗಳನ್ನು ಬೆಳೆಸತೊಡಗಿದ್ದು ಬೇರೆಗಾದರೆ, ಗ್ರಾಮೀಣ ಬದುಕಿನ ವಿಘಟನೆಗೆ ದಾರಿಮಾಡಿಕೊಟ್ಟದ್ದು ಸಂಘರ್ಷಾತ್ಮಕವಾದ ಸನ್ನಿವೇಶವನ್ನು ಸೃಷ್ಟಿಸಿದ್ದು ತಲ್ಲಣದ ವಿಷಯ. ಸಹಜವಾಗಿಯೇ ಈ ಭಿನ್ನ ಪಲ್ಲಟಗಳನ್ನು ಭಿನ್ನ ಸಂಸ್ಕೃತಿಗಳ ನಡುವಿನ ಸಂಘರ್ಷ ಮತ್ತು ಸಮನ್ವಯಗಳ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಎರಡು ದೃಷ್ಟಿಯೂ ಈ ತತ್ವಪದಕಾರರಲ್ಲಿ ಕಾಣಿಸುತ್ತದೆ. ಹಾಗಾಗಿ ಇವರ ಚಾರಿತ್ರಿಕ ನೋಟದಲ್ಲಿ ಸಂಭ್ರಮ–ಬೆರಗು,ತಲ್ಲಣ–ತಳಮಳ ಎಲ್ಲವೂ ಕಾಣಸಿಗುತ್ತದೆ.

3. ವೈದಿಕಶಾಹಿಯ ವಿರುದ್ಧದ ಅವೈದಿಕ ನೋಟ: ಸಾಮಾಜಿಕ ಅಸಮತೆ ಮತ್ತು ಧಾರ್ಮಿಕ ಕಟ್ಟುಕಟ್ಟಲೆಗಳ ಚರಿತ್ರೆ

ವೈದಿಕಶಾಹಿ ಸಂಸ್ಕೃತಿಗೆ ಪರ್ಯಾಯವಾದ ಸರ್ವಸಮಾನತೆಯ ನೋಟವನ್ನು, ಚಲನೆಯನ್ನು ತತ್ವಪದಕಾರರು ಸಮಾಜಕ್ಕೆ ನೀಡಿದರು.

ಸರ್ವರಧಿಕಾರಿಗಳು ಎನಿಸಿಕೊಂಬರು ಮಗನೆ
ಉರ್ವಿಗತಿಶಯುವಾ ಮುಕ್ತಿ ಹೊಂದಲಿಕೆ

ಎಂಬ ಅವರ ಚಿಂತನೆಯು ಅಪೂರ್ವವಾದುದು. ಜಾಣ, ಮೂರ್ಖ, ಸಿರಿವಂತ, ದರಿದ್ರ ನಿರಕ್ಷರಕುಕ್ಷಿ, ಶಾಸ್ತ್ರಿ, ಕ್ಷತ್ರಿಯ, ವೈಶ್ಯ, ಶೂದ್ರ, ಹೂಣ, ಕಿರಾತ, ಮ್ಲೇಚ್ಛ, ಭೇದಮತ ಚಾರ್ವಾಕ, ಕಾಳನಾಗಿರಲು, ವ್ಯಾಧ ಕಟುಕ, ಭ್ರಷ್ಠನಾಗಿರಲಿ ಎಲ್ಲರೂ ಅರ್ಹರೆಂಬ ಈ ಪರ್ಯಾಯ ಆಲೋಚನೆ ಮತ್ತು ಬದುಕಿನ ನಡೆಯು ವೈದಿಕಶಾಹಿಯ, ಜಾತಿ ಜನಾಂಗ ವರ್ಣಭೇದಗಳ ಪರಿಕಲ್ಪನೆಯನ್ನು ಮುರಿದು ಮರುವ್ಯಾಖ್ಯಾನಿಸಿತು. ಹೊಲೆಯರ ಚಂದವ್ವ, ಹಾರುತಿ ಪದ್ಮಾವತಿ, ಫಾತಿಮಾ ಮುಂತಾದ ತತ್ವ ಪದಕಾರ್ತಿಯರು ವೈದೀಕ ಶಾಹಿಯನ್ನು ತೀವ್ರವಾಗಿ ವಿಡಂಬಿಸಿದ್ದಾರೆ. ಜಾತಿಯನ್ನು ಜನ್ಮವಲ್ಲ, ನಡವಳಿಕೆಯಿಂದ ಅಳೆಯಬೇಕು,"ಚಂಡಾಲ" ಎಂಬುದು ಗುಣವೇಹೊರತು, ಜಾತಿಯಲ್ಲ, ಪಂಚಭೂತ, ಪಂಚೇಂದ್ರಿಯಗಳಲ್ಲಿ ಭೇದವಿಲ್ಲ ಎಂಬ ಸಮಾನತೆಯ ತತ್ವವನ್ನು ಪ್ರತಿಪಾದಿಸಿದ್ದಾರೆ. ರಾಯಚೂರು ಹನುಮಂತವ್ವ 'ಚಾಂಡಾಲ ಹೊರಗಿಹನೆ ಊರ ಒಳಗಿಲ್ಲವೆ' ಎಂಬ ಅವಳ ತತ್ವಪದದಲ್ಲಿ ಚಂಡಾಲತನವನ್ನು ಮರು ವ್ಯಾಖ್ಯಾನಿಸುತ್ತಾಳೆ. ಮಹಾತ್ಮರಾಗಲು ಕುಲದ ಹಂಗಿಲ್ಲ ಯಾರು ಬೇಕಾದರೂ ಮಹಾತ್ಮರಾಗಲು ಸಾಧ್ಯ, "ಎಂಜಲೆಂಜ ಲೆಂಜಲೆನ್ನದೆ ನೀನು ಮನವೇ ಕೇಳು. ನೆಲನೊಂದೆ ಜಲನೊಂದೆ ಕುಲವೊಂದೇ" ಎಂಬುದಾಗಿ ಹೇಳುತ್ತಾ ಹೊಸ ಪರಿಚಲನೆಯನ್ನು ಉಂಟುಮಾಡಿ ಪರ್ಯಾಯ ಚರಿತ್ರೆಯನ್ನು ಸೃಷ್ಟಿಸಿದ್ದಾರೆ.

ಮಡಿವಾಳೇಶ್ವರರ'ಮುಕ್ತಿಪಡಿ' ಎಂಬ ಸ್ವರ ವಚನದ ಕೆಲವು ಸಾಲುಗಳು ಹೀಗಿವೆ.

ಉಚ್ಚ ನೀಚ ಅನ್ನತೀದಿ ಹುಚನಾಯಿ । ಉಚ್ಚಿಯೊಳು ಬಂದೀದಿ ಹುಚುನಾಯಿ ।
ಕುಲ ಕುಲ ಅನ್ನತೀದಿ ಕುಲಗೇಡಿ । ಕುಲದ ಖನ ಹೇಳು ನಿಜ ನೋಡಿ ॥
ಕೆಳಗೆಂದು ಮೇಲೆಂದು ಹಾರಾಡತೀದಿನಾ। ವೆಲ್ಲರೂ ಒಂದರಿ ತಿಳಿಗೇಡಿ ನೀ ।
ಹಮ್ಮೊಳು ಬಿದ್ದು ಉಪರಾಟ ಸಾಯುತೀದಿ ।

ಸುಮ್ಮ ಸುಮ್ಮನೆ ವೇದಾಂತವ ಹೇಳತೀದಿ ಖೋಡಿ ನೀ । ಮುಂತಾದ ತತ್ವಪದಗಳಲ್ಲಿ ವೈದಿಕಶಾಹಿಯ ಬಂಡವಾಳವನ್ನು ನಿರ್ದಾಕ್ಷಿಣ್ಯವಾಗಿ ಬಯಲು ಮಾಡುವ ಸಾಕಷ್ಟು

ಉದಾಹರಣೆಗಳನ್ನು ನಾವು ನೋಡಬಹುದಾಗಿದೆ. ವೈದಿಕ ಸಂಸ್ಕೃತಿಯ ಈ ಬಗೆಯ ತಾರತಮ್ಯವನ್ನು ತತ್ವಪದಕಾರ್ತಿಯರನ್ನೂ ಒಳಗೊಂಡಂತೆ ಯಾವೊಬ್ಬ ತತ್ವಪದಕಾರನೂ ಪ್ರತಿಭಟಿಸದೇ ಬಿಟ್ಟಿಲ್ಲವೆಂಬುದೇ ಹೇಳಬಹುದು. ಜಾತಿಪದ್ಧತಿಯನ್ನು ಮೀರದೆ ಸಾಧಕನಿಗೆ ಅನ್ಯದಾರಿಗಳಿಲ್ಲವೆಂದು ಮನದಟ್ಟು ಮಾಡಿಸುವ ಪ್ರಯತ್ನವನ್ನು ನಡೆಸಿದ್ದಾರೆ. ಶಿಶುನಾಳ ಶರೀಫರಂತೂ ಕೃತಕವಾದ ಜಾತಿ ಧರ್ಮ ಭೇದಗಳನ್ನು ಕಂಡು ಕಸಿವಿಸಿಗೊಂಡಿದ್ದಾರೆ, ಕುಲದಲ್ಲಿ ಹುರುಳಿಲ್ಲವೆಂದು ಬೋಧಿಸಿದ್ದಾರೆ.

ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ ।
ಶೀಲ ಮಾಡತಿರಿ ನಾಡೆಲ್ಲ ।
ಗಂಧ ವಿಭೂತಿ ತೊಗಲಿಗೆ ಧರಿಸಿ ।
ಜಾತಿ ಜಾತಿ ಬ್ಯಾರೆಯೆನಿಸಿ.....'

ಎಂದು ಸರಳವಾಗಿ ಹೇಳಲು ಪ್ರಯತ್ನಿಸಿದ್ದಾರೆ. ಕೈವಾರದ ನಾರಾಯಣ ತಾತನವರಂತೂ ಹೊಲೆಯನ ಹೃದಯ ಮಂದಿರದಲ್ಲೇ ದೇವರಿದ್ದಾನೆಂಬುದನ್ನು ತಮ್ಮ ಶತಕದಲ್ಲಿ ಹೀಗೆ ಹೇಳಿದ್ದಾರೆ :

ಮಾಲವಾಡನಿ ಜನುಲು-ಯೇಲ ನಿಂದಿಂತುರು ।
ಮಾಲವಾನಿ ಆತ್ಮಮಂದಿರಮುನ ।
ಸಕಲ ದೇಹವಿಹಾರಿ – ಸದ್ಗುರುಡು ವುಂಡುರಾ ।
ನಾದ ಬ್ರಹ್ಮಾನಂದ ನಾರೇಯಣಕವಿ ।

ಈ ಸಾಲುಗಳಲ್ಲಿ ಜಾತಿ-ವರ್ಣದ ಅಸಮತೆ, ಧಾರ್ಮಿಕ ಪೀಡೆ, ಮತ್ತು ಸಮಾಜದ ಆಂತರಿಕ ದ್ವಂದ್ವವನ್ನು ನಿರ್ದಾಕ್ಷಿಣ್ಯವಾಗಿ ತೋರಿಸಲಾಗಿದೆ. ಇದು ಫೂಕೋನ subjugated knowledge ಎಂಬ ತತ್ತ್ವಕ್ಕೆ ನೇರ ಸಂಬಂಧ ಹೊಂದುತ್ತದೆ.

4. ಜನಸಾಮಾನ್ಯನ ಚರಿತ್ರೆ : ತತ್ವಪದಕಾರರು:

ಜನಜೀವನದ ಅಸ್ಥಿರತೆ, ಆತಂಕ ಸಂಕಷ್ಟಗಳ ಚಿತ್ರಣ ಬಡತನ, ಸಾಲಬಾಧೆ, ತೆರಿಗೆಯ ಹೇರಿಕೆ ಮುಂತಾದವುಗಳಿಂದ ಜರ್ಜರಿತವಾಗಿದ್ದ ಜನಸಾಮಾನ್ಯರ ಬದುಕಿನ ಚಿತ್ರಣವನ್ನು ತತ್ವ ಪದಗಳು ಕಟ್ಟಿಕೊಟ್ಟಿವೆ. ತತ್ವಪದಕಾರರ ಕಾಲದಲ್ಲಿ ತೀವ್ರವಾದ ಬರವಿದ್ದುದು ತಿಳಿದುಬರುತ್ತದೆ. ಆ ನೂರುವರ್ಷಗಳಲ್ಲಿ ಸುಮಾರು ಹದಿನೆಂಟುವರ್ಷಗಳು ಬರಪೀಡಿತವಾಗಿತ್ತೆಂದು ತಿಳಿದುಬರುತ್ತದೆ. ಕಠಿಣವಾದ ಅಧಿಕಾರಶಾಹಿಯ ತೆರಿಗೆ ನೀತಿಗಳಲ್ಲದೇ ಪ್ರಕೃತಿಯೂ ಸಹ ಜನಸಾಮಾನ್ಯರನ್ನು ತಲ್ಲಣಗೊಳಿಸಿತ್ತು.

ಕೈವಾರ ನಾರೇಣಪ್ಪನವರ ತತ್ವಪದಗಳಲ್ಲಿ ರೈತನ ದಾರುಣ ಬದುಕಿನ ಚರಿತ್ರೆ ಅನಾವರಣಗೊಂಡಿದೆ.

'ಮೋಸಮು ವಚ್ಚೇದ' ಎಂಬ ತತ್ವ ಪದದಲ್ಲಿ

'ಮಾಟಲಮಾಯನು ಮನುಜಲು ದೋಚುನು
ವದಲಡು ತನ ಚೈ ವಕಕಾಸೈನನು' ಎಂದು
"ಕೊತ್ತಗ ವಕ ಚೇಪ ವಚ್ಚಿ ಕಾಳ್ಳು ಲೇವು,
ಚೇತುಲು ಲೇವು ನೂರೂ ನುದಿಟಿ ಕೊಂಮ್ಮು ಲೇದು
ಸಾಮಗೊಂಡ್ಲನು ಚಿಂಪಿ ವೇಸೇರಾ", ಎಂಬ ವಿಚಾರಗಳು ಹಾಗೂ
"ಅಪ್ಪು ಶಾಯಗರಾದು। ಅದಿಮೇಲುಕಾದು
ಸುಜ್ಞಾನುಲಕು ಮುಪ್ಪು। ಕ್ಷುದ್ರಲಕುಮೆಪ್ಪು"

ಎಂಬಂತಹ ಚಿಂತನೆಯುಳ್ಳ ಪದಗಳು ಆ ಕಾಲದ ಆರ್ಥಿಕ ಸಾಮಾಜಿಕ ಒತ್ತಡವನ್ನು ಚಿತ್ರಿಸುತ್ತವೆ. "ಕಾಳು ಬಿರಿದ ರೈತನ ಹೊಲವನು ಕಳಚಿ, ಕಳ್ಳರಿಗಿಂತ ಕೆಟ್ಟವರಾದ ಕರಣಿಕರು" ಎಂಬ ತತ್ವಪದವು ರೈತನ ನೋವನ್ನು ಸೂಚಿಸುತ್ತಿದೆ. ವಸಾಹತು ಶಾಹಿ ಆಡಳಿತದಲ್ಲಿ ಅವರ ಅನುವರ್ತಿಗಳಾಗಿ ಸಣ್ಣ ಸಣ್ಣ ಗ್ರಾಮಮಟ್ಟದಲ್ಲಿ ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದಂತಹ ಪ್ರಬಲವಾದ ಜಾತಿ, ವರ್ಗದವರಿಂದ ಉಂಟಾಗುತ್ತಿದ್ದ ತೀವ್ರ ಶೋಷಣೆಯನ್ನೂ ಈ ಮಾತು ಬಿಚ್ಚಿಟ್ಟಿದೆ. ಇಲ್ಲಿ ಕಂಡು ಬರುತ್ತಿರುವುದು ಈ ತತ್ವ ಪದಗಳು ತಮ್ಮ ಕಾಲದ ಜನಸಾಮಾನ್ಯರ ಆರ್ಥಿಕ ಸಂಕಷ್ಟವನ್ನು ಮಾತ್ರ ಹೇಳುತ್ತಿಲ್ಲ, ಈ ಚಿತ್ರಣ ಶ್ರೇಣಿಕೃತ ಸಮಾಜ ಮತ್ತು ರಾಜಕೀಯ ಶಕ್ತಿಯ ಶೋಷಣೆಯ ಪರಿಣಾಮವನ್ನೂ ಹೇಳುತ್ತಿವೆ. ಕರ್ನಾಟಕದ ಅಧಿಕೃತ ಚರಿತ್ರೆಯನ್ನು ಬರೆದಂತಹ ಯಾವ ಇತಿಹಾಸಕಾರರು ದಾಖಲಿಸದ ಜನಸಾಮಾನ್ಯರ ಜೀವಂತ ಧ್ವನಿಯ ಮೂಲಕ ಇಂತಹ 'ಪೀಪಲ್ಸ್ ಹಿಸ್ಟರಿ'ಯನ್ನು ತತ್ವಪದಗಳು ಕಟ್ಟಿವೆ.

5. ಸಮನ್ವಯದ ಚರಿತ್ರೆ : ಧಾರ್ಮಿಕ–ಸಾಮಾಜಿಕ ಚಾರಿತ್ರಿಕ ತಲ್ಲಣಗಳು:

ಶಿಶುನಾಳ ಶರೀಫರು, ಗುರುಫೀರಾ, ಮಡಿವಾಳಪ್ಪ ಮುಂತಾದ ಅನೇಕ ತತ್ವಪದಕಾರರು ಧಾರ್ಮಿಕ ಗಡಿಗಳನ್ನು ದಾಟಿ ಮಾನವೀಯತೆಯನ್ನು ಬೋಧಿಸಿದರು. ಜಾತಿ, ಮತ, ಪಂಥ, ಧರ್ಮ, ಲಿಂಗ ಭೇಧವಿಲ್ಲದೆ ಎಲ್ಲರೂ ಈ ತತ್ವಪದಗಳ ಅಪೂರ್ವ ಸಾಹಿತ್ಯವನ್ನು ರಚಿಸಿದ್ದಾರೆ. ಅದು ಸಮನ್ವಯ ತತ್ವ, ಸಮಬಾಳಿನ ತತ್ವ ಇವುಗಳಲ್ಲಿ ಅನ್ಯ ಧರ್ಮ ಮತ ಪಂಗಡಗಳೊಂದಿಗೆ ಸಮನ್ವಯದ, ಸಹಿಷ್ಣುತೆಯ, ಒಡನಾಟದ, ವಿವಿಧ ಚಿಂತನಾಧಾರೆಗಳ ತತ್ವಾನುಸಂಧಾನದ ಬೆಳಕಿನಲ್ಲಿ ಬದುಕನ್ನು ಕಟ್ಟಿಕೊಳ್ಳುವ ಸಹಜವಿವೇಕವಿದೆ. ಹೀಗೆ ತಮ್ಮ ಕಾಲಘಟ್ಟದ ಎಲ್ಲ ಬಗೆಯ ಚಾರಿತ್ರಿಕ ತಲ್ಲಣಗಳಿಗೆ ಮೈಯೊಡ್ಡಿ ಎಲ್ಲ ಬಗೆಯ ಸಾಂಸ್ಥಿಕ ವ್ಯವಸ್ಥೆಗಳ, ಅಧಿಕಾರ ಕೇಂದ್ರಗಳ ಹಿಡಿತಕ್ಕೂ

ಸಿಕ್ಕದೆ ಸ್ವತಂತ್ರವಾಗಿ ಬದುಕನ್ನು ಕಟ್ಟಿಕೊಂಡವರು ತತ್ವಪದಕಾರರು. ಅವರು ವಸಾಹತುಶಾಹಿ ಮತ್ತು ವೈದಿಕಶಾಹಿಯಂತಹ ದಬ್ಬಾಳಿಕೆ ವ್ಯವಸ್ಥೆಗಳ ನಡುವಣ ಪರ್ಯಾಯ ಮಾನವತಾವಾದದ ಧ್ವನಿಯಾಗಿ ಉಳಿದರು.

ಪರ್ಯಾಯ– ಚರಿತ್ರೆಯ ರೂಪಣೆ: ಲೋಕಪರವಾದ, ಜೀವಪರವಾದ, ಪ್ರಕೃತಿಪರವಾದ ಮಾನವೀಯ ಮೌಲ್ಯವುಳ್ಳ ನೆಲಸಂಸ್ಕೃತಿಯ ಜೀವಧ್ವನಿಯಾಗಿ ತತ್ವಪದಗಳು ಅಪೂರ್ವವಾದ ಸೃಜನಶೀಲ ಭಾಷಿಕ ರಚನೆಗಳಾಗಿವೆ. ಸಮಾಜೋ ರಾಜಕೀಯ ಶಕ್ತಿಕೇಂದ್ರಗಳಿಗೆ ಸಡ್ಡುಹೊಡೆದು ಪ್ರಧಾನ ಸಾಹಿತ್ಯ ಧಾರೆಗೆ ಸಮಾನಾಂತರವಾಗಿ ಇವು ರೂಪುಗೊಂಡಿದ್ದರೂ ಸಹ ಈ ತತ್ವಪದಗಳ ಅಪೂರ್ವ ಸಾಹಿತ್ಯ ರಾಶಿಯನ್ನು ಸಾಹಿತ್ಯ ಚರಿತ್ರಕಾರರು ಅಲಕ್ಷಿಸಿದ್ದುದು ಆಕಸ್ಮಿಕವಲ್ಲ. ಫೂಕೋ ಹೇಳುವಂತೆ ಅದು ಅಧಿಕಾರ ಮತ್ತು ಜ್ಞಾನದ ರಾಜಕಾರಣ. ನಾಡಿನ ಸಾಂಸ್ಕೃತಿಕಚರಿತ್ರೆಯನ್ನು ಯಾರು, ಹೇಗೆ ಮತ್ತು ಏಕೆ ನಿರ್ಮಿಸುತ್ತಾರೆ, ಹಾಗು ಯಾರು ನಿಯಂತ್ರಿಸುತ್ತಾರೆ ಎಂಬುದು ಚರಿತ್ರೆಯ ಸ್ವರೂಪವನ್ನು ನಿರ್ಧರಿಸುತ್ತದೆ. ಹೀಗೆ ಅಲಕ್ಷಿಸಲ್ಪಟ್ಟರೂ ಈ ಜನಸಾಮಾನ್ಯರ ಕಥನವನ್ನು ಜನಸಾಮಾನ್ಯರೇ ಇಂದಿಗೂ ಜೀವಂತವಾಗಿ ಉಳಿಸಿಕೊಂಡಿದ್ದಾರೆ. ನೆಲಸಂಸ್ಕೃತಿಯ ಚರಿತ್ರೆಯನ್ನು ಪುನಾರಚಿಸಿಕೊಳ್ಳಬೇಕೆಂಬ ತುರ್ತು ಎದುರಾಗಿರುವ ಪ್ರಸ್ತುತ ಕಾಲಘಟ್ಟದಲ್ಲಿ ಈ ತತ್ವಪದಗಳು ನಮಗೆ ಅಪೂರ್ವ ಆಕರಗಳಾಗಿವೆ.

ಫೂಕೋನ ದೃಷ್ಟಿಯಲ್ಲಿ ಇತಿಹಾಸವು ಸದಾ ಶಕ್ತಿಯ ನಿರ್ಮಿತ. ಕನ್ನಡ ತತ್ವಪದಗಳನ್ನು ಆ ನೆಲೆಯಲ್ಲಿ ನೋಡಿದರೆ: ಅವು ಕೇವಲ ಭಕ್ತಿ–ಆಧ್ಯಾತ್ಮಿಕ ಅನುಭವವಲ್ಲ. ಅವು ವಸಾಹತುಶಾಹಿ ಮತ್ತು ಸ್ಥಳೀಯ ಶೋಷಣೆ ವಿರುದ್ಧದ ಪ್ರತಿರೋಧದ ಚರಿತ್ರೆ, ಅವು ಅಡಗಿದ ಧ್ವನಿಗಳನ್ನು (ರೈತ, ಶೋಷಿತ ಸಮುದಾಯ, ಆಳುಮಕ್ಕಳು, ಮಹಿಳೆ) ಪ್ರಸ್ತುತಗೊಳಿಸಿದ Counter-History, ಅವು ಮಾನವೀಯ ಮೌಲ್ಯಗಳ ಪರವಾಗಿ ನಿಂತ ಜೀವಂತ ಸಾಕ್ಷಿ. ಹೀಗಾಗಿ, ತತ್ವಪದಗಳನ್ನು 'ಪರ್ಯಾಯ ಇತಿಹಾಸದ ಕನ್ನಡಿಗಳು' ಎಂದು ಪರಿಗಣಿಸುವುದು ಅಗತ್ಯವಾಗಿದೆ.

ಪರಾಮರ್ಶನ ಗ್ರಂಥಸೂಚಿ:

- ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ ಸಂಪುಟಗಳು ರಾ.ಸಂ.ಕ. ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ.
- ಶಿಶುನಾಳ ಶರೀಫ. ತತ್ವಪದಗಳು. ಸಂಪುಟ. ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
- ಕಡಕೋಳ ಮಡಿವಾಳೇಶ್ವರ. ಪದಗಳು. ಹುಬ್ಬಳ್ಳಿ ಪ್ರಕಾಶನ.
- ಕೈವಾರದ ನಾರಾಯಣ ತಾತ. ತತ್ವಪದಗಳು. ಮೈಸೂರು ವಿಶ್ವವಿದ್ಯಾನಿಲಯ ಪ್ರಕಾಶನ, ೧೯೮೮.

- ಹಿರೇಮಠ, ಎಸ್.ಜಿ. (ಸಂಪಾ.). ಕನ್ನಡ ತತ್ವಪದಗಳು. ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೨೦೦೫.
- ಕಾಲಜ್ಞಾನ ಮತ್ತು ನಾದ ಬ್ರಹ್ಮಾನಂದ ನಾರೇಯಣ ಶತಕ, ಶ್ರೀ ಯೋಗಿನಾರೇಯಣಯತೀಂದ್ರರ ಆಶ್ರಮ ಟ್ರಸ್ಟ್, ೧೯೮೭,
- ಡಾ. ಮಲ್ಲಿಕಾರ್ಜುನ ಶಿ. ಲಠ್ಠೆ, ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಗದಗ.
- ಬಾಲಲೀಲಾ ಮಹಾಂತ ಶಿವಯೋಗಿ ವಿರಚಿತ 'ಕೈವಲ್ಯ ದರ್ಪಣ',
- ಡಾ. ಶಿವಾನಂದ ಗುಬ್ಬಣ್ಣವರ, ಶಿಶುನಾಳ ಶರೀಫರ ಗೀತೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೮೫.

❑❑

ದ.ರಾ. ಬೇಂದ್ರೆಯವರ 'ಜೋಗಿ' ಕವನ

ಎಸ್.ಆರ್. ವಿಜಯಶಂಕರ

❖

ದ.ರಾ. ಬೇಂದ್ರೆಯವರ ಬಹುಚರ್ಚಿತವಾದ ಒಂದು ಕವನ 'ಜೋಗಿ'. ಈ ಕವನವನ್ನು 'ಗಂಗಾವತರಣ' ಸಂಕಲನದಲ್ಲಿ (೧೯೫೧) 'ತತ್ವಃ ಸೃಷ್ಟಿಃ' ಎಂಬ ವಿಭಾಗದಲ್ಲಿ ಅವರು ಪ್ರಕಟಿಸಿದ್ದಾರೆ. ಅನೇಕ ವಿಮರ್ಶಕರು ಇದನ್ನು ಕವಿಯ ಅನುಭಾವ ಕವನಗಳಲ್ಲಿ ಒಂದು ಎಂಬಂತೆಯೇ ಪರಿಗಣಿಸಿದ್ದಾರೆ. ಜೋಗಿಯನ್ನು 'ಶತಮಾನದ ಕವಿತೆ' ಎಂದು ಕರೆದು ಕೆ.ಸಿ. ಶಿವಾರೆಡ್ಡಿಯವರು ಈ ಕವನದ ಬಗ್ಗೆ ಬಂದ ೩೦ ವಿಮರ್ಶಾ ಬರಹಗಳನ್ನು ಸಂಕಲಿಸಿ ಒಂದು ಕೃತಿಯನ್ನು ಪ್ರಕಟಿಸಿದ್ದಾರೆ (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಕಟಣೆ). ಇದನ್ನು 'ಸಂಧಿಕಾಲದ ಆಧುನಿಕ ಪುರಾಣ' ಎಂದು ಕರೆದ ಶಿವಾರೆಡ್ಡಿಯವರು, ಎರಡು ಶತಮಾನದ ಕೇಡುಗಾಲದ ದಾಸ್ಯದ ದಿನಗಳಿಂದ ಬಿಡುಗಡೆ ಹೊಂದಿ, ಪೂರ್ವ–ಪಶ್ಚಿಮ ಸಂಸ್ಕೃತಿಗಳಿಂದ ನಿರ್ಮಾಣವಾದ ಸಂಕಟಗಳು ಹಿಂದೆ ಸರಿದು, ಬಯಕೆಗಳು ಫಲಕಾರಿಯಾಗುವ ಸಂಧಿಕಾಲದಲ್ಲಿ ಈ ಕವನ ರಚನೆಯಾಗಿದೆ ಎಂದಿದ್ದಾರೆ. ಈ ಕವನ ಆಧುನಿಕ ಪುರಾಣವಾಗಿ ಅನನ್ಯತೆಯ ಕಡೆಗೆ ಚಲಿಸುತ್ತದೆ ಎಂಬುದು ಅವರ ವಿಚಾರ. ಭಾರತದ ಸಂವೇದನೆಯ ಹೊಸ ಸಂಸ್ಕೃತಿಯ ಸಂಪರ್ಕ–ಸಂಘರ್ಷ–ಅನುಸಂಧಾನಗಳಿಂದ ಮರುಹುಟ್ಟು ಪಡೆದು ಕ್ರಿಯಾಶೀಲಗೊಂಡ ನವಪುರಾಣದ ಹೆಜ್ಜೆ ಗುರುತುಗಳು ಇಲ್ಲಿ ಕಾಣುತ್ತವೆ ಎಂದು ಅವರು ವಿವರಿಸುತ್ತಾರೆ. 'ಮಳೆಯ ಹದ' ದಾಸ್ಯದಿಂದ ಮುಕ್ತಿ ಪಡೆದು ಸ್ವಾತಂತ್ರ್ಯ ತರುವ ಅಂಥಾ ಕ್ರಿಯಾಶೀಲತೆಗೆ ಅನುಕೂಲವಾಗುವ ಪರಿಸರ ನಿರ್ಮಾಣವಾಗಬೇಕೆಂಬ ಅಭೀಪ್ಸೆ ಎಂಬ ಸಾಂಕೇತಿಕ ಪರಿಕಲ್ಪನೆಯಲ್ಲಿ ಅವರು ಕವನವನ್ನು ವಿಶ್ಲೇಷಿಸುತ್ತಾರೆ.

ಕವನದ ಭಾವ ಸಂದರ್ಭದಲ್ಲಿ ದ.ರಾ.ಬೇಂದ್ರೆಯವರು 'ಜೋಗಿ'ಯ ಗೀತ ಧಾರವಾಡದ ಸುತ್ತಲಿನ ನಿಸರ್ಗದ ಮಾಯೆಯಿಂದಲೂ ಒಳಜೀವನದೊಳಗಿನ

ಕಾಳರಾತ್ರಿಯ ಭಯಾನಕ ಸಂಶಯಾಕುಲಿತ ಭಾವನೆಯಿಂದಲೂ ಉದಿತವಾಗಿದೆ ಎಂದು ಹೇಳಿದ್ದಾರೆ.

ಕವನದ ಮೊದಲ ಚರಣವೆ ಮುಂದೆ ಅನಾವರಣಗೊಳ್ಳಲಿರುವ ಭಯ ಹುಟ್ಟಿಸುವ ನಿಗೂಢತೆಗೆ ಮುನ್‌ಸೂಚನೆಯಾಗಿದೆ:

ಊರ ತುದಿಯ ಆ ಮೂರು ಬಟ್ಟೆ ಮುಗಿವಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರs ಕಕ್ಕಾವಿಕ್ಕಿಯಾಗಿ
ಇರುಳು ಅಂತನs ಹಗಲs ಗೂಕತಾವ ಅಲ್ಲಿ ಜೋಡ ಗೂಗಿ.

ಬಟ್ಟೆ ಎಂದರೆ ಹಾದಿ ಎಂಬ ಅರ್ಥವಿದೆ. ಈ ಕವನ ಹಲವು ಬಗೆಯ ಸಾಂಕೇತಿಕತೆಗಳನ್ನು ತನ್ನ ವಾಸ್ತವತಾ ನಿರೂಪಣೆಯೊಳಗೆ ಅಡಕಗೊಳಿಸಿಕೊಳ್ಳುತ್ತದೆ. ಯಾವತ್ತೂ ಸಾಂಕೇತಿಕತೆ ಹೊರಗಿನಿಂದ ಎಳೆದು ತಂದು ನಿರ್ಮಾಣಗೊಳ್ಳುವ ಸೂಚನೆಯಲ್ಲ. ಸಹಜವಾದ ವಾಸ್ತವ ವಿವರಣೆಯೊಳಗಿನಿಂದ ಸಂಕೇತಗಳು ಸಾಂದರ್ಭಿಕವಾಗಿ ನಿರೂಪಣೆಗೊಳ್ಳುತ್ತವೆ. ಬಟ್ಟೆ, ದಿಕ್ಕು-ತಪ್ಪುವಿಕೆ, ಹಗಲು ಇರುಳಾಗಿ ತೋರಿ ಇರುಳಿನಲ್ಲಿ ಕೂಗಬೇಕಾದ ಗೂಬೆಗಳು ರಾತ್ರಿಯೆಂದು ಭ್ರಮಿಸಿ ಕೂಗುವುದು ಎಲ್ಲವೂ ಸಾಂಕೇತಿಕತೆಯೊಡನೆ ಭಯಜನ್ಯ ಸ್ಥಿತಿಯೊಂದನ್ನು ನಿರ್ಮಾಣ ಮಾಡುತ್ತವೆ.

ಬಟ್ಟೆ (ದಾರಿ) ಮುಗಿದಿದೆ. ಮುಂದಿನ ದಾರಿ ಅಲ್ಲಿಗೆ ಹೋಗುವವರು ಕಂಡುಕೊಳ್ಳಬೇಕು. ಮುಂದೆ ಹೊಕ್ಕರೆ ದಾರಿ ತಪ್ಪುವಂತಿದೆ. ಹಗಲು ಇರುಳಿನ ಹಾಗಿದೆ. ಅಲ್ಲಿ ಹಳ್ಳವೂ ತೋರದೆ ಅಡಗಿ ಹರಿಯುತ್ತಿದೆ. ಆದರೆ ಅಲ್ಲೇ ಮುಂದೆ ಮಸಣ ದಾಟಿ 'ಎಡಕ್ಕಾಗಿ ಅದರ ಆಚೆ'. ಇಲ್ಲಿ ಕನ್ನಡದಲ್ಲಿ 'ಎಡ' ಎಂದ ಸಂಸ್ಕೃತದಲ್ಲಿ 'ವಾಮ' ಎನ್ನುವ ಪದ ವಿಶಿಷ್ಟವಾದುದು. 'ವಾಮಮಾರ್ಗ' ಎಂದರೆ, ತಾಂತ್ರಿಕರು, ಜೋಗಿಗಳು ಅನುಸರಿಸುವ ವೈದಿಕ ಮಾರ್ಗಕ್ಕಿಂತ ಭಿನ್ನವಾದ, ಆಚಾರ ಎಂಬ ಒಂದು ನಂಬುಗೆಯೂ ಇದೆ. ಅಲ್ಲಿ ಕಾಮ ತನ್ನ ಹಸಿರಿನ ಅಂಗಿ ಹಾಸಿದಾಗೆ ಪಾಚಿ ಮುಚ್ಚಿದ ಒಂದು ಹೊಂಡ. ಕಂಡ ಕಣ್ಣುಗಳಿಗೆ ಅವು ಮೆಚ್ಚಿಗೆಯಾಗುವಂತಿದೆ (ಮೆಚ್ಚಿ, ಮಾಡತಾವೊ). ಆದರೆ ಅಲ್ಲೊಂದು ವೈರುಧ್ಯವಿದೆ. ಆ ಹಸಿರಿನ ಪಾಚಿಯನ್ನು ಸರಿಸಿದರೆ ಕಪ್ಪು ನೀರು ಒಳಗೆ ಕರಿತಾವೆ. ಕಪ್ಪಿನ; ರಾತ್ರೆಯಂತೆ ಕಾಣುವ ಹಗಲಿನಲ್ಲೆ ಕಣ್ಕಟ್ಟಿನ ಕಪ್ಪಿನ ಆಕರ್ಷಣೆ.

ನಾವು ಈ ಹಂತದಲ್ಲಿ 'ಜೋಗಿ' ಎಂಬ ಪದ ಸಂಸ್ಕೃತದ 'ಯೋಗಿ' ಪದದ ತದ್ಭವ ಎಂಬುದನ್ನು ನೆನಪಿಸಿಕೊಳ್ಳಬೇಕು. 'ಜೋಗಿ' ಸ್ಪಷ್ಟವಾಗಿ ವೈದಿಕ ಪರಂಪರೆಯಿಂದ ಭಿನ್ನವಾದ ಆಚಾರ, ನಂಬುಗೆಗಳನ್ನು ಮುನ್ನೆಲೆಗೆ ತರುತ್ತಾನೆ. ಜೋಗಿ ಪದ ಹಲವು

ಭಾಷೆಗಳಲ್ಲಿ ಹಲವು ಅರ್ಥಗಳಿಗೆ ಕಾರಣವಾಗಬಹುದು. ಸಂತ ಮೀರಾಬಾಯಿ 'ಮತ್ ಜಾ ಜೋಗಿ' ಎಂದಾಗ ಅಲ್ಲಿ ಶ್ರೀಕೃಷ್ಣ, ಗಿರಿಧರ ಎಂಬುದು ಸ್ಪಷ್ಟ. ಕನ್ನಡದಲ್ಲಿ 'ಎಲ್ಲಿ ಜೋಗಪ್ಪ ನಿನ್ನರಮನೆ' ಎಂದಾಗ ಉಂಟಾಗುವ ಸಾಂಸ್ಕೃತಿಕಪಲ್ಲಟವನ್ನು ನೆನಪಿಸಿಕೊಳ್ಳಬೇಕು. ಪೌರಾಣಿಕ ಕಥಾಸಂಬಂಧವುಳ್ಳ ಶಿವನನ್ನು 'ಜೋಗಿ' ಎನ್ನುವ ಕ್ರಮವಿಲ್ಲ. ಅಕ್ಕಮಹಾದೇವಿಗೆ ಅವನು 'ಗೊರವ'. ಹಾಗಾಗಿ ಜೋಗಿ ಪದವನ್ನು ಕೇವಲ 'ಯೋಗಿ' ಪದದ ತದ್ಭವವಾಗಿ ನೋಡದೆ ಅದನ್ನು ಪ್ರತಿನಿಧಿಸುವ ಸಾಂಸ್ಕೃತಿಕ, ದೈವಾರಾಧನೆಯ ಪ್ರತ್ಯೇಕತೆಯನ್ನು ಗುರುತಿಸುವುದು ಅನಿವಾರ್ಯ. ಸಿದ್ಧರು, ನಾಥರು ಮೊದಲಾದ ಪಂಗಡಗಳ ಆರಾಧನಾ ನೆಲೆಗಳಿಗೆ ಹತ್ತಿರವಾದ ದೈಹಿಕ ಮತ್ತು ಅಧ್ಯಾತ್ಮಿಕ, ಅಂದರೆ ಲೌಕಿಕ ಹಾಗೂ ಅಲೌಕಿಕ ಎರಡೂ ನೆಲೆಗಳ ಮಹತ್ವವನ್ನು ಅರಿತ ಮನಸ್ಸನ್ನು ಪ್ರತಿನಿಧಿಸುವ 'ಜೋಗಿ' ಇಲ್ಲಿ ಇರುವಾತ ಎಂದು ಭಾವಿಸಬಹುದು.

ಮೂರನೆ ಚರಣದಲ್ಲಿ, ಮುಂದೆ ಹೋಗಿ ಕಾಳಮ್ಮನ (ಕಾಳಿಯ) ಹೊಲದ ನಡುವಿರುವ ಹುಣಸೆಮರ ಏರಿ ನೋಡಿದಾಗ, ಸಣ್ಣ ಏರಿಮ್ಯಾಗೆ ಗಿಡಗಳ ಗುಂಪೊಂದು ಕಾಣತಾವ. ಹೊಲದ ನಡುವೆ ಹುಣಸೆ ಮರ ಇರುವುದರಿಂದ ಅದು ಕಾಳಮ್ಮನಿಗೆ ಬಿಟ್ಟ ಈಗ ಬೇಸಾಯವಿಲ್ಲದ ಪಾಳುಗದ್ದೆ ಎಂಬ ವಿಚಾರವೂ ಆ ಪ್ರದೇಶದ ಭಯಾನಕತೆಯನ್ನು ಹೆಚ್ಚು ಮಾಡುತ್ತದೆ. ಅದೊಂದು ಜನಸಂಚಾರವಿಲ್ಲದ ಪ್ರದೇಶ ಎಂಬುದು ಸ್ಪಷ್ಟವಾಗಿದೆ.

ನಾಲ್ಕನೆಯ ಚರಣದಲ್ಲಿ, ರಾತ್ರಿ ಚೀರಬೇಕಾದ ತೊಗಲು ಬಾವಲಿ ಹಗಲೆ ಚೀರುತ್ತಾವೆ. ಹಿಂಡು ಪಾರಿವಾಳಗಳು ಹೊಕ್ಕು ಹೊರಡುತಾವ–ಒಳಗೆ, ಹೊರಗೆ. ಬೇವಿನ ಸುತ್ತ ಅಮೃತ ಬಳ್ಳಿ ಇದೆ. ಕಹಿಬೇವಿಗೆ ಸುತ್ತಿದ ಅಮೃತಬಳ್ಳಿ ವಿಶೇಷವಾಗಿ ಗಮನ ಸೆಳೆಯುತ್ತದೆ ಆಲದ ಮರ (ಸಾಮಾನ್ಯವಾಗಿ ಬ್ರಹ್ಮರಾಕ್ಷಸ, ಪಿಶಾಚಿಗಳ ವಾಸಿಸುವ ವೃಕ್ಷ ಎಂಬ ನಂಬುಗೆ). ಅಳ್ಳೆ ಅಲ್ಲಾಡುವಂತಹ ಸ್ಥಿತಿ. ವಾತಾವರಣ ಭಯಜನಕವಾಗಿದೆ.

ಮರಗಳ ಸಾಂಕೇತಿಕತೆಯಲ್ಲೆ ಮುಂದೆ ನೋಡಿದರೆ ಐದನೇ ಚರಣದಲ್ಲಿ ಅತ್ತಿ ಗಿಡಗಳು ಕಾಣುತ್ತಾವೆ. ಅದು ಔದುಂಬರ. ಅದರ ಬುಡಕೆ ಹಲಸಿನ ಮರದ ಬುಡದಲ್ಲಿರುವ ಮಿಡಿ ಹಲಸಿನ (ಗುಜ್ಜೆ) ಹಾಗೆ ಒತ್ತೊತ್ತಾಗಿ ಕೆಂಪು ಹಣ್ಣು. ಅದು ಜೇನು ತುಂಬಿ ತೊಟಗುಟ್ಟುತ್ತಾವೆ. ಅದನ್ನು ನೋಡಿ ಕಣ್ಣು ಆ ಹಣ್ಣನ್ನು ಬಯಸುತ್ತವೆ. ಕಾಮ ಹಚ್ಚಂಗಿ ಹಾಸಿದ್ದನ್ನೂ (ಎರಡನೇ ಚರಣ) ಕಣ್ಣುಗಳು ಬಯಸಿದ್ದವು; ಇಲ್ಲಿ ಪುನಃ ಕಣ್ಣಿನ ಬಯಕೆ. ಆದರೆ ಈ ಸಲ ಅವು ಬಯಸುವುದು ದತ್ತಾತ್ರೇಯನಿಗೆ ಬಹುಪ್ರಿಯವಾದ 'ಅತ್ತಿ' ಅಂದರೆ ಔದುಂಬರ ಮರದ ಹಣ್ಣುಗಳನ್ನು. 'ಔದುಂಬರ' ಎಂಬೊಂದು ಕವನದಲ್ಲಿ

ಬೇಂದ್ರೆಯವರು ತಾನು 'ಔದುಂಬರದ ಉಪಾಸಕ ದತ್ತ' ಎಂದಿದ್ದಾರೆ. ಆ ಕವನದ ಪ್ರಾರಂಭದಲ್ಲಿ 'ಔದುಂಬರವು / ಹೂವಾಗಿ ಹಣ್ಣಾಗುವುದಿಲ್ಲ / ಹಣ್ಣಿನಲ್ಲಿಯೆ ಹೂವು / ಮಕರಂದ ಇರುತ್ತದೆ' ಎಂದು ಹೇಳಿ, ಮುಂದುವರಿದು ನಾನು ಅತ್ತೀ ಹಣ್ಣು / ಹೂವು ತೋರದೆ ರಸೋದರ ಉಳ್ಳವ / ಅತ್ತೀ ಹಣ್ಣು ಕೆಂಪು, ಅದು ಅದರ ಪೆಂಪು! / ಗೆಲವದರಲ್ಲಿ ರಸ–ಮಕರಂದ! ಎಂದಿದ್ದಾರೆ ('ಸಮರಸವೇ ಜೀವನ' ಆಯ್ದ ಕವನಗಳ ಸಂಗ್ರಹ. ಸಂಪಾದಕರು ವಾಮನ ಬೇಂದ್ರೆ). ಅಂದರೆ ಇಲ್ಲಿ ಕಣ್ಣಿನ ಜೊತೆ ಅತ್ತಿ ಹಣ್ಣು ನಾಲಗೆಯ ಸವಿಯನ್ನೂ ಸೂಚಿಸುತ್ತಿದೆ. ಆ ತೋಪಿನಲ್ಲಿ ಹೇಗೋ ತಪ್ಪಿ ಒಂದು ಮಾವು ಕೂಡಾ ಬೆಳೆದಿದೆ. ಆದರೆ ಮಾವು ಸರಳವಾದುದಲ್ಲ. ಅದರ ಅಡಿಗೆ ಹುತ್ತ ಇದೆ. 'ಅದರಾಗ ಐತೆ ಒಂದೇಳ ಹೆಡೆಯ ಹಾವು'. ಒಂದು ಹೆಡೆಯ ಹಾವೆ ಭಯಕಾರಿ. ಹಾಗೆಯೇ ಹೆಡೆಯೆತ್ತಿ ತೂಗಿದರೆ ಬಹಳ ಚಂದದ ಸರೀಸೃಪ. ಏಳು ಜಡೆಯ ಹಾವು ಇನ್ನು ಹೇಗಿರಬೇಡ. ಜಾನಪದ ಐತಿಹ್ಯಗಳ ಹಾಗೆಯೆ ಮನುಷ್ಯನಲ್ಲಿ ಉಳಿದು ಬೆಳೆದಿರುವ ಹಲವು ಆದಿಮ ಕಲ್ಪನೆಗಳನ್ನೂ ಈ ಹಾವು ಪ್ರತಿನಿಧಿಸುತ್ತದೆ.

ಮುಂದಿನ ಚರಣದಲ್ಲಿ (೦೬) ಈ ಮಾವು ಅದರ ಸಂಭ್ರಮವನ್ನು ಸುಗ್ಗಿಯಲ್ಲಿ ತೋರಿಸುತ್ತದೆ. ಮಾವು ತೋಪಿಗೆ ತಪ್ಪಿಬಂದರೂ, ಅದರ ಮೇಲೆ ಸುಗ್ಗಿಯಲ್ಲಿ ಕುಳಿತ ಕೋಗಿಲೆ 'ತನ್ನ ಜೋಡಿ ಕರಿದಾಂಗ ಕರಿತಽದ ತನ್ನ ಬಾರಽ ಅಂದು'. ಇಲ್ಲಿ ಆಕರ್ಷಣೆ ಬಹಳ ಸ್ಪಷ್ಟವಾಗಿದೆ. 'ಕೂಗೇ ಕೂಗತದ ಕೂಗೇ ಕೂಗತಽದ ಗಿರಣಿ ಕರೆಯೊ ಹಾಂಗ'. ಅದು ಎಡೆಬಿಡದೆ ಕೂಗಿ ಕರೆಯುತ್ತಾ ಇದೆ. 'ಗಿರಣಿ' ಪದ ಇಲ್ಲಿ ಬಹಳ ಮುಖ್ಯವಾದ್ದು. 'ಗಿರಣಿ'ಯ ಕೂಗು (ಸೈರನ್) ಅಲ್ಲಿಗೆ ಹೋಗುವವರಿಗೆ ಪ್ರವೇಶ ಮಾಡುವ ಸಮಯವಾಯಿತು ಎಂದು ಒತ್ತಡ ಹೇರುವ ಕರೆ: ಮತ್ತು 'ಗಿರಣಿ'ಯ ಕೂಗಿನ ಕರೆ ಕಾಲಬಾಧಿತ. ಅದು ಕಾಲಾತೀತವಲ್ಲ. ಆದರೆ ಕೋಗಿಲೆಯ ಕರೆ ಎಡೆಬಿಡದೆ ಈ ಕವನದುದ್ದಕ್ಕೂ, ಮಳೆಯ ಸೂಚನೆವರೆಗೂ ನಿರಂತರ. ಏನು ಬೇಕಾದರಾಗಲಿ ಅದು ಕೂಗಿಯೇ ಕೂಗುತ್ತದೆ. ಅಂತಹ ಒಂದು ಯಾಂತ್ರಿಕತೆಯೂ ಅಲ್ಲಿದೆ. ಜೊತೆಗೆ ಆ ಕರೆಗೆ ಓಗೊಟ್ಟು ಅಲ್ಲಿಗೆ ಹೋಗಬೇಕೆಂಬ ಒತ್ತಡವೂ ಹೆಚ್ಚಾಗುತ್ತಿದೆ. ಕೋಗಿಲೆಯ ಕೂಗು ಹಾಗೆ ತೆರಪು ಇಲ್ಲದೆ ಒಂದಳತಿ ಕೂಗುತಽದ ಬ್ಯಾಸರಿಲ್ಲಧಾಂಗ. ಕರೆಯುವ ಕೋಗಿಲೆಗೂ ಅದನ್ನು ಕೇಳುವ ವ್ಯಕ್ತಿಗೂ ಬ್ಯಾಸರಿಲ್ಲಧಾಂಗ ಅದು ಕೂಗುತ್ತಾ ಇದೆ. 'ಗಿರಣಿ' ಪದವನ್ನು ಈ ಚರಣದ ಕೊನೆಯ ಸಾಲಿನ ವಿನ್ಯಾಸದೊಡನೆ ಅರ್ಥ ಮಾಡಿಕೊಳ್ಳಬೇಕು.

ಅಲ್ಲಿಂದ ಮುಂದೆ ಆಕರ್ಷಣೆ ಇನ್ನೂ ಹೆಚ್ಚಾಗಿದೆ. ಕೋಗಿಲೆಯ ಕೂಗಿನ ಸೆಳೆತ ಹಾವನ್ನು, ಅಲ್ಲಿ ಮೊದಲಿದ್ದ ಭಯದ ವಾತಾವರಣವನ್ನು ಬದಿಗೆ ಸರಿಸುತ್ತಿದೆ.

‘ತಿಳಿಯದ್ಯಾವುದೋ ಕಂಪು ಎಳೀತsದ ತುಂಬಿ ಹುಚ್ಚು ಆಗಿ’ ಕಂಪು ತುಂಬಿ ಹುಚ್ಚು ಆಗಿ ಎಳಿತಾ ಇದೆ. ಕಣ್ಣು, ಕಿವಿಗಳ ಬಳಿಕ ಪಂಚೇಂದ್ರಿಯಗಳಲ್ಲಿ ‘ಕಂಪು’ ಪದದ ಮೂಲಕ ಮೂಗು (ಘ್ರಾಣೇಂದ್ರಿಯ) ಕೂಡಾ ತೊಡಗಿಕೊಂಡಿದೆ. ‘ತುಂಬಿ’ ಪದ ಇಲ್ಲಿ ವಿಶೇಷವಾದ್ದು. ಅದು ನಿರೂಪಿಸುತ್ತಿರುವ ವ್ಯಕ್ತಿಯ ಮನಸ್ಸಿನ ರೂಪಕ. ಹಾಗಾದಾಗ ‘ತುಂಬಿ’ದ ಕ್ರಿಯೆ ಆ ಬಳಿಕ ‘ದುಂಬಿ’ಯಾಗಿ ಮಾರ್ಪಡುತ್ತದೆ. ಅದನ್ನು ಅತ್ತಿ ಹಣ್ಣಿನ ಮಕರಂದದ ಜೊತೆ ಅರ್ಥ ಮಾಡಿಕೊಳ್ಳಬೇಕು. ‘ದುಂಬಿ’ ಬೇಂದ್ರೆಯವರ ಕವನಗಳಲ್ಲಿ ನಿರಂತರವಾದೊಂದು ಪ್ರತಿಮೆ (ಕಾಳಿದಾಸನ ಶಾಕುಂತಲದಲ್ಲೂ ದುಂಬಿ ನಿರಂತರವಾಗಿ ಬೆಳೆಯುವ ಪ್ರತಿಮೆ). ವಾಮನ ಬೇಂದ್ರೆಯವರು ಹೇಳುವಂತೆ ‘ಔದುಂಬರ –ಅತ್ತಿಯ ಹಣ್ಣು– ಸಾಮರಸ್ಯದ ಸಂಕೇತ. ಹೂ ಮತ್ತು ಹಣ್ಣು ಒಂದೇ. ಹಣ್ಣಿನ ಅಂತರಂಗದಲ್ಲಿ ಹೂ ಅಡಗಿ ರಸ, ಮಕರಂದ ರೂಪ ತಾಳುತ್ತದೆ. ಅಂಬಿಕಾತನಯದತ್ತರ ಕಾವ್ಯ ಕೂಡಾ ಅದೇ ಬಗೆಯದು (‘ಸಮರಸವೇ ಜೀವನ’ ಆಯ್ದ ಕವನಗಳ ಸೈದ್ಧಾಂತಿಕ ಸಂಗ್ರಹಕ್ಕೆ ಬರೆದ ಸಂಪಾದಕರ ಟಿಪ್ಪಣಿ)

ಆಗ ಕರೆಯ ಎಚ್ಚರ ಇದ್ದರೂ ‘ಎಚ್ಚರಿಲ್ಲದs ಎತ್ತೊ ತಿರುಗತಾವ ದಿಕ್ಕು ತೋರದಾಗಿ’. ಅಲ್ಲಿಗೆ ಪ್ರವೇಶಿಸುವ ಮೊದಲಿನ ಎಲ್ಲಾ ಪ್ರಜ್ಞಾ ಸ್ಥಿತಿಯ ನಿಯಂತ್ರಣಗಳನ್ನೂ ಅದು (ಆ ಕರೆಯ ಆಕರ್ಷಣೆ) ಮೀರುತ್ತಿದೆ. ಅದರ ಸಂಭ್ರಮವನ್ನೂ ‘ಬಂತು’ (ಬಂದಿತು) ಎಂಬ ಕ್ರಿಯಾಪದ ವಿಶೇಷವಾಗಿ ಸೂಚಿಸುತ್ತಿದೆ. ‘ಬಂತು ಸುಗ್ಗಿ ಬಂದsದ ಸುಗ್ಗಿ ಬರತsದ ಸುಗ್ಗಿ ಎಂದು’ ಇಲ್ಲಿ ‘ಬಂತು’ ಪ್ರಯೋಗ ಭೂತ, ವರ್ತಮಾನ, ಭವಿಷ್ಯ ಮೂರು ಕಾಲಗಳನ್ನು ಸೂಚಿಸುವುದರಿಂದ ಅದು ನಿರಂತರ ಎಂಬ ಭಾವವನ್ನು ಉಂಟುಮಾಡಿದೆ. ಕರೆಯ ಆಕರ್ಷಣೆಯಲ್ಲಿ ಕುಹೂವಿನ ಹಾಗೆ ಸುಗ್ಗಿಯೂ ನಿರಂತರ ಎಂಬ ಭಾವವನ್ನುಂಟುಮಾಡಿದೆ. ಅದು ನಿರಂತರ ’ಕುಹೂ ಅನ್ನತದ ಕುಹೂ ಅನ್ನತದ ಕುಹುಕ್ಕುಹೂ ಅಂದು’.

‘ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ’ ಇಲ್ಲಿ ಮೊದಲ ಬಾರಿಗೆ ‘ಜೋಗಿ’ಯನ್ನು ಕಾವ್ಯ ನಿರೂಪಕ/ಕಿ ಕೇಳುತ್ತಾ ಇದ್ದಾರೆ/ಳೆ. ಸಂಗೀತದಲ್ಲಿ ಪಂಚಮದಲ್ಲಿ ನಿಖರತೆ. ಅದು ಮೂಲದನಿ (Base note) ಅದರಿಂದ ಮೇಲಕ್ಕೂ, ಕೆಳಕ್ಕೂ ಹೋಗಬಹುದು. ಆದುದರಿಂದ ಆಕರ್ಷಣೆ ಹೆಚ್ಚು. ಅದು ಮೈಮರೆಯಿಸುವಂತಹುದು. ಮುಂದಿನ ಸಾಲು ‘ಯಾವ ಬಣ್ಣ, ಅದಕಾವ ಕಣ್ಣು ನಾ ನೋಡಲೇನು ಹೋಗಿ?’ ಇಲ್ಲಿ ಜೋಗಿಯನ್ನು ಕೇಳುವ ಭಾಷೆಯನ್ನು ನೋಡಿ. ನಾನು ಹೋಗಿ ಅದಕೆ ಯಾವ ಬಣ್ಣ ಯಾವ ಕಣ್ಣು ಎಂದು ನೋಡಲೇನು? ಎಂಬ ಸರಳ ಪ್ರಶ್ನಾರ್ಥಕ ವಾಕ್ಯ ತುಸು ಬದಲಾವಣೆ ಹೊಂದಿ ‘ಯಾವ ಬಣ್ಣ, ಅದಕಾವ

ಕಣ್ಣು, ನಾ ನೋಡಲೇನು ಹೋಗಿ?' ಎಂದು ಪಲ್ಲಟಗೊಂಡಿದೆ. ಈ ಪರಿವರ್ತನೆಯಿಂದ ಭಾಷೆಯ ಸಾಮಾನ್ಯ ನಡಿಗೆ ಕಾವ್ಯದ ನಾಟ್ಯಲಯವನ್ನು ಹೊಂದಿದೆ. ಕೋಗಿಲೆಯ ಕರೆಯ ಆಕರ್ಷಣೆಗೆ ಬಿದ್ದ ಸಾಮಾನ್ಯ ವ್ಯಕ್ತಿಯೂ ಬದಲಾಗುವ ಪ್ರಕ್ರಿಯೆಯನ್ನೂ ಈ ಭಾಷಾ ಪ್ರಯೋಗ ಸೂಚಿಸುತ್ತಿದೆ ಎಂಬಂತೆ ಭಾಸವಾಗುತ್ತದೆ. ಅದರ ಗುಂಗು ಹತ್ತಿದರೆ ತನ್ನ ಮನಸ್ಸು ಮಾತ್ರವಲ್ಲ ಸುತ್ತಲಿನ ಲೋಕವೆಲ್ಲಾ ಬದಲಾಗುತ್ತದೆ. ಮೊದಲಿದ್ದ ಭಯ ಇಲ್ಲ. ಹಾಡಿನ (ಕೂಗಿನ) ಲಯ ಸರ್ವವ್ಯಾಪಿ ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ / ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ ಈ ಪರಿವರ್ತನೆ ನಿರೂಪಿಸುತ್ತಿರುವ ವ್ಯಕ್ತಿಯ ಮನದಲ್ಲಾಗುವ ಬದಲಾವಣೆ ನೋಡುವ ನೋಟ, ಅನುಭವಿಸುವ ಭಾವವನ್ನೂ ಪಲ್ಲಟಿಸಿದೆ.

ಮುಂದಿನ ಚರಣದಲ್ಲಿ ಕೋಗಿಲೆಯ ಕೂಗಿನ ಕರೆಯ ಒತ್ತಡ ಇನ್ನೂ ಹೆಚ್ಚಾಗಿದೆ. ಇಲ್ಲಿ ಕೋಗಿಲೆಯ ಕರೆ ಕೇಳುವ ಮನಸ್ಸಲ್ಲಿ ಪರಿವರ್ತನೆ ಆಗಿದೆ. ಅದು ಕೊಳಲಿನ ಕರೆಯಾಗಿ ರೂಪಾಂತರಗೊಂಡಿದೆ. ಕೊಳಲ ನುಡಿಸಿಧಾಂಗ ಕುಹೂಹುಹೂಹೂ ಉಲಿತಽದೊ ಜೋಗಿ / ಬೇರೆ ಕೆಲಸದಾಗ ಮನಸು ತೊಡಗದೋ ನೋಡಲೇನು ಹೋಗಿ? ಕೊಳಲಿನ ಕರೆಯಾಗಿರುವುದರಿಂದ ನಿರೂಪಕರು 'ನಾಯಕಿ' ಎಂಬುದು ಸ್ಪಷ್ಟವಾಗಿದೆ. ಅದಲ್ಲದೆ ಬೇಂದ್ರೆ ಅವರಿಗೆ ವಿಶ್ವಾಸವಿರುವ ಲಿಂಗಪತಿ ಭಕ್ತಸತಿ ಭಾವದಲ್ಲೂ ನಿರೂಪಿಸುತ್ತಿರುವ ಜೀವ ಹೆಣ್ಣೇ ಆಗಿದೆ.

ಇನ್ನೊಂದು ಮಾತು ಇದೇ ಸಂದರ್ಭದಲ್ಲಿ ಹೇಳಬೇಕು. ದ.ರಾ. ಬೇಂದ್ರೆಯವರು ದಿನಾಂಕ ೦೪-೦೨-೧೯೭೧ ರಂದು ಮುಲ್ಕಿಯ ವಿಜಯಾ ಕಾಲೇಜಿನಲ್ಲಿ ಒಂದು ಭಾಷಣ ಮಾಡಿದರು. 'ವಿವೇಕದಿಂದ ಬಾಳುವ ವೀರರಾಗಿರಿ' ಎಂಬ ಹೆಸರಿನಲ್ಲಿ ಈ ಬರಹ 'ಮಾತೆಲ್ಲ ಜ್ಯೋತಿ' ಎಂಬ ಅವರ ಹತ್ತು ಉಪನ್ಯಾಸಗಳ ಸಂಗ್ರಹದಲ್ಲಿದೆ. (ಪ್ರಕಟಣೆ : ಎಕಾಡೆಮಿ ಆಫ್ ಜನರಲ್ ಎಡ್ಯುಕೇಶನ್ ಮಣಿಪಾಲ) ಆ ದಿನ ಅವರು ಅಲ್ಲಿ ಓದಿದ ನಾಲ್ಕು ಕವನಗಳಲ್ಲಿ 'ಜೋಗಿ' ಕೂಡಾ ಒಂದು. ಜೋಗಿ ಕವನ ಓದುವ ಮೊದಲು ದ.ರಾ.ಬೇಂದ್ರೆಯವರು ಅಂದು ಹೇಳಿದ ಈ ಕೆಳಗಿನ ಮಾತುಗಳು ಈ ಸಂದರ್ಭದಲ್ಲಿ ಗಮನಯೋಗ್ಯ :

"ಇದು, ನಿಜವಾಗಿ, ನನ್ನ ತಾಯಿಯ ಅನುಭವದ ಪದ್ಯ. ಇದರೊಳಗಿನ ಪಾತ್ರ ಸ್ತ್ರೀ ಪಾತ್ರ. ಇದನ್ನು ಎಷ್ಟೋ ಮಂದಿ ಅರಿತುಕೊಂಡಿಲ್ಲ; ಬೇಂದ್ರೆಯವರೇ ಹೇಳಿಕೊಂಡದ್ದು ಎಂದು ತಿಳಿದಿದ್ದಾರೆ. ಎಷ್ಟೋ ನಾಟ್ಯಗೀತಗಳಲ್ಲಿರುವಂತೆ ಈ ಅನುಭವವನ್ನು ನನ್ನ ಅನುಭವ ಎಂಬಂತೆ ಹೊಂದಿಸಿಕೊಂಡು ಈ ಪದ್ಯ ಬರೆದೆನು" ('ಮಾತೆಲ್ಲ ಜ್ಯೋತಿ').

ಕೊಳಲಿನ ನೆನಪಿನಿಂದಂತೂ ಈ ಕವನದ ನಿರೂಪಕಿ ನಾಯಕಿ ಎಂಬುದು ಸ್ಪಷ್ಟವಾಗಿದೆ. ಆದರೂ ಆ ಅಧ್ಯಾತ್ಮಿಕ ಕರೆಯ ಹಿನ್ನೆಲೆಯನ್ನು ತಮ್ಮದೇ ಕವನವನ್ನು ಓದುವ ಮೊದಲು ಕವಿ ಹೇಳಿದ ಮಾತುಗಳನ್ನು ಪೂರಕವಾಗಿ ತಿಳಿಯುವುದರಲ್ಲಿ ತಪ್ಪಿಲ್ಲ. ಡಿ.ಎಚ್. ಲಾರೆನ್ಸ್ ಹೇಳಿದಂತೆ 'ಕತೆಯನ್ನು ನಂಬು ಕತೆಗಾರನನ್ನಲ್ಲ' ಎಂಬ ಮಾತು ವಿಮರ್ಶೆಗೆ ದಾರಿದೀಪವಾಗಬಲ್ಲದಾದರೂ, ಕವಿ ಹೇಳುವುದೂ, ಕಾವ್ಯದಲ್ಲಿರುವುದೂ ಒಂದೇ ಆಗಿರುವಾಗ, ಸ್ಪಷ್ಟನೆಗಾಗಿ ಕವಿ ಮಾತುಗಳನ್ನು ನೆನಪಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಇಲ್ಲಿಯೂ ಗದ್ಯದ ನಡೆ ಪದ್ಯದ ಲಾಸ್ಯವಾಗುವ ವಾಕ್ಯ 'ಬೇರೆ ಕೆಲಸವಾದಾಗ ಮನಸು ತೊಡಗದೋ ನೋಡಲೇನು ಹೋಗಿ?' ಇಲ್ಲಿ 'ಹೋಗಿ ನೋಡಲೇನು?' ಎಂಬ ವಾಕ್ಯದ ಬದಲು 'ನೋಡಲೇನು ಹೋಗಿ?' ಆಗಿರುವುದು ಕೇವಲ 'ಜೋಗಿ' ಪದದ ಪ್ರಾಸಕ್ಕಾಗಿ ಮಾತ್ರವಲ್ಲ; ಭಾಷೆಯ ರಚನೆಯಲ್ಲಾಗುವ ಈ ಬದಲಾವಣೆ ನಿರೂಪಕಿಯ ಮನಸ್ಸಿನಲ್ಲಾಗುತ್ತಿರುವ ಬದಲಾವಣೆ ಹಾಗೂ ನೋಡಬೇಕೆಂಬ ಒತ್ತಡ ಸೃಷ್ಟಿಯಾಗಿರುವುದನ್ನೂ ಸೂಚಿಸುತ್ತದೆ. ಅದಲ್ಲದೆ ಈ ಒಂದು ವಾಕ್ಯದಲ್ಲಿ ಬೇಂದ್ರೆಯವರು ಪ್ಲುತದ (ಮೂರು ಮಾತ್ರಾಗಣ–ಪ್ಲುತ 's' ಉಪಯೋಗಿಸಿ ಸೂಚಿಸಿರುವುದು) ಉಪಯೋಗವೇ ಇಲ್ಲ. ಕವನದ ಈ ಸಾಲು ಸಹಜವಾಗಿ ಹಾಡಿನ ಸ್ವರಕ್ಕೆ ಹೊಂದಿಕೊಂಡಿದೆ.

'ಬಂದೆ ಜೋಗಿ ಬಾ, ಬಾರೋ ಜೋಗಿ ಬಾ, ಏನು ಹೊತ್ತು ಬಂದಿ'. ಇಲ್ಲಿ ಬಂದೆ, ಬಾ ಪದಗಳು ಗುರುವಿನ ಸನಿಹದ ಭಾವವನ್ನು ತೋರಿಸುತ್ತಿದೆ. ಒಂದು ರೀತಿಯಲ್ಲಿ ಹಿಂದೆ ಕೋಗಿಲೆಯ ಸ್ವರಾ ಕೇಳಿ ಇಡೀ ವಾತಾವರಣದಲ್ಲಿ (ತೋಪು) ಬಂತು ಸುಗ್ಗಿ ಎಂಬ ಭಾವ ಬಂದಿತ್ತು. ಈಗ ನಿರೂಪಕಿಯ ಅಂತರಂಗದೊಳಗೆ ಆ ಭಾವ ಪ್ರವೇಶಿಸಿದೆ. 'ನೀನೆ ಹೇಳಿದಾ ನಾಮ ಜಪಿಸುವಾಗ ಬಂತೊ ಸುಗ್ಗಿ ಸಂಧಿ'. ಕೋಗಿಲೆಯ ಕುಹೂ ಕೂಡಾ ಆ ನಾಮ ಜಪದ ಭಾಗವೇ ಆದಂತಹ ಭಾವ ಬಂದಿದೆ. ಹೊರಗಿನ ಪ್ರಕೃತಿಯ ಭಾವ (ಕೋಗಿಲೆಯ ಕುಹೂ) ತನ್ನೊಳಗಿನ ಭಾವ (ಜೋಗಿ ಹೇಳಿದ ನಾಮ ಜಪಿಸುವಾಗ ಉಂಟಾದ) ಸ್ಥಿತಿ, ಸಮರಸದಲ್ಲಿ ಸೇರಿದಂತಾಗಿದೆ. ಇದುವೇ ಮುಂದಿನ ಚರಣದಲ್ಲಿ 'ತಾನೆ ಮಾಮರಾ ಆಗತೇನೋ' ಎಂಬ ಭಾವಕ್ಕೆ ಕಾರಣವಾಗಿದೆ. ಈ ಹಂತದಲ್ಲಿ ಆಕೆ ಕೋಗಿಲೆಯೊಡನೆ ಹೊಂದುವ ತಾದಾತ್ಮ್ಯ ಭಾವ "ತಲೆಯ ಯಾವುದೋ ನಾಡಿಯೊಳಗೆ ಸುರುವಾತು ಸುಗ್ಗಿ ಸೊಲ್ಲು / ಮುಂದೆ ಕೇಳಿದರ ಅದs ತುಂಬಿತೋ ಮೂಲೆ ಮೂಲೆಯಲ್ಲು"

ಈ ಕೋಗಿಲೆಯ ಕುಹೂ ಮತ್ತು ಗುರು (ಜೋಗಿ) ನೀಡಿದ ಮಂತ್ರದೀಕ್ಷೆ ಒಂದೇ ಆಗುವಂತಿದೆ. ಕೋಗಿಲೆಯ ಹಾಡಿನ ಮೂಲಕ ಆಕೆ ಅಂತಹ ಅಲೌಕಿಕ ಸೆಳೆತಕ್ಕೆ ಸಿಕ್ಕಿಹಾಕಿಕೊಂಡಿದ್ದಾಳೆ. ಆದ್ದರಿಂದಲೇ :

ಗುಡಿಗೆ ನಾ ಹೊರಟಾಗ ಕರೀತsದ ಕುಹುಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀsತsದ ಓಂ ಕುಹೂ ಎಂದು
ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯsದ ಮನಕ ನೀ ಬಂದೆ ಜೋಗಿ ಏನೋ!

ಈ ಹಿಂದೆ ನಾವು ಈ ಕವನ ವೈದಿಕ ನೆಲೆಯ ಚಿಂತನೆ ಅಲ್ಲ; ಇದರಲ್ಲಿ ಜನಪದ, ನಾಥ, ಸಿದ್ಧ ಪಂಥದ ಗುರುವಿನ ಕಲ್ಪನೆ 'ಜೋಗಿ' ತಾತ್ವಿಕತೆಯಲ್ಲಿ ಅಡಗಿದೆ ಎಂಬ ಮಾತಿಗೆ ವಿರುದ್ಧವಾಗಿ 'ಓಂ ಕುಹೂ' ಕಲ್ಪನೆ ಇದೆಯಲ್ಲವೆ ಎಂಬ ಸಂಶಯ ಬರಬಹುದು. ಮಸಣದಾಚೆ ಎಡಕ್ಕೆ ತಿರುಗಿ ಸಾಗಿದಾಗ ಕೇಳಿದ ಕೋಗಿಲೆಯ ಕುಹೂ ಎಲ್ಲಾ ಕಡೆ ಅವಳೊಳಗೆ ಉಳಿದಿದೆ ಎಂಬುದು ಇಲ್ಲಿಯ ಭಾವ. ಗುಡಿಗೆ ಹೋಗುವಾಗಲೂ ಇದ್ದ ಕುಹೂ, ಜಪದ ನಡುವೆ 'ಓಂಕುಹೂ' ಆಗುವುದು. ಅಂದರೆ ಆಕೆಯ ಜಪದಲ್ಲಿದ್ದ 'ಓಂ'ನ ಒಳಗೆ ಕುಹೂ ಪ್ರವೇಶಿಸಿ 'ಓಂಕುಹೂ' ಆಗುವುದು. ಕೋಗಿಲೆಯ ಸ್ವರ ಕೇಳಿದ ಬಳಿಕ ಆಕೆಯ ಅಂತರಂಗ, ಜಪ ಎಲ್ಲಾ ಬದಲಾಗಿದೆ. ತಾನೇ ಮಾಮರಾ ಅಂತ ಭ್ರಮೆಯಾದಾಗ ಅದಕ್ಕೆ ಜೋಗಿ ಬಂದೆಯಾ ಎಂಬ ಭ್ರಮೆಯೂ ಆಕೆಗಾಗಿದೆ.

ಚಿತ್ತದ, ಮನಸ್ಸಿನ, ಹೊರಗಿನ ವಾತಾವರಣದ ಎಲ್ಲಾ ರೂಪಾಂತರಗಳು ಭ್ರಮೆಯೋ, ವಾಸ್ತವವೋ ಎಂಬುದನ್ನು ಹೇಳುವ ಸ್ಥಿತಿಯಲ್ಲಿ ಅವಳಿಲ್ಲ ಮಾತ್ರವಲ್ಲ ಆ ವ್ಯತ್ಯಾಸದ ಅಗತ್ಯವೂ ಆಕೆಗಿಲ್ಲ. ಈಗ ಆಕೆಯ ಸ್ಥಿತಿ ಬೇರೆ, ಕವನದ ಸೂಚನೆಗಳೂ ಬೇರೆಯವು:

ಯಾವ ಸ್ವರಾ? ಇದು ಯಾವ ಕೋಗಿಲಾ? ಯಾವ ಮರವೋ ಏನೊ
ಯಾಕೆ ಹೀಗೆ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೊ
ಸುತ್ತ ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇದಕ?
ಬಿಸಿಲು ಕುಣಿದು ಬೆವತsದ ಈಗ ಬಂದsದ ಮಳಿಯ ಹದಕs

ಒಂದು ವ್ಯವಸ್ಥೆಯಲ್ಲಿದ್ದ ಸ್ಥಿತಿ ಏರುಪೇರಾಗಿ ಈಗ ಒಂದು ಹದಕೆ ಬಂದಿದೆ. ಇದು ಯಾವ ಸ್ವರಾ? ಯಾವ ಕೋಗಿಲಾ? ಯಾವ ಮರ? ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಸುತ್ತ ಗುಡ್ಡ ನುಗ್ಗಾಗಿ ಹೋದವೋ ಇದರ ಕರೆಗೆ ಓಗೊಟ್ಟು ಎಂಬ ಅತಿಶಯೋಕ್ತಿಯ ಬಳಕೆ ಅಗತ್ಯವಾಗುವಷ್ಟು ಅದರ ಪ್ರಭಾವವಾಗಿದೆ. ಒಂದು ಕೋಗಿಲೆಯ ಕೂಗಿನ ಪ್ರತಿಧ್ವನಿಗೆ ವಾಸ್ತವದಲ್ಲಿ ಸುತ್ತ ಗುಡ್ಡ ನುಗ್ಗಾಗುವುದು ಸಾಧ್ಯವಿಲ್ಲ. ಆದರೆ ಹಾಗೆ ಗುಡ್ಡ ನುಗ್ಗಾಗಿರುವಂತಹ ಭಾವ ಕವನದ ನಾಯಕಿಯ ಮನಸ್ಸಲ್ಲಿ ಉಂಟಾಗುವಷ್ಟು ಗಹನವಾದ ಪ್ರಭಾವವನ್ನು ಅದು ಬೀರಿದೆ. ಆ ಗುಡ್ಡಗಳ ಜೊತೆ ನಿಂತು ಕೋಗಿಲೆಯ ಕರೆಗೆ ಮನಸ್ಸಲ್ಲಿ ಪ್ರತಿಧ್ವನಿ ನೀಡಿದ ಆಕೆಗೆ ಅಂತಹ ಭಾವ ಉಂಟಾಗುವುದು ಸಹಜವಾಗಿದೆ. ಆದರೆ ಬಿಸಿಲು ಕುಣಿದು (ತಲಿ ಕಾವಿನೊಳಗ

ಇಮ್ಮಾವಿನೊಳಗ ಬಿಸಿಗಾಲ ನೂಗತsದೋ) ಬೆವತsದ – ಈ ಮಳಿಯ ಹದಕ ಬಂದದ. ಮಳೆಯಿಂದ ಹೊಸ ಸೃಷ್ಟಿ ಸೂಚನೆ ಸ್ಪಷ್ಟವಾಗಿದೆ. ಬಿಗಿದ ವಾತಾವರಣವನ್ನು ಮಳೆ ತಣಿಸಿದೆ.

ಈ ಕವನ ಬೇಂದ್ರೆಯವರ ದೃಷ್ಟಿಯಲ್ಲಿ ಅಪೂರ್ಣವಾದ ಕವನ ಎಂದು ಜೀವಿ ಕುಲಕರ್ಣಿಯವರು ತಮ್ಮ 'ಜೋಗಿ–ಕುರಿತು' ಲೇಖನದಲ್ಲಿ ಸೂಚಿಸಿದ್ದಾರೆ. ಜೋಗಿ ಕವನದ ಇಷ್ಟು ಭಾಗ ಬರೆಯುವಷ್ಟರಲ್ಲಿ ಕವಿಗಳ ಆಪ್ತ ಸಂಬಂಧಿಕರಾದ ಲಕ್ಷ್ಮಣರಾವ್ ಬೇಂದ್ರೆ ಅವರ ಮನೆಗೆ ಆಗಮಿಸಿದರಂತೆ. ಜೀವಿ ಕುಲಕರ್ಣಿಯವರು ಕವಿಗಳಲ್ಲಿ ಒಮ್ಮೆ ನೀವು ಯಾಕೆ ಈ ಕವನ ಪೂರ್ತಿ ಮೂಡಲಿಲ್ಲ ಎಂದು ಕೇಳಿದಾಗ ಬೇಂದ್ರೆಯವರು ಹೇಳಿದರಂತೆ : ನನ್ನ ಕಾವ್ಯ ವಾಚನ ಕೇಳಿ ಬೇಂದ್ರೆ ಲಕ್ಷ್ಮಣರಾಯರು ಮುಖ ಒಂದು ನಮೂನಿ ಮಾಡಿದ್ರು, ಹರಳೆಣ್ಣೆ ಕುಡಿಧಾಂಗ, ನಾ ಮತ್ತ ಕವಿತಾ ಮುಂದೆ ಬರೀಲೇ ಇಲ್ಲ. ಇದನ್ನು ಪ್ರಕಟ ಮಾಡಬಾರದಂತ ಮಾಡಿದ್ದೆ, ಆದ್ರ ಹೋಗ್ಲಿ ಬಿಡು, ಒಂದ ಹಂತಕ್ಕೆ ಬಂದsದ್ದಲ್ಲ ಅಷ್ಟೇ ಸಾಕು ಅಂತ 'ಗಂಗಾವತರಣ' ಸಂಗ್ರಹದಾಗ ಹಾಕಿಬಿಟ್ಟೆ ಎಂದರಂತೆ. (ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ. ಜೀವಿ ಕುಲಕರ್ಣಿ. ಹರ್ಷವರ್ಧನ ಪ್ರಕಾಶನ, ಮುಂಬಯಿ.)

ಈ ಕವನದ ಬಗ್ಗೆ ಮುಲ್ಕಿಯ ವಿಜಯಾ ಕಾಲೇಜಿನ ಭಾಷಣದಲ್ಲಿ ಕವಿ ದ.ರಾ.ಬೇಂದ್ರೆಯವರು ಜೋಗಿ ಕವನ ಓದುವ ಮೊದಲು ಹೇಳಿದ ಇನ್ನೂ ಕೆಲವು ಮಾತುಗಳನ್ನು ಈಗ ಗಮನಿಸಬೇಕು :

"ನಮ್ಮ ಊರಿನ ಹೊರಗಿನ 'ಸೋಮೇಶ್ವರ' ಎಂಬ ಸ್ಥಳದ ಪ್ರಕೃತಿಯ ಭಯಾನಕ ರಮ್ಯತೆಯನ್ನು ನೆನೆಸಿಕೊಂಡು, ಜೀವನದಲ್ಲೂ ಬರುವಂಥ ಇಂಥ ಒಂದು ರಮ್ಯ ಭಯಾನಕ ಸ್ಥಿತಿಯನ್ನು ಈ ಪದ್ಯ ಹೇಳುತ್ತದೆ. ಯಾರೋ ಒಂದು ಮಂತ್ರ ಕೊಡುತ್ತಾರೆ. ಅದರ ಫಲ ಏನೋ ಅದ್ಭುತ ಬರುತ್ತದೆ. ಆ ಕಾಲಕ್ಕೆ ಅದರ ಬೆಲೆ ಕಟ್ಟುವುದಕ್ಕಾಗುವುದಿಲ್ಲ. ಅಂಥ ಬೆಲೆ ಕಟ್ಟಲಾಗದ ಕಾಲಕ್ಕೆ, ಮತ್ತೆ ಒಂದು ವಿಷಮ ಕಾಲ ಬರುತ್ತದೆ. ಹೇಗೆ ನಿಮಗೆ ಮಂತ್ರಕೊಡುವ ಗುರು ಬರುತ್ತಾನೋ, ಹಾಗೆ ವಿಷಮ ಕಾಲದಿಂದ ದಾಟಿಸುವ ಗುರುವೂ ಬರುತ್ತಾನೆ. ಇದೇ ಮಹತ್ವದ ಮಾತು. 'ದಾಟಿಸು ಗುರುವೇ ದಾಟಿಸು, ದಾಟಿಸು,' ಎಂಬ ಮಾತು ಬಂದಾಗ 'ಹಾಂ! ನಿನಗೆ ದಾಟುವುದು ಅಗತ್ಯವಿದೆ ತಾನೆ?' ಹಿಂದಿನದನ್ನು ಬಿಟ್ಟಿರುವಿ ತಾನೆ? ಮುಂದಿನದಕ್ಕೆ ಹೋಗಬೇಕಾಗಿದೆ ತಾನೆ?' ಎಂದು ಹೇಳುವ ಗುರುಕಾರುಣ್ಯ ದಾಟಿಸುತ್ತದೆ. ಹೇಗೆ ನೀರಿನಲ್ಲಿ ಬಿದ್ದ ಒಂದು ಇರುವೆಗೆ, ಬಿದ್ದ ಒಂದು ಕಡ್ಡಿ ಆಧಾರವಾಗಿ, ಅದನ್ನು ಹಿಡಿದುಕೊಂಡು ಹೋಗುತ್ತದೋ, ಹಾಗೆ

ಗುರುಕಾರುಣ್ಯ ಬರುತ್ತದೆ ಎಂದು ಹೇಳುವಂಥ ಮಾತಿನ ಪದ್ಯ ಇದು" (ಮಾತೆಲ್ಲ ಜ್ಯೋತಿ–ದ.ರಾ. ಬೇಂದ್ರೆ ಅವರ ಹತ್ತು ಉಪನ್ಯಾಸಗಳು. ಎಕಾಡೆಮಿ ಆಫ್ ಜನರಲ್ ಎಡ್ಯುಕೇಶನ್, ಮಣಿಪಾಲ ಪ್ರಕಟಣೆ).

ಎಚ್.ಎಸ್. ರಾಘವೇಂದ್ರರಾವ್ ತಮ್ಮ 'ಬೇಂದ್ರೆಯವರ ಜೋಗಿ : ಒಂದು ವಿಶ್ಲೇಷಣೆ' ಎಂಬ ಲೇಖನದಲ್ಲಿ 'ಜೋಗಿ' ಪರತತ್ವದ ಅನ್ವೇಷಣೆಯಲ್ಲಿರುವ ಸಾಧಕನು, ತನ್ನ ಸಾಧನೆಯ ಒಂದು ಹಂತದಲ್ಲಿ ಅನುಭವಿಸಿರುವ ಮಾನಸಿಕ ತುಮುಲದ ಪ್ರತಿಮಾನಿಷ್ಠ ಚಿತ್ರಣ ಎನ್ನುತ್ತಾರೆ. ಈ ಕವನದ ಪ್ರಾರಂಭದ 'ಮೂರು ಬಟ್ಟೆ'ಯ ಸೂಚನೆಯಲ್ಲಿ ಮೂರರ ಹಲವು ನೆಲೆಗಳನ್ನು ಅವರು ವಿವರಿಸುತ್ತಾರೆ. ಉದಾ : ಕವನದೊಳಗಿನ ಮೂರು ಕಾಡುಗಳನ್ನು i) ಊರಾಚೆಗಿರುವ ಗೂಬೆಗಳಿರುವ ಕಾಡು ii) ಹುಣಸೆಮರದ ಮೇಲಿಂದ ಕಾಣುವ 'ಹತ್ತಗಿಡ'ದ 'ತೋಪು' iii) ಕೋಗಿಲೆಯ ಹಾಡಿನ ಲಯಕ್ಕೆ ಹೂವಾಗಿ, ಗೊಂಚಲಾಗಿ, ಹಣ್ಣಾಗುವ ತೋಟ (ಎಂಟನೆಯ ಚರಣ)ಗಳನ್ನು ಗುರುತಿಸುತ್ತಾರೆ. ಹಾಗೆಯೇ ತ್ರಿಗುಣ (ಸತ್ವ, ರಜ, ತಮುಸ್ಸು) ತ್ರಿಕರಣ (ಮನೋವಾಕ್ಕಾಯ)ಗಳ ಸಾಂಕೇತಿಕತೆಯನ್ನು ಗುರುತಿಸಿದ ವಿಮರ್ಶೆಗಳೂ ಇವೆ. ಮೊದಲ ಚರಣದ ಕೊನೆಯಲ್ಲಿಯೇ ಕವನ ಇಂದ್ರಿಯಗ್ರಾಹ್ಯವೂ, ಚಿಂತನಗ್ರಾಹ್ಯವೂ ಅಲ್ಲದ ಲೌಕಿಕ ನಿಯಮಗಳ ವಿವರಣೆಗೆ ಒಳಪಡದ 'ಅನುಭಾವ' (ಅಲೌಕಿಕ ಅನುಭವಗಳ) ಸೀಮೆಗೆ ಪ್ರವೇಶ ಪಡೆಯುತ್ತದೆ. ಮೊದಲ ಚರಣದ ಕೊನೆಯ ಹಂತದಲ್ಲಿ ಕವನ ಅದರ ವಾಚ್ಯಾರ್ಥವನ್ನು ಮೀರಿ ತನ್ನಿಂದ ತಾನೆ ವಿಶೇಷ ಅರ್ಥಗಳನ್ನು ಧ್ವನಿಸತೊಡಗುತ್ತದೆ.

ಎಚ್.ಎಸ್. ರಾಘವೇಂದ್ರರಾವ್ ಮುಂದುವರಿದು ಕವನದೊಳಗೆ ಸಂಘರ್ಷಿಸುವ ಮೂರು ಅಂಶಗಳಿಗೆ ((i) ಗುರು ಉಪದೇಶ– ಆದರೆ ಸ್ವಂತ ಅನುಭವದಿಂದ ಪರೀಕ್ಷಿಸದ ಜ್ಞಾನ (ii) ತತ್ವಗಳ ನೆರವಿಲ್ಲದ 'ಇರುವಿಕೆಯ' ಅರಿವು– ಒಂದು ರೀತಿಯ–ಅಸ್ತಿತ್ವ (iii) ಇವೆರಡನ್ನೂ ಬಿಟ್ಟು ತನ್ನ ಅನುಭವದಿಂದ ತಾನು ಪಡೆವ ತೀರ್ಮಾನ) ಸಾಧಕನು ಮುಖಾಮುಖಿಯಾಗುವ, ಅವುಗಳಿಗೆ ಪ್ರತಿಕ್ರಿಯೆ ತೋರುವ ಮತ್ತು ಕೊನೆಗೆ ಅವನು ತಲುಪುವ ತೀರ್ಮಾನ ಈ ಕವನದ ವಸ್ತು ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಕವನದೊಳಗಿರುವ ಸಾಧಕನನ್ನು ಭಯಾಕುಲಿತನಾಗಿಸಿದ ವಿಷಯವನ್ನು, ಅದೇ ಲೇಖನದಲ್ಲಿ ಎಚ್.ಎಸ್. ರಾಘವೇಂದ್ರರಾಯರು ಹೀಗೆ ಸೂಚಿಸುತ್ತಾರೆ :

"ದೇವರನ್ನು ಹುಡುಕಹೋಗುವ ಯಾವುದೇ ಸಾಧಕನು, ಮೊದಲ ಹಂತದಲ್ಲಿ ಒಂದು ವಿಧವಾದ ಜೀವನ ವಿರಕ್ತಿ ಮತ್ತು ಜೀವನ ದ್ವೇಷಗಳನ್ನು ತೋರಿಸುತ್ತಾನೆ. ಎಂದರೆ, ಜೀವನದ ಬಗ್ಗೆ ಕಟುವಾದ ನಿರಾಸಕ್ತಿಯನ್ನು ತೋರಿಸಿ ಅದನ್ನು ತಿರಸ್ಕರಿಸುತ್ತಾನೆ.

ಆದರೆ ಅದೇ ಸಾಧಕನು ಚರಮ ಹಂತವನ್ನು ತಲುಪಿ ಸಿದ್ಧನಾದ ಮೇಲೆ, ಹಿಂದಿನ ಜೀವನ ತಿರಸ್ಕಾರಕ್ಕೆ ತೀರಾ ವಿರುದ್ಧವಾದ ಜೀವನ ಪ್ರೀತಿಯನ್ನು ತೋರಿಸುತ್ತಾನೆ. ಆದರೆ ಇಲ್ಲಿ ಮೊದಲಿನ ಭಾವುಕ ಅಂಟು (Sentimental Attachment – ಸೆಂಟಿಮೆಂಟಲ್ ಎಟಾಚ್‌ಮೆಂಟ್) ಇರುವುದಿಲ್ಲ. ಆದರೆ ಅದೇ ಸಿದ್ಧನು ತನ್ನ ಬಳಿ ಬರುವ ಸಾಧಕರಿಗೆ ಮತ್ತೆ ಜೀವನ ವಿರಕ್ತಿ ಮತ್ತು ಕಟುನಿಯಮಗಳನ್ನು ಬೋಧಿಸುತ್ತಾನೆಯೇ ವಿನಾ ಜೀವನದ ಪ್ರೀತಿಯನ್ನಲ್ಲ. ಹೀಗೆ ಜೀವನವನ್ನು ನಿಷ್ಕಾಮದಿಂದ ಪ್ರೀತಿಸುವುದನ್ನು ಕಲಿಯುವ ದಾರಿ ಕೂಡ, ಜೀವನ ತ್ಯಾಗ ಮತ್ತು ವಿರಕ್ತಿಗಳ ಮೂಲಕವೇ ಹೋಗಬೇಕಾಗಿರುವುದು, ಅಧ್ಯಾತ್ಮಿಕ ಸಾಧನೆಯಲ್ಲಿ ಬಹಳ ಮಹತ್ವಪೂರ್ಣವಾದ ಸೋಜಿಗದ ಸಂಗತಿ" ('ವಿಶ್ಲೇಷಣೆ–ವಿಮರ್ಶಾ ಲೇಖನಗಳ ಸಂಗ್ರಹ–ಕನ್ನಡ ಸಂಘ, ಕ್ರೈಸ್ಟ್ ಕಾಲೇಜು ಪ್ರಕಟಣೆ–೧೯೮೧)

ಭಯಾಕುಲಿತ ಮನಸ್ಥಿತಿ, ರಹಸ್ಯಮಯತೆ ಹಾಗೂ ಬದುಕಿನ ಸೋಜಿಗಗಳು ಒಟ್ಟಿಗೆ ಸೇರಿ– ಸ್ವ ಅನುಭವದ ಮೂಲಕ ಅಲೌಕಿಕವಾದೊಂದು ರಹಸ್ಯಮಯ ಅನುಭವದಿಂದ ಭವಲೋಕ ಹಾಗೂ ಅನುಭಾವ ಲೋಕವನ್ನು ಅರಿಯುವ ವಿಶಿಷ್ಟವಾದೊಂದು ನೆಲೆ ಈ ಕವನದಲ್ಲಿದೆ. ಯಾವುದೇ ಕವನದಲ್ಲಾಗಲಿ ಓದಿಗೆ ಮೊದಲು ದಕ್ಕುವುದು ಅದರ ವಾಚ್ಯಾರ್ಥವೆ. ಅಂತಹ ವಾಚ್ಯಾರ್ಥವನ್ನು ತಿಳಿಯುತ್ತಾ ಹೋದಂತೆ ಶ್ರೇಷ್ಠವಾದ ಕಾವ್ಯ, ಇಷ್ಟೇ ಅಲ್ಲ ಇನ್ನೂ ನೋಡು ಎಂದು ಧ್ವನ್ಯಾರ್ಥಗಳನ್ನು ಸೂಚಿಸುತ್ತಾ ಹೋಗುತ್ತವೆ. ಕಾವ್ಯಾಲಂಕಾರಗಳು, ಅದರಲ್ಲೂ ಮುಖ್ಯವಾಗಿ ಶ್ರೇಷ್ಠ ರೂಪಕಗಳು, ಉಪಮೇಯ ಮತ್ತು ಉಪಮಾನಗಳ ವಾಸ್ತವ ಭೇದವನ್ನು ತೆಗೆದು ಹಾಕುತ್ತವೆ. ಕವಿಯ ಪ್ರತಿಭೆ ದೊಡ್ಡದಾದಷ್ಟೂ ಅದರ ಸ್ವಾತಂತ್ರ್ಯವೂ ಅದರಿಂದಾಗಿ ಕಾವ್ಯಕ್ಕೆ ಉಂಟಾಗುವ ಪ್ರಯೋಜನವೂ ಹೆಚ್ಚಾಗುತ್ತದೆ. ಇದನ್ನು 'ಜೋಗಿ' ಕವನವನ್ನು, ಮುಖ್ಯವಾಗಿ ಇಲ್ಲಿನ, ಕೋಗಿಲೆಯನ್ನು 'ಗರಿ' ಸಂಕಲನದ 'ಕೋಗಿಲೆ' ಕವನದ ಜೊತೆ ಹೋಲಿಸಿಕೊಂಡರೆ, ಪ್ರತಿಭಾ ವಿಲಾಸದ ಅನನ್ಯತೆಯು, ಕವಿಯ ಗ್ರಹಿಕೆಯ ಇಪ್ಪತ್ತು ವರುಷಗಳ ಅಂತರದಲ್ಲಿ ಪಡೆದ ಸಂಕೀರ್ಣ ಸ್ವರೂಪದ ಬೆಳವಣಿಗೆಯೂ ಸ್ಪಷ್ಟವಾಗುತ್ತದೆ.

ತನುವೆಂಬ ವನದಲ್ಲಿ ಮನದ ಮಾಮರದಲ್ಲಿ
ಕೊನರೆಲೆಯಲಿ ಕುಳಿತು ಕೋಗಿಲೇ!
ದಿನವಿಲ್ಲ ನಿಶೆಯಿಲ್ಲ ದನಿಗೈಯುತಿರುವಿ ನೀ–
ನಾವ ಬಸಂತನ ಕೋಗಿಲೇ? (ಕೋಗಿಲೆ– 'ಗರಿ' ಸಂಕಲನ)

'ಜೋಗಿ'ಯ ಕೋಗಿಲೆಗೆ ಕೀರ್ತಿನಾಥ ಕುರ್ತಕೋಟಿಯವರು ಹೇಳುವಂತೆ ಹಾಡಿನಲ್ಲಿ ಏಕತಾನತೆ ಇದೆ. ಆದರೆ ಅದರ ಕಂಪು ತುಂಬಿಗಳ ದಿಕ್ಕು ತಪ್ಪಿಸಬಲ್ಲದು.

ಅದರ ಹಾಡಿನ ಲಯದಿಂದ ಹೂವು ಪಟಪಟನೆ ಒಡೆದು, ಕಾಯಾಗಿ ಪಾಡಾಗಿ, ಹಣ್ಣಾಗುತ್ತದೆ. ಕೋಗಿಲೆಯ ದನಿ ಅಂತಹ ಹೊಸ ಸೃಷ್ಟಿಗೆ ಕಾರಣವಾಗಬಲ್ಲದು. ಈ ನೂತನ ಸೃಷ್ಟಿ ಆಕರ್ಷಕವಾಗಿದ್ದರೂ ಭಯಾನಕವೂ ಆಗಿದೆ. ಇದರಿಂದ ಸಾಮಾನ್ಯ ಜೀವನದ ನಾಯಕಿಯ ಬದುಕಿನ ಲಯವೂ ತಪ್ಪಿದೆ. (ಗುಡಿಗೆ ನಾ ಹೊರಟಾಗ...) ಹಾಗಾಗಿ ಗೊಂದಲವುಂಟಾಗಿದೆ. ಕುರ್ತಕೋಟಿಯವರು ಸ್ಪಷ್ಟವಾಗಿ ಸೂಚಿಸುವಂತೆ ಇದು ನಿಜವಾದ ವಾಸ್ತವವೇ ಅಥವಾ ಕಾಲ್ಪನಿಕವೇ ಎಂಬುದೂ ಗೊತ್ತಾಗುವುದಿಲ್ಲ. ವಿವರಣೆಗಳನ್ನಷ್ಟೇ ಲಕ್ಷಿಸಿದರೆ ಇದು ವಾಸ್ತವ–ವರ್ಣನೆ. ಆದರೆ ಅದನ್ನು ವಿವರಿಸುವ ಹೆಣ್ಣು ಮಗಳ ದೃಷ್ಟಿಯಿಂದ ನೋಡಿದಾಗ ಈ ಕಾಡು ಅವಳ ಪ್ರಜ್ಞೆಯ, ಕಲ್ಪನೆಯ ಸೃಷ್ಟಿ ಇರಬಹುದೆಂದು ಎನಿಸುತ್ತದೆ. ಸ್ವರ, ಕೋಗಿಲೆ, ಮರ ಎಲ್ಲವೂ ಒಂದಾಗಿ ಅದರೊಳಗೆ ನಾಯಕಿಯೂ ಸೇರಿ– ಕವನದ ಕೊನೆಯಲ್ಲಿರುವ ಮಳೆಯ ಹದ ಹೊಸ ಸೃಷ್ಟಿಯ ಸೂಚನೆಯಾಗಿದೆ. (ಮಳಿಯ) 'ಹದಕಽ' ಎಂಬ ಪದ ಇಲ್ಲಿ ವಿಶೇಷವಾಗಿದೆ. ಪ್ರಕೃತಿಯಲ್ಲಿ ಮಳೆ ಅತಿವೃಷ್ಟಿ, ಅನಾವೃಷ್ಟಿ –ಎರಡು ರೀತಿಗಳಲ್ಲೂ ನಾಶಕಾರಕವಾಗಬಲ್ಲದು. ಇಲ್ಲಿನ ಮಳೆ ಹದವಾಗಿದೆ. ಆ ಮೂಲಕ ಸೃಷ್ಟಿಕ್ರಿಯೆಗೆ ಪೂರಕವಾಗಿದೆ. ಸಾಂಕೇತಿಕವಾಗಿ ಸೃಜನಶೀಲವಾಗಿದೆ. ಸಾಂಕೇತಿಕವಾಗಿ ಹೊಸತು ಬೆಳೆಯಲು ಮರುಹುಟ್ಟು ಪಡೆಯಲು ಅನುಕೂಲ (ಹದ)ದ ವಾತಾವರಣವನ್ನು ನಿರ್ಮಿಸಿದೆ.

ಕುರ್ತಕೋಟಿಯವರು ಈ ಕವನದ ಪ್ರಬಂಧ ಧ್ವನಿ ಕುರಿತಾಗಿ ನೂತನವಾದೊಂದು ವಿಚಾರವನ್ನೂ ಸೂಚಿಸುತ್ತಾರೆ. ಸ್ವಂತ ವ್ಯಕ್ತಿತ್ವವನ್ನು ಇನ್ನೊಬ್ಬರದೆಂಬಂತೆ ನೋಡುವುದು, ಬೇರೆಯವರ ವ್ಯಕ್ತಿತ್ವದಲ್ಲಿ ಸಹಾನುಭೂತಿಯಿಂದ ತನ್ಮಯಗೊಳ್ಳುವ ಪ್ರಜ್ಞೆಯೆ ನಾಟಕದ ಮೂಲದಲ್ಲಿರುವುದು. ಬೇಂದ್ರೆಯವರು ತಮ್ಮ ಅನುಭಾವದ ಅನುಭವಗಳನ್ನು ಇದೇ ಬೆಳಕಿನಲ್ಲಿ ಪರೀಕ್ಷಿಸಿಕೊಳ್ಳುತ್ತಾರೆ. ಒಮ್ಮೊಮ್ಮೆ ಕಣ್ಣಿಗೆ ಕಾಣುವುದು ಅದೃಷ್ಟವನ್ನು ತಡೆಯಬಹುದು. ಅದರಂತೆ ಅದೃಷ್ಟವೂ ಒಮ್ಮೊಮ್ಮೆ ದಾರಿ ತಪ್ಪಿಸಬಹುದು. 'ಜೋಗಿ' ಕವನ ಇಂತಹ ಒಂದು ಸಂದಿಗ್ಧವನ್ನು ಕಾಣಿಸುತ್ತದೆ. ಇದರೊಳಗಿರುವ ನಾಟ್ಯಪ್ರಜ್ಞೆ ಕವಿಗೆ ಸರಿಯಾದ ಮಾರ್ಗದರ್ಶನ ಮಾಡುತ್ತದೆ. ಹಾಗಾಗಿ ಕೀರ್ತಿನಾಥ ಕುರ್ತಕೋಟಿಯವರು ಹೇಳುವಂತೆ "ವಾಸ್ತವಾನುಭಾವ ಮತ್ತು ರೂಪಕಾನುಭವಗಳು ಯಾವ ಮಟ್ಟಗಳಲ್ಲಿ ಸತ್ಯವಾಗುತ್ತವೆ ಎಂಬುದನ್ನು (ಕವನ) ತೋರಿಸಿಕೊಡುತ್ತದೆ" (ಬಾರೋ ಸಾಧನ ಕೇರಿಗೆ – ಕೀರ್ತಿನಾಥ ಕುರ್ತಕೋಟಿ–ಮನೋಹರ ಗ್ರಂಥಮಾಲಾ ಪ್ರಕಟಣೆ–೧೯೯೩)

ಚೈತ್ಯಾಲಯ ಸಂಕಲನದ ಎಲ್ಲಾ ಕವನಗಳೂ ಶ್ರೀ ಅರವಿಂದರ ಕವನಗಳ ಭಾವಾನುವಾದಗಳು. 'ಶಿವನುಂಡ ನಂಜು ತಿಳಿಗೊಂಡ ಮಂಜು' ಎಂದು ಪ್ರಾರಂಭವಾಗುವ ಚೈತ್ಯಾಲಯ ಕವನದ ಭಾವವನ್ನು 'ಜೋಗಿ' ಕವನದ ಜೊತೆ ಅಧ್ಯಯನ ಮಾಡಿದಾಗ, ಜೋಗಿಯ ಕೆಲವು ಸಾಲುಗಳು ಹೆಚ್ಚಿನ ಸ್ಪಷ್ಟತೆಯನ್ನು ಪಡೆಯಬಹುದು.

ಬಾರೊ ಇಲ್ಲಿ ಬೈರಾಗಿ ಬಾರೊ, ಬಾ
ಇಲ್ಲಿದೆ ತಂಗುವ ಸ್ಥಲಾ
ತಣಿಪನರಿಯದೇ ದಣಿದು ಹೋದೆ, ಬಾ
ಇಲ್ಲಿದೆ ಇಂಗದ ಜಲಾ–
ಏಕೆ ರೋಸಿ, ಭಯಗೊಂಡು ಹೇಸಿ, ನೀ
ಆಕ್ರೋಶಿಸುತಿಹೆ ಎಲಾ!

ಜೋಗಿ ಕವನದ 'ಬಂದೆ ಜೋಗಿ ಬಾ, ಬಾರೋ ಜೋಗಿ ಬಾ, ಏನು ಹೊತ್ತು ಬಂದಿ' ಎಂಬಲ್ಲಿ 'ಬಂದೆ' ಎಂಬ ಕ್ರಿಯಾಪದ ಕವನದ ನಿರೂಪಕಿಗೂ ಅನ್ವಯವಾಗುತ್ತದೆ. ಚೈತ್ಯಾಲಯದಲ್ಲಿ 'ಕುರುಡು ಬಯಲಿಗಿಗೊ ಕಣ್ಣು ಬರೆವ ಕೈ– / ವಾಡ ಚಿಗುರ್ತಿಂದು' ಎಂಬ ಮಾತಿದೆ. ಈ ನಾಯಕಿಯ ಮನಸ್ಥಿತಿಯ ಇನ್ನೊಂದು ಮುಖ ಚೈತ್ಯಾಲಯದಲ್ಲೂ ಕಾಣಬಹುದು. ಇದಲ್ಲದೆ 'ಚೈತ್ಯಾಲಯ' ಸಂಕಲನದಲ್ಲಿ ಶ್ರೀ ಅರವಿಂದರ ಡ್ರೀಮ್ ಬೋಟ್ (Dream Boat) ಎಂಬ ಕವನವನ್ನು 'ಸ್ವಪ್ನ ನೌಕೆ' ಎಂದು ಅನುವಾದಿಸಿದ್ದಾರೆ. ಅದರಲ್ಲಿರುವ ಮೌನಾ ಕರಗಿಸಿ ಎರೆದಾ, ಸೆಳೆಮಿಂಚಿನ ತೆರೆದಾ, / ಸವಿ ನುಡಿ ಛಂದಾ– / ಆ ಹೃದಯ ಜ್ವಾಲಾ ಮಾಲಾಽಲಂಕೃತಾ ಯಜ್ಞಸಿದ್ದವೇನೇ? / ಕಂಕಣ ಬದ್ಧವೇನೇ? / ಬಂದೆನೇ! ಬರುವಿಯೇನೇ? – ಎಂದಾ ಎಂಬ ಸಾಲುಗಳೂ 'ಜೋಗಿ' ಕವನದ ನಾಯಕಿಯ ಮನಸ್ಸಿನ ಒಳತೋಟಿಯನ್ನು ಅರಿಯಲು ಸಹಾಯಕ. ಇಲ್ಲಿ ದೇವ ಪತಿ, ಭಕ್ತ ಸತಿ ಎಂಬ ಸತಿ–ಪತಿ ಭಾವಸೂಚನೆ ಇದೆ. ಜೋಗಿಯಲ್ಲಿ ಗುರು – ಶಿಷ್ಯ ಸಂಬಂಧ. ಬೇಂದ್ರೆಯವರು ಪಂಚೇಂದ್ರಿಯಗಳಲ್ಲದೆ ಮನಸ್ಸು ಆರನೆಯ ಇಂದ್ರಿಯ ಎಂದು ತಿಳಿದಿದ್ದರು. ತನ್ಮಯತೆ ಇಂದ್ರಿಯಾನುಭವ ಸೃಷ್ಟಿಯ ಮುಖ್ಯ ಕಾರಣ. ಆದರೆ, ಮನಸ್ಸು ಪ್ರತ್ಯಕ್ಷ ಜ್ಞಾನ ಹಾಗೂ ಬಾಹ್ಯಾನುಭವ ಸಾಧನಗಳಾದ ಪಂಚೇಂದ್ರಿಯಗಳ ಸಹಾಯವಿಲ್ಲದೆಯೂ ನೇರವಾಗಿ ಅನುಭವ ಪಡೆಯಬಲ್ಲದು ಎಂಬ ವಿಶ್ವಾಸವಿದ್ದ ಬೇಂದ್ರೆಯವರು ಅಂತಹ ಅಪರೋಕ್ಷ ಜ್ಞಾನವು ಆತ್ಮಜ್ಞಾನವಾಗಬಲ್ಲದು ಎಂಬ ವಿಶ್ವಾಸ ಹೊಂದಿದ್ದರು. ಆ ತತ್ವಕ್ಕೆ ಪೂರಕವಾದ ಅನೇಕ ಕವನಗಳು 'ಚೈತ್ಯಾಲಯ' ಸಂಗ್ರಹದಲ್ಲಿದೆ. ಅದರ ಅರಿವು ಅರ್ಥಗರ್ಭಿತ 'ಜೋಗಿ' ಕವನದ ಲೋಕವನ್ನು ಅರಿಯಲು ಹೆಚ್ಚಿನ ಒಳನೋಟಗಳನ್ನು ನೀಡಬಲ್ಲದು.

ಟಿಪ್ಪಣಿ

ಜೋಗಿ

ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರ ಕಕ್ಕಾವಿಕ್ಕಿಯಾಗಿ
ಇರುಳು ಅಂತನ ಹಗಲ ಗೊಕತಾವ ಅಲ್ಲಿ ಜೋಡಗೂಡಿ.

ಅದನ ದಾಟಿ ಆ ಮಸಣವಾಟಿ, ಎಡಕಾಗಿ ಅದರ ಆಚಿ
ಕಾಮ ತನ್ನ ಹಚ್ಚಂಗಿ ಹಾಸಿಧಾಂಗೆಲ್ಲಿ ನೀರ ಪಾಚಿ
ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೊ ಕಂಡ ಕಣ್ಣುಗಳಿಗೆ.
ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗ ಬಳಿಗೆ.

ಅದರ ಮುಂದ ಗವಿಗುಡ್ಡ ಅಡ್ಡ ಬರತದ ನಮ್ಮ ಬಲಕ
ಅತ್ತತ್ತ ಹರುಹಿ ಹತ್ತೊತ್ತಿ ಬಂದ ಕಾಳಮ್ಮಗಿರುವ ಹೊಲಕ
ಆ ಹೊಲದ ನಟ್ಟನಡುವಿರುವ ಹುಣಿಸಿಮರ ಏರಿ ನೋಡಿದಾಗ
ಹತ್ತ ಗಿಡದ ಗುಂಪೊಂದು ಕಾಣತದ ಸಣ್ಣ ಏರಿಮ್ಯಾಗ.

ಅಲ್ಲಿ ತೊಗಲಬಾವಲೀ ಚೀರತಾವ ಭರತಿ ಹಗಲಿನೊಳಗ
ಹಿಂಡು ಪಾರಿವಾಳ ಹೊಕ್ಕ ಹೊರಡತಾವ ಮತ್ತ ಒಳಗ ಹೊರಗ.
ಅಲ್ಲಿ ಹಬ್ಬಿ ಹರುಹ್ಯದ ಬೇವಿಗೇ ಸುತ್ತ ಅಮೃತಬಳ್ಳಿ
ಹಾಲ ಸುರವತಾವ ಆಲ ಅಲ್ಲಿ ಅಲ್ಲಾಡತಾವ ಅಳ್ಳಿ.

ಅತ್ತಿಗಿಡಕ ಹತ್ಯಾವ ಹಲಸಿನ್ಹಂಗ ಬುಡಕು ಕೆಂಪು ಹಣ್ಣು
ಜೇನು ತುಂಬಿ ತೊಟಗುಟ್ಟತಾವ ಅದ ಬಯಸತಾವ ಕಣ್ಣು.
ಈ ತೋಪಿನ್ಯಾಗ ಬೆಳದದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು.
ಅದರಡಿಗೆ ಹುತ್ತ ಅದರಾಗ ಐತೆ ಒಂದೇಳ ಹೆಡೆಯ ಹಾವು.

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರಿತದ ನನ್ನ ಬಾರ ಅಂದು
ಕೂಗೇ ಕೂಗತದ ಕೂಗೇ ಗೂಗತದ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತದ ಬ್ಯಾಸರಿಲ್ಲಧಾಂಗ.

ತಿಳಿಯದ್ಯಾವದೋ ಕಂಪು ಎಳೀತsದ ತುಂಬಿ ಹುಚ್ಚು ಆಗಿ
ಎಚ್ಚರಿಲ್ಲದs ಎತ್ತೊ ತಿರಗತಾವ ದಿಕ್ಕು ತೋರದಾಗಿ.
ಬಂತು ಸುಗ್ಗಿ ಬಂದ?ದ ಸುಗ್ಗಿ ಬರತ?ದ ಸುಗ್ಗಿ ಎಂದು
ಕುಹೂ ಅನ್ನತದ ಕುಹೂ ಅನ್ನತದ ಕುಹೂಕ್ಕುಹೂ ಅಂದು.

ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ.

ಮುಂಜಾವತೊಟ್ಟು ಇರು ಹಂಗು ಬಿಟ್ಟು ಬರಿ ಹಾಂಗ ಕೂಗತsದೋ
ತಲಿ ಕಾವಿನೊಳಗ ಇಮ್ಮಾವಿನೊಳಗ ಬಿಸಿಗಾಲ ನೂಗತsದೋ
ಕೊಳಲ ನುಡಿಸಿಧಾಂಗ ಕುಹೂಹುಹೂಹೂ ಉಲಿತsದೊ ಜೋಗಿ
ಬೇರೆ ಕೆಲಸದಾಗ ಮನಸು ತೊಡಗದೋ ನೋಡಲೇನು ಹೋಗಿ?

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮ ಜಪಿಸುವಾಗ ಬಂತೋ ಸುಗ್ಗಿ ಸಂಧಿ.
ತಲೆಯ ಯಾವದೋ ನಾಡಿಯೊಳಗ ಸುರುವಾತು ಸುಗ್ಗಿ ಸೊಲ್ಲು
ಮುಂದೆ ಕೇಳಿದರ ಅದs ತುಂಬಿತೋ ಮೂಲೆ ಮೂಲೆಯಲ್ಲು.

ಗುಡಿಗೆ ನಾನು ಹೊರಟಾಗ ಕರೀತsದ ಕುಹೂಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀsತsದ ಓಂ ಕುಹೂ ಎಂದು.
ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯsದ ಮನಕ ನೀ ಬಂದೆ ಜೋಗಿ ಏನೋ!

ಯಾವ ಸ್ವರಾ ಇದು ಯಾವ ಕೋಗಿಲಾ ಯಾವ ಮರವೊ ಏನೋ
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೊ
ಸುತ್ತು ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇದಕ?
ಬಿಸಿಲು ಕುಣಿದು ಬೆವತsದ ಈಗ ಬಂದsದ ಮಳಿಯ ಹದಕs.

(‘ಗಂಗಾವತರಣ’ ಸಂಕಲನದಿಂದ)

❒❒

ಹಳಕಟ್ಟಿಯವರ ವಚನ ಸಂಪಾದನೆ ವಿಧಿವಿಧಾನಗಳು

ಡಾ. ಗುರುಪಾದ ಮರಿಗುದ್ದಿ

❖

ಕನ್ನಡದ ಆಧುನಿಕ ಸಂದರ್ಭದಲ್ಲಿ ಗ್ರಂಥಸಂಪಾದನಾಶಾಸ್ತ್ರ ತುಸು ತಡವಾಗಿ ಕಾಣಿಸಿಕೊಂಡಿತು. ಅದಕ್ಕೆ ಪೂರ್ವದಲ್ಲಿ ಗ್ರಂಥಗಳ ಸಂಪಾದನಾ ಕಾರ್ಯ ನಡೆಯಬೇಕು ಎಂಬುದು ಸಹಜ. ಪಾಶ್ಚಾತ್ಯ ವಿದ್ವಾಂಸರು ಒಂದು ಹಂತದಲ್ಲಿ ಗ್ರಂಥಗಳ ಸಂಪಾದನೆಗೆ ತೊಡಗಿದುದನ್ನು ಆರಂಭಿಕ ಪ್ರಯತ್ನಗಳು ಎನ್ನಲಾಗಿದೆ. "ಗ್ರಂಥ ಸಂಪಾದನೆ ಎಂಬುದು ಟೆಕ್ಸ್‌ಚಿವಲ್ ಕ್ರಿಟಿಸಿಸಂಗೆ ಸಂವಾದಿಯಾಗಿ ಕನ್ನಡದಲ್ಲಿ ಆರಂಭವಾದದ್ದು ಪಾಶ್ಚಿಮಾತ್ಯ ವಿದ್ವಾಂಸರಿಂದ. ಬ್ರಿಟಿಷರು ಭಾರತದಲ್ಲಿ ತಳವೂರಿದ ಬಳಿಕ ಕ್ರಿಸ್ತಮತ ಪ್ರಚಾರಕ್ಕೆಂದು ಅಧಿಕ ಸಂಖ್ಯೆಯಲ್ಲಿ ಮಿಷನರಿಗಳು ಆಗಮಿಸತೊಡಗಿದರು. ಪಾಶ್ಚಿಮಾತ್ಯರು ಭಾರತದಲ್ಲಿ ಗ್ರಂಥಸಂಪಾದನಾ ಕಾರ್ಯ ಆರಂಭಿಸಿದ್ದು ಹತ್ತೊಂಬತ್ತನೆಯ ಶತಮಾನದಲ್ಲಿ."[೧] ಬಾಸೆಲ್ ಮಿಷನ್‌ದ ಹರ್ಮನ್ ಮೋಗ್ಲಿಂಗ್ ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ದಾಸರ ಕೀರ್ತನೆ ಮತ್ತಿತರ ಕೃತಿಗಳನ್ನು ಭಾಗಶಃ ಸಂಪಾದಿಸಿದರು. ಫರ್ಡಿನಾಂಡ್ ಕಿಟೆಲ್‌ರು ಕೇಶಿರಾಜನ ಶಬ್ದಮಣಿದರ್ಪಣ ಮತ್ತು ನಾಗವರ್ಮನ ಕನ್ನಡ ಛಂದಸ್ಸು ಸಂಪಾದಿಸಿದರೆ, ಬಿ.ಎಲ್. ರೈಸರು ಪಂಪರಾಮಾಯಣ, ಕರ್ನಾಟಕ ಭಾಷಾಭೂಷಣ, ಕರ್ನಾಟಕ ಶಬ್ದಾನುಶಾಸನ ಕೃತಿಗಳನ್ನು ಸಂಪಾದಿಸಿದ್ದಾರೆ. ಇದರಲ್ಲಿ ಇನ್ನೂ ಕೆಲವರು ತಮ್ಮ ಕೊಡುಗೆ ನೀಡಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಕನ್ನಡ ಹಸ್ತಪ್ರತಿ, ಗ್ರಂಥಸಂಪಾದನೆಗಳಲ್ಲಿ ಕೆಲಸ ಮಾಡಿದುದು ಕ್ರಿ.ಶ. ೧೮೪೦ ರಿಂದ ಕ್ರಿ.ಶ. ೧೯೦೦ ವರೆಗೆ ಎನ್ನಬೇಕು. ಇದು ನಂತರದಲ್ಲಿ ದೇಶೀಯ ವಿದ್ವಾಂಸರ ಗಮನ ಸೆಳೆದು, ಪ್ರೇರಣೆ ನೀಡಿತು.

ಪಾಶ್ಚಾತ್ಯ ವಿದ್ವಾಂಸರ ಕಾರ್ಯಗಳು ಆಧುನಿಕ ಶಾಸ್ತ್ರೀಯ ಸಂಪಾದನೆಗೆ ಕಾರಣವಾದುದು ನಿಜ. ಹೆಚ್ಚಿನವು ಹಸ್ತಪ್ರತಿ ಆಧಾರಿತವಾಗಿದ್ದವು. ಆದರೆ ಇದಕ್ಕೂ ಪೂರ್ವದಲ್ಲಿ ನಮ್ಮದೇ ದೇಶೀಯ ಕೆಲವು ಸಂಕಲನಗಳು ಸಂಪಾದನೆಯ ವಿಭಿನ್ನ

ಮಾದರಿಗಳನ್ನು ಹುಟ್ಟುಹಾಕಿದ್ದವು. ಕವಿರಾಜಮಾರ್ಗ, ಶಬ್ದಮಣಿದರ್ಪಣ, ಸೂಕ್ತಿಸುಧಾರ್ಣವಗಳಲ್ಲಿ ಇದರ ಹೆಜ್ಜೆ ಗುರುತುಗಳಿವೆ. ಹದಿನೈದನೆಯ ಶತಮಾನದಲ್ಲಿ ಹೊರಬಂದ ಶೂನ್ಯಸಂಪಾದನೆಗಳು ಇದಕ್ಕೆ ನಿದರ್ಶನವಾಗಿವೆ. ಇವುಗಳಿಗೆ ತುಸು ಪೂರ್ವದಲ್ಲಿ ಕಾಣಿಸಿಕೊಂಡ 'ಸಕಲಪುರಾತನರ ವಚನ'ಗಳ ಕಟ್ಟು ಏಳು ಸಂಪಾದನೆಗಳನ್ನು ಹೊಂದಿದೆ. ವಚನಗಳ ಸಂವಾದ ಸಾಧ್ಯತೆಯನ್ನು ಚೆನ್ನಾಗಿ ಗುರುತಿಸಿ, ವಚನಕಾರರ ವ್ಯಕ್ತಿತ್ವ ಆಶಯಗಳ ಹಿನ್ನೆಲೆಯಲ್ಲಿ ಸಂಪಾದನೆ ಮಾಡಿದ ಶ್ರೇಯಸ್ಸು ಶಿವಗಣ ಪ್ರಸಾದಿ ಮಹಾದೇವಯ್ಯನಿಗೆ ಸಲ್ಲುತ್ತದೆ. ಇದೇ ಸಂದರ್ಭದಲ್ಲಿ ಇನ್ನಿತರ ಶೂನ್ಯ ಸಂಪಾದನಾಕಾರರನ್ನು, ಕಲ್ಲುಮಠದ ಪ್ರಭುದೇವರನ್ನು ನೆನೆಯಬೇಕು.

ಆಧುನಿಕ ಸಂಪಾದನಾ ಶಾಸ್ತ್ರೀಯ ಮಾರ್ಗದ ನೈಜ ಅಧ್ಯಯನವಿಲ್ಲದಿದ್ದರೂ ಫ.ಗು. ಹಳಕಟ್ಟಿಯವರು ಮೊದಲ ಸಲ ದೊಡ್ಡ ಪ್ರಮಾಣದಲ್ಲಿ ವಚನಗಳ ಸಂಗ್ರಹ, ಸಂಕಲನ, ಸಂಯೋಜನೆ, ಸಂಪಾದನೆಗೆ ತೊಡಗಿದುದು ನಿಜಕ್ಕೂ ಅಚ್ಚರಿಯ ವಿಚಾರ. ವಕೀಲಿ ವೃತ್ತಿಗೆ ಸೇರಿಕೊಂಡು ಸಾರ್ವಜನಿಕ ಸೇವೆಗಾಗಿ ಹಾತೊರೆಯುತ್ತಿದ್ದ ಹಳಕಟ್ಟಿಯವರು ಒಂದೊಂದಾಗಿ ವಚನಕಟ್ಟುಗಳು ಆಕಸ್ಮಿಕವಾಗಿ ಲಭಿಸಿದಂತೆ ಅವುಗಳತ್ತ ತಿರುಗಿದರು. ಒಂದು ದಶಕದ ಅವಧಿಯಲ್ಲಿ ಅವರು ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಅದನ್ನು ಅವರೇ ಒಂದೆಡೆಗೆ ದಾಖಲಿಸಿದ್ದಾರೆ. "೧೯೨೦ ರ ಒಳಗಾಗಿ ನಾನು ಅನೇಕ ಹಳೆಯ ತಾಡೋಲೆಗಳನ್ನು ಸಂಗ್ರಹಿಸಿದ್ದೆ. ಅವು ಸುಮಾರು ಒಂದು ಸಾವಿರ ಪುಸ್ತಕಗಳಷ್ಟಾದವು. ಅವುಗಳಲ್ಲಿ ಕೆಲವು ಅಪೂರ್ವ ಗುಣಗಳನ್ನು ಹೊಂದಿದ್ದವು. ಅವುಗಳಲ್ಲಿ ಅತಿ ಮುಖ್ಯವಾದವುಗಳು ೧೧ ಹಾಗೂ ೧೨ ನೆಯ ಶತಮಾನದ ಶರಣರು ಹಾಗೂ ಸಂತರಿಂದ ಬರೆಯಲ್ಪಟ್ಟಿದ್ದವು. ವಚನಗಳೆಂದು ಪ್ರಸಿದ್ಧವಾದ ಈ ಬರಹಗಳ ಭಾಷೆ, ಶೈಲಿ ಹಾಗೂ ಅಲ್ಲಿ ನಿರೂಪಿಸಿದ ತತ್ವಜ್ಞಾನ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾಗಿವೆ."[3] ಹೀಗೆ ಸಂಗ್ರಹಿಸಿದ ಪ್ರತಿಗಳಲ್ಲಿಯ ವಚನಗಳನ್ನು ಬರೆದು ಶುದ್ಧಪ್ರತಿ ತಯಾರಿಸಿದರು. ಇದಕ್ಕೆ ಇಬ್ಬರು ಬರಹಗಾರರನ್ನು ನಿಯಮಿಸಿದರು. ಪ್ರಕಟಿಸಲು ನಿರ್ಧರಿಸಿ ಸಂಪಾದನೆಗೆ ತೊಡಗಿದರು. ಇದರಲ್ಲಿ ಅವರು ಕೆಲವು ಹಸ್ತಪ್ರತಿಗಳನ್ನು ಹಣ ಕೊಟ್ಟು ಖರೀದಿಸಿದ್ದರು ಎಂಬುದು ಗಮನಾರ್ಹ.

ಸಂಗ್ರಹ, ಸಂಪಾದನೆಯ ಹೊಸ ಕ್ಷೇತ್ರಕ್ಕೆ ಕಾಲಿಟ್ಟ ಹೊಸ ವ್ಯಕ್ತಿಯಾಗಿದ್ದ ಅವರು, ಪ್ರಕಟನೆ ಮುದ್ರಣಗಳಿಗೂ ಅಪರಿಚಿತರೇ ಆಗಿದ್ದರು. ಆದರೂ ಹಲವು ವಚನಕಾರರ ವಚನಗಳನ್ನು ಸಂಯೋಜಿಸಿ, ಸಂಪಾದಿಸಿ 'ವಚನಶಾಸ್ತ್ರಸಾರ' ಹೆಸರಲ್ಲಿ ಹೊರತರಲು ಹಲವು ಬಗೆಯಲ್ಲಿ ಪ್ರಯತ್ನಿಸಿದರೂ, ಆರ್ಥಿಕ ತೊಂದರೆ, ಮುದ್ರಣ ತೊಂದರೆಗಳಿಂದ ಅವರಿಗೆ ಸಾಧ್ಯವಾಗಲಿಲ್ಲ. ಆಗ ಅವರಿಗೆ ನೆನಪಾದ ಸಂಸ್ಥೆಯೆಂದರೆ ಮಂಗಳೂರಿನ

ಬಾಶೆಲ್ ಮಿಷನ್; ಆಗ ಬಾಶಲ್ ಮಿಷನ್‌ದವರು ಮುದ್ರಣಾಲಯ ಆರಂಭಿಸಿದ್ದರು. ಅವರನ್ನು ಸಂಪರ್ಕಿಸಿ, ಒಪ್ಪಿಸಿ ತಮ್ಮಲ್ಲಿಯ ಹಸ್ತಪ್ರತಿಯನ್ನು, ಐನೂರು ರೂಪಾಯಿ ಮುಂಗಡ ಹಣವನ್ನು ಕಳಿಸಿಕೊಡುತ್ತಾರೆ. ಕಳೆದ ಶತಮಾನದ ಎರಡನೆಯ ದಶಕದ ಆರಂಭದ ಕಾಲವಿದು. ಆಗ ಐನೂರು ರೂಪಾಯಿ ಹಳಕಟ್ಟಿಯವರಿಗೆ ಭಾರವೆನಿಸಿತ್ತು; ಆರ್ಥಿಕವಾಗಿ ಅವರಿಗೆ ಅಂತಹ ಅನುಕೂಲವಿರಲಿಲ್ಲ.

ಅಷ್ಟೆಲ್ಲ ಕಷ್ಟ–ನಷ್ಟ ಅನುಭವಿಸಲು ಅವರು ಸಿದ್ಧರಾದರೂ, ಒಪ್ಪಿದ್ದ ಬಾಶೆಲ್ ಮಿಷನ್‌ದವರು ಹಿಂದೆ ಸರಿದರು. ಹಸ್ತಪ್ರತಿ ಮರಳಿಸಿ, ಅವರೊಂದು ಓಲೆ ಬರೆಯುತ್ತಾರೆ. "ನಿಮ್ಮ ಗ್ರಂಥದ ಧಾರ್ಮಿಕ ವಿಚಾರವನ್ನು ನಾವು ಪ್ರಕಟಪಡಿಸಲು ಇಷ್ಟಪಡುವುದಿಲ್ಲ. ನಿಮ್ಮ ಧರ್ಮದ ತತ್ವವಿವರಣೆಗೂ ನಮ್ಮ ಧಾರ್ಮಿಕ ಗ್ರಂಥಗಳಿಗೂ ಹೋಲಿಕೆ ಇರುವುದರಿಂದ ನಮ್ಮ ಮಿಷನರಿ ಉದ್ದೇಶಕ್ಕೆ ಭಂಗ ಬರುತ್ತದೆ. ಆದ್ದರಿಂದ ಕ್ಷಮಿಸಿರಿ. ಮುಂಗಡವಾಗಿ ಕಳಿಸಿದ ಹಣ ತಿರುಗಿ ಕಳಿಸಿದ್ದೇವೆ."[೩] ಇದರಿಂದ ಹಳಕಟ್ಟಿಯವರಿಗೆ ಆಘಾತವಾಯಿತು. ಅವರು ಸುಲಭದಲ್ಲಿ ಸೋಲು ಒಪ್ಪುವವರಲ್ಲ. ಬೆಳಗಾವಿಯ ಚೌಗುಲೆ ಪ್ರೆಸ್ಸಿನಿಂದ ತಾವೇ ಕಷ್ಟಪಟ್ಟು ೧೯೨೩ರಲ್ಲಿ ಮೊದಲ ಭಾಗ ಪ್ರಕಟಿಸಿದರು. ಮೊದಲು 'ವಚನಶಾಸ್ತ್ರ' ಎಂದು ಹೆಸರಿಟ್ಟದ್ದನ್ನು ಈಗ 'ವಚನಶಾಸ್ತ್ರಸಾರ' ಎಂದು ಬದಲಾಯಿಸಿದರು. ಇನ್ನೂ ಅನೇಕ ಅಪ್ರಕಟಿತ ವಚನಕಾರರು, ಸಾವಿರಾರು ವಚನಗಳು ಅಲ್ಲಲ್ಲಿ ಇವೆ ಎಂದು ಅವರಿಗೆ ಅಷ್ಟು ಹೊತ್ತಿಗಾಗಲೇ ತಿಳಿದಿತ್ತು. ಹಾಗಾಗಿ ತಲೆಬರಹದಲ್ಲಿ ಬದಲಾವಣೆ ತಂದಿರಬೇಕು.

ಮೊದಲ ಸಲ 'ವಚನಶಾಸ್ತ್ರಸಾರ' ಪ್ರಕಟ ಮಾಡುವಾಗ ಅದಕ್ಕೆ ಉಪಯುಕ್ತ ಪ್ರಸ್ತಾವನೆ ಬರೆದು, ವಚನಸಾಹಿತ್ಯದ ಬಗ್ಗೆ ಪರಿಚಯ ನೀಡಿದ್ದಾರೆ. ಅಂದಿನ ದಿನಗಳಲ್ಲಿ, ಎಂದರೆ ವಚನಕಾರರು ಮತ್ತು ವಚನಗಳ ಬಗೆಗೆ ಹೆಚ್ಚಿನ ಪರಿಚಯವಿಲ್ಲದಿರುವಾಗ, ಅವರು ನೀಡಿದ ಪ್ರಸ್ತಾವನೆ ಮಹತ್ವದ್ದು ಎನಿಸುತ್ತದೆ. "ವಚನಗ್ರಂಥಗಳು ಕನ್ನಡಭಾಷೆಯಲ್ಲಿ ಬಹು ಮಹತ್ವದ ಗ್ರಂಥಗಳಾಗಿವೆ. ಅವು ಒಂದು ಬಗೆಯ ವಾಙ್ಮಯವನ್ನೇ ಹುಟ್ಟಿಸಿರುತ್ತವೆಂದು ನಾವು ಹೇಳಬಹುದು. ಈ ವಾಙ್ಮಯವು ಮೊದಲಿಗೆ ಬಸವೇಶ್ವರನ ಕಾಲದಲ್ಲಿ ಉಗಮವಾಯಿತೆಂದು ತೋರುತ್ತದೆ. ಅಂದಿನಿಂದ ಈವರೆಗೆ ಅನೇಕ ವಚನಕಾರರು ಉದ್ಭವಿಸಿ, ಲಿಂಗಾಯತ ಮತತತ್ವಗಳನ್ನೂ ಅದರ ಪದ್ಧತಿಯನ್ನೂ ಇಂಥ ವಚನಗಳ ರೂಪವಾಗಿ ಅವರು ನಿರೂಪಿಸುತ್ತ ಬಂದಿದ್ದರು"[೪] ಎಂದು ಅವರು ಪ್ರಸ್ತಾವನೆಯ ಆರಂಭದಲ್ಲಿ ಹೇಳಿರುವುದು, ಇಂದು ಸಂಶೋಧನೆಯಿಂದ, ಅಧ್ಯಯನದಿಂದ ಸತ್ಯವಾಗಿ ನಿಂತಿದೆ.

ಪ್ರಸ್ತಾವನೆಯಲ್ಲಿ ಹನ್ನೆರಡನೆಯ ಶತಮಾನದ ಹಿಂದಿನ ಐತಿಹಾಸಿಕ ಬೆಳವಣಿಗೆಗಳು, ವಚನ ವಾಙ್ಮಯದ ಸ್ವರೂಪ, ವಚನ ಸಂಗ್ರಹ, ಸಂಪಾದನೆಯ ತಮ್ಮ ಅನುಭವ, ವಚನ ಸಾಹಿತ್ಯದಲ್ಲಿ ಬರುವ ಧಾರ್ಮಿಕ ಪರಿಭಾಷೆ, ತತ್ವಗಳು, ಭಾಷೆ ಕುರಿತಾಗಿ ಆತ್ಮೀಯವಾಗಿ ವಿವರಿಸಿದ್ದಾರೆ. ಸಂಪಾದನಾ ಕಾರ್ಯದಲ್ಲಿ ತಾವು ಎದುರಿಸಿದ ತೊಡಕು, ತೊಂದರೆ, ಸಮಸ್ಯೆಗಳನ್ನು, ಅವುಗಳನ್ನು ಪರಿಹರಿಸಿಕೊಂಡ ಬಗೆಯನ್ನು ಪ್ರಾಮಾಣಿಕವಾಗಿ ಪ್ರಸ್ತಾಪಿಸಿದ್ದು, ಅದರಿಂದ ಅವರ ಶ್ರಮ, ಸಾಹಸ, ಚಿಂತನಾಕ್ರಮ, ಅನುಸರಿಸಿದ ವಿಧಾನಗಳು ವಿದಿತವಾಗುತ್ತವೆ. ತಮ್ಮ ಸಂಪಾದನೆಗೆ ಆಧಾರವಾದ ಕೆಲವು ಗ್ರಂಥಗಳ ಸಹಾಯವನ್ನು ನೆನೆಯುತ್ತ, ಅಲ್ಲಿರುವ ಕೊರತೆಗಳನ್ನು ಗುರುತಿಸುವರು. ಸರ್ವಪುರಾತನ ವಚನಗಳು, ಗುಣಭಾಷ್ಯರತ್ನಮಾಲಾ, ಲಿಂಗಚಿದಾಮೃತಬೋಧೆ, ಆಚರಣೆಯ ವಚನಗಳು, ಶೂನ್ಯಸಂಪಾದನೆ ಇವೇ ಮುಂತಾದ ಮೂವತ್ತು ಆಧಾರಗ್ರಂಥಗಳನ್ನು ಅವರು ಬಳಸಿಕೊಂಡಿದ್ದಾರೆ. ಅವುಗಳಲ್ಲಿಯ ಸಮಸ್ಯೆಗಳನ್ನು ತೋರಿರುವರು. ವಚನಕಾರರ ವಚನಗಳು ವಿಷಯಕ್ರಮವಾಗಿ ಬಂದುದಿಲ್ಲ, ಬೇರೆ ಬೇರೆ ವಚನಕಾರರ ವಚನಗಳನ್ನು ಬೇಕಾದ ಹಾಗೆ ಹೊಂದಿಸಿ ಸೇರಿಸಲಾಗಿದೆ, ಸಂಕಲನಕಾರರು ಸಂವಾದರೂಪದಲ್ಲಿ ವಚನಗಳನ್ನು ಹೊಂದಿಸಿದ್ದು ಮೂಲ ವಚನಕಾರರಿಗೆ ಇದು ಸಂಬಂಧವಿರಲಿಲ್ಲ– ಇತ್ಯಾದಿ ವಿಚಾರಗಳನ್ನು ಗಮನಿಸಿ ತಮ್ಮ ಸಂಪಾದನೆಯಲ್ಲಿ ವಚನಗಳ ಜೋಡಣೆಗೆ ಯಾವ ಕ್ರಮ ಅನುಸರಿಸಬೇಕು ಎಂದು ಹಳಕಟ್ಟಿಯವರು ಗಾಢವಾಗಿ ಚಿಂತಿಸುತ್ತಿದ್ದುದು ಇಲ್ಲಿ ಕಂಡುಬರುತ್ತದೆ.

ವಚನ ಸಂಯೋಜನೆಯ ಸರಿಯಾದ ಕ್ರಮವನ್ನು ತಾವೇ ಕಂಡುಕೊಳ್ಳಲು ಅವರು ಎರಡು–ಮೂರು ವರ್ಷಗಳ ಕಾಲ ಯೋಚಿಸಿದ್ದಾರೆ. ೧೯೧೮ರಲ್ಲಿ ವಚನಶಾಸ್ತ್ರ–೧ ರ ಪ್ರತಿ ಸಿದ್ಧಪಡಿಸಿದ್ದರೂ ಅವರು ಅದರಿಂದ ಸಮಾಧಾನ ಹೊಂದಿರಲಿಲ್ಲ. ಅವರ ಚಿಂತನೆ, ಪ್ರಯತ್ನಗಳು ವಿಫಲವಾಗಲಿಲ್ಲ; ಅವರಿಗೆ ಒಂದು ದಾರಿ ಕಂಡುಬರುತ್ತದೆ. "ನನ್ನ ಸಂಗ್ರಹಕ್ಕೆ ವ್ಯವಸ್ಥಿತ ಸ್ವರೂಪ ಕೊಡುವುದು ಮೊದಲಿಗೆ ದುಸ್ತರವಾಯಿತು. ಆದರೂ ನಾನು ಸಂಗ್ರಹಿಸಿದ ವಚನಗಳನ್ನು ಪರಸ್ಪರ ತುಲನಾತ್ಮಕ ರೀತಿಯಿಂದ ವಿಚಾರ ಮಾಡುತ್ತಿರಲು, ಅವು ಬಾಹ್ಯತಃ ಅವ್ಯವಸ್ಥಿತವಾಗಿ ಕಂಡರೂ, ಅವುಗಳಲ್ಲಿ ಒಂದು ವ್ಯವಸ್ಥೆಯೂ, ಏಕರೂಪತೆಯೂ, ಏಕವಿಚಾರ ಸರಣಿಯೂ ಕಂಡುಬಂದವು. ಈ ಮೇರೆಗೆ ಇವುಗಳ ತತ್ವಗಳನ್ನು ಕಂಡು ಹಿಡಿದು ನನ್ನ ಸಂಗ್ರಹಕ್ಕೆ ಒಂದು ವ್ಯವಸ್ಥಿತ ಸ್ವರೂಪವನ್ನು ಕೊಟ್ಟಿದ್ದೇನೆ."[೫] ಈಗ ಅವರಿಗೆ ವಚನಗಳ ಸಂಯೋಜನಾ ಕ್ರಮ ತಿಳಿದುಬಂದಿತ್ತು. ಕೇವಲ ಹೀಗೆ ಸಂಪಾದಿಸಿ ನೀಡಿದರೆ, ವಚನ ಸಾಹಿತ್ಯದ ತಾತ್ವಿಕ ಪರಿಚಯವಿಲ್ಲದ ಜನರಿಗೆ, ಓದುಗರಿಗೆ ತಿಳಿಯಲಿಕ್ಕಿಲ್ಲ ಎಂಬ ಭಾವನೆ ಅವರಲ್ಲಿ

ಮೂಡಿಬಂದಿತು. ಆಗ ಕೃತಿಯ ಆರಂಭದಲ್ಲಿ ಷಟ್‌ಸ್ಥಲ, ಗುರುಲಿಂಗಜಂಗಮ– ತತ್ವಗಳ ಪರಿಚಯ ನೀಡಬೇಕಾಗಿ ಬಂದಿತು ಎಂದಿದ್ದಾರೆ. ತಮ್ಮ ಸಂಪಾದನೆಯ ಕ್ರಮವನ್ನು ಅವರು ಹೇಳಿದ್ದು, ಅವುಗಳಲ್ಲಿ ಕೆಲವು ಇಂತಿವೆ;

೧. ವಚನಗಳ ವಿಷಯ, ಸ್ಥಲಗಳ ಪುನರುಕ್ತಿದೋಷಗಳನ್ನು ಕೆಲವು ಪ್ರಮಾಣದಲ್ಲಿ ನಿವಾರಿಸಿದರೂ, ಪೂರ್ಣಪ್ರಮಾಣದಲ್ಲಿ ತೆಗೆದು ಹಾಕಲು ಆಗಲಿಲ್ಲ; ಅದು ಅವರಿಗೆ ಗೊತ್ತಿತ್ತು.

೨. ಪ್ರತಿ ಸ್ಥಲದ ಆರಂಭದಲ್ಲಿ ಸ್ಥಲದ ತತ್ವ ಮತ್ತು ಅದಕ್ಕೆ ಸಂಬಂಧಿಸಿದ ಆಚರಣೆ ಕುರಿತಾದ ವಚನಗಳನ್ನು ಸಂಯೋಜನೆ ಮಾಡಿದರು.

೩. ಕೃತಿಯಲ್ಲಿ ೧೩೦ ವಚನಕಾರರ ವಚನಗಳನ್ನು ಸಂಯೋಜನೆ ಮಾಡಲಾಗಿದ್ದು, ಸು. ೪೦–೫೦ ವಚನಕಾರರ ಕಡಿಮೆ ಸಂಖ್ಯೆಯ ಮತ್ತು ಮಹತ್ವವಲ್ಲದ ವಚನಗಳನ್ನು ಕೈ ಬಿಡಲಾಗಿದೆ.

೪. ಕೆಲವು ವಚನಕಾರರ ಹೆಸರುಗಳು ಲಭಿಸಿದರೂ ಅವರ ವಚನಗಳು ಲಭ್ಯವಾಗಿಲ್ಲ. ಕೆಲವು ವಚನಗಳು ಲಭಿಸಿವೆ, ಅವುಗಳ ಕರ್ತೃ ತಿಳಿಯದು. ಅವುಗಳನ್ನು ಸೇರಿಸಲಾಗಿಲ್ಲ.

೫. ಆಧಾರವೆಂದು ಸ್ವೀಕರಿಸಿದ ಅನೇಕ ಪ್ರತಿಗಳು ಅಶುದ್ಧ ಪ್ರತಿಗಳಾಗಿದ್ದವು; ಪೂರ್ತಿ ಶುದ್ಧಗೊಳಿಸಲು ಆಗಲಿಲ್ಲ.

೬. ಸಂಸ್ಕೃತದ ಉಲ್ಲೇಖಗಳು ಅಶುದ್ಧವಾಗಿದ್ದು, ಅವುಗಳ ಪೂರ್ಣ ತಿದ್ದುಪಡಿ ಸಾಧ್ಯವಾಗಲಿಲ್ಲ.

೧೯೨೩ರಲ್ಲಿ ಎರಡು ಭಾಗಗಳಲ್ಲಿ ಮೊದಲನೆಯ ಆವೃತ್ತಿ ತರುವಾಗಲೇ 'ವಚನಶಾಸ್ತ್ರಸಾರ'ದ ಪ್ರಕಟನೆ ಒಂದು ದೊಡ್ಡ ಯೋಜನೆ, ಸುದೀರ್ಘ ಪ್ರಕಟನಾ ಪ್ರಯತ್ನ ಎಂಬ ವಿಚಾರ ಹಳಕಟ್ಟಿ ಅವರಿಗೆ ಹೊಳೆದಿತ್ತು. ಅವರು ಮೊದಲನೆಯದನ್ನು ಹೊರತರುವಾಗ, ನಾಲ್ಕು ಭಾಗಗಳಲ್ಲಿ ಪೂರ್ಣಗೊಳಿಸುವ ಕ್ರಿಯಾಯೋಜನೆಯನ್ನು ಮುಂದಿಡುತ್ತಾರೆ.

ಭಾಗ ಒಂದು– ಲಿಂಗಾಯತ ಮತತತ್ವಗಳ ಸಾಮಾನ್ಯ ಸ್ವರೂಪ

ಭಾಗ ಎರಡು– ಸ್ಥಲ ವಿವರಣೆ

ಭಾಗ ಮೂರು– ಅಷ್ಟಾವರಣ ಮುಂತಾದ ಆಚಾರಕ ವಿಷಯಗಳು

ಭಾಗ ನಾಲ್ಕು– ಲಿಂಗಾಯತ ಸಮಾಜದ ಸಾಮಾಜಿಕ, ರಾಜಕೀಯ, ಧಾರ್ಮಿಕ ಇತಿಹಾಸ

ಇದೇ ತೆರನಲ್ಲಿ ಅವರು ಲಭ್ಯ ವಚನಗಳನ್ನು ವಿಭಾಗಿಸಿಕೊಂಡು ಸಂಪಾದನೆಗೆ ತೊಡಗಿದರೆಂದು ತೋರುತ್ತದೆ. 'ವಚನಶಾಸ್ತ್ರಸಾರ ಭಾಗ–೧' ಹೆಸರಿನ ಬೃಹತ್ ಗಾತ್ರದ ಕೃತಿಗೆ ಅವರು ಬರೆದ ಪ್ರಸ್ತಾವನೆಯ ಕೊನೆಗೆ ೧೭.೦೨.೧೯೨೩ ಎಂಬ ದಿನಾಂಕ ಮತ್ತು ಬೆಳಗಾಂವ– ಸ್ಥಳ ನಿರ್ದೇಶನಗಳಿವೆ. ಇಡೀ ವಚನಶಾಸ್ತ್ರಸಾರ ಕಾಲಕಾಲಕ್ಕೆ ಹಂತ ಹಂತವಾಗಿ ಪ್ರಕಟಗೊಂಡುದನ್ನು ಡಾ. ಎಂ.ಎಂ. ಕಲಬುರ್ಗಿಯವರು ಸೂಚಿಸಿದ್ದಾರೆ.

೧. ವಚನಶಾಸ್ತ್ರಸಾರ ಭಾಗ–೧, ಪ್ರಥಮ ಆವೃತ್ತಿ, ೧೯೨೩

ವಚನಶಾಸ್ತ್ರಸಾರ ಭಾಗ–೧ ದ್ವಿತೀಯ ಆವೃತ್ತಿ, ಪೂರ್ವಾರ್ಧ, ೧೯೩೧

ವಚನಶಾಸ್ತ್ರಸಾರ ಭಾಗ–೧ ದ್ವಿತೀಯ ಆವೃತ್ತಿ, ಉತ್ತರಾರ್ಧ, ೧೯೩೩

೨. ವಚನಶಾಸ್ತ್ರಸಾರ ಭಾಗ–೨ ಪ್ರಥಮ ಆವೃತ್ತಿ, ೧೯೩೮

೩. ವಚನಶಾಸ್ತ್ರಸಾರ ಭಾಗ–೩ ಪ್ರಥಮ ಆವೃತ್ತಿ ಪೂರ್ವಾರ್ಧ, ೧೯೩೯

ವಚನಶಾಸ್ತ್ರಸಾರ ಭಾಗ–೩ ಪ್ರಥಮ ಆವೃತ್ತಿ ಉತ್ತರಾರ್ಧ, ೧೯೫೩

ಎಂದರೆ 'ವಚನಶಾಸ್ತ್ರಸಾರ' ಕೃತಿಯನ್ನು ೧೯೨೩ ರಿಂದ ೧೯೫೩ ರವರೆಗೆ ಮೂರು ದಶಕಗಳ ಕಾಲ ಪ್ರಕಟಿಸುತ್ತ ಬಂದಿದ್ದಾರೆ. ಆ ಅವಧಿಯಲ್ಲಿ ಅವರು ಸಂಪಾದನೆಯ ಕೆಲಸದಲ್ಲಿ ದೀರ್ಘಕಾಲ ತೊಡಗಿದ್ದಾರೆ.

ಈಗ ಮರುಮುದ್ರಣಗೊಂಡು ಲಭ್ಯವಿರುವ ಹಳಕಟ್ಟಿಯವರು ಸಂಪಾದಿಸಿದ 'ವಚನಶಾಸ್ತ್ರಸಾರ–೧' ಪೂರ್ವಾರ್ಧ ಮತ್ತು ಉತ್ತರಾರ್ಧ ಎರಡೂ ಭಾಗಗಳನ್ನು ಒಳಗೊಂಡ ಏಕಕೃತಿಯಾಗಿದೆ. ಪೂರ್ವಾರ್ಧದಲ್ಲಿ ಪೀಠಿಕಾಸ್ಥಲ, ಭಕ್ತಸ್ಥಲ, ಮಾಹೇಶ್ವರ ಸ್ಥಲಗಳಿದ್ದರೆ, ಉತ್ತರಾರ್ಧದಲ್ಲಿ ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲಗಳಿವೆ. ಪೂವಾರ್ಧದ ಪೀಠಿಕಾಸ್ಥಲದಲ್ಲಿ ೪೨ ಉಪವಿಭಾಗಗಳ ವಿಂಗಡನೆಯ ವಿಷಯಗಳಿವೆ. ಸೃಷ್ಟಿಯ ರಚನೆ, ದೇವರ ಸ್ವರೂಪ, ಇಷ್ಟಲಿಂಗದ ಸ್ವರೂಪ, ದೀಕ್ಷೆ, ಸ್ಥಲವಿಚಾರ ಹೀಗೆ ವಿಷಯವಾಧರಿಸಿ ವಚನಗಳನ್ನು ಜೋಡಣೆಗೊಳಿಸಿದ್ದಾರೆ. ವಚನಗಳ ವಿಷಯವಾಧರಿಸಿದ ಜೋಡಣೆ ಮತ್ತು ಅವುಗಳಿಗೆ ಮುಖ್ಯ, ಉಪ ಶಿರೋನಾಮೆ ನೀಡುವಲ್ಲಿ ಅವರು ತುಂಬ ಎಚ್ಚರಿಕೆ ವಹಿಸಿದ್ದಾರೆ. ಹೀಗೆ ಮಾಡುವಲ್ಲಿ ಅವರಿಗೆ ಸ್ವತಂತ್ರ ದೃಷ್ಟಿ ಮತ್ತು ಆಶಯಗಳಿದ್ದವು. ಆದರೆ ಪ್ರೇರಣೆಯನ್ನು ಹದಿನೈದನೆಯ ಶತಮಾನದ ವಚನ ಸಂಕಲನಕಾರರಿಂದ ಪಡೆದಿರಬಹುದು. ಲಿಂಗಲೀಲಾವಿಲಾಸ ಚಾರಿತ್ರ, ಷಟ್‌ಸ್ಥಲಜ್ಞಾನ ಸಾರಾಮೃತದಂತಹ ಕೃತಿಗಳನ್ನು ಅವರು ಆಧಾರಗ್ರಂಥಗಳೆಂದು ಬಳಸಿದ್ದಾರೆ. ಅವುಗಳಲ್ಲಿ

ವಚನಗಳ ಸ್ಥಲನಿರ್ದೇಶನ, ಸ್ಥಲನಾಮಗಳನ್ನು ಗಮನಿಸಿರಬೇಕು. ಲಿಂಗಲೀಲಾವಿಲಾಸಚಾರಿತ್ರದಲ್ಲಿ ನಿಷ್ಕಲಲಿಂಗಸ್ಥಲದಿಂದ, ಸ್ವಲೀಲಾನಂದ ಭಕ್ತಿಸ್ಥಲದವರೆಗೆ ಹದಿನಾರು ಸ್ಥಲಗಳಿವೆ. ಪ್ರತಿ ಸ್ಥಲದ ಆರಂಭಕ್ಕೆ ಒಂದು ಸೂತ್ರ ಬರುವುದು, ನಂತರ ವೃತ್ತ ವೃತ್ತದ ಟೀಕು ಬರುವುದು, ಆಮೇಲೆ ಸಂಸ್ಕೃತ ಶ್ಲೋಕ ಅದರ ಟೀಕುಗಳಾದ ತರುವಾಯ ವಚನಗಳನ್ನು ಟೀಕುಸಹಿತ ನೀಡಲಾಗಿದೆ. ಷಟ್‌ಸ್ಥಲಜ್ಞಾನ ಸಾರಾಮೃತದಲ್ಲಿ ಪ್ರತಿ ಸ್ಥಲದ ಆರಂಭದಲ್ಲಿ ಸೂತ್ರ, ಸ್ಥಲನಿರ್ದೇಶ ಬಂದು ವಚನಗಳು ಬರುತ್ತವೆ. ಶಿವಗಣಪ್ರಸಾದಿ ಮಹಾದೇವಯ್ಯನವರ ಶೂನ್ಯಸಂಪಾದನೆಯ ಆರಂಭದಲ್ಲಿ ಮಾತ್ರ ಕೆಲವು ಸ್ಥಲನಿರ್ದೇಶ ಬಂದಿವೆ; ಆದರೆ ಉದ್ದಕ್ಕೂ ಬಂದುದಿಲ್ಲ. ಹಳಕಟ್ಟಿಯವರು ಸ್ಥಲನಿರ್ದೇಶದ ನಂತರ ನೇರವಾಗಿ ವಚನಗಳನ್ನು ಸಂಯೋಜಿಸಿದ್ದಾರೆ. ಸಂಸ್ಕೃತ ಸೂತ್ರ, ಶ್ಲೋಕ, ಟೀಕು ವಿಚಾರಗಳಿಗೆ ಕಟ್ಟುಬೀಳಲಿಲ್ಲ.

ಪೂರ್ವಾರ್ಧದ ವಚನಶಾಸ್ತ್ರಸಾರ–೧ರಲ್ಲಿ ಒಟ್ಟು ಮೂರು ಮುಖ್ಯ ಸ್ಥಲಗಳಲ್ಲಿ ೧೬೪೯ ವಚನಗಳನ್ನು ಸಂಯೋಜಿಸಿದ್ದಾರೆ. 'ಪರಮಾತ್ಮನ ಅವ್ಯಕ್ತ ಸ್ವರೂಪ' ಎಂಬ ಉಪವಿಭಾಗದ ತೋಂಟದ ಸಿದ್ಧಲಿಂಗೇಶ್ವರರ 'ಅಂತರವಿಲ್ಲದಂದು ಬಾಹ್ಯವಿಲ್ಲದಂದು' ವಚನದಿಂದ, ಚೆನ್ನಬಸವೇಶ್ವರರ 'ಶ್ರೀಗುರು ಕಾರುಣ್ಯಕಟಾಕ್ಷದಲ್ಲಿ ಉತ್ಪತ್ಯವಾದ ಅಜಾತಂಗೆ ಜಾತಿ ಸೂತಕವಿಲ್ಲ' ದವರೆಗೆ ಈ ವಚನಗಳಿವೆ. ಉತ್ತರಾರ್ಧದ ನಾಲ್ಕು ಸ್ಥಲಗಳಲ್ಲಿ ೧೦೧೬ ವಚನಗಳು ಸೇರ್ಪಡೆಯಾಗಿವೆ. ಇಲ್ಲಿ ಅಲ್ಲಮಪ್ರಭುವಿನ 'ಚಿನ್ನವನೊರೆಯ ಬಹುದಲ್ಲದೆ, ಬಣ್ಣವನೊರೆಯಬಹುದೆ?' ವಚನದಿಂದ, ಅಕ್ಕಮಹಾದೇವಿಯ 'ಹೊಳೆವ ಕೆಂಜೆಡೆಗಳ....' ವಚನದವರೆಗೆ ಇಲ್ಲಿವೆ. ಒಟ್ಟು ವಚನಶಾಸ್ತ್ರಸಾರ–೧ ರಲ್ಲಿ ೨೬೬೫ ವಚನಗಳನ್ನು ಅವರು ಅಳವಡಿಸಿದ್ದಾರೆ. ಹಳಕಟ್ಟಿಯವರ ಸಂಪಾದನೆಯಲ್ಲಿ ಮೂರು ಭಾಗಗಳ 'ವಚನಶಾಸ್ತ್ರಸಾರ' ಆಗಾಗ ಪ್ರಕಟವಾಗಿದೆ. ಅವುಗಳಲ್ಲಿ ಮೊದಲನೆಯ ಭಾಗದಲ್ಲಿ ಮಹತ್ವದ ವಚನಕಾರರ ವಚನಗಳಿರುವುದು ಮತ್ತು ಕಠಿಣ ಎನಿಸುವ ವಚನಗಳಿಗೆ ಅರ್ಥ ನೀಡುವುದು ವಿಶೇಷ.

ಹಳಕಟ್ಟಿಯವರು ವಚನಗಳ ಭಾವ, ಆಶಯ, ಸೂಚನೆ, ಧ್ವನಿ ಎಲ್ಲರಿಗೂ ತಿಳಿಯಬೇಕು ಎಂಬ ಉದ್ದೇಶ ಹೊಂದಿದ್ದರು. ಅದಕ್ಕಾಗಿ ಕೆಲವು ವಚನಗಳಿಗೆ ದೀರ್ಘವಾದ ಅರ್ಥ ನೀಡಿ ಸ್ಫುಟಗೊಳಿಸುವರು. ಬಸವಣ್ಣನವರ 'ಬಯಲಮೂರ್ತಿಯಾಗಿ ನಿಂದನೊಬ್ಬ ಶರಣ' ವಚನಕ್ಕೆ, ಚೆನ್ನಬಸವೇಶ್ವರರ 'ಸ್ವಯಮಜ್ಜನ ಸ್ವಯಪೂಜೆ....' ವಚನಕ್ಕೆ ದೀರ್ಘ ಅರ್ಥವಿವರ ನೀಡಿರುವರು. ಬಹುಶಃ ಇಂಥ ಇಪ್ಪತ್ತು, ಇಪ್ಪತ್ತೈದು ನಿದರ್ಶನಗಳಿರಬೇಕು. ಕೆಲವು ವಚನಗಳಿಗೆ ಸಂಕ್ಷಿಪ್ತ ಅರ್ಥವಿವರ ನೀಡಿದ್ದಾರೆ.

“ವ್ರತಗೇಡಿ, ವ್ರತಗೇಡಿ ಎಂಬವ ತಾನೇ ವ್ರತಗೇಡಿ ವ್ರತಗೆಡಲಿಕ್ಕೇನು ಹಾಲಂಬಿಲವೆ? ವ್ರತಗೆಟ್ಟ ಬಳಿಕ ಘಟ ಉಳಿಯಬಲ್ಲುದೆ? ಕಾಯದೊಳಗೆ ಜೀವವುಳ್ಳನಕ್ಕರ ಅದೇ ಪ್ರಾಣಲಿಂಗವು ಕಾಣಾ ಗುಹೇಶ್ವರಾ” ಎಂಬ ವಚನವು ಅಲ್ಲಮಪ್ರಭುವಿನದು; ಅದಕ್ಕೆ ಅವರು ನೀಡುವ ಅರ್ಥ ಹೀಗಿದೆ– “ಕಾಯಕವೇ ಭಕ್ತ, ಪ್ರಾಣವೇ ಲಿಂಗವಾಗಿರ್ಪ ಭೇದವನರಿಯದೆ ಬೇರೆ ಮತ್ತೆ ಲಿಂಗವಿದ್ದಿತೆಂದು ನುಡಿವ ಮಾತು ಅಜ್ಞಾನವೆಂಬುದೀ ವಚನಾರ್ಥ.”[೬] ಅರ್ಥ ನೀಡುವಾಗ ತತ್ವ, ಆಶಯಗಳನ್ನು ಅವರು ಗಮನಿಸುತ್ತಾರೆ. ಕೆಲವು ವಚನಗಳಿಗೆ ಟೀಕು ಕೂಡ ನೀಡಿದ್ದಾರೆ. ನೇರವಾಗಿ ಶಬ್ದಾರ್ಥ, ತಾತ್ಪರ್ಯಾರ್ಥ ನೀಡಿದಾಗ ಟೀಕು ಎಂದಿದ್ದಾರೆ. ಆದರೆ ಅರ್ಥಗಳ ನೀಡಿಕೆಗಿಂತ, ಟೀಕುಗಳ ಸಂಖ್ಯೆ ಕಡಿಮೆ. ಅರ್ಥ ಮತ್ತು ಟೀಕುಗಳನ್ನು ನೀಡಿರುವ ಬಗೆಯನ್ನು ಕಂಡರೆ, ಅವರು ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸಚಾರಿತ್ರದಿಂದ ಪ್ರಭಾವಿತರಾಗಿದ್ದರು ಎನಿಸುತ್ತದೆ.

ವಚನಶಾಸ್ತ್ರಸಾರ–೧ ಬಂದ ಹದಿನೈದು ವರ್ಷಗಳ ತರುವಾಯ ವಚನಶಾಸ್ತ್ರಸಾರ–೨, ಅದರ ಮರುವರ್ಷ ವಚನಶಾಸ್ತ್ರಸಾರ–೩ (ಪೂರ್ವಾರ್ಧ) ಪ್ರಕಟವಾಗಿವೆ. ಈ ಅವಧಿಯಲ್ಲಿ ನಾಡಿನ ಎಲ್ಲೆಡೆಗೆ ವಚನ ಸಾಹಿತ್ಯದ ಅನನ್ಯತೆ, ಮಹತ್ವ, ಸ್ವರೂಪ, ತಾತ್ವಿಕತೆ ಪ್ರಚುರವಾಗಲು ಮೊದಲಿನ ಕೃತಿ ಕಾರಣವಾಗಿತ್ತು. ಇದರಿಂದಾಗಿ ವಚನ ಸಾಹಿತ್ಯದ ಬಗೆಗಿನ ಕುತೂಹಲಾಸಕ್ತಿಗಳು ಹೆಚ್ಚಿದವು. ಕೆಲವರು ಅದರ ಅಧ್ಯಯನಕ್ಕೆ ತೊಡಗಿದರು. ಹರ್ಡೇಕರ ಮಂಜಪ್ಪನವರ ಒತ್ತಾಸೆ ಮತ್ತು ಬೆಂಬಲದಿಂದ ಹೊರತಂದ ಎರಡನೆಯ ಭಾಗದಲ್ಲಿ ವಚನಗಳೊಂದಿಗೆ ಕರಣಹಸಿಗೆ ಮತ್ತು ಸ್ಥಲವಿಚಾರ, ಏಕೋತ್ತರಶತಸ್ಥಲ ವಿವರಗಳೂ ಸೇರಿರುವುದರಿಂದ ಇದು ಪೂರ್ಣತಃ ವಚನಗಳ ಸಂಕಲನವಾಗಿರದೆ, ಮಿಶ್ರಸಂಕಲನವಾಗಿತ್ತು. ವಚನಕಾರರ ವಚನಗಳಿಂದ ಅವರ ಧಾರ್ಮಿಕ ವಿಚಾರ, ತತ್ವ, ಸಿದ್ಧಾಂತ, ದರ್ಶನಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಮೂಲಕ ಹಳಕಟ್ಟಿಯವರು ಮಾಡಿದ್ದಾರೆ. ಯಾವ ವಿಶೇಷ ಆಧಾರ ಸಾಮಗ್ರಿ ಇಲ್ಲದಿರುವ ಸಂದರ್ಭದಲ್ಲಿ ಅಂತಹ ಕೃತಿಯ ಅಗತ್ಯ ಮನಗಂಡು, ತಾವೇ ಅದಕ್ಕೆ ತಕ್ಕುದಾದ ತತ್ವ ಸಾಹಿತ್ಯ ಸಂಯೋಜನೆ ಮಾಡುವ ಗುರುತರವಾದ ಕಾರ್ಯಕ್ಕೆ ಇಳಿಯುತ್ತಾರೆ. ಹಾಗಾಗಿ ವಚನಗಳೊಂದಿಗೆ ಇತರ ಗದ್ಯ ಕೃತಿಗಳೂ ಇಲ್ಲಿ ಸೇರಿಕೊಂಡಿವೆ.

ವಚನಶಾಸ್ತ್ರಸಾರ–೨ರಲ್ಲಿ ಐದು ಭಾಗಗಳಲ್ಲಿ ವಿಷಯ ವಿಂಗಡನೆ ಬಂದಿದ್ದು, ಸೃಷ್ಟಿಯ ರಚನೆ, ಕರಣಹಸಿಗೆ, ಕ್ರಿಯೆಗಳು ಮತ್ತು ಸಕೀಲಗಳು, ಷಟ್‌ಸ್ಥಲಗಳು, ಏಕೋತ್ತರಶತಸ್ಥಲ ಎಂದು ಶೀರ್ಷಿಕೆ ಹೊಂದಿವೆ. “ಇದು ವಿಶ್ವ ರಚನೆ ಹಾಗೂ ಮಾನವ ಜೀವನದ ಅಂತರಂಗದ ವಿವೇಚನೆಯನ್ನು ಪ್ರಧಾನವಾಗಿ ಒಳಗೊಂಡಿದೆ.

ವಿಶ್ವವು ಮಹಾಲಿಂಗವಾದರೆ, ಅಂತಿಮವಾಗಿ ಮಾನವನು ಇಷ್ಟಲಿಂಗ (ಕ್ರಿಯಾಲಿಂಗ) ವಾಗಿದ್ದಾನೆ. ಈ ಎರಡರ ಸಮನ್ವಯ ಕುರಿತು ವಿವೇಚನೆ ಇದೆ. ಇಷ್ಟಲಿಂಗ ಮಹಾಲಿಂಗದ ಬೇರಾದರೆ, ಮಹಾಲಿಂಗವು ಇಷ್ಟಲಿಂಗದ ಫಲವಾಗಿದೆ."[೭] ಎಂದಿರುವುದು ಸರಿ. 'ಸೃಷ್ಟಿಯ ರಚನೆ' ಎಂದು ಮೊದಲ ಭಾಗದಲ್ಲಿ ಲಿಂಗವಿಧಗಳು, ಸ್ಥಲವಿಧಗಳು, ಮೂವತ್ತಾರು ತತ್ವಗಳಿಗೆ ಆಧಾರವಾಗಿರುವ ವಚನಗಳನ್ನು ಆಯ್ದು ಸಂಯೋಜಿಸಲಾಗಿದೆ. ಇದಕ್ಕಾಗಿ ತೋಂಟದ ಸಿದ್ಧಲಿಂಗೇಶ್ವರ, ಕಾಡಸಿದ್ಧೇಶ್ವರ, ಅಪ್ರಮಾಣದೇವರ ವಚನಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಆಯ್ಕೆ ಮಾಡುವಾಗ ಹಳಕಟ್ಟಿಯವರು ಔಚಿತ್ಯ ಪ್ರಜ್ಞೆಯಿಂದ, ವಿವೇಕದಿಂದ ಕೆಲಸ ಮಾಡಿರುವುದನ್ನು ಕಾಣಬಹುದು. ಆರಂಭದಲ್ಲಿ ಸರ್ವಶೂನ್ಯ ನಿರಾಲಂಬಕ್ಕೆ ನೀಡುವ ಈ ವಚನವೇ ಅದಕ್ಕೆ ನಿದರ್ಶನ.

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮರೆಂಬ ಅಷ್ಟತನುಮೂರ್ತಿ ಸ್ವರೂಪಗೊಳ್ಳದಂದು, ನಾನು ನೀನೆಂಬ ಭ್ರಾಂತಿಸೂಚಕ ಪುಟ್ಟದಂದು, ನಾಮ ರೂಪ ಕ್ರಿಯೆಗಳೇನೂ ಇಲ್ಲದಂದು, ಸರ್ವಶೂನ್ಯನಿರಾಲಂಬವಾಗಿರ್ದೆಯಲ್ಲಾ, ನೀನು ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ[೮]

ಇದನ್ನು ಪುಷ್ಟೀಕರಿಸುವಂತೆ ಆದಿಮಧ್ಯ ಅವಸಾನವಿಲ್ಲದಂದು, ಆದಿ ಅನಾದಿ ಇಲ್ಲದಂದು..., ಎಂಬೆರಡು ವಚನಗಳನ್ನು ನೀಡಲಾಗಿದೆ. ಕ್ರಿಯೆ ಮತ್ತು ಸಕೀಲಗಳ ವಿಚಾರ ಬಂದಾಗ, ವಿವರಗಳು ಹೆಚ್ಚು ತಾತ್ವಿಕ ಮತ್ತು ತಾಂತ್ರಿಕವಾಗುತ್ತ ಹೋಗುತ್ತವೆ. ಭಾಗವತ, ಹರಿದಾಸರಲ್ಲಿ ಬರುವ ನವವಿಧ ಭಕ್ತಿಗಳಂತೆ ಇಲ್ಲಿಯೂ ನವವಿಧ ಭಕ್ತಿಗಳಿವೆ. ಆದರೆ ಅವು ಎರಡೂ ಒಂದೇ ಅಲ್ಲ. ಇಲ್ಲಿ ಬರುವ ನವವಿಧಗಳು ಹೀಗಿವೆ. ೧. ಶ್ರದ್ಧಾಭಕ್ತಿ, ೨. ನೈಷ್ಠಿಕಾಭಕ್ತಿ, ೩. ಸಾವಧಾನಭಕ್ತಿ, ೪. ಅನುಭಾವಭಕ್ತಿ, ೫. ಆನಂದಭಕ್ತಿ, ೬. ಸಮರಸಭಕ್ತಿ, ೭. ಪರಿಪೂರ್ಣಭಕ್ತಿ, ೮. ಅಪ್ರಮಾಣಭಕ್ತಿ, ೯. ನಿರವಯಭಕ್ತಿ. ಈ ಒಂಬತ್ತು ತೆರನಾದ ಭಕ್ತಿಯು ಶರಣ ಪರಾತ್ಪರಮೂರ್ತಿಗೆ ಸಲ್ಲುತ್ತದೆ. ಹೀಗೆ ತಾತ್ವಿಕ ವಿಚಾರಗಳು ಇಲ್ಲಿ ಅಧಿಕವಾಗಿವೆ. ಇದು ಪ್ರವೃತ್ತಿ, ನಿವೃತ್ತಿ ಮಾರ್ಗ ವಿವರದಲ್ಲಿ ಇನ್ನೂ ಗಾಢವಾಗಿ ಬರುವುದುಂಟು.

ವಚನಗಳು ಹೊಸ ಧಾರ್ಮಿಕ, ತಾತ್ವಿಕ ವಿನ್ಯಾಸವನ್ನು ಕಟ್ಟಿಕೊಡುವ ಆಶಯ ಹೊಂದಿರುವುದನ್ನು ಹಳಕಟ್ಟಿಯವರು ಕಂಡುಕೊಂಡಿದ್ದರು. ಅದರ ರೂಪ-ಸ್ವರೂಪ ಹೇಗಿರಬಹುದು ಎಂಬುದನ್ನು ಗುರುತಿಸಲು ಹತ್ತಾರು ವರ್ಷಗಳ ಕಾಲ ಪ್ರಯತ್ನಿಸಿದ್ದರು. ಇದಕ್ಕೆ ಆಧಾರವಾಗಿ ನಿಲ್ಲಬಲ್ಲ ವಿದ್ವಾಂಸರ ಕೃತಿಗಳಿಗೆ ಹುಡುಕಾಡಿ ನಿರಾಶರಾಗಿ, ತಾವೇ ವಚನಸಾಹಿತ್ಯದ ಆಧಾರದಲ್ಲಿ ಅದನ್ನು ರೂಪಿಸಲು ಹೊರಟರು. ಅದರ

ಫಲವೇ ವಚನಶಾಸ್ತ್ರಸಾರ–೨ ಎಂಬುದು ತಿಳಿಯುತ್ತದೆ. ಕರಣ ಹಸಿಗೆ, ಏಕೋತ್ತರಶತಸ್ಥಲ ವಿಚಾರಗಳನ್ನು ವಿವರವಾಗಿ ನೀಡಲು ಇದೇ ಕಾರಣ. ಏಕೋತ್ತರಶತಸ್ಥಲದ ವಿವರಣೆಯಲ್ಲಿ "ಏಕೋತ್ತರವು ಷಟ್‌ಸ್ಥಲಗಳ ತಾತ್ವಿಕ ಜ್ಞಾನಕ್ಕೂ, ಆಚಾರ ವಿಷಯಕ್ಕೂ ಸಂಬಂಧ ಪಡಿಸುವ ಒಂದು ಸೇತುವೆಯಂತೆ ಇದೆ. ಇದರ ಸಹಾಯದಿಂದಲೇ ಮನುಷ್ಯನು ತನ್ನಲ್ಲಿ ಲಿಂಗವಿಷಯಕ ಜ್ಞಾನವನ್ನೂ ಪ್ರಗತಿಯನ್ನೂ ಉಂಟು ಮಾಡಿಕೊಳ್ಳತಕ್ಕದ್ದು."[೯] ಎಂದಿರುವರು. ತತ್ವವಿಚಾರಕ್ಕೆ ಸರಳ ನೇರ ಹಿನ್ನೆಲೆಯನ್ನು ಹೀಗೆ ನೀಡುವುದು ಗಮನಾರ್ಹ.

ವಚನಶಾಸ್ತ್ರಸಾರ–೩ ರಲ್ಲಿ (ಪೂರ್ವಾರ್ಧ ಮತ್ತು ಉತ್ತರಾರ್ಧ ಸೇರಿ) ನಾಲ್ಕು ಭಾಗಗಳಿವೆ. ಅವು ೧. ಕ್ರಿಯೆ, ೨. ಆಚಾರಭೇದಗಳು ೩–೪ ಅಷ್ಟಾವರಣಗಳು. ಎಂದರೆ ವಚನಕಾರರ ತಾತ್ವಿಕ ವಿಚಾರಗಳು ಇಲ್ಲಿ ಮುಂದುವರೆದಿವೆ. 'ಕ್ರಿಯೆ' ವಿಭಾಗವು ಸಿದ್ಧರಾಮ ಶಿವಯೋಗಿಯ 'ಮಾಡದೆ ಮೋಕ್ಷವ ಹಡೆದು ಹೋದರೆಂಬ ವಾರ್ತೆಯ ಕೇಳಿಹಿರೇನಯ್ಯಾ?' ವಚನದಿಂದ ಆರಂಭಿಸಲಾಗಿದೆ. ಇದರಲ್ಲಿ ಕ್ರಿಯೆಯ ಸಾಮಾನ್ಯ ಸ್ವರೂಪದಿಂದ ಹಿಡಿದು, ಅಂಗ ಲಿಂಗ ಸಾಮರಸ್ಯದ ತನಕ ಮೂವತ್ತೊಂದು ಉಪವಿಭಾಗಗಳಿದ್ದು, ಅವುಗಳಿಗೆ ಪೂರಕವಾಗಿ ೨೮೮ ವಚನಗಳನ್ನು ಸಂಯೋಜಿಸಿದ್ದಾರೆ. ಉಪವಿಭಾಗಗಳಿಗೆ ಶೀರ್ಷಿಕೆ ನೀಡುವಲ್ಲಿ, ಪ್ರತಿ ಉಪವಿಭಾಗಕ್ಕೆ ವಿಷಯಾನುಸಾರ ವಚನಗಳನ್ನು ಸೇರಿಸುವಲ್ಲಿ ಅವರು ವಿವೇಚನೆಯಿಂದ, ತಾತ್ವಿಕ ಬದ್ಧತೆಯಿಂದ ಕೆಲಸ ಮಾಡಿದ್ದಾರೆ. ಅಷ್ಟಾವರಣಗಳ ವಿಚಾರ ಹೇಳುವಾಗ ಇದೇ ಕ್ರಮ ಅನುಸರಿಸಿದ್ದರೂ, ಗುರು ಲಿಂಗ ಜಂಗಮಗಳನ್ನು ವಚನಗಳಾಧಾರಿತ ನಿರೂಪಿಸಿದ ನಂತರದಲ್ಲಿ 'ಶಿವಯೋಗ' ಎಂಬ ಭಾಗವನ್ನು ನೀಡಿದ್ದಾರೆ. ಅದಕ್ಕಾಗಿ ನಾಲ್ವತ್ತು ವಚನಗಳನ್ನು ಸಂಯೋಜಿಸಿದ್ದಾರೆ. ಚಕ್ರಗಳಲ್ಲಿ ಲೈಂಗಿಕಶಕ್ತಿಯ ಆವಿರ್ಭಾವ, ನಿಜಸಮಾಧಿ, ಬಯಲು ಎಂಬ ಮೂರು ಒಳವಿಭಾಗಗಳಲ್ಲಿ ಶಿವಯೋಗ ಹರಡಿಕೊಂಡಿದೆ.

ಅಷ್ಟಾವರಣಗಳನ್ನು ಹೇಳಿರುವ ಹಲವು ಸಂಕಲನಕಾರರು ಎಂಟು ಆವರಣಗಳನ್ನು ಕ್ರಮವಾಗಿ ಹೇಳಿರುವುದೇ ಹೆಚ್ಚು. ಆದರೆ ಹಳಕಟ್ಟಿಯವರು ಗುರು, ಲಿಂಗ, ಜಂಗಮ, ಮೂರು ತತ್ವ ಹೇಳಿ, ಅಲ್ಲಿ 'ಶಿವಯೋಗ' ವಿಚಾರ ಸೇರಿಸಿದ್ದಾರೆ. ನಂತರದಲ್ಲಿ ಮುಂದೆ ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳ ವಿಚಾರ ಬಂದಿದೆ. ಇದಕ್ಕೆ ಹಳಕಟ್ಟಿಯವರ ಸೂಕ್ಷ್ಮಗ್ರಹಿಕೆ ಕಾರಣ. ಗುರು, ಲಿಂಗ, ಜಂಗಮ ಅಷ್ಟಾವರಣಗಳಲ್ಲಿ ಪ್ರಾಥಮಿಕ ಆದ್ಯತೆಯನ್ನು ಪಡೆದ ತತ್ವಗಳು; ಅವು ಲಿಂಗಾಯತದ ಸಾರಸತ್ವಗಳು. ಅವುಗಳನ್ನು ಪೂರ್ಣತಃ ಅಳವಡಿಸಿಕೊಂಡರೆ, ಮಹತ್ವದ ಹಂತದ ಸಾಧನೆಯಾದಂತೆ. ಆಗ ಶಿವಯೋಗ ಸುಲಭಸಾಧ್ಯ. ಶಿವಯೋಗದಿಂದ ಪಾದೋದಕ ಪ್ರಸಾದ, ವಿಭೂತಿ,

ರುದ್ರಾಕ್ಷಿ, ಮಂತ್ರಗಳ ದಾರಿ ಸುಲಭ ಮತ್ತು ನಿಚ್ಚಳವಾಗುತ್ತದೆ. ಈ ಭಾವನೆಯ ಕಾರಣ ಅವರು ಅಷ್ಟಾವರಣದ ಮಧ್ಯದಲ್ಲಿ ಶಿವಯೋಗ ತಂದಿರಬಹುದು.

ಶಿವಯೋಗಕ್ಕೆ ವಿವರಣೆ ನೀಡುವಾಗ ಅದನ್ನು ತಾವು ಅಷ್ಟಾವರಣಗಳ ನಡುವೆ ತಂದುದರ ಔಚಿತ್ಯವನ್ನು ಹೇಳಿದ್ದಾರೆ. "ಗುರುಲಿಂಗಜಂಗಮದ ಸಾಧನೆಯಿಂದ ಶಿವಯೋಗವು ಅಳವಡುವದು. ಈ ಸಾಧನೆಯ ಮೂಲಕ ಅವನ ಎಲ್ಲ ಶರೀರಗಳೂ ಇಂದ್ರಿಯಗಳೂ ಅತ್ಯುಚ್ಚಸ್ಥಿತಿಯನ್ನು ಹೊಂದುತ್ತವೆ. ಆಗ ಅವನಲ್ಲಿ ಲಿಂಗದ ಕಳೆಯು ಪ್ರಜ್ವಲಿಸಹತ್ತುವುದು. ಈ ಸ್ಥಿತಿಯು ಉಂಟಾದ ಕೂಡಲೆ ಅವನಲ್ಲಿಯ ಚಕ್ರಗಳೂ ಶಕ್ತಿಗಳೂ ಉನ್ನತ ಭಾವವನ್ನು ಹೊಂದುತ್ತವೆ."[೧೦] ಇದು ವಿಚಾರರ್ಹವಾಗಿದೆ. ಎಂದರೆ ಅಷ್ಟಾವರಣಗಳನ್ನು ಸಾಧಕನ ಸಾಧನೆಗೆ ಅಗತ್ಯ ಎಂದು ಅವರು ಭಾವಿಸಿದ್ದರು, ಅವುಗಳಲ್ಲಿ ಎರಡು ಹಂತಗಳಿದ್ದು ಗುರುಲಿಂಗಜಂಗಮ ಸಾಧನೆ ಮೊದಲ ಹಂತ ಎಂಬುದು ಅವರ ಸೂಚನೆಯಾಗಿತ್ತು.

ಒಟ್ಟಿನಲ್ಲಿ ಫ.ಗು. ಹಳಕಟ್ಟಿಯವರು ಕನ್ನಡ ಗ್ರಂಥ ಸಂಪಾದನೆಯ ಆರಂಭಿಕ ಸಾಹಸಿಗಳಲ್ಲಿ ಅಗ್ರಗಣ್ಯರು. ಅವರು ಆ ಶಾಸ್ತ್ರದ ಅಧ್ಯಯನದ ಶಿಸ್ತಿನಿಂದ ಬಂದವರಲ್ಲ; ಹಸ್ತಪ್ರತಿ ಶಾಸನ, ಭಾಷೆ, ಲಿಪಿ, ಇತಿಹಾಸಗಳ ವಿದ್ಯಾರ್ಥಿಯಾಗಿರಲಿಲ್ಲ. ಆದರೆ ಸ್ವಸಾಮರ್ಥ್ಯದಿಂದ ತಾವಾಗಿಯೇ ಇವುಗಳಲ್ಲಿ ಪರಿಣಿತಿ ಸಾಧಿಸಿದರು. ತಮ್ಮ ವಕೀಲಿ ವೃತ್ತಿಗೆ ಬಾಧಕವಾದರೂ ಲೆಕ್ಕಿಸದೆ ಹಸ್ತಪ್ರತಿ ಸಂಗ್ರಹಿಸಿದರು. ತಮ್ಮ ಹಣಕಾಸಿನ ಕಷ್ಟನಷ್ಟಗಳನ್ನು ಗಮನಿಸದೆ ಕೆಲವು ಹಸ್ತಪ್ರತಿ ಖರೀದಿಸಿದರು. ಅನಾರೋಗ್ಯದಲ್ಲಿದ್ದರೂ ಕೆಲಸ ಮಾಡಿದರು. 'ವಚನಶಾಸ್ತ್ರಸಾರ' ವನ್ನು ಅವರು ರೂಪಿಸಿದ ವೃತ್ತಾಂತ ವಿಶೇಷವಾಗಿದೆ. ಸಾವಿರ, ಸಾವಿರ ವಚನಗಳನ್ನು ಆಯ್ದು, ಸರಿಪಡಿಸಿ, ಹೊಂದಿಸಿ, ತಾತ್ವಿಕ ಚೌಕಟ್ಟಿಗೆ ತಂದು, ಅಲ್ಲಲ್ಲಿ ಅರ್ಥ, ಟೀಕು, ವಿವರಣೆ, ಸೂಚನೆ ನೀಡಿ ಸಂಪಾದಿಸಿದ ಸಹನೆ, ಸಂಯಮ, ವಿವೇಕ, ಎಚ್ಚರ, ಕೌಶಲ ಜಾಣ್ಮೆಗಳಿಗೆ ಎಂಥವರೂ ತಲೆಬಾಗಬೇಕು. ಅನೇಕ ಕೊರತೆ, ಅಶುದ್ಧಿ, ಅರ್ಥ ಅಸ್ಫುಟತೆಗಳ ನಡುವೆಯೂ ಅವರ ಸಂಪಾದನೆ ನಾಡಿಗೆ ವಚನಸಾಹಿತ್ಯವನ್ನು ಶಾಶ್ವತವಾಗಿ ಉಳಿಸಿಕೊಟ್ಟಿತು. ವಚನಶಾಸ್ತ್ರಸಾರ ಹೊರತು ಪಡಿಸಿದರೆ ಅವರು ಬಿಡಿಯಾಗಿ ವಚನಕಾರರ ವಚನ ಸಂಕಲನಗಳನ್ನು ಪ್ರತ್ಯೇಕವಾಗಿ ಸಂಪಾದಿಸಿದ್ದಾರೆ. ಅವುಗಳ ಸಂಪಾದನಾ ವಿಚಾರ ಇದಕ್ಕಿಂತ ತುಸು ಭಿನ್ನವಾಗಿದ್ದು ಅದನ್ನು ಪ್ರತ್ಯೇಕವಾಗಿ ಗಮನಿಸಬಹುದು.

ಟಿಪ್ಪಣಿಗಳು :

೧. ಕನ್ನಡ ಹಸ್ತಪ್ರತಿ–ಗ್ರಂಥಸಂಪಾದನೆ : (ಲೇ.) ವೈ.ಸಿ. ಭಾನುಮತಿ, ಮಹಾಮಾರ್ಗ–ಪುಟ ೧೬೮, (ಸಂ.) ಸದಾನಂದ ಕನವಳ್ಳಿ, ವೀರಣ್ಣ ರಾಜೂರ : ತೋಂಟದಾರ್ಯಮಠ, ಗದಗ, ರುದ್ರಾಕ್ಷಿಮಠ ಬೆಳಗಾವಿ–೧೯೯೮.

೨. ವಚನಪಿತಾಮಹ : ಸಂಗಮನಾಥ ಜಿ. ಹಂಡಿ, ಪುಟ–೬, ಸಂಗನಬಸವೇಶ್ವರ ಆರ್ಟ್ಸ್ ಕಾಲೇಜು ವಿಜಾಪುರ–೧೯೬೮

೩. ಅದೇ ಪುಟ–೫೩

೪. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ : ಸಂಪುಟ ೫ : ಸಂ. ಡಾ. ಎಂ.ಎಂ. ಕಲಬುರ್ಗಿ, ಪುಟ–೩, ಹಳಕಟ್ಟಿ ಸಂಶೋಧನ ಕೇಂದ್ರ ವಿಜಾಪುರ–೨೦೦೭

೫. ಅದೇ ಪುಟ–೬

೬. ಅದೇ ಪುಟ –೨೯

೭. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ : ಸಂಪುಟ ೫ : ಸಂ. ಡಾ. ವೀರಣ್ಣ ರಾಜೂರ, ಪುಟ–೧೦, ಹಳಕಟ್ಟಿ ಸಂಶೋಧನಾ ಕೇಂದ್ರ ವಿಜಾಪುರ–೨೦೦೭

೮. ಅದೇ ಪುಟ–೨೩

೯. ಅದೇ ಪುಟ–೨೨೫

೧೦. ಅದೇ ಪುಟ–೫೯೭

❐❐

ಜಿನವಲ್ಲಭನ ಶಾಸನ

ಡಾ. ಸಿ.ಕೆ. ಜಗದೀಶ್

❖

ಕನ್ನಡದ ಆದಿಕವಿ ಪಂಪನ ಬದುಕು, ಬರಹ ಮೊದಲಾದ ವಿಚಾರಗಳ ಬಗ್ಗೆ ತಿಳಿಯಲು ಆತನ ಎರಡೂ ಕಾವ್ಯಗಳಲ್ಲಿ ಸಾಕಷ್ಟು ವಿಚಾರಗಳು ನಮಗೆ ದೊರೆಯುತ್ತವೆ. ಆದರೂ, ಅವನ ಜೀವನಕ್ಕೆ ಸಂಬಂಧಿಸಿದ ಕೆಲವು ಮುಖ್ಯವಾದ ಸಂಗತಿಗಳನ್ನು ಸ್ಪಷ್ಟವಾಗಿ ತಿಳಿಯಲು ಹಾಗೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಂಪನ ಬದುಕಿನ ಇತಿವೃತ್ತವನ್ನು ಪುನರ್ರಚಿಸಿಕೊಳ್ಳಲು ಜಿನವಲ್ಲಭನ ಶಾಸನವು ನಮಗೆ ಸಹಾಯಕವಾಗಿದೆ. ಈ ಶಾಸನವು ದೊರೆತದ್ದು ೧೯೬೭ರಲ್ಲಿ. ಈಗಿನ ತೆಲಂಗಾಣ ರಾಜ್ಯದ ಕರೀಂನಗರ ಜಿಲ್ಲೆಯ ಗಂಗಾಧರಂ ಎಂಬ ಊರಿನ ಸಮೀಪ ಇರುವ ಬೊಮ್ಮಲಗುಟ್ಟ ಎಂಬ ಬೆಟ್ಟದ ಮೇಲೆ ಈ ಶಿಲಾಶಾಸನವು ಉತ್ಕೀರ್ಣಿಸಲ್ಪಟ್ಟಿದೆ. ಅಖಂಡ ಆಂಧ್ರಪ್ರದೇಶ ರಾಜ್ಯದಲ್ಲಿ ಪುರಾತತ್ವ ಇಲಾಖಾಧಿಕಾರಿಯಾಗಿದ್ದ ಡಾ. ನೆಲಟೂರಿ ವೆಂಕಟರಮಣಯ್ಯ ಎಂಬ ವಿದ್ವಾಂಸರು ಈ ಶಾಸನವನ್ನು ಪತ್ತೆಹಚ್ಚಿದರು. ಅವರು ತೆಲುಗು ಭಾಷೆಯಲ್ಲಿ ಪ್ರಕಟವಾಗುತ್ತಿದ್ದ 'ಭಾರತಿ' ಎಂಬ ಮಾಸಪತ್ರಿಕೆಯೊಂದರ ೧೯೬೭ರ ಮಾರ್ಚ್ ಸಂಚಿಕೆಯಲ್ಲಿ ಈ ಶಾಸನವನ್ನು ಕುರಿತು "ಜಿನವಲ್ಲಭುನಿ ಗಂಗಾಧರಂ ಶಿಲಾಶಾಸನಮು" ಎಂಬ ಲೇಖನವನ್ನು ಬರೆದು ಈ ಶಾಸನದ ಬಗ್ಗೆ ಬೆಳಕು ಚೆಲ್ಲಿದರು. ಅವರು ಇದನ್ನು 'ಗಂಗಾಧರಂ ಶಾಸನ' ಎಂದೇ ಕರೆದಿದ್ದರು. ಈ ಶಾಸನವು 'ಬೊಮ್ಮಲಮ್ಮನಗುಟ್ಟ' ಎಂದು ಕರೆಯಲಾಗುವ ಬೆಟ್ಟದ ಮೇಲಿರುವುದರಿಂದ ಕೆಲವರು ಇದನ್ನು 'ಬೊಮ್ಮಲಗುಟ್ಟ ಶಾಸನ' ಎಂದೂ ಕರೆದಿರುವುದುಂಟು. ಈ ಶಾಸನದ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿದ ಸಂಶೋಧಕರಾದ ಜಿ.ಎಸ್. ಗಾಯಿ ಅವರು, ಇದು ಪಂಪಕವಿಯ ಕಿರಿಯ ಸೋದರನಾದ ಜಿನವಲ್ಲಭನು ಹಾಕಿಸಿದ ಶಾಸನವಾದ್ದರಿಂದ, 'ಪ್ರಬುದ್ಧಕರ್ಣಾಟಕ'ದ ೧೯೭೨ರ ಜನವರಿ ಸಂಚಿಕೆಯಲ್ಲಿ ಈ ಶಾಸನವನ್ನು 'ಪಂಪನ ತಮ್ಮ ಜಿನವಲ್ಲಭನ ಶಿಲಾಶಾಸನ' ಎಂಬ ಲೇಖನವೊಂದನ್ನು ಬರೆದು ಅದರಲ್ಲಿ ಇದನ್ನು 'ಜಿನವಲ್ಲಭನಶಾಸನ' ಎಂದು ಕರೆದರು.

ಮುಂದೆ, ಆಂಧ್ರಪ್ರದೇಶ ಸರ್ಕಾರದ ಪುರಾತತ್ವ ಇಲಾಖೆಯವರು ಪ್ರಕಟಿಸಿರುವ ಕರೀಂನಗರ ಜಿಲ್ಲೆಯ ಶಾಸನಸಂಪುಟದಲ್ಲಿ ಈ ಶಾಸನವನ್ನು 'ಕುರ್ಕ್ಯಾಲ ಶಾಸನ' ಎಂದು ಉಲ್ಲೇಖಿಸಲಾಗಿದೆ.

ಕರೀಂನಗರ ಜಿಲ್ಲೆಯ ಕುರ್ಕ್ಯಾಲ ಎಂಬ ಗ್ರಾಮದಿಂದ ಒಂದು ಮೈಲಿ ದೂರದಲ್ಲಿರುವ ಬೊಮ್ಮಲಗುಟ್ಟ ಎಂಬ ಹೆಸರಿನ ಬೆಟ್ಟವು ಪ್ರಾಚೀನಕಾಲದಿಂದಲೂ ಜೈನಧಾರ್ಮಿಕ ಕೇಂದ್ರವಾಗಿದ್ದು ಐತಿಹಾಸಿಕವಾಗಿಯೂ ಪ್ರಾಮುಖ್ಯತೆ ಪಡೆದಿದೆ. ಕರೀಂ ನಗರದಿಂದ ಜಗತ್ಯಾಲಕ್ಕೆ ಹೋಗುವ ಮಾರ್ಗದಲ್ಲಿ ಬೊಮ್ಮಲಗುಟ್ಟ ಇದೆ. ಈ ಬೆಟ್ಟದ ಮೇಲೆ ಅನೇಕ ಜಿನಪ್ರತಿಮೆಗಳನ್ನು ಕೆತ್ತಿರುವುದರಿಂದ (ತೆಲುಗು ಭಾಷೆಯಲ್ಲಿ 'ಬೊಮ್ಮಲ' ಎಂದರೆ 'ಬೊಂಬೆ' ಎಂಬ ಅರ್ಥವಿದೆ) ಈ ಬೆಟ್ಟವನ್ನು ಬೊಮ್ಮಲಗುಟ್ಟ, ಬೊಮ್ಮಲಮ್ಮನಗುಟ್ಟ ಎಂದು ಕರೆಯುತ್ತಾರೆ. ಬೆಟ್ಟವು ವೃಷಭಾಕಾರದಲ್ಲಿ ಗೋಚರಿಸುತ್ತದೆಯಾದ್ದರಿಂದ ಇದನ್ನು ವೃಷಭಗಿರಿ ಎಂದು ಕರೆಯುವುದಾಗಿ ಸ್ಥಳೀಯರು ಹೇಳುತ್ತಾರೆ. ಆದರೆ ಜೈನಧರ್ಮದಲ್ಲಿ ವೃಷಭಾದ್ರಿ ಅಥವಾ ವೃಷಭಗಿರಿ ಎಂಬ ಪರ್ವತಕ್ಕೆ ಪೂಜ್ಯನೀಯ ಭಾವದ ವಿಶೇಷ ಅರ್ಥವಿದೆ. ಇದು ಆದಿತೀರ್ಥಂಕರ ವೃಷಭದೇವನ ಜೀವನಕ್ಕೆ ಸಂಬಧಿಸಿದಂತೆ ಮಾತ್ರವಲ್ಲದೆ ಅನಾದಿಕಾಲದಿಂದಲೂ ಜೈನಸಂಪ್ರದಾಯದಲ್ಲಿ ಐತಿಹಾಸಿಕ ಮತ್ತು ಆಧ್ಯಾತ್ಮಿಕ ಪ್ರಾಮುಖ್ಯತೆಯನ್ನು ಹೊಂದಿದ ಪರ್ವತವೆನಿಸಿದೆ. ಭರತಖಂಡದ ಉತ್ತರಭಾಗದಲ್ಲಿರುವ, ಹಿಮವತ್ಪರ್ವತದ ಮಧ್ಯಮಕೂಟಕ್ಕೆ ನೇರವಾಗಿ ದಕ್ಷಿಣದಲ್ಲಿರುವ ಪರ್ವತವನ್ನು 'ವೃಷಭಾದ್ರಿ' ಎಂದು ಕರೆಯಲಾಗುತ್ತದೆ. ಇಲ್ಲಿ ಚಕ್ರವರ್ತಿಗಳು ತಮ್ಮ ಹೆಸರುಗಳೊಂದಿಗೆ ಷಟ್ಖಂಡವಿಜಯಪ್ರಶಸ್ತಿಯನ್ನು ಶಾಸನವನ್ನಾಗಿ ಕೆತ್ತಿಸುತ್ತಾರೆ. ಗಂಗಾಧರಂ ಶಾಸನವಿರುವ ಬೆಟ್ಟವನ್ನು ಜಿನವಲ್ಲಭನು 'ವೃಷಭಗಿರಿ' ಎಂಬ ಹೆಸರಿನಿಂದ ಕರೆದಿದ್ದಾನೆ. ಪಂಚಪರಮೇಷ್ಠಿಗಳೆನಿಸಿದ ಸಿದ್ಧರು ಇಲ್ಲಿ ನೆಲಸಿದ್ದರೆಂಬ ಕಾರಣದಿಂದ ಈ ಬೆಟ್ಟವನ್ನು 'ಸಿದ್ಧುಲಗುಟ್ಟ' ಎಂದೂ ಕರೆಯಲಾಗಿದೆ. ರಾಷ್ಟ್ರಕೂಟರ ಸಾಮಂತರಾಗಿದ್ದ, ವೇಮುಲವಾಡದ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. ೭೫೩–೯೭೩) ಈ ಸ್ಥಳವು ಪ್ರಸಿದ್ಧ ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆದಿದೆ. ಇಂದಿನ ನಿಜಾಮಬಾದ್ ಮತ್ತು ಕರೀಂನಗರ ಜಿಲ್ಲೆಗಳ ಪ್ರದೇಶವೇ ಆ ಚಾಲುಕ್ಯರು ಆಳುತ್ತಿದ್ದ ವೇಮುಲವಾಡ ಪ್ರಾಂತ್ಯವಾಗಿತ್ತು. ಇಂದಿಗೂ ಹೆಸರಾಂತ ಸ್ಥಳಗಳಾದ ಬೋಧನ ಮತ್ತು ವೇಮುಲವಾಡಗಳು ಅವರ ಆಳ್ವಿಕೆಯ ಕಾಲದಲ್ಲಿಯೂ ಸುಪ್ರಸಿದ್ಧ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ವೇಮುಲವಾಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಮಾಡುತ್ತಿದ್ದ ಚಾಲುಕ್ಯರಲ್ಲಿ ರಾಜನೀತಿಜ್ಞನೂ, ಸುಕವಿಜನಾಶ್ರಯಿಯೂ ಆದ ಎರಡನೇ ಅರಿಕೇಸರಿ (ಕ್ರಿ.ಶ. ೯೩೦–೯೫೫)ಯು ಪ್ರಸಿದ್ಧ ರಾಜನಾಗಿದ್ದನು. ಆತನ ಆಳ್ವಿಕೆಯ ಕಾಲದಲ್ಲಿ ಬೊಮ್ಮಲಗುಟ್ಟದ ಮೇಲೆ ಜಿನವಲ್ಲಭನ

ಶಾಸನವನ್ನು ಕೆತ್ತಿಸಲಾಗಿದೆ. ಆದುದರಿಂದ ಈ ಶಾಸನದ ಕಾಲ ಸುಮಾರು ಕ್ರಿ.ಶ. ಸು. ೯೪೫ ರಿಂದ ೯೫೦ ಎಂದು ಹೇಳಲಾಗಿದೆ. ಬೊಮ್ಮಲಗುಟ್ಟವು ಚಾಲುಕ್ಯರ ರಾಜಧಾನಿಯಾಗಿದ್ದ ವೇಮುಲವಾಡದಿಂದ ಇಪ್ಪತ್ತು ಮೈಲಿಗಳ ಅಂತರದಲ್ಲಿದೆ. ಈ ಬೆಟ್ಟದ ಮೇಲ್ಭಾಗದಲ್ಲಿರುವ, ಭೂಸಮತಲದಿಂದ ೩೨ ಅಡಿ ಎತ್ತರವಾಗಿರುವ ಬೃಹದಾಕಾರದ ಬಂಡೆಯೊಂದರ ಮೇಲೆ ಆದಿತೀರ್ಥಂಕರ ವೃಷಭದೇವನ ಯಕ್ಷಿ[೧]ಯಾದ ಚಕ್ರೇಶ್ವರಿದೇವಿಯ ಮೂರ್ತಿ ಹಾಗೂ ಕೆಲವು ಜಿನಮೂರ್ತಿಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಶಿಲ್ಪಗಳ ಕೆಳಭಾಗದಲ್ಲಿ, ಸುಮಾರು ಹದಿನಾರು ಅಡಿ ಉದ್ದ ಮತ್ತು ಎರಡೂವರೆ ಅಡಿ ಅಗಲದ ಜಾಗದಲ್ಲಿ ಶಾಸನ ಶಾಸನಪಾಠವನ್ನು ಉತ್ಕೀರ್ಣಿಸಲಾಗಿದೆ. ಶಾಸನದ ಮೇಲ್ಭಾಗದಲ್ಲಿರುವ ಅಷ್ಟಭುಜಗಳ ಚಕ್ರೇಶ್ವರಿ ಮೂರ್ತಿಯು ಸುಮಾರು ನಾಲ್ಕೂವರೆ ಅಡಿ ಎತ್ತರವಾಗಿದ್ದು, ಅದರ ಎಡ ಮತ್ತು ಬಲಭಾಗದ ತೋಳುಗಳಿಗೆ ಸಮಾನಾಂತರವಾಗಿ ಯಕ್ಷಿಚಕ್ರೇಶ್ವರಿಗೆ ಚಾಮರ ಬೀಸುತ್ತಿರುವ ಚಾಮರಿತಿಯರ ವಿಗ್ರಹಗಳನ್ನೂ, ಯಕ್ಷಿಯ ಇಕ್ಕೆಲಗಳಲ್ಲಿ ಮೂರು ಮೂರು ಕಾಯೋತ್ಸರ್ಗ[೨] ಜಿನಮೂರ್ತಿಗಳನ್ನೂ ಕೆತ್ತಲಾಗಿದೆ. ಚಕ್ರೇಶ್ವರಿಯ ಮೇಲ್ಭಾಗದಲ್ಲಿ ಸುಮಾರು ಏಳು ಅಡಿ ಎತ್ತರವಾಗಿರುವ ತೀರ್ಥಂಕರರ ಪ್ರತಿಮೆಗಳಿದ್ದು ಅವುಗಳ ಶಿರದ ಮೇಲೆ ಮೂರು ಛತ್ರಿಗಳಿಂದ ಮೇಲಾವರಣ ಮಾಡಲಾಗಿದೆ. ಅವುಗಳನ್ನು ಆದಿತೀರ್ಥಂಕರ ವೃಷಭದೇವ ಮತ್ತು ಕೊನೆಯ ತೀರ್ಥಂಕರನಾದ ವರ್ಧಮಾನ ಮಹಾವೀರರ ಪ್ರತಿಮೆಗಳೆಂದು ಹೇಳುವುದುಂಟು. ಚಕ್ರೇಶ್ವರಿವಿಗ್ರಹದ ಕೆಳಭಾಗದಲ್ಲಿ ಆಕೆಯ ವಾಹನವಾದ ಗರುಡಮೂರ್ತಿಯ ವಿಗ್ರಹ ಕೆತ್ತಿರುವುದನ್ನೂ ಗಮನಿಸಬಹುದು.

ಜಿನವಲ್ಲಭನ ಶಾಸನವು ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಿಂದ ಕೂಡಿರುವ ತ್ರಿಭಾಷಾ ಶಾಸನವಾಗಿದೆ. ಶಾಸನವು ಓಂ ನಮಃ ಸಿದ್ಧೇಭ್ಯಃ ಎಂಬ ಸಂಸ್ಕೃತಭಾಷೆಯ ವಿನಮ್ರನುಡಿಯೊಂದಿಗೆ ಪ್ರಾರಂಭವಾಗುತ್ತದೆ. ಇದಾದ ಬಳಿಕ ಆದಿ ಮತ್ತು ಅಂತ್ಯದಲ್ಲಿ ಕನ್ನಡ ಗದ್ಯವಿದೆ. ಮಧ್ಯದಲ್ಲಿ ಹನ್ನೆರಡು ಪದ್ಯಗಳಿವೆ. ಅವುಗಳಲ್ಲಿ ಮೊದಲ ಮೂರು ಪದ್ಯಗಳು ಸಂಸ್ಕೃತ ಭಾಷೆಯಲ್ಲಿದ್ದರೆ, ನಂತರದ ಆರು ಪದ್ಯಗಳು ಕನ್ನಡ ಭಾಷೆಯಲ್ಲಿವೆ. ಅವುಗಳ ಬಳಿಕ ಕೆತ್ತಲಾಗಿರುವ ಮೂರು ಕಂದಪದ್ಯಗಳು ತೆಲುಗುಭಾಷೆಯಲ್ಲಿವೆ. ಹೀಗಾಗಿ ಜಿನವಲ್ಲಭನ ಶಾಸನವು ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಉತ್ಕೀರ್ಣಿತವಾದ ವಿಶೇಷಶಾಸನವೆನಿಸಿದ್ದು, ಶಾಸನದ ಪಾಠ ಇಂತಿದೆ :

ಓಂ ನಮಃ ಸಿದ್ಧೇಭ್ಯಃ,

ಸ್ವಸ್ತಿ ಸಮಸ್ತ ಸಕಳಕಳಾಕಳಾಪ[೩] ಪ್ರವೀಣಂ ಭವ್ಯರತ್ನಾಕರಂ ಗುಣಪಕ್ಷಪಾತಿ ಬೆಂಗಿನಾಡ ಸಪ್ತಗ್ರಾಮುಗಳೊಳಗಣವಂಗಿಪಜ್ಜಿ ಕಮ್ಮೆಬ್ರಾಹ್ಮಣಂ ಜಮದಗ್ನಿ

ಪಂಚಾರ್ಷೇಯಂ ಶ್ರೀವತ್ಸಗೋತ್ರಂ ಗುಣ್ಡಿಕಜ್ಝ ನಿಡುಂಗೊಣ್ಡೆಯಭಿಮಾನಚನ್ದ್ರನ ಮರ್ಮ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮರ್ಮ್ಮಳಬ್ಬಣಬ್ಬೆಯ ಮಗಂ ಕೊಣ್ಡಕುನ್ದೆಯ ದೇಸಿಗಗಣದ ಪೊತ್ಥಗೆಯ ಬಳಿಯ ಪಣ್ಡರಂಗವಲ್ಲಿಯ ಜಯಣನ್ದಿಸಿದ್ಧಾನ್ತಭಟಾರರ ಗುಡ್ಡಂ ಜಿನವಲ್ಲಭಂ ಸಬ್ಬಿನಾಡ ನಟ್ಟನಡುವಣ ಧರ್ಮ್ಮವುರದುತ್ತರ ದಿಗ್ಭಾಗದ ವೃಷಭಗಿರಿಯೆಂಬನಾದಿ ಸಂಸಿದ್ಧತೀರ್ತ್ಥದ ದಕ್ಷಿಣ ದಿಶಾಭಾಗದೀ ಸಿದ್ಧಶಿಲೆಯೊಳ್ತಮ್ಮ ಕುಲದೈವವಪ್ಪಾದ್ಯನ್ತ ಜಿನಬಿಂಬಗಳುಮಂ ಚಕ್ರೇಶ್ವರಿಯುಮಂ ಪೆಱವು ಜಿನಪ್ರತಿಮೆಗಳುಮಂ ತ್ರಿಭುವನತಿಲಕವೆಂಬ ಬಸದಿಯುಮಂ ಕವಿತಾಗುಣಾರ್ಣ್ಣವಮೆಂಬ ಕೆಱೆಯುಮಂ ಮದನವಿಳಾಸಮೆಂಬ ಬನಮುಮಂ ಮಾಡಿಸಿದಂ.

ಶಾರ್ದೂಲವಿಕ್ರೀಡಿತ ವೃತ್ತ :–

ಭ್ರಾತದ್ಧರ್ಮಪುರಂ ಪ್ರಯಾಮ ಕಿಮತೋ ಜೈನಾಭಿಷೇಕೋತ್ಸವ
ಕ್ಷೀರಪ್ಲಾವಿತ ತುಂಗ ಶೃಂಗ ವೃಷಭಕ್ಷೋಣೀದ್ಧ್ರಮೀಕ್ಷಾಮಹೇ
ಯಾತ್ರಾಯಾತ ಸಮಸ್ತ ಭವ್ಯ ಜನತಾಸನ್ಮಾನ ದಾನೋದ್ಯತಂ
ಪಂಪಾರ್ಯ್ಯಾನುಜಮತ್ರ ಭೀಮತನುಜಂ ಸಮ್ಯಕ್ತ್ವರತ್ನಾಕರಂ ॥ ೧ ॥

ಶಾರ್ದೂಲವಿಕ್ರೀಡಿತ ವೃತ್ತ :–

ಗೀತಂಗಾತುಮನೇಕ ಭೇದ ಸುಭಗಂ ಕಾವ್ಯಾನಿ ಸೋಚ್ಚಾವಚಂ
ವಾಚಾ ವಾಚಯಿತುಂ ಪ್ರಿಯಾಣಿ ವದಿತುಂ ಸಾಧೂಪಕರ್ತ್ತುಂ ಸತಾಂ
ಭೋಗಾನ್ಸೇವಿತುಮಂಗನಾರಮಯಿತುಂ ಪೂಜಾಂ ವಿಧಾತುಂ ಜಿನೇ
ಜಾನೀತೇ ಜಿನವಲ್ಲಭಃ ಪರಮಿದಂ ಪಂಪಾಭಿಧಾನಾನುಜಃ ॥ ೨ ॥

ಪೃಥ್ವೀವೃತ್ತ :–

ಅಜಸ್ರ ಜಿನವನ್ದನಾಗತ ಮುನೀಶ್ವರ ಶ್ರಾವಕ
ಪ್ರಜಾಸ್ತವ ರವ ಪ್ರತಿಧ್ವನಿತಶಬ್ದ ಕೋಳಾಹಳೈಃ
ಅಧಿಷ್ಠಿತ ದಿಗಂಬರೋ ವೃಷಭಶೈಲ ಏಷ ಸ್ವಯಂ
ಪರಾಂ ವದತಿ ವಾಚಕಾಭರಣಕೀರ್ತ್ತಿಮಾಕಳ್ಪತಃ ॥ ೩ ॥

ಚಂಪಕಮಾಲಾ ವೃತ್ತ :–

ಬಗೆಯಲಳುಂಬಮೀ ಬಗೆಯನಾರ್ಬ್ಬಗೆವೊರ್ಬ್ಬಗೆಗಾಸೆಯಲ್ತು ದಿ
ಟ್ಟಿಗೆ ಪೊಲನಲ್ತುನೀಳ್ದ ಸಱಿಯೊಳ್ಜಿನಬಿಂಬಮನೀತನೀಗಳೆ
ನ್ತಗಟಿಸಿದಪ್ಪೊನೆನ್ದು ಬಗೆವನ್ನೆವರಂ ಜಿನಬಿಂಬಮಲ್ಲಿತೊ
ಟ್ಟಿಗೆ ನೆಗಟ್ದೆಟ್ದುವೇಂ ಚರಿತಮಚ್ಚರಿಯೋ ಜಿನವಲ್ಲಭೇನ್ದ್ರನಾ ॥ ೪ ॥

ಚಂಪಕಮಾಲಾ ವೃತ್ತ :–

ಇದು ಕವಿತಾ ಗುಣಾರ್ಣ್ಣವನ ಕೀರ್ತ್ತಿಯ ಮೂರ್ತ್ತಿವೊಲಾಗಿ ದಕ್ಷಿಣಾ
ರ್ದ್ಧದ ವೃಷಭಾದ್ರಿಯ (ಕ್ಕೆ) ವೃಷಭೇಶ್ವರಬಿಂಬಸನಾಥಮೆಂಬಲಂ
ಪೊದವೆ ನಿಜದ್ವಿಜಾವಸಥಪರ್ವ್ವತಮಮಂ ಜಿನಚೈತ್ಯಮಾಗೆ ಮಾ
ಡಿದ ಜಿನವಲ್ಲಭಂಗೆ ಜಿನವಲ್ಲಭನಪ್ಪುದಮೊನ್ದುಚೋದ್ಯಮೋ ॥ ೫ ॥

ತರಳವೃತ್ತ :–

ಚದುರ ಮಯ್ಮೆಯ ಸತ್ಕವಿತ್ವದ ಸನ್ದಪಂಪನ ತಮ್ಮನೋ
ರ್ವ್ವದೆ ಪೊಗಟ್ತೆಯೆ ಬಾಜಿಸಲ್ಬರೆಯಲ್ಕವಿತ್ವದ ತತ್ವದೊ
ಳ್ಪುದಿದು ನೇರ್ವ್ವಡೆ ಪೇೞಲುರ್ವ್ವಿಗಪೂರ್ವ್ವಮಾಗಿರೆ ಬಲ್ಲೊನ
ಪ್ಪದಜಿನೊರ್ವ್ವನೆ ವಾಗ್ವಧೂವರವಲ್ಲಭಂ ಜಿನವಲ್ಲಭಂ ॥ ೬ ॥

ಚಂಪಕಮಾಲಾ ವೃತ್ತ :–

ವಿನುತ ಚಳುಕ್ಯ ವಂಶಪತಿಮಿಕ್ಕರಿಕೇಸರಿ ಸನ್ದ ವಿಕ್ರಮಾ
ರ್ಜುನ ವಿಜಯಕ್ಕೆ ಧರ್ಮ್ಮಪುರಂಮೆನ್ದುಮದೇಯಮಿದೆನ್ದು ಕೀರ್ತ್ತಿಶಾ
ಸನಮೆನೆ ಕೊಟ್ಟ ಶಾಸನದ ಪಂಪನ ನಂಬಿದುದೊನ್ದು ಜೈನಶಾ
ಸನದ ನೆಗಟ್ತೆಯಂ ವೃಷಭಪರ್ವತಮನ್ತದು ತಾನೆ ಪೇೞ್ದೇ ॥ ೭ ॥

ಮತ್ತೇಭವಿಕ್ರೀಡಿತ ವೃತ್ತ :–

ಎಸಗಲ್ಗಾಳಿ ಪುಗಲ್ಪತಂಗಕಿರಣಂ ಸಾರಲ್ಮಿಗಂ ಪಾೞಲಾ
ಗಸದೊಳ್ಪಕ್ಕಿಗಳಲ್ಲಿ ಸಲ್ಲವೆನಿಸಿರ್ಟ್ಟನ್ಯೋದಯಂ ಧರ್ಮದೊ
ಳ್ಜಸಮಂ ಪೊಂಪುಟಿಮಾಡೆ ಮೆಚ್ಚಿ ಹರಿಗಂ ಪಂಪಂಗೆಗೊಟ್ಟಾ ದ್ವಿಜಾ
ವಸಥಗ್ರಾಮದೇನ್ನೆಗೆಟ್ತೆಯಕಳಾಪಗ್ರಾಮಮುಂ ಪೋಲ್ತುದೋ ॥ ೮ ॥

ಚಂಪಕಮಾಲಾ ವೃತ್ತ ॥

ಬರೆದುದೆ ತಾಂಬ್ರಶಾಸನಮದೇಯಮೆ ಧರ್ಮ್ಮಪುರಂ ನೆಗಟ್ತೆವೆ
ತ್ತರಿಗನ ಕೊಟ್ಟುದೇ ನೆಗಟ್ದ ಪಂಪನ ಪೆತ್ತುದೆ ಪೇೞಮೆನ್ದು ನೀ
ಮ್ಮರುಳೆ ಪಲರ್ಮ್ಮೆಯುಂಪಲಬರಂ ಬೆಸಗೊಳ್ಳದೆ ಪೋಗಿ ನೋಡ ಸು
ನ್ದರ ವೃಷಭಾಚಲೋನ್ನತಶಿಳಾತಳದೊಳ್ಬರೆದಕ್ಕರಂಗಳಂ ॥ ೯ ॥

ಕನ್ದಂ :–

ಜಿನಭವನಂಬುಲೆತ್ತಿಂಚುಟ
ಜಿನಪೂಜಲಸೇಯುಚುನ್ನಿ ಜಿನಮುನುಲಕುನತ್ತಿನ
ಯನ್ನದಾನಂಬೀವುಟಂ
ಜಿನವಲ್ಲಭುಭೋಲಂಗಲರೆಜಿನಧರ್ಮ್ಮಪುರಲ್ ॥ ೧೦ ॥

ದಿನಕರುಸುರಿವೆಲ್ಗುದುಮನಿ
ಜಿನವಲ್ಲಭುನೊಟ್ಟ ನೆತ್ತು ಜಿತಕವಿನನನುಂ
ಮನುಜುಲ್ಗಲರೇ ಥಾತ್ರಿಂ
ವಿನಿತಿಚ್ಚಿದುನನಿಯ ವೃತ್ತ ವಿಬುಧ ಕವೀನ್ದುಲ್ ॥ ೧೧ ॥

ಒಕ್ಕೊಕ್ಕೊಗುಣಂಬು ಕಲ್ಗುದು
ರೊಕ್ಕಕೊಣ್ಡಿಗಾಕೊಕ್ಕೊಲಕ್ಕಲೇವೆವ್ವರಿಕಿಂ
ಲೆಕ್ಕಿಂಪನೊಕ್ಕೊಲಕ್ಕಕು
ಮಿಕ್ಕಿಲಿ ಗುಣಪಕ್ಷಪಾತಿ ಗುಣಮಣಿಗಣಂಬುಲ್ ॥ ೧೨ ॥

ಎನ್ದು ಲೋಕಮೆಲ್ಲಂ ಪೊಗೞೆ ನೆಗೞ್ದ ಜಿನವಲ್ಲಭನ ಸುಧರ್ಮ್ಮಸನ್ತತಿಯೊಳ್ತೊಟ್ಟ ಗುಣಾವಳಿಯನೀ ವೃಷಭಗಿರಿಯ ಸಿದ್ಧಶಿಲೆಯೊಳೆಱೆಯಮ್ಮಂ ಟಂಕೋತ್ಕೀರ್ಣ್ಣಮ್ಮಾಡಿದಂ ॥

ಶಾಸನಪಾಠದ ವಿಶ್ಲೇಷಣಾತ್ಮಕ ವಿವರಣೆ :

ಓಂ

ಈ ಶಾಸನವು ಓಂಕಾರದೊಂದಿಗೆ ಪ್ರಾರಂಭವಾಗಿದೆ. ಭಾರತೀಯರ ಪ್ರಕಾರ ಯಾವ ಕೃತಿಯೇ ಆಗಿರಲಿ ಅವು ಮಂಗಳಶ್ಲೋಕದಿಂದ ಪ್ರಾರಂಭವಾಗುವುದು ರೂಢಿ. ಶಾಸನಗಳಲ್ಲಿ ಶೈವಶಾಸನಗಳು ಶಿವಸ್ತುತಿಯಿಂದ, ವೈಷ್ಣವಶಾಸನಗಳು ವಿಷ್ಣುಸ್ತುತಿಯಿಂದ ಪ್ರಾರಂಭವಾಗುವಂತೆ ಜೈನಶಾಸನಗಳು ಜಿನಸ್ತುತಿಯೊಂದಿಗೆ ಪ್ರಾರಂಭವಾಗುತ್ತವೆ. ಕೆಲವು ಪ್ರಾಚೀನ ಜೈನಶಿಲಾಲೇಖಗಳಲ್ಲಿ 'ಸಿದ್ಧಸ್ವಸ್ತಿ' ಎಂದೋ, 'ಭದ್ರಮಸ್ತು ಜಿನಶಾಸನಾಯ' ಎಂದೋ ಇದ್ದುದನ್ನು ಸಂಶೋಧಕರು ತೋರಿಸಿಕೊಟ್ಟಿದ್ದಾರೆ.

ಹಿಂದೂ, ಜೈನ, ಬೌದ್ಧ ಮೊದಲಾದ ಧರ್ಮಗಳಲ್ಲಿ ಓಂಕಾರಕ್ಕೆ ವಿಶೇಷವಾಗಿ ಪವಿತ್ರ ಭಾವದ ಅರ್ಥವಿದೆ. 'ಅ' ಕಾರ 'ಉ'ಕಾರ 'ಮ'ಕಾರಗಳೆಂಬ – ಕ್ರಮವಾಗಿ ಸೃಷ್ಟಿ, ಸ್ಥಿತಿ ಮತ್ತು ಲಯಸೂಚಕವಾದ – ಮೂರು ಅಕ್ಷರಗಳಿಂದ ಕೂಡಿದ 'ಓಂ' ಕಾರವು ದೈವಿಕಶಕ್ತಿಯನ್ನು ಹೊಂದಿದ್ದು ಆತ್ಮದ ಏಕತೆಯನ್ನು ಸೂಚಿಸುವುದೆಂಬ ನಂಬಿಕೆಯಿದೆ. ಅದೇ ರೀತಿ ಜೈನಧರ್ಮೀಯರಲ್ಲಿ 'ಓಂ' ಎಂಬ ಏಕಾಕ್ಷರವು ಪಂಚಪರಮೇಷ್ಠಿಗಳೆನಿಸುವ ಅರಿಹಂತ, ಅಶರೀರಿ, ಆಚಾರ್ಯ, ಉಪಜ್ಝಾಯ, ಮುನಿ ಎಂಬ ಐವರನ್ನು ಸೂಚಿಸುವ ಆ ಪದಗಳ ಮೊದಲ ಅಕ್ಷರಗಳ ಸೂಚಕವಾಗಿದ್ದು, ಪಂಚಪರಮೇಷ್ಠಿಗಳನ್ನು ಗೌರವಿಸುವ ಪವಿತ್ರಾಕ್ಷರವಾಗಿದೆ. ಅರಿಹಂತರಿಗೆ,

ಪರಿಪೂರ್ಣರಾದ ಸಿದ್ಧರಿಗೆ, ಗುರುಗಳಿಗೆ, ಉಪಾಧ್ಯಾಯರಿಗೆ ಮತ್ತು ಜಗತ್ತಿನ ಎಲ್ಲ ಸಂನ್ಯಾಸಿಗಳಿಗೆ ಪೂಜಿಸುವೆನು ಎಂಬರ್ಥವನ್ನು 'ಓಂ' ಕಾರವು ಹೊಂದಿದೆ. ಆದುದರಿಂದ ಈ ಶಾಸನದ ಪ್ರಾರಂಭದಲ್ಲಿಯೇ ಶಾಸನಕರ್ತೃ ಜಿನವಲ್ಲಭನು ಪಂಚಪರಮೇಷ್ಠಿಗಳನ್ನು ಸ್ಮರಿಸಿರುವುದು ಗಮನಾರ್ಹ.

ನಮಃ ಸಿದ್ಧೇಭ್ಯಃ : ಸಿದ್ಧರಿಗೆ ನಮಸ್ಕರಿಸುತ್ತೇನೆ.

ಜಿನವಲ್ಲಭನು ಇಲ್ಲಿ ವಿಶೇಷವಾಗಿ ಸಿದ್ಧರಿಗೆ ನಮಿಸುತ್ತಿರುವುದಾಗಿ ತಿಳಿಸಿದ್ದಾನೆ. ಆತನ ವಿನೀತಭಾವ ಇಲ್ಲಿ ವ್ಯಕ್ತವಾಗಿದೆ. ಪಂಚಪರಮೇಷ್ಠಿಗಳಲ್ಲಿ ಬರುವ ಒಂದು ವರ್ಗವೇ ಸಿದ್ಧರು. ಆತ್ಮನ ಅನಂತಗುಣಗಳಿಗೆ ಘಾತಿಯನ್ನುಂಟುಮಾಡದ ಅಘಾತಿಕರ್ಮಗಳನ್ನು ಕಳೆದುಕೊಂಡು, ದೇಹವನ್ನು ಬಿಟ್ಟು ಸಿದ್ಧಶಿಲೆಗೆ ಹೋಗಿ ಶಾಶ್ವತಸುಖದಲ್ಲಿ ನೆಲಸಿದ ಕೇವಲಿಗಳನ್ನು ಸಿದ್ಧರು ಎನ್ನಲಾಗುತ್ತದೆ. ಇವರಲ್ಲಿ ಸಾಮಾನ್ಯ ಸಿದ್ಧರು ಮತ್ತು ತೀರ್ಥಂಕರ ಸಿದ್ಧರು ಎಂದು ಎರಡು ವಿಧಗಳಿವೆ. ಇಂತಹ ಪರಿಪೂರ್ಣಸಾಧಕರಿಗೆ(ಸಿದ್ಧರಿಗೆ) ನಮಸ್ಕರಿಸುತ್ತಿದ್ದೇನೆ ಎಂದು ಇಲ್ಲಿ ಹೇಳಲಾಗಿದೆ.

ಸ್ವಸ್ತಿ : ಒಳ್ಳೆಯದಾಗಲಿ.

ಪ್ರಾಚೀನ ಶಿಲಾಶಾಸನಗಳ ಆರಂಭದಲ್ಲಿ – ಕೆಲವು ಶಾಸನಗಳಲ್ಲಿ ಮಾತ್ರ – ಪ್ರಾರ್ಥನಾ ಶ್ಲೋಕಗಳಿದ್ದರೂ ಉಳಿದಂತೆ ಬಹುತೇಕ ಶಾಸನಗಳಲ್ಲಿ ಸಾಮಾನ್ಯವಾಗಿ ಸ್ವಸ್ತಿ, ಸ್ವಸ್ತಿಶ್ರೀ, ಶ್ರೀ ಮುಂತಾದ ಮಂಗಳವಾಚಕಗಳು ಇದ್ದೇ ಇರುತ್ತವೆ. ಈ ಶಬ್ದಗಳು ಲೋಕಹಿತವನ್ನು ಬಯಸುವ ಶುಭಸೂಚಕವಾಗಿರುತ್ತವೆ.

ಶಾಸನದಲ್ಲಿರುವ ಈ 'ಸ್ವಸ್ತಿ' ಎಂಬ ಶಬ್ದದ ಬಳಿಕ ಕೆಲವು ಅಕ್ಷರಗಳು ತ್ರುಟಿತವಾಗಿವೆ ಎಂದು ಭಾವಿಸಿ, ಶಾಸನದ ಕಾಲವನ್ನು ಸೂಚಿಸುತ್ತಿರುವಂತೆ "ಶಕನೃಪ ಕಾಲಾತೀತ ಸಂವತ್ಸರ ಶತಂಗಳೆಂಟುನೂಱೆಪ್ಪತ್ತೆರಡನೆಯ ಸೌಮ್ಯಮೆಂಬ ಸಂವತ್ಸರಂ ಪ್ರವರ್ತ್ತಿಸೆ" ಎಂಬ ಸಾಲನ್ನು ತುಂಬಿ ಬರೆದಿರುವುದು ಕೆಲವು ಮುದ್ರಿತ ಪುಸ್ತಕಗಳ ಶಾಸನಪಾಠದಲ್ಲಿ ಕಂಡುಬರುತ್ತಿದೆ. ಆದರೆ ಆ ಪಙ್ತಿಯು ಮೂಲ ಶಾಸನದಲ್ಲಿ ಇಲ್ಲವೆಂಬುದು ಗಮನೀಯ ಸಂಗತಿಯಾಗಿದೆ.

ಸ್ವಸ್ತಿ ಎಂಬ ಮಂಗಳಸೂಚಕ ಶಬ್ದದ ಬಳಿಕ, ಗದ್ಯಭಾಗ ಮುಂದುವರಿದಿದ್ದು ಅದರ ಅರ್ಥ ಹೀಗಿದೆ :

ಸಮಗ್ರವಾದ ಎಲ್ಲ ಕಲೆಗಳ ಸಮೂಹದಲ್ಲಿಯೂ (ಕಳಾ ಕಳಾಪ) ಪ್ರವೀಣನೆನಿಸಿದವನು, ಕರ್ಮದಲ್ಲಿ ಆಳವಾಗಿ ಮುಳುಗದೆ, ಸಿದ್ಧಿಹೊಂದುವ

ಸಾಮರ್ಥ್ಯವನ್ನು ಉಳಿಸಿಕೊಂಡ ಅರ್ಹಜೀವಿಗಳಾದ ಆಸನ್ನಭವ್ಯರಲ್ಲಿ ಸಾಗರೋಪಮನೂ (ಭವ್ಯರತ್ನಾಕರಂ), ಮುಕ್ತಜೀವರಲ್ಲಿ ಇರುವ ಸಮ್ಯಕ್ತ್ವಗುಣ, ಅನಂತ ದರ್ಶನ, ಅನಂತಜ್ಞಾನ, ಅನಂತವೀರ್ಯ, ಸೂಕ್ಷ್ಮತ್ವ, ಅವಗಾಹಿತ್ವ, ಅವ್ಯಾಬಾಧತ್ವ ಮತ್ತು ಅಗುರುಲಘುತ್ವ ಎಂಬ ಅಷ್ಟಗುಣಗಳಲ್ಲಿ ಒಲವುಳ್ಳವನೂ (ಗುಣಪಕ್ಷಪಾತಿ), ವೆಂಗಿನಾಡಿನಲ್ಲಿ ಪ್ರಸಿದ್ಧವಾದ ಏಳುಗ್ರಾಮಗಳಲ್ಲಿ ಒಂದಾದ ವೆಂಗಿಪಟು ಎಂಬ ಗ್ರಾಮದಲ್ಲಿದ್ದ ಕಮ್ಮೆಬ್ರಾಹ್ಮಣರಲ್ಲಿ[೪] ಜಮದಗ್ನಿ ಪಂಚಾರ್ಷೇಯವಾದ ಶ್ರೀವತ್ಸಗೋತ್ರದವನೂ, ಗುಂಡಿಕಜ್ಜು ಪ್ರದೇಶದಲ್ಲಿರುವ ನಿಡುಂಗೊಂಡೆಯುವನೂ[೫] ಆದ ಅಭಿಮಾನಚಂದ್ರ ಎಂಬಾತನ ಮೊಮ್ಮಗ ಭೀಮಪ್ಪಯ್ಯನಿಗೆ[೬] ಹಾಗೂ ಬೆಳ್ವೊಲ ಪ್ರಾಂತ್ಯದ ಅಣ್ಣಿಗೆರೆಯ ಜೋಯಿಸಸಿಂಘ ಎಂಬಾತನ ಮೊಮ್ಮಗಳೂ ಆದ ಅಬ್ಬಣಬ್ಬೆಗೆ[೭] ಮಗನೂ, ಕೊಂಡಕುಂದಾನ್ವಯದ[೮] ದೇಶಿಗಗಣದ ಪರಾಂಪರಾಗತವಾದ ಜೈನಮುನಿಗಳ ವರ್ಗವೊಂದಕ್ಕೆ (ಪುಸ್ತಕಗಚ್ಛ) ಸೇರಿದ ಪಂಡರಂಗವಲ್ಲಿ ಎಂಬ ಊರಿನ ಜಯಣಂದಿ ಸಿದ್ಧಾಂತಭಟಾರರ[೯] ಶಿಷ್ಯನೂ ಆದ ಜಿನವಲ್ಲಭನು, ಸಬ್ಬಿನಾಡಿನ ನಟ್ಟನಡುವೆ ಇರುವ ಧರ್ಮಪುರಕ್ಕೆ[೧೦] ಉತ್ತರದಿಕ್ಕಿನಲ್ಲಿರುವ ವೃಷಭಗಿರಿ ಎಂಬ ಅತ್ಯಂತ ಪ್ರಾಚೀನವಾದ ಬಹುಪ್ರಸಿದ್ಧ ತೀರ್ಥಕ್ಷೇತ್ರದ ದಕ್ಷಿಣ ದಿಗ್ಭಾಗದಲ್ಲಿನ ಈ ಸಿದ್ಧಶಿಲೆಯ ಮೇಲೆ ತಮ್ಮ ಕುಲದೈವವಾದ ಆದಿಯಿಂದ ಅಂತ್ಯದವರೆಗಿನ ಎಲ್ಲ ಜಿನಮೂರ್ತಿಗಳನ್ನೂ,[೧೧] ಚಕ್ರೇಶ್ವರಿಯನ್ನೂ, ಉಳಿದೆಲ್ಲ ಜಿನಪ್ರತಿಮೆಗಳನ್ನೂ, 'ತ್ರಿಭುವನತಿಲಕ' ಎಂಬ ಬಸದಿಯನ್ನೂ, 'ಕವಿತಾಗುಣಾರ್ಣವ' ಎಂಬ ಕೆರೆಯನ್ನೂ, 'ಮದನವಿಳಾಸ' ಎಂಬ ವನವನ್ನೂ ನಿರ್ಮಿಸಿದನು.

ಇಲ್ಲಿ, ಜಿನವಲ್ಲಭನು ಎಲ್ಲ ವಿದ್ಯೆಗಳಲ್ಲಿಯೂ ಕುಶಲತೆ ಗಳಿಸಿದ್ದನೆಂದೂ, ಸಮ್ಯಕ್ತ್ವವು ಬೇಗ ಕೈಗೂಡಲಿರುವ ಆಸನ್ನಭವ್ಯ ಜೀವರಲ್ಲಿ ಶ್ರೇಷ್ಠನೂ ಮತ್ತು ಗುಣಪಕ್ಷಪಾತಿಯೂ ಆಗಿದ್ದನೆಂದು ಆತನನ್ನು ಪ್ರಶಂಸಿಸಲಾಗಿದೆ. ಆದರೆ ಮುಂದೆ ಹೇಳಲಾದ ಕಮ್ಮೆಬ್ರಾಹ್ಮಣ್ಯ ಹಾಗೂ ಕುಲಗೋತ್ರದ ಪ್ರವರವನ್ನು ಅನ್ವಯಿಸುವಾಗ ಎಚ್ಚರ ಅಗತ್ಯ. ಏಕೆಂದರೆ ಅಲ್ಲಿನ ಮಾತುಗಳು ಜಿನವಲ್ಲಭನಿಗೆ ಅನ್ವಯಿಸುವುದಿಲ್ಲ! ಆ ಸಾಲುಗಳು ಪಂಪ ಮತ್ತು ಜಿನವಲ್ಲಭರ ಮುತ್ತಾತನಾದ – ಭೀಮಪಯ್ಯನ ತಂದೆಯಾದ ಕೊಮರಯ್ಯನ ತಂದೆ – ಅಭಿಮಾನಚಂದ್ರನಿಗೆ ಅನ್ವಯವಾಗುತ್ತದೆಯೇ ಹೊರತು ಭೀಮಪಯ್ಯನಿಗಲ್ಲ ಎಂಬುದು ಗಮನಾರ್ಹ. ಏಕೆಂದರೆ ಕವಿ ಪಂಪನು ಕ್ರಿ.ಶ. ೯೪೫ರಲ್ಲಿಯೇ (ಈ ಶಾಸನಕ್ಕೂ ಪೂರ್ವದಲ್ಲಿ)ವಿರಚಿಸಿದ್ದ ಪಂಪಭಾರತದಲ್ಲಿ, ತನ್ನ ತಂದೆಯು ಜಾತಿಯೊಳಗೆಲ್ಲ ಉತ್ತಮದ ಜಾತಿ ಎನಿಸಿದ್ದ ವಿಪ್ರರ ಕುಲದಲ್ಲಿ ಜನಿಸಿದ್ದರೂ ಜೈನಧರ್ಮಕ್ಕೆ ಮತಾಂತರವಾದ ಬಗ್ಗೆ ಬರೆಯುತ್ತಾ "ಜಿನೇಂದ್ರಧರ್ಮಮೆ ವಲಂ ದೊರೆ ಧರ್ಮದೊಳೆಂದು ನಂಬಿ ತಜ್ಜಾತಿಯನುತ್ತರೋತ್ತರಮೆ ಮಾಡಿ ನೆಗಟ್ಟೆದನ್.." ಎಂದಿದ್ದಾನೆ.[೧೨] ಆದುದರಿಂದ

ಶಾಸನದಲ್ಲಿ ಹೇಳಲಾದ ಕಮ್ಮೆಬ್ರಾಹ್ಮಣ ಹಾಗೂ ಜಮದಗ್ನಿ ಪಂಚಾರ್ಷೇಯ ಗೋತ್ರದವನು ಅಭಿಮಾನಚಂದ್ರ ಎಂದೇ ತಿಳಿಯಬೇಕು. ಇನ್ನು ಪಂಚಾರ್ಷೇಯ ಶ್ರೀವತ್ಸ ಗೋತ್ರವೆಂದರೆ, ಭೃಗು ಮಹರ್ಷಿಗಳ ವಂಶಕ್ಕೆ ಸೇರಿದ ಭಾರ್ಗವ ಪರಂಪರೆಯ ಗೋತ್ರವದು. ಭಾರ್ಗವ, ಚ್ಯವನ, ಆಪ್ಲವನ, ಔರ್ವ ಮತ್ತು ಜಮದಗ್ನಿ ಎಂಬ ಐದುಮಂದಿ ಋಷಿಗಳನ್ನು ಒಳಗೊಂಡ ಋಷಿಪ್ರಣೀತ ಗೋತ್ರ. ಇವರು ವಿಷ್ಣುವಿನ ಅವತರಾವೆನಿಸಿದ ಪರಶುರಾಮನ ವಂಶಸ್ಥರೆಂದು ನಂಬಿಕೆ.

ಜಿನವಲ್ಲಭನ ಪೂರ್ವಜರು ನೆಲಸಿದ್ದ ಗುಂಡಿಕಜ್ಜ಼ ಪ್ರದೇಶದ ಈ ನಿಡುಂಗೊಂಡೆ ಎಂಬ ಸ್ಥಳವು ಯಾವುದು ಎಂಬ ಬಗೆಗೂ ಸಾಕಷ್ಟು ಚರ್ಚೆ ನಡೆದಿದೆ. ಕೆಲವರು ಕರ್ನಾಟಕದ ವಿಜಯಪುರ ಜಿಲ್ಲೆಯ ತಾಲ್ಲೂಕು ಪ್ರದೇಶವಾದ ನಿಡಗುಂದಿಯೇ ಶಾಸನೋಕ್ತ ನಿಡುಂಗೊಂಡೆ ಎಂದು ಹೇಳುವುದುಂಟು. ಆದರೆ ಅದಕ್ಕೆ ಸೂಕ್ತವಾದ ಆಧಾರಗಳಿಲ್ಲ. ಇನ್ನು ಕೆಲವರು ಈಗಿನ ಆಂಧ್ರಪ್ರದೇಶದ ವಿಶಾಖಪಟ್ಟಣಂ ಜಿಲ್ಲೆಯಲ್ಲಿರುವ ನಿಂಡುಗೊಂಡ ಎಂಬ ಗ್ರಾಮವೇ ಶಾಸನದಲ್ಲಿ ಹೇಳಿರುವ ನಿಡುಂಗೊಂಡೆ ಎಂದು ವಾದಿಸಿದ್ದಾರೆ. ಅದನ್ನು ದೃಢಪಡಿಸುವ ಸಮರ್ಥ ಪುರಾವೆಗಳಿಲ್ಲ. ಮತ್ತೆ ಕೆಲವು ವಿದ್ವಾಂಸರು ತೆಲಂಗಾಣ ರಾಜ್ಯದಲ್ಲಿರುವ ಜನಗಾಂವ್ ಜಿಲ್ಲೆಯ ನಿಡಿಗೊಂಡ ಎಂಬ ಸ್ಥಳವೇ ಪಂಪನ ಪೂರ್ವಜರು ನೆಲಸಿದ್ದ ಶಾಸನೋಕ್ತ ನಿಡುಂಗೊಂಡೆಯಾಗಿತ್ತು ಎಂದು ಹೇಳುತ್ತಾರೆ. ಸದ್ಯದಲ್ಲಿ ಅವರ ಹೇಳಿಕೆ ಬಹುಜನ ಒಪ್ಪಿತವಾಗಿದೆ. ಪಂಪನು ತನ್ನ 'ಪಂಪಭಾರತ'ದಲ್ಲಿ ವೆಂಗಿಪಟುವಿನ ಬಗ್ಗೆ ತಿಳಿಸುತ್ತಾ "ಅದುವೆ ವಸಂತಂ ಕೊಟ್ಟೂರೊದವಿದ ನಿಡುಗುಂದಿ ಮಿಕ್ಕ ವಿಕ್ರಮಪುರವೆಂಬುದು.."(೧–೪೧) ಎಂದಿದ್ದಾನೆ. ಆದರೆ ಇಲ್ಲಿ ನಿಡುಗುಂದಿ ಎಂಬ ಉಲ್ಲೇಖವಿದೆ ಎಂದ ಮಾತ್ರಕ್ಕೆ, ಈಗಿನ ವಿಜಯಪುರ ಜಿಲ್ಲೆಯ ತಾಲ್ಲೂಕು ಪ್ರದೇಶವಾದ ನಿಡಗುಂದಿಯೇ ಶಾಸನೋಕ್ತ ನಿಡುಂಗೊಂಡೆ ಎಂದು ಹೇಳಲಾಗುವುದಿಲ್ಲ.

ಮುಂದುವರಿದು "ಅಭಿಮಾನಚನ್ದ್ರನಮಮ್ಮಂ ಭೀಮಪಯ್ಯನ" ಎಂಬ ನುಡಿಯೂ ಚಿಂತನೀಯವಾಗಿದೆ. ಪಂಪನ ತಂದೆಯ ಹೆಸರನ್ನು ಕುರಿತಂತೆ ಸಾಕಷ್ಟು ಚರ್ಚೆಯಾಗಿದ್ದು, ಜಿನವಲ್ಲಭನ ಶಾಸನವು ದೊರೆತು ಅದು ಪ್ರಕಟವಾಗುವವರೆಗೂ ಪಂಪನ ತಂದೆಯ ಹೆಸರು ಅಭಿರಾಮದೇವರಾಯ ಎಂದೇ ಒಪ್ಪಿಕೊಳ್ಳಲಾಗಿತ್ತು! ಇದಕ್ಕೆ ಕಾರಣ, ಮೊದಮೊದಲು ಸಂಪಾದಿತವಾಗಿ ಪ್ರಕಟವಾದ ಪಂಪಭಾರತದ ಆವೃತ್ತಿಗಳಲ್ಲಿ ಕಂಡುಬಂದಿದ್ದ ಪದ್ಯಪಜ್ಜೆ. ಪಂಪನ ಹಿರಿಯರ ಬಗ್ಗೆ ಹೇಳುವ 'ಪಂಪಭಾರತ'ದ ೧೪ನೇ ಆಶ್ವಾಸದ ೪೭ನೇ ಕಂದಪದ್ಯದಲ್ಲಿನ ಸಾಲೊಂದನ್ನು "...ಅಜ್ಞಾನ ತಮೋನೀಕರನಭಿರಾಮದೇವರಾಯಂ ತನಯಂ" ಎಂದು ತಪ್ಪಾಗಿ ಓದಿಕೊಳ್ಳಲಾಗಿತ್ತು. ಈ ಪದ್ಯದ ಸಾಲಿಗೆ ಸಂಬಂಧಿಸಿದಂತೆ "ನಿಕರಂ ಭೀಮನಾಮಧೇಯಂ" ('ಗ' ಪ್ರತಿ)

ಮತ್ತು "ನೀಕಪರಂ ಭೀಮನಾಮಧೇಯಂ" ('ಫ' ಪ್ರತಿ) ಎಂಬ ಎರಡು ಪಾಠಾಂತರಗಳಿದ್ದವು. ಇವುಗಳಲ್ಲಿ ಯಾವುದು ಪರಿಗ್ರಾಹ್ಯ ಎಂಬ ಬಗ್ಗೆ ಚರ್ಚಿಸುತ್ತಾ ಡಾ. ಡಿ.ಎಲ್. ನರಸಿಂಹಾಚಾರ್ ಅವರು "ಈಗ ಹೊಸದಾಗಿ ಸಿಕ್ಕಿರುವ ಗಂಗಾಧರದ ಜಿನವಲ್ಲಭನ ಶಾಸನ ಪಾಠನಿರ್ಣಯಕ್ಕೆ ಸಹಾಯಕವಾಗಿದೆ" ಎಂದು ಹೇಳಿ ಗಂಗಾಧರಂ ಶಾಸನಾಂತರ್ಗತ ವಿಚಾರಗಳನ್ನು ಲಕ್ಷಿಸಿ, ಪಂಪಭಾರತದ ಆ ಪದ್ಯಪಙ್ತಿಯನ್ನು ತಿದ್ದಿ "ತಮೋನೀ[ಕಾ]ರಂ ಭೀಮನಾಮಧೇಯಂ ತನಯಂ" ಎಂದು ಸರಿಯಾದ ಪಾಠವನ್ನು ರಚಿಸಬಹುದು. ಆಗ 'ಅಜ್ಞಾನ ತಮೋನೀಕಾರಂ' ಎಂಬುದಕ್ಕೆ 'ಅಜ್ಞಾನವೆಂಬ ಕತ್ತಲೆಯನ್ನು ಧಿಕ್ಕರಿಸುವವನು' ಎಂದರ್ಥವಾಗುತ್ತದೆ" ಎಂದು ಸೂಚಿಸಿದ್ದಾರೆ. ಈ ಮೂಲಕ ಅವರು ಬೆಳ್ವೊಲದ ಅಣ್ಣಿಗೆಱೆಯ ಜೋಯಿಸಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಯ ಗಂಡನಾದ ಭೀಮಪಯ್ಯನೇ ಪಂಪ ಮತ್ತು ಜಿನವಲ್ಲಭರ ತಂದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.[೧೩]

ಶಾಸನದಲ್ಲಿ ಜಿನವಲ್ಲಭನ ಪೂರ್ವಜರ ಬಗ್ಗೆ ಹೇಳುತ್ತಿರುವ ಗದ್ಯಭಾಗದ ಸಾಲೊಂದನ್ನು "ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮಮ್ಮಂವಬ್ಬಣಬ್ಬೆಯ ಮಗಂ" ಎಂದು ಓದಿಕೊಂಡಿದ್ದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಭಾಗದಲ್ಲಿಯೂ ಅರ್ಥಕ್ಲಿಷ್ಟತೆ ಎಂದು ಹೇಳಿದ್ದರು. ಅವರು ಜೋಯಿಸಸಿಂಘನ ಮೊಮ್ಮಗಳಾದ ಪಂಪನ ತಾಯಿಯ ಹೆಸರು ಅಬ್ಬಣಬ್ಬೆ ಅಲ್ಲ 'ವಬ್ಬಣಬ್ಬೆ' ಇರಬಹುದು ಎಂದಿದ್ದರು. ಮುಂದೆ ಎನ್. ವೆಂಕಟರಮಣಯ್ಯನವರ ಜೊತೆ ಚರ್ಚಿಸಿದ ಬಳಿಕ ಶಾಸನಪಾಠವನ್ನು ಸರಿಯಾಗಿ ಗ್ರಹಿಸಿದ ಕಲಬುರ್ಗಿ ಅವರು ಅಬ್ಬಣಬ್ಬೆ ಎಂಬುದೇ ಸರಿ ಎಂಬ ನಿರ್ಣಯಕ್ಕೆ ಬಂದರು. ಡಾ. ಕಲಬುರ್ಗಿಯವರು ಬರೆದ ಲೇಖನವೊಂದಕ್ಕೆ[೧೪] ಪ್ರತಿಕ್ರಿಯಿಸುತ್ತಾ ಡಾ. ಪಿ.ಬಿ. ದೇಸಾಯಿ ಅವರು ಪಂಪನ ತಾಯಿಯಾದ ಅಬ್ಬಣಬ್ಬೆಯು ಜೋಯಿಸಸಿಂಘನ ಮೊಮ್ಮಗಳಲ್ಲ; ಮಗಳು ಎಂದು ಬರೆದಿದ್ದರು.[೧೪ಎ] ಅದಕ್ಕೆ ಮಾರುತ್ತರ ಬರೆದ ಡಾ. ಕಲಬುರ್ಗಿಯವರು ಶಾಸನದ ಸರಿಯಾದ ಪಾಠ "ನಿಡುಂಗೊಣ್ಡೆಯಭಿಮಾನಚನ್ದ್ರನ ಮಮ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮಮ್ಮಳಬ್ಬಣಬ್ಬೆಯ ಮಗಂ" ಎಂಬ ಪಾಠವೇ ಸರಿಯಾದುದು ಎಂದು ಸಮ್ಮತ ಸೂಚಿಸುತ್ತ "ಪಂಪನ ತಾಯಿಯು ಜೋಯಿಸಸಿಂಘನ ಮಗಳಲ್ಲ, ಮೊಮ್ಮಗಳು. ಅವಳ ಹೆಸರು ವಬ್ಬಣಬ್ಬೆಯಲ್ಲ, ಅಬ್ಬಣಬ್ಬೆ ಎಂದು ಇನ್ನೊಮ್ಮೆ ಸೂಚಿಸಬಯಸುತ್ತೇನೆ" ಎಂದು ದಾಖಲಿಸಿದರು.[೧೫]

ಶಾಸನದ ಮುಂದಿನ ಭಾಗದಲ್ಲಿ ಕಂಡುಬರುವ ಪದ್ಯಗಳು ಸೋದರರಿಬ್ಬರ ಸಂಭಾಷಣೆಯಿಂದ ಪ್ರಾರಂಭವಾಗುತ್ತವೆ. ಒಬ್ಬನ ಪ್ರಶ್ನೆಗೆ ಮತ್ತೊಬ್ಬ ಉತ್ತರಿಸುತ್ತಿರುವ

ಧಾಟಿಯಲ್ಲಿ ಇಲ್ಲಿನ ವಿವರ ಕಂಡುಬರುತ್ತದೆ. ಮೊದಲ ಮೂರು ಪದ್ಯಗಳು ಸಂಸ್ಕೃತ ಭಾಷೆಯಲ್ಲಿವೆ.

ಪದ್ಯ ೧ : "ಅಣ್ಣಾ, ಧರ್ಮಪುರಕ್ಕೆ ಹೋಗೋಣ ಬಾ" "ಏಕೆ? ಅಲ್ಲಿ ಏನಿದೆ?" "ಜೈನಾಭಿಷೇಕೋತ್ಸವದಲ್ಲಿ ಎರೆಯುತ್ತಿರುವ ಹಾಲಿನ ಅಭಿಷೇಕದಿಂದ ಮುಳುಗಿರುವ ಹಾಗೂ ಎತ್ತರವಾದ ಶಿಖರವನ್ನು ಹೊಂದಿರುವ ವೃಷಭಗಿರಿಯನ್ನು ನೋಡೋಣ. ಅದೇರೀತಿ, ಯಾತ್ರೆಗಾಗಿ ಬಂದಿರುವ ಶ್ರೇಷ್ಠರಾದ ಎಲ್ಲ ಜೈನಧರ್ಮೀಯರನ್ನು ಸನ್ಮಾನಿಸುವುದರಲ್ಲಿ ಮತ್ತು ತನ್ನ ದಾನಕಾರ್ಯದಿಂದ ಅವರನ್ನು ಸಂತೃಪ್ತಗೊಳಿಸುವಲ್ಲಿ ತೊಡಗಿಸಿಕೊಂಡಿರುವ, ಹಿರಿಯನಾದ ಪಂಪನ ತಮ್ಮನೂ, ಭೀಮನ[೧೬] ಮಗನೂ, ಸಮ್ಯಕ್ತ್ವರತ್ನಾಕರನೂ ಆದ ಜಿನವಲ್ಲಭನನ್ನು ನಾವು ಅಲ್ಲಿ ನೋಡಬಹುದು."

ಇಲ್ಲಿ ವೃಷಭಗಿರಿಯ ಮಹೋನ್ನತಿಯ ಜೊತೆಗೆ, ಜಿನವಲ್ಲಭನ ಸದ್ಗುಣಗಳನ್ನು ಹೇಳಲಾಗಿದೆ. ಸತ್ಪಾತ್ರರನ್ನು ಸನ್ಮಾನಿಸುವ, ಅಮೂಲ್ಯವಸ್ತುಗಳನ್ನು ದಾನ ಮಾಡಿ ಸಾಧುಜನರ ಮನಸ್ಸನ್ನು ಸಂತೃಪ್ತಗೊಳಿಸುವ ಜಿನವಲ್ಲಭನು ಹಿರಿಯಕವಿ ಪಂಪನ ಅನುಜ ಮತ್ತು ಭೀಮನ ತನುಜ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಪದ್ಯ ೨ : ಅನೇಕ ಭೇದಗಳಿಂದ ಕೂಡಿರುವ ಸೊಬಗಿನ ಗೀತೆಗಳನ್ನು ಗಾಯನ ಮಾಡಲು, ಕಾವ್ಯಗಳನ್ನು ತಾರಕಸ್ವರದಲ್ಲಿ ಅಂದರೆ ಎತ್ತರವಾದ ದನಿಯಲ್ಲಿ ಪಠಿಸಲು, ಸೂಕ್ತವಾದ ಮಾತುಗಳನ್ನಾಡಲು, ಪ್ರಿಯವಾದುದನ್ನೆ ನುಡಿಯಲು, ಸಾಧುವೆನಿಸಿದ ಸಜ್ಜನರಿಗೆ ಉಪಕಾರಮಾಡಲು, ಸುಖಗಳನ್ನು ಅನುಭವಿಸಲು, ಅಂಗನೆಯರನ್ನು ರಮಿಸಿ ಸಂತೋಷಪಡಿಸಲು, ವಿಧಾತನಾದ ಜಿನನ ಪೂಜೆಯನ್ನು ಮಾಡಲು, ಪಂಪ ಎಂಬ ನಾಮಾಂಕಿತನ ತಮ್ಮನಾದ ಜಿನವಲ್ಲಭನು ಚೆನ್ನಾಗಿ ತಿಳಿದವನಾಗಿದ್ದಾನೆ.

ಪದ್ಯ ೩ : ನಿತ್ಯನಾದ ಜಿನನನ್ನು ವಂದಿಸಲೆಂದು ಬಂದ ಮುನೀಶ್ವರರು ಮತ್ತು ಶ್ರಾವಕರಿಂದ (ಜೈನ ಧರ್ಮದ ತತ್ತ್ವಗಳನ್ನು ಅರಿತು ನಿಷ್ಠೆಯಿಂದ ಪಾಲಿಸುವ ಗೃಹಸ್ಥರು) ಕೂಡಿದ ಜನಸಮೂಹವು ಮಾಡುತ್ತಿರುವ ಶಬ್ದದ ಪ್ರತಿಧ್ವನಿಯಿಂದ ಉಂಟಾದ ಶಬ್ದಕೋಲಾಹಲದ ಮೂಲಕ, ಅಲ್ಲಿ ನೆಲೆಗೊಂಡಿರುವ ದಿಗಂಬರರಿಂದ ಕೂಡಿದ ವೃಷಭಪರ್ವತವೇ ವಾಚಕಾಭರಣ ಎನಿಸಿದ ಜಿನವಲ್ಲಭನ ಕೀರ್ತಿಯನ್ನು ಚೆನ್ನಾಗಿ ಹೇಳುತ್ತದೆ.

ಈ ಸಾಲುಗಳ ಮೂಲಕ, ಶಾಶ್ವತಮೂರ್ತಿಯಾದ ಜಿನಮೂರ್ತಿಗೆ ನಮಿಸಲೆಂದು ವೃಷಭಾದ್ರಿಗೆ ಆಗಮಿಸಿರುವ ಜೈನಮುನಿಗಳು ಮತ್ತು ಜೈನಧರ್ಮೀಯ ವ್ರತಿಗಳು ಅಲ್ಲಿ ಮಾಡುತ್ತಿರುವ ಶಬ್ದ ಹಾಗೂ ಅದರ ಪ್ರತಿಧ್ವನಿತ ಶಬ್ದವನ್ನು ಗಮನಿಸಿದರೆ, ಇಡೀ

ವೃಷಭಪರ್ವತಕ್ಕೆ ಪರ್ವತವೇ ವಾಚಕರಲ್ಲೆಲ್ಲ ಶ್ರೇಷ್ಠನೆನಿಸಿದ ಜಿನವಲ್ಲಭನ ಅಪಾರವಾದ ಕೀರ್ತಿಯನ್ನು ಸಾರಿಸಾರಿ ಹೇಳುತ್ತಿರುವಂತೆ ಕಾಣುತ್ತದೆ. ಇಲ್ಲಿ ಜಿನಮೂರ್ತಿ, ನಿತ್ಯವೂ ಜೈನಯತಿಗಳಿಂದ ಕೂಡಿರುವ ವೃಷಭಾದ್ರಿ ಹಾಗೂ ವಾಚಕಾಭರಣ ಎನಿಸಿದ ಜಿನವಲ್ಲಭನನ್ನು ಕುರಿತು ಹೇಳಲಾಗಿದೆ. ಜಿನವಲ್ಲಭನ ಕೀರ್ತಿಯು ಜನಮಾನಸದಲ್ಲಿ ನೆಲೆಯೂರಿದ್ದ ಬಗ್ಗೆ ತಿಳಿಸಲಾಗಿದೆ. ಶ್ರೀಸಾಮಾನ್ಯರೆನಿಸುವ ಲೌಕಿಕವ್ಯಕ್ತಿಗಳಾದ ಜೈನಗೃಹಸ್ಥರಲ್ಲಿ ಮಾತ್ರವಲ್ಲ, ಜೈನಯತಿಗಳ ಮಾತುಮಾತುಗಳಲ್ಲಿಯೂ ಪಂಪಕವಿಯ ತಮ್ಮನಾದ ಜಿನವಲ್ಲಭನ ಕೀರ್ತಿಯು ಅನುರಣಿಸುತ್ತಿತ್ತು ಎಂಬ ವಿಚಾರ ಇಲ್ಲಿ ಗಮನಾರ್ಹ. ಇದಕ್ಕೂ ಮೊದಲಿನ ಪದ್ಯದಲ್ಲಿ ಜಿನವಲ್ಲಭನ ಉತ್ತಮ ಗಾಯನ ಮತ್ತು ಕಾವ್ಯಪಠಣದ ಬಗ್ಗೆ ಹೇಳಿದ್ದು, ಇಲ್ಲಿ ಆತನ ವಾಚನದ ಬಗ್ಗೆ ತಿಳಿಸುತ್ತ ಅವನು ವಾಚಕರಲ್ಲೆಲ್ಲಾ ಆಭರಣಪ್ರಾಯನಾದವನು ಎಂದು ಹೊಗಳಲಾಗಿದೆ.

ಇಲ್ಲಿಂದ ಮುಂದಿನ ಆರು ಪದ್ಯಗಳು ಕನ್ನಡ ಭಾಷೆಯಲ್ಲಿವೆ.

ಪದ್ಯ ೪ : ಆಲೋಚಿಸಲು ಅಸಾಧ್ಯವಾದುದು, ಈ ಆಲೋಚನೆಯನ್ನು ಯಾರುತಾನೇ ಆಲೋಚಿಸುತ್ತಾರೆ ? ಇದು ಆಲೋಚನೆಗೆ ನಿಲುಕುವ ಆಸೆಯಲ್ಲ, ಇದು ನೋಡುವುದಕ್ಕೆ ಸಾಧ್ಯವಾಗುವ ಪ್ರದೇಶವಲ್ಲ, ವಿಸ್ತಾರವಾದ ಈ ಬಂಡೆಯಮೇಲೆ ಜಿನಮೂರ್ತಿಗಳನ್ನು ಈತನು ಈಗ ಹೇಗೆತಾನೆ ನಿರ್ಮಿಸುತ್ತಾನೆ ? ಎಂದು ಆಲೋಚಿಸುತ್ತಿರುವಷ್ಟರಲ್ಲಿಯೇ ಜಿನಪ್ರತಿಮೆಗಳು ಅಲ್ಲಿ ತತ್ಕ್ಷಣವೆ ಕೆತ್ತಲ್ಪಟ್ಟು ಮೇಲೆದ್ದವು. ಜಿನವಲ್ಲಭೇಂದ್ರನ ನಡೆಯು ಅದೇನು ಅಚ್ಚರಿದಾಯಕ!

ಈ ಪದ್ಯದಲ್ಲಿ ಜಿನವಲ್ಲಭನು ವೃಷಭಗಿರಿಯ ಮೇಲೆ ಅಂದರೆ ಬೊಮ್ಮಲಮ್ಮನ ಬೆಟ್ಟದ ಜಿನಬಿಂಬಗಳನ್ನು ಕೆತ್ತಿಸಿದ ಮಹತ್ಕಾರ್ಯದ ಬಗ್ಗೆ ಹೇಳಲಾಗಿದೆ. ಈ ಮೇಲೆ ತಿಳಿಸಿದಂತೆ ಬೊಮ್ಮಲಗುಟ್ಟವು ಎತ್ತರವಾದ ಬೆಟ್ಟಮಾತ್ರವಲ್ಲ, ಬಹುಕಡಿದಾದ ಬೆಟ್ಟವೂ ಹೌದು. ಆ ಬೆಟ್ಟದ ತುದಿಯಲ್ಲಿರುವ ಬೃಹದ್ಬಂಡೆಯ ಮೇಲೆ ಜಿನಮೂರ್ತಿಗಳನ್ನೂ, ಶಾಸನವನ್ನೂ ಕೆತ್ತಿಸುವುದು ಸುಲಭದ ಮಾತೇನಲ್ಲ, ಅದು ಕಷ್ಟಸಾಧ್ಯವಾದ ಕಾರ್ಯ. ಆದುದರಿಂದಲೇ ಜನಸಾಮಾನ್ಯರು, ಈ ಬೆಟ್ಟದಮೇಲೆ ಜಿನಪ್ರತಿಮೆಗಳನ್ನು ಕೆತ್ತಿಸುವುದಿರಲಿ, ಆ ಬಗ್ಗೆ ಆಲೋಚಿಸುವುದೂ ಕಷ್ಟ, ಎತ್ತರವಾದ ಆ ಜಾಗದಲ್ಲಿ ಶಿಲಾಮೂರ್ತಿಗಳನ್ನು ಕೆತ್ತಿಸಬೇಕೆಂಬ ಬಯಕೆ ನಮ್ಮ ಆಲೋಚನೆಗೂ ಮೀರಿದ ಬಯಕೆಯಾದೀತು! ಬೆಟ್ಟವನ್ನು ಹತ್ತಿಹೋಗಿ ಆ ಹೆಬ್ಬಂಡೆಯ ಪ್ರದೇಶವನ್ನು ಕಣ್ಣಿಂದ ನೋಡುವುದೂ ಅಸಾಧ್ಯ! ಹೀಗಿರುವಾಗ ಆ ಹೆಬ್ಬಂಡೆಯ ಮೇಲೆ ಈತ ಜಿನಮೂರ್ತಿಗಳನ್ನು ಕೆತ್ತಿಸುವುದು ಅಸಾಧ್ಯದ ಮಾತು ಎಂದು ಆಲೋಚಿಸುತ್ತಿದ್ದರು. ಅವರು ಹಾಗೆ ಆಲೋಚಿಸುತ್ತಿರು

ವಷ್ಟರಲ್ಲಿಯೇ ಆ ಬೆಟ್ಟದಲ್ಲಿ ಬಂಡೆಯ ಮೇಲೆ ಜಿನಪ್ರತಿಮೆಗಳು ನಿರ್ಮಿತವಾದವು ಎಂದು ಹೇಳುವ ಮೂಲಕ ಶ್ರದ್ಧೆ ಹಾಗೂ ಸಾಧಿಸಲೇಬೇಕೆಂಬ ಸಂಕಲ್ಪವಿದ್ದಲ್ಲಿ ಯಾವ ಕಾರ್ಯವೂ ಅಸಾಧ್ಯವಲ್ಲ ಎಂಬುದನ್ನು ಇಲ್ಲಿ ಹೇಳಲಾಗಿದೆ. ಜಿನವಲ್ಲಭನ ದೃಢಸಂಕಲ್ಪ, ಜಿನಭಕ್ತಿ, ಧರ್ಮತತ್ಪರ ಕಾರ್ಯಸಾಧನೆಯ ಫಲ ಇವುಗಳಿಂದಾಗಿ ಬೊಮ್ಮಲಗುಟ್ಟದ ಮೇಲೆ ಶಾಸನವೂ, ಜಿನಶಿಲ್ಪಗಳೂ ತ್ವರಿತಗತಿಯಲ್ಲಿ ನಿರ್ಮಿತವಾಗಿ ಜನರ ಮನದಲ್ಲಿ ಅಚ್ಚರಿಮೂಡಿಸಿರಬಹುದು ಎಂಬ ಸಂಗತಿ ಈ ಪದ್ಯದಿಂದ ತಿಳಿದುಬರುತ್ತದೆ.

ಪದ್ಯ ೫ : ಈ ವೃಷಭಗಿರಿಯು (ಬೊಮ್ಮಲಗುಟ್ಟವು) ಕವಿತಾಗುಣಾರ್ಣವ ಎನಿಸಿದ ಪಂಪನ ಕೀರ್ತಿಯ ಮೂರ್ತಿಯಂತೆ ಆಗಿ, ವೃಷಭನಾಥನ ಮೂರ್ತಿಯಿಂದೊಡಗೂಡಿ ದಕ್ಷಿಣಾರ್ಧದ ವೃಷಭಗಿರಿಯಾಗಲಿ ಎಂಬ ಹಿರಿಮೆಯು ದೊರೆಯುವಂತೆ, ಶ್ರೇಷ್ಠಬ್ರಾಹ್ಮಣರೇ ನೆಲಸಿದ್ದ ಪರ್ವತವನ್ನು ಜಿನಚೈತ್ಯಾಗಾರವನ್ನಾಗಿ ಮಾಡಿದ ಜಿನವಲ್ಲಭನಿಗೆ ಜಿನವಲ್ಲಭನಾಗುವುದು ಒಂದು ಅಚ್ಚರಿಯೇ ?

ಜಿನವಲ್ಲಭನು ಇಲ್ಲಿಯೂ ತನ್ನ ಅಣ್ಣನಾದ ಕವಿ ಪಂಪನ ಕೀರ್ತಿಯನ್ನು ನೆನೆದಿದ್ದಾನೆ. 'ಕವಿತಾಗುಣಾರ್ಣವ' ಎಂಬ ಬಿರುದನ್ನು ಹೊಂದಿದ್ದ ಪಂಪನ ಕೀರ್ತಿಯ ಮೂರ್ತಿಯಂತೆ (ಕೀರ್ತ್ತಿಯ ಮೂರ್ತ್ತಿವೊಲ್) ಎಂಬುದು ಇಲ್ಲಿ ಗಮನಾರ್ಹ. ಕೀರ್ತಿ ಎಂಬುದು ಅಮೂರ್ತವಾದುದು ಮಾತ್ರವಲ್ಲ ಅದು ನಿರ್ಮಲವಾದುದು, ಧವಳವರ್ಣಮಾದುದು. ಅಂತಹ ಕೀರ್ತಿಯೇ ಮೂರ್ತರೂಪ ತಾಳಿ ಬೆಟ್ಟದ ಮೇಲೆ ವೃಷಭನಾಥನ ಮೂರ್ತಿಯೇ ಆಗಿ ಈ ಬೆಟ್ಟವು ಪ್ರಸಿದ್ಧವಾಗಲಿ ಎಂಬ ಆಶಯ ಇಲ್ಲಿದೆ. ಆದಿಕವಿ ಪಂಪನಿಗೆ ಇದ್ದ ಹತ್ತಾರು ಬಿರುದುಗಳಲ್ಲಿ 'ಕವಿತಾಗುಣಾರ್ಣವ' ಎಂಬ ಬಿರುದು ಅವನಿಗೆ ತುಂಬಾ ಇಷ್ಟವಾದ ಬಿರುದಾಗಿತ್ತು. ತನ್ನ ಕಾವ್ಯಗಳಲ್ಲಿ ಹೆಚ್ಚಾಗಿ ಆತ ಈ ಬಿರುದನ್ನೇ ಬಳಸಿಕೊಂಡಿದ್ದಾನೆ. ಇದು ಆತನ ಎರಡೂ ಕಾವ್ಯಗಳ ಪ್ರತೀ ಆಶ್ವಾಸಾಂತ್ಯ ಗದ್ಯದಲ್ಲಿ ತಪ್ಪದೇ ಬಂದಿದೆ. 'ಗುಣಾರ್ಣವ' ಎಂಬ ಬಿರುದು ಹೊಂದಿದ್ದ ಎರಡನೇ ಅರಿಕೇಸರಿಯು, ಪಂಪನ ಕಾವ್ಯರಚನೆಯನ್ನು ಮೆಚ್ಚಿ ಅವನಿಗೆ 'ಕವಿತಾಗುಣಾರ್ಣವ' ಎಂಬ ಈ ಬಿರುದು ನೀಡಿದ್ದನು. ಮುಂದೆ ಕವಿ ರನ್ನನೂ ತನ್ನ 'ಅಜಿತನಾಥ ಪುರಾಣ'ದಲ್ಲಿ ಕವಿಪಂಪನನ್ನು ನೆನೆಯುವಾಗ 'ಕವಿತಾಗುಣಾರ್ಣವಂ' ಎಂಬ ಬಿರುದನ್ನು ಬಳಸಿಯೇ ಕೀರ್ತಿಸಿದ್ದಾನೆ.[೧೬] ಇಂತಹ ಬಿರುದಾಂಕಿತನಾದ ಪಂಪನ ಕೀರ್ತಿಯೇ ವೃಷಭನಾಥನ ಮೂರ್ತಿವೆತ್ತು, ಈ ಬೊಮ್ಮಲಗುಟ್ಟವು ದಕ್ಷಿಣಾರ್ಧದ ವೃಷಭಾದ್ರಿಯಾಗಲಿ ಎಂದು ಜಿನವಲ್ಲಭನು ಆಶಿಸಿದ್ದಾನೆ. 'ಆದಿಪುರಾಣ'ದಂತಹ ಆಗಮಿಕಕಾವ್ಯವನ್ನು ಬರೆದ ಪಂಪನು 'ಜಿನಸಮಯ ದೀಪಕಂ' ಎಂದೇ ಹೆಸರಾಗಿದ್ದನು. ಪಂಪನಂತೆಯೇ ಜಿನವಲ್ಲಭನೂ ಜೈನಧರ್ಮದ ಏಳಿಗೆಗಾಗಿ ಶ್ರಮಿಸಿದ್ದನು. ಅವನು ಜಿನಮೂರ್ತಿಗಳನ್ನು, ಜೈನಬಸದಿಗಳನ್ನು ನಿರ್ಮಿಸಿದುದು ಮಾತ್ರವಲ್ಲ

ಬ್ರಾಹ್ಮಣರ ಆವಾಸಸ್ಥಾನವಾಗಿದ್ದ ಈ ಪರ್ವತವನ್ನು ಜೈನಧರ್ಮಿಕ ಕೇಂದ್ರವನ್ನಾಗಿ ಮಾಡಿದುದು ಮಹತ್ತರವಾದ ಕಾರ್ಯ. ಇಂತಹ ಅನೇಕ ಮಹತ್ವದ ಕಾರ್ಯಗಳನ್ನು ಮಾಡಿದುದರಿಂದ ಜಿನವಲ್ಲಭನು ಜೈನಧರ್ಮೀಯರಲ್ಲಿಯೇ ಅತ್ಯಂತ ಪ್ರೀತಿಪಾತ್ರನೂ, ಒಡೆಯನೂ, ಶ್ರೇಷ್ಠನೂ ಎನಿಸುವುದು (ಜಿನವಲ್ಲಭ) ಅಚ್ಚರಿಯೇನಲ್ಲ. ಇಲ್ಲಿ ಶಾಸನಪಾಠ ಒದಗಿಸಿರುವ ಜಿನವಲ್ಲಭನು, "ಜಿನವಲ್ಲಭಂಗೆ ಜಿನವಲ್ಲಭನಪ್ಪುದಮೊನ್ದುಚೋದ್ಯಮೋ" (ಜಿನವಲ್ಲಭನು ಜಿನವಲ್ಲಭನಾಗುವುದೊಂದು ಚೋದ್ಯವೇ?) ಎಂದು ಶ್ಲೇಷೆಯನ್ನು ಬಳಸಿ ಕೇಳಿದ್ದಾನೆ.

ಪದ್ಯ ೬ : ಜಾಣ್ಮೆ, ಮಹಿಮೆ ಮತ್ತು ಒಳ್ಳೆಯ ಕವಿತ್ವಗಳಿಂದ ಕೀರ್ತಿವಂತನಾದ ಪಂಪನ, ಸೋದರನಾದ ಜಿನವಲ್ಲಭನು ಅಣ್ಣನ ಕೀರ್ತಿಯನ್ನು ಒಲಿದು ಕೊಂಡಾಡುವುದು ಹೊಗಳಿಕೆಯೆ ? ಕಾವ್ಯಗಳನ್ನು ವಾಚಿಸಲು, ಬರೆಯಲು, ಕಾವ್ಯಲಕ್ಷಣಗಳು ಹೊಂದಿಕೊಂಡಿರುವಂತೆ ಹಾಗೂ ಭೂಮಂಡಲದಲ್ಲಿಯೇ ಅಪೂರ್ವವಾಗಿರುವಂತೆ ಕಾವ್ಯಗಳನ್ನು ಹೇಳಲು ಬಲ್ಲವನು ಜಿನವಲ್ಲಭನೊಬ್ಬನೇ ಆಗಿರುವುದರಿಂದ ಆತ ವಾಗ್ವಧುವಿಗೆ (ಸರಸ್ವತಿಗೆ) ಉತ್ತಮ ವಲ್ಲಭನಾಗಿದ್ದಾನೆ.

ಈ ಪದ್ಯವು ತರಳವೃತ್ತದ ಛಂದಸ್ಸಿನಲ್ಲಿದೆ. ಪದ್ಯದ ಎರಡನೇ ಪಾದದಲ್ಲಿರುವ ಮೊದಲ ಎರಡು ಅಕ್ಷರಗಳು ಮೂಲಪಾಠದಲ್ಲಿಲ್ಲದ ಹಾಗೂ ಸಂಶೋಧಕರೂ ತುಂಬಿ ಬರೆದ ಅಕ್ಷರಗಳಾಗಿವೆ (ರ್ವ್ವದೆ). ನಮ್ಮ ಲಿಪಿತಜ್ಞರೂ, ಶಾಸನಜ್ಞರೂ ಆ ಭಾಗವನ್ನು 'ಓರ್ವ್ವದೆ' ಎಂದು ಓದಿಕೊಂಡಿದ್ದಾರೆ. ಅಲ್ಲಿ ಅರ್ಥಸ್ಪಷ್ಟತೆಯಿಲ್ಲ. ಕೆಲವು ವಿದ್ವಾಂಸರು ಶಾಸನಪಾಠದ ಈ ಮೊದಲನೇ ಸಾಲಿನ ಅರ್ಥ ಹೇಳುತ್ತ ಜಾಣ್ಮೆ, ಮಹಿಮೆ ಮತ್ತು ಒಳ್ಳೆಯ ಕವಿತ್ವದಿಂದ ಸುಪ್ರಸಿದ್ಧಿ ಪಡೆದ ಪಂಪನ ತಮ್ಮನಾದ ಜಿನವಲ್ಲಭನು ಪಂಪನನ್ನು ಒಲಿಯುವುದೇನು ಹೊಗಳಿಕೆಯೇ ? ಎಂಬರ್ಥ ಬರುತ್ತದೆ ಎಂದಿದ್ದಾರೆ. ಆದರೆ ಇಲ್ಲಿ ಬಂದಿರುವ ಚಾತುರ್ಯ, ಮಹಿಮೆ ಮತ್ತು ಉತ್ತಮಕವಿತ್ವ ಎಂಬಿವು ಪಂಪನಿಗೂ ಅನ್ವಯಿಸುತ್ತವೆಯಷ್ಟೆ! ಆದುದರಿಂದ ಹೀಗೆ ಹೇಳಬಹುದೆನಿಸುತ್ತದೆ. ಜಾಣ್ಮೆ, ಮಹಿಮೆ ಮತ್ತು ಸತ್ಕವಿತ್ವಗಳಿಂದ ಕೀರ್ತಿವಂತನಾದ ಪಂಪನ, ಸೋದರನಾದ ಜಿನವಲ್ಲಭನು ಅಣ್ಣನ ಕೀರ್ತಿಯನ್ನು ಒಲಿದು ಕೊಂಡಾಡುವುದು ಹೊಗಳಿಕೆಯೆ ?(ಖಂಡಿತವಾಗಿಯೂ ಹೊಗಳಿಕೆ ಅಲ್ಲ ಎಂಬ ಭಾವ). ಕಾವ್ಯಗಳನ್ನು ವಾಚಿಸಲು, ಬರೆಯಲು, ಕಾವ್ಯಲಕ್ಷಣಗಳು ಹೊಂದಿಕೊಂಡು ಸರಿಯಾಗಿರುವಂತೆ ಹಾಗೂ ಭೂಮಂಡಲದಲ್ಲಿಯೇ ಅಪೂರ್ವವಾಗಿರುವಂತೆ ಹೇಳಲು ಬಲ್ಲವನು ಜಿನವಲ್ಲಭನೊಬ್ಬನೇ ಆಗಿರುವುದರಿಂದ ಆತ ವಾಗ್ವನಿತೆ ಎನಿಸಿದ ಸರಸ್ವತಿಗೆ ವಲ್ಲಭನಾಗಿದ್ದಾನೆ. ಅಂದರೆ ಕವಿಬ್ರಹ್ಮನಾಗಿದ್ದಾನೆ ಎಂಬರ್ಥವೂ ಇಲ್ಲಿ ಸ್ಫುರಿಸುತ್ತದೆ.

ಈ ಪದ್ಯದ ಮೊದಲ ಪಾದದಲ್ಲಿ ಪ್ರಯೋಗವಾದ "ಸನ್ದಪಂಪನ" ಎಂಬ ಪದಗುಚ್ಛ ಹಾಗೂ ನಾಲ್ಕನೇ ಪಾದದಲ್ಲಿರುವ "ಓರ್ವನೆ ವಾಗ್ವಧೂವರವಲ್ಲಭಂ ಜಿನವಲ್ಲಭಂ" ಎಂಬ ಪದಗಳ ಪ್ರಯೋಗವನ್ನು ಗಮನಿಸಿದರೆ ಜಿನವಲ್ಲಭನು ಈ ಶಾಸನವನ್ನು ಹಾಕಿಸುವ ವೇಳೆಗಾಗಲೇ ಪಂಪಕವಿಯು ಕೀರ್ತಿಶೇಷನಾಗಿದ್ದಿರಬಹುದೆಂದು ಊಹಿಸಲು ಅವಕಾಶವಿದೆ. ಅದೇರೀತಿ, ಈ ಪದ್ಯದ ಭಾವವನ್ನು ಗಮನಿಸಿದರೆ ಜಿನವಲ್ಲಭನೂ ಕಾವ್ಯಲಕ್ಷಣಗಳಿಗನುಗುಣವಾಗಿ ಕಾವ್ಯರಚನೆ ಮಾಡಬಲ್ಲ ಉತ್ತಮ ಕವಿತ್ವ ಹೊಂದಿದ್ದ ಕವಿಯಾಗಿದ್ದಿರಬಹುದು ಎಂದೂ ಭಾವಿಸಬಹುದಾಗಿದೆ.

ಪದ್ಯ ೭ : ಸುಪ್ರಸಿದ್ಧವಾದ ಚಾಳುಕ್ಯವಂಶದ ಒಡೆಯ, ಅತಿಶಯವಾದ ಗುಣಗಳಿಂದ ಕೂಡಿದ ಅರಿಕೇಸರಿಯು ಪ್ರಸಿದ್ಧಿಪಡೆದಿದ್ದ ವಿಕ್ರಮಾರ್ಜುನವಿಜಯ ಎಂಬ ಕಾವ್ಯಕ್ಕೆ ಧರ್ಮವುರ ಎಂಬುದು, ಎಂದೆಂದೂ ಬೇರೆಯವರಿಗೆ ಕೊಡದೆ ತಾನೇ ಅನುಭವಿಸಬೇಕಾದುದು (ಅದೇಯಂ) ಎಂದು ಅಧಿಕೃತವಾಗಿ ಬರೆಯಿಸಿ (ಕೀರ್ತಿಶಾಸನಮೆನೆ) ಕೊಟ್ಟ ಶಾಸನದ ವಿಚಾರ ಮತ್ತು ಪಂಪನು ಅಚಲವಾಗಿ ನಂಬಿದ ಜೈನಧರ್ಮದ ಖ್ಯಾತಿಯನ್ನು ಈ ವೃಷಭಪರ್ವತವು ತಾನೇ ಹೇಳದೆ ?

ವೇಮುಲವಾಡದ ಚಾಲುಕ್ಯರು, ರಾಷ್ಟ್ರಕೂಟ ಚಕ್ರವರ್ತಿಗಳಿಗೆ ಸಾಮಂತರಾಗಿದ್ದರೂ ಉದಾತ್ತ ಚರಿತರೂ, ವೀರರೂ, ಸಾಮಂತ ಚೂಡಾಮಣಿಗಳೂ ಆಗಿದ್ದರು. ಈ ಚಾಲುಕ್ಯವಂಶದವರಲ್ಲಿ ಮೊದಲಿಗನೆಂದರೆ ಯುದ್ಧಮಲ್ಲ ಎಂಬಾತ. ಇವರ ವಂಶಾವಳಿಯ ಬಗ್ಗೆ ಕವಿ ಪಂಪನು ತನ್ನ 'ಪಂಪಭಾರತ'ದ ಪ್ರಥಮಾಶ್ವಾಸದ ೧೫ನೇ ಪದ್ಯದಿಂದ ೪೧ನೇ ಪದ್ಯದವರೆಗೆ ಹೇಳಿದ್ದಾನೆ. ಈ ವಂಶದಲ್ಲಿ ಜನಿಸಿದ ನರಸಿಂಹ ಮತ್ತು ಆತನ ಪತ್ನಿಯಾದ ಜಾಕವ್ವೆಯರ ಪುತ್ರನೇ ಎರಡನೇ ಅರಿಕೇಸರಿ. ಈತನೇ ಪಂಪನಿಗೆ ಆಶ್ರಯದಾತ. ಪಂಪನು ತನ್ನ 'ಪಂಪಭಾರತ'ದಾದ್ಯಂತ ಅರಿಕೇಸರಿಯ ಉದಾತ್ತ ಗುಣಗಳನ್ನು ಕೊಂಡಾಡಿದ್ದಾನೆ. ಕಾವ್ಯದ ಪ್ರಾರಂಭದಲ್ಲಿಯೇ ವಿಷ್ಣು (ಉದಾತ್ತನಾರಾಯಣ), ಶಿವ (ಉದಾರಮಹೇಶ್ವರ), ಸೂರ್ಯ (ಪ್ರಚಂಡ ಮಾರ್ತಾಂಡ) ಮೊದಲಾದವರೊಡನೆ ಅರಿಕೇಸರಿಯನ್ನು ಸಮೀಕರಿಸಿ ಹೊಗಳುತ್ತ, ಈತ "ತನ್ನ ಉನ್ನತವಾದ ಗುಣಗಳಿಂದಲೇ ನನ್ನನ್ನು ಗೆದ್ದಿರುವನು ಎಂದು ಮೆಚ್ಚಿ ವಿನಾಯಕನು ತಾನು ಗುಣಾರ್ಣವ ರಾಜನ ಈ ಕಾವ್ಯವನ್ನು ಉತ್ತಮವಾಗಿ ಅರಳಿಸಲಿ" ಎಂದಿದ್ದಾನೆ.[೧೮] ಮತ್ತೊಂದೆಡೆ, "ಚಾಗದ ಕಂಬವನ್ನು ನಿಲ್ಲಿಸಿ, ವೀರದ ಶಾಸನವನ್ನು ಕೆತ್ತಿಸಿ, ಸ್ವಾಧೀನಪಡಿಸಿಕೊಳ್ಳಲಾಗದ ರಾಜ್ಯಗಳನ್ನು ಸ್ವಾಧೀನಪಡಿಸಿಕೊಂಡು ಮೂರೂಲೋಕದಲ್ಲಿ ಯಶೋನಿವಾಸಿಗಳಾದ ಆ ಬದ್ದೆಗ ಮತ್ತು ನರಸಿಂಹರಿಗಿಂತ ಕೊಟ್ಟ ಮಹಾದಾನದಲ್ಲಿ ಹಾಗೂ ತೋರಿದ ವೀರದಲ್ಲಿ

ನಾಲ್ಕು ಅಂಗುಲ ಎತ್ತರವೇ ಆಗಿದ್ದಾನೆ ಈ ಅರಿಕೇಸರಿ" ಎಂದು ಹೊಗಳಿದ್ದಾನೆ.[೧೯] ಇಂತಹ ದಾನಶೀಲನಾದ ಅರಿಕೇಸರಿಯು, ಪಂಪನು ಬರೆದ 'ವಿಕ್ರಮಾರ್ಜುನವಿಜಯ' ಎಂಬ ಕೃತಿಯನ್ನು ಮೆಚ್ಚಿ ಪಂಪನಿಗೆ ಧರ್ಮವುರ ಎಂಬ ಅಗ್ರಹಾರವನ್ನು ದಾನವಾಗಿ ಕೊಟ್ಟು, ಅದು ಅದೇಯಮೆಂದು ಶಾಸನ ಬರೆಸಿದ್ದನು ಎಂಬ ಸಂಗತಿಯನ್ನು ಜಿನವಲ್ಲಭನು ಇಲ್ಲಿ ಉತ್ಕೀರ್ಣಿಸಿದ್ದಾನೆ. ಆ ವಿಚಾರದ ಜೊತೆಗೆ, ಪಂಪನು "ಜಿನೇಂದ್ರ ಧರ್ಮಮೆ ವಲಂ ದೊರೆ ಧರ್ಮದೊಳೆಂದು ನಂಬಿ"ದ್ದವನು. ಅಂತಹ ಜೈನಧರ್ಮದ ಹಿರಿಮೆಯನ್ನು ಈ ವೃಷಭಾದ್ರಿಯು ತಾನೇ ಹೇಳುವುದಿಲ್ಲವೇ ? ಎಂದಿದ್ದಾನೆ. ಅಚಲವಾದ ಈ ವೃಷಭಗಿರಿಯು ಇರುವವರೆಗೆ ಅರಿಕೇಸರಿಯು ಪಂಪನಿಗೆ ದಾನವಿತ್ತ ಶಾಸನದ ವಿಚಾರ ಹಾಗೂ ಜೈನಧರ್ಮದ ಖ್ಯಾತಿಯನ್ನು ತಾನೇ ಸಾರಿ ಸಾರಿ ಹೇಳುತ್ತದೆ ಎಂಬುದು ಈ ಪದ್ಯದ ಧ್ವನಿಯಾಗಿದೆ.

ಪದ್ಯ ೮ : ಆ ಪ್ರದೇಶದಲ್ಲಿ ಗಾಳಿಯು ಬೀಸಲು, ಸೂರ್ಯನ ಕಿರಣಗಳು ಪ್ರವೇಶಿಸಲು, ಮೃಗಗಳು ಸುಳಿದಾಡಲು, ಅದರ ಮೇಲೆ ಆಕಾಶದಲ್ಲಿ ಪಕ್ಷಿಗಳು ಹಾರಾಡಲು ಸಾಧ್ಯವಿಲ್ಲ ಎನಿಸಿದ್ದು, ಅನ್ಯವಾದುದರ ಉದಯವು ಧರ್ಮದಲ್ಲಿ ಯಶಸ್ಸನ್ನು ಬೆಳೆಸುವಂತೆ ತಾನು ಮೆಚ್ಚಿ ಮಾಡಿದ ಧರ್ಮಕಾರ್ಯದಿಂದ ತನ್ನ ಕೀರ್ತಿ ಹೆಚ್ಚಲು ಅರಿಕೇಸರಿಯು ಪಂಪನಿಗೆ ಕೊಟ್ಟ ಆ ಅಗ್ರಹಾರವು ಖ್ಯಾತವಾದ ಕಳಾಪಗ್ರಾಮವನ್ನು ಹೋಲುವುದೋ!

ಇಲ್ಲಿ ಧರ್ಮವುರದ ಶ್ರೇಷ್ಠತೆಯನ್ನು ಉತ್ಪ್ರೇಕ್ಷೆ ಮಾಡಿ ಕಾವ್ಯಮಯವಾಗಿ ವರ್ಣಿಸಲಾಗಿದೆ. ಪಂಪನಿಗೆ ದಾನವಾಗಿ ನೀಡಲಾದ ಧರ್ಮಪುರವು ಹತ್ತಾರು ಜಿನಮೂರ್ತಿಗಳಿಂದಲೂ, ಚೈತ್ಯಾಲಯಾದಿ ಜೈನ ಸ್ಮಾರಕಗಳಿಂದಲೂ ಕೂಡಿ ಪ್ರಸಿದ್ಧವಾಗಿತ್ತು. ಅಲ್ಲಿ ಗಾಳಿ ಬೀಸುವಿಕೆ, ಸೂರ್ಯನ ಕಿರಣಗಳು ಪ್ರವೇಶ, ಮೃಗಗಳು ಸುಳಿದಾಟ, ಹಕ್ಕಿಗಳು ಹಾರಾಟದಂತಹ ಬಾಹ್ಯ ಚಟುವಟಿಕೆಗಳೇ ನಿಷಿದ್ಧ ಎಂದು ಹೇಳುತ್ತ, ಅನ್ಯೋದಯ ಎಂಬ ಪದವನ್ನು ಇಲ್ಲಿ ಬಳಸಲಾಗಿದೆ. ಅನ್ಯೋದಯ ಅಂದರೆ ಲೌಕಿಕವಲ್ಲದ, – ಲೌಕಿಕವಾದುದಕ್ಕಿಂತ ಬೇರೆಯದೇ ಆದ – ಪಾರಲೌಕಿಕವಾದ ಚಿಂತನೆಯಲ್ಲಿ ತೊಡಗುವುದು. ಶರೀರ ಮೊದಲಾದ ಪರದ್ರವ್ಯಗಳು ಹಾಗೂ ಧರ್ಮವಿಚಾರಗಳ ಬಗ್ಗೆ ಮತ್ತೆಮತ್ತೆ ಚಿಂತಿಸುವುದು; ಪರಮಾಗಮಗಳ ಶಬ್ದಾರ್ಥಗಳನ್ನು ಮನಸ್ಸಿನಲ್ಲಿ ಧಾರಣಮಾಡಿ ಅವುಗಳನ್ನು ಆಗಾಗ ಚಿಂತಿಸುವುದನ್ನು ಜೈನಧರ್ಮದಲ್ಲಿ ಅನುಪ್ರೇಕ್ಷೆ ಎನ್ನುತ್ತಾರೆ.[೨೦] ಇದರಲ್ಲಿ ಅನಿತ್ಯಾನುಪ್ರೇಕ್ಷೆ, ಅಶರಣಾನುಪ್ರೇಕ್ಷೆ, ಸಂಸಾರಾನುಪ್ರೇಕ್ಷೆ, ಏಕತ್ವಾನುಪ್ರೇಕ್ಷೆ, ಅನ್ಯತ್ವಾನುಪ್ರೇಕ್ಷೆ, ಅಶುಚಿತ್ವಾನುಪ್ರೇಕ್ಷೆ, ಆಸ್ರವಾನುಪ್ರೇಕ್ಷೆ, ಸಂವರಾನುಪ್ರೇಕ್ಷೆ, ನಿರ್ಜರಾನುಪ್ರೇಕ್ಷೆ, ಲೋಕಾನುಪ್ರೇಕ್ಷೆ, ಬೋಧಿದುರ್ಲಭಾನುಪ್ರೇಕ್ಷೆ ಮತ್ತು ಧರ್ಮಾನುಪ್ರೇಕ್ಷೆ ಎಂದು ಹನ್ನೆರಡು ವಿಧಗಳಿದ್ದು ಅವುಗಳನ್ನು ದ್ವಾದಶಾನುಪ್ರೇಕ್ಷೆ, ದ್ವಾದಶಭಾವನೆಗಳು

ಎಂದು ಕರೆಯುತ್ತಾರೆ. ಅವುಗಳಲ್ಲೊಂದಾದ ಅನ್ಯತ್ವಾನುಪ್ರೇಕ್ಷೆಯ ಭಾವನೆಯು ಮನುಷ್ಯನಲ್ಲಿ ಮೂಡಿದಾಗ ಆತ ಧರ್ಮಪರ ಚಿಂತನೆಯಲ್ಲಿ ತೊಡಗುತ್ತಾನೆ. ಶರೀರ, ಪುತ್ರ, ದಾರಾ(ಹೆಂಡತಿ)ದಿ ಪರಿಗ್ರಹಗಳಿಂದ ಆತ್ಮನು ಭಿನ್ನವೆಂದು ಭಾವಿಸಿವುದು. ಇಂತಹ 'ಅನ್ಯತ್ವಭಾವ'ವು ಮನುಷ್ಯರಲ್ಲಿ ಉದಯವಾದಾಗ ಧರ್ಮದಲ್ಲಿ ಯಶಸ್ಸು ಸೇರಿ ಬೆಳೆಯುತ್ತದೆ. ಹಾಗೆ ತನ್ನ ಧರ್ಮಕಾರ್ಯದಿಂದಾಗಿ ತನ್ನ ಕೀರ್ತಿಯು (ಯಶ) ಹೆಚ್ಚಿರಲು, ಅರಿಕೇಸರಿಯು (ಹರಿಗಂ) ಪಂಪನಿಗೆ ದಾನವಾಗಿ ನೀಡಿದ ಅಗ್ರಹಾರವು ಅದೆಷ್ಟು ಪ್ರಸಿದ್ಧಿಪಡೆದು ಕಳಾಪಗ್ರಾಮವನ್ನು ಹೋಲುವುದಾಯಿತು! ಇಲ್ಲಿ 'ಕಳಾಪಗ್ರಾಮ' ಎಂಬುದೂ ಗಮನಾರ್ಹ. 'ಕಳಾಪ' ಎಂದರೆ ಗುಂಪು, ಸಮೂಹ, ಸಂದಣಿ ಮೊದಲಾದ ಅರ್ಥಗಳಿವೆ. ವಿದ್ವದ್ಗೋಷ್ಠಿಗಳು, ಹೋಮಹವನಾದಿ ಲೋಕಕಲ್ಯಾಣ ಕಾರ್ಯಗಳು, ನಾಟ್ಯಾದಿ ಕಲೆಗಳ ಕಾರ್ಯಾಗಾರಗಳು ಹೀಗೆ ಹತ್ತು ಹಲವು ವೈವಿಧ್ಯಮಯವಾದ ಕಾರ್ಯಕ್ರಮಗಳು ನಡೆಯುವ ಗ್ರಾಮವನ್ನು 'ಕಳಾಪಗ್ರಾಮ' ಎಂದು ಕರೆದಿರಬಹುದು! ಇಲ್ಲಿ ಧರ್ಮಪುರವನ್ನು ಕುರಿತು ವರ್ಣಿಸುತ್ತ ಇದು 'ಕಳಾಪಗ್ರಾಮವನ್ನು ಹೋಲುವುದಾಯಿತೋ' ಎಂದಿರುವುದರಿಂದ ಹತ್ತಾರು ಕಲಾಭಿರುಚಿಯ ಕಾರ್ಯಕಲಾಪಗಳು ನಡೆಯುತ್ತಿದ್ದ 'ಕಳಾಪಗ್ರಾಮ' ಎಂಬುದು ಮತ್ತೊಂದು ಇದ್ದಿರಬೇಕು ಎಂದು ಊಹಿಸಲು ಅವಕಾಶವಿದೆ.

ಈ ಶಾಸನಪದ್ಯದಲ್ಲಿ ಅರಿಕೇಸರಿ ಎಂಬ ಪದಕ್ಕೆ ಪರ್ಯಾಯವಾಗಿ ಪ್ರಯೋಗವಾಗಿರುವ 'ಹರಿಗಂ' ಎಂಬ ಪದವನ್ನು ಪ್ರಯೋಗಿಸಲಾಗಿದೆ. ಇದು ವಿಶೇಷ ವಿಚಾರವೇನಲ್ಲ! ಪಂಪನು ತನ್ನ 'ಪಂಪಭಾರತ'ದ ಹಲವೆಡೆ 'ಅರಿಗಂ' 'ಹರಿಗಂ' ಎಂಬ ಹೆಸರುಗಳನ್ನು ಬಳಸಿರುವುದನ್ನು ಇಲ್ಲಿ ನೆನೆಯಬಹುದು. ಉದಾ : "ಕೊಂಡುಕೊನೆದೀಗರಿಗಂಗೆ ವಿಶುದ್ಧಬುದ್ಧಿಯಂ"(೧-೫); "ನೆಗಟ್ದಿವರಿಗ ನಾವಿರ್ವರುಂ"(೪-೪೫); "ಬಲ್ಲೆ ನೀಂ ಮೆಚ್ಚೆ ಹರಿಗ ಕೇಳಾನೆ ಬಲ್ಲೆಂ"(೫-೪೧); "ಅರಿಭೂಪಾಳದವಾನಳಂ ಹರಿಗ ನಿನ್ನುಗ್ರಾಸಿಧಾರಾಂಬು"(೧೪-೩೬) ಇತ್ಯಾದಿ.

ಪದ್ಯ ೯ : "ತಾಮ್ರಶಾಸನ ಬರೆದಿದೆಯೇ? ಧರ್ಮವುರವು ಬೇರೆಯವರಿಗೆ ಕೊಡದೆ ತಾನು ಮಾತ್ರ ಅನುಭವಿಸುವುದೆ? (ಆದೇಯಮೆ), ಸುಪ್ರಸಿದ್ಧನಾದ ಅರಿಕೇಸರಿಯು ಕೊಟ್ಟದ್ದೇ? ಖ್ಯಾತಿಗಳಿಸಿದ ಪಂಪನು ಪಡೆದದ್ದೇ? ಹೇಳಿ" ಎಂದು ಹಲವುಬಾರಿ, ಹಲವರನ್ನು ಕೇಳದೆ, ಹುಚ್ಚಾ, ನೀನೇ ಹೋಗಿ ಮನೋಹರವಾದ ವೃಷಭಪರ್ವತದ ಎತ್ತರವಾದ ಶಿಲೆಯಮೇಲೆ ಬರೆದಿರುವ ಶಾಶ್ವತವಾದ ಆ ಬರಹವನ್ನು (ಅ-ಕ್ಷರಗಳನ್ನು) ನೋಡು.

ಅರಿಕೇಸರಿಯು ಪಂಪನಿಗೆ ಧರ್ಮವುರವನ್ನು ದಾನವಾಗಿ ಕೊಟ್ಟು, ಅದೇಯವೆಂದು ಕೀರ್ತಿಶಾಸನ ಬರೆಸಿದ್ದರೂ, ಅನೇಕರಲ್ಲಿ ಸಂದೇಹಗಳಿದ್ದು ಅವರು ತಮ್ಮ ತಮ್ಮಲ್ಲಿಯೇ

ಪ್ರಶ್ನಿಸಿಕೊಳ್ಳುತ್ತಿದ್ದರೇನೋ ಎಂಬ ಅರ್ಥಬರುವಂತೆ ಇಲ್ಲಿನ ವೃತ್ತದ ಸಾಲುಗಳಿವೆ. ಅಂದು ಇದ್ದವರೋ, ಮುಂದೆ ಬಂದವರೋ ಈ ದಾನದ ವಿಚಾರವಾಗಿ ವೃಥಾ ಸಂಶಯತಾಳಿ ಚರ್ಚೆಗಿಳಿಯದಂತೆ ಎಚ್ಚರಿಸುತ್ತಿರುವ ರೀತಿಯಲ್ಲಿ ಈ ಪದ್ಯದ ಭಾವವಿದೆ. ಅದಕ್ಕಿಂತಲೂ ಮುಖ್ಯವಾಗಿ ಶಾಶ್ವತವಾದ ಈ ಶಿಲಾಲೇಖವು ಅರಿಕೇಸರಿ ಮತ್ತು ಪಂಪನ ಕೀರ್ತಿಯನ್ನು ಅಜರಾಮರಗೊಳಿಸುತ್ತದೆ ಎನ್ನುವ ಸೂಚ್ಯಾರ್ಥವಿದೆ. ಡಾ. ವೆಂಕಟಾಚಾಲಶಾಸ್ತ್ರೀಯವರು ಇಲ್ಲಿನ ಸಂದರ್ಭವು ಸ್ಪಷ್ಟವಾಗಲು ಈ ಪದ್ಯದ ಜೊತೆಗೆ 'ಪಂಪಭಾರತ'ದ ೧೪ನೇ ಆಶ್ವಾಸದ ೫೬ನೇ ಪದ್ಯವನ್ನು ನೋಡಬೇಕು ಎಂದಿದ್ದಾರೆ.[೨೧] ಆ ಪದ್ಯ ಇಂತಿದೆ :

ಬೀರದಳವಿಯ ನನ್ನಿಯ ಚಾಗದ ಶಾಸನಂ ಚಂದ್ರಾರ್ಕತಾರಾಂಬರಂ
ಮೇರು ನಿಲ್ವಿನಂ ನಿಲವೇಟ್ಟುಂ ಕಾವ್ಯಕ್ಕೆ ತಾನಿತ್ತಂ ಶಾಸನದಗ್ರಹಾರಂ
ಸಾರಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮ ಭಂಡಾರದಂತೆ
ಸಾರಮಾದುದು ಬಿಟ್ಟಗ್ರಹಾರಮಾ ಸಬ್ಬಿಸಾಸಿರದೊಳಂ ಧರ್ಮಪುರಂ
(ಪಂ.ಭಾ. ೧೪-೫೬)

[ಈ ಪಿರಿಯಕ್ಕರದ ಅರ್ಥ : ವೀರದ, ಪರಾಕ್ರಮದ, ಸತ್ಯಶೀಲತೆಯ, ತ್ಯಾಗದ, ಈ ಶಾಸನವು ಚಂದ್ರ ಸೂರ್ಯ ತಾರೆಗಳು ಇರುವವರೆಗೆ ಮತ್ತು ಮೇರುಪರ್ವತವು ನಿಂತಿರುವವರೆಗೆ ನಿಲ್ಲಬೇಕು. ಈ ಕಾವ್ಯ(ವಿಕ್ರಮಾರ್ಜುನ ವಿಜಯ)ಕ್ಕೆ ತಾನು ದಾನವಾಗಿ ನೀಡಿದ ಶಾಸನದ ಅಗ್ರಹಾರವನ್ನು ತಾನು 'ಸಾರ' ಎಂಬ ಹೆಸರನ್ನಿಟ್ಟು ಕೊಡಲು, ಅದು ಅರಿಕೇಸರಿಯ ಧರ್ಮದ ಭಂಡಾರದಂತೆಯೇ ಸಾರವುಳ್ಳದ್ದಾಯಿತು. ಹೀಗೆ ಬಿಟ್ಟ ಅಗ್ರಹಾರವು ಸಬ್ಬಿಸಾಸಿರ ನಾಡೊಳಗಿರುವ ಧರ್ಮಪುರವೇ ಆಗಿದೆ.] ಈ ಪದ್ಯದ ನಾಲ್ಕನೇ ಪಾದದಲ್ಲಿ ಹೇಳಿರುವ 'ಸಬ್ಬಿಸಾಸಿರ' ಎಂಬುದರ ಬದಲು ಕೆಲವು ಹಸ್ತಪ್ರತಿಗಳಲ್ಲಿ ಬಚ್ಚೆಸಾಸಿರ, ಚಚ್ಚೆ ಸಾಸಿರ, ಚರ್ಚಿಸಾಸಿರ ಎಂಬುದಾಗಿ ಕಂಡುಬರುವುದುಂಟು. ಮೊದಲ ಆವೃತ್ತಿಗಳಲ್ಲಿ 'ಬಚ್ಚೆಸಾಸಿರ' ಎಂಬುದೇ ಸರಿಯಾದ ರೂಪವೆಂದು ಅಂಗೀಕರಿಸಿ ಮುದ್ರಿಸಲಾಗಿತ್ತು. ಆದರೆ ಜಿನವಲ್ಲಭನ ಶಾಸನವು ದೊರೆತಮೇಲೆ ಆ ಎಲ್ಲ ರೂಪಗಳೂ ತಪ್ಪು ಎಂದಾಗಿದ್ದಲ್ಲದೆ, ಬಚ್ಚೆಸಾಸಿರದ ಬದಲು 'ಸಬ್ಬಿಸಾಸಿರ' ಸರಿಯಾದ ರೂಪವೆಂದು ಒಪ್ಪಿಕೊಳ್ಳಲಾಯಿತು. ಈ ಬಗ್ಗೆ ಬರೆಯುತ್ತ ಡಿ.ಎಲ್. ನರಸಿಂಹಾಚಾರ್ ಅವರು "ಬಚ್ಚೆಸಾಸಿರ : ಇದೊಂದು ನಾಡ ಹೆಸರು. ಜಿನವಲ್ಲಭನ ಗಂಗಾಧರಂ ಶಾಸನದಲ್ಲಿ "ಸಬ್ಬಿನಾಡ ನಟ್ಟನಡುವಣ ಧರ್ಮಪುರದುತ್ತರ ದಿಗ್ಭಾಗದ ವೃಷಭಗಿರಿ" ಎಂಬಲ್ಲಿ ನಾಡಿನ ಹೆಸರು ಸಬ್ಬಿ ಎಂದು ಕಾಣುತ್ತದೆ; ಇದು ಸಬ್ಬಿಸಹಸ್ರ ನಾಡಾಗಿರಬೇಕು. ಬಚ್ಚೆಸಾಸಿರ ಸರಿಯಾದ ಹೆಸರಲ್ಲವೆಂದೂ "ಸಬ್ಬಿ ಸಾಸಿರ" ಎಂಬುದು ಸರಿಯಾದುದೆಂದೂ

ಹೇಳಬಹುದಾಗಿದೆ." ('ಪಂಪಭಾರತ ದೀಪಿಕೆ' : ಪುಟ ೫೭೫, ೭೬) ಎಂದಿರುವುದನ್ನು ಗಮನಿಸಬಹುದು.

ಜಿನವಲ್ಲಭನ ಶಾಸನದಲ್ಲಿ, ಇಲ್ಲಿಂದ ಮುಂದಿನ ಮೂರು ಕಂದಪದ್ಯಗಳು ತೆಲುಗು ಭಾಷೆಯಲ್ಲಿವೆ.

ಅವುಗಳ ಅರ್ಥ ಹೀಗಿದೆ[೨೨] :

ಪದ್ಯ ೧೦ : ಜಿನಭವನಗಳನ್ನು ನಿರ್ಮಾಣಮಾಡುವುದು, ಜಿನಪೂಜೆಗಳನ್ನು ಮಾಡುವುದು, ಜಿನಮುನಿಗಳಿಗೆ ಇಷ್ಟವಾಗುವಂತೆ ಅನ್ನದಾನವನ್ನು ಕೊಡುವುದು – ಇಂಥವುಗಳಿಂದಾಗಿ ಜಿನಧರ್ಮಪರರಲ್ಲಿ ಜಿನವಲ್ಲಭನನ್ನು ಹೋಲತಕ್ಕವರುಂಟೇ ?

ಪದ್ಯ ೧೧ : ಸೂರ್ಯನಿಗೆ ಸಮಾನವಾಗಿ ಬೆಳಗುವವನೆಂದು, ಜಿನವಲ್ಲಭನಿಗೆ ಸಮಾನವಾದ ಶ್ರೇಷ್ಠಕವಿಗಳೆಂಬ ಮನುಷ್ಯರುಂಟೇ, ಎಂದು ಲೋಕವು ಹೊಗಳುತ್ತದೆ – ಎನ್ನುತ್ತಾರೆ ವಿದ್ವತ್ ಕವೀಂದ್ರರು.

ಪದ್ಯ ೧೨ : ಒಬ್ಬೊಬ್ಬನಲ್ಲಿ ಒಂದೊಂದು ಗುಣವಿರುವುದೇ ಹೊರತು, ಒಬ್ಬನಲ್ಲಿಯೇ ಒಂದು ಲಕ್ಷ ಗುಣಗಳಿರುವುದು ಯಾರಿಗೂ ಇಲ್ಲ. ಲೆಕ್ಕಿಸುವುದಾದರೆ, ಗುಣಪಕ್ಷಪಾತಿ ಎನಿಸಿದ ಜಿನವಲ್ಲಭನ ಗುಣರತ್ನಸಮೂಹವು ಒಂದು ಲಕ್ಷಕ್ಕೂ ಅಧಿಕವಾದದ್ದು.

ಈ ಮೂರು ಪದ್ಯಗಳಲ್ಲಿಯೂ ಜಿನವಲ್ಲಭನ ಗುಣಾವಳಿಗಳನ್ನು ಹೇಳುತ್ತ ಅವನ ಅಸಾಧಾರಣ ವ್ಯಕ್ತಿತ್ವವನ್ನು ಬಣ್ಣಿಸಲಾಗಿದೆ. ಜಿನಧರ್ಮದ ಏಳಿಗೆಗಾಗಿ ದುಡಿಯುತ್ತಿದ್ದ ಆತ ದಾನಶೀಲನೂ, ಲೋಕದಕವಿಗಳನ್ನು ಗೆದ್ದ ಶ್ರೇಷ್ಠಕವಿಯೂ (ಜಿತಕವಿ), ಗುಣಪಕ್ಷಪಾತಿಯೂ ಆಗಿದ್ದು ಅಪಾರ ಗುಣಗಳನ್ನು ಹೊಂದಿದ್ದನು ಎಂಬುದಾಗಿ ಈ ಪದ್ಯಗಳಲ್ಲಿ ತಿಳಿಸಲಾಗಿದೆ. ಕ್ರಿ.ಶ. ೧೦ನೇ ಶತಮಾನದ ಹಳೆಯ ತೆಲುಗಿನ ಈ ಕಂದಪದ್ಯಗಳಿಗೆ ಹೊಸಗನ್ನಡದಲ್ಲಿ ಅರ್ಥ ಬರೆದಿರುವ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಈ ಪದ್ಯಗಳಲ್ಲಿ ಪ್ರಯೋಗವಾಗಿರುವ ಛಂದಸ್ಸಿನ ಬಳಕೆಯ ಬಗೆಗೂ ಪ್ರಸ್ತಾಪಿಸಿದ್ದಾರೆ.[೨೩]

ಶಾಸನೋಕ್ತವಾದ ಈ ಕಂದಪದ್ಯಗಳು ತೆಲುಗು ಭಾಷೆಯ ಅತ್ಯಂತ ಪ್ರಾಚೀನ ಪದ್ಯಗಳಾಗಿವೆ. ಇವುಗಳಿಗಿಂತ ಹಿಂದಿನ ಯಾವುದೇ ಪದ್ಯರೂಪಗಳು ತೆಲುಗಿನಲ್ಲಿ ಇಲ್ಲದಿರುವುದರಿಂದ ಆ ಭಾಷೆಯ ಪ್ರಾಚೀನತೆಯನ್ನು ನಿರ್ಧರಿಸುವಲ್ಲಿ ಜಿನವಲ್ಲಭನ ಶಾಸನವು ಪ್ರಮುಖ ಆಧಾರವಾಗಿದ್ದು, ಈ ತ್ರಿಭಾಷಾ ಶಾಸನವು ತೆಲುಗಿನ ಪ್ರಾಚೀನ ವೈಭವಕ್ಕೆ ಜೀವಂತಸಾಕ್ಷಿಯಾಗಿ ನಿಂತಿದೆ. ತೆಲುಗು ಸಾಹಿತ್ಯ ಚರಿತ್ರೆಯಲ್ಲಿ, ಕ್ರಿ.ಶ. ೧೧ನೇ

ಶತಮಾದಲ್ಲಿ ಜೀವಿಸಿದ್ದು, ತೆಲುಗು ಭಾಷೆಯಲ್ಲಿ ಮಹಾಭಾರತವನ್ನು ಬರೆದ ನನ್ನಯ (ನನ್ನಯ್ಯ) ಕವಿಯನ್ನು ಆ ಭಾಷೆಯ ಪ್ರಾಚೀನ ಕವಿ ಎಂದು ಗುರುತಿಸಲಾಗಿದೆ. ಆದರೆ ಅವನಿಗಿಂತ ಒಂದು ಶತಮಾನಕ್ಕೂ ಮೊದಲೇ ಬಹುಭಾಷಾ ಪಂಡಿತನಾಗಿದ್ದ ಜಿನವಲ್ಲಭನು ಕಂದಪದ್ಯಗಳನ್ನು ತೆಲುಗು ಭಾಷೆಯಲ್ಲಿ ರಚಿಸಿದ್ದಾನೆಂಬುದು ಗಮನಾರ್ಹ. ಹಾಗಾಗಿ ತೆಲುಗಿನ ಅತ್ಯಂತ ಪ್ರಾಚೀನ ಕವಿ ಜಿನವಲ್ಲಭ ಎನಿಸುತ್ತಾನೆ. ತೆಲುಗು ಭಾಷೆಗೆ ಶಾಸ್ತ್ರೀಯಸ್ಥಾನದ ಗೌರವ ನೀಡಲು ಕೇಂದ್ರಸರ್ಕಾರಕ್ಕೆ ಸಲ್ಲಿಸಲಾದ ಅತ್ಯಂತ ಪ್ರಾಚೀನ ಸಾಹಿತ್ಯಿಕ ದಾಖಲೆಗಳಲ್ಲಿ ಜಿನವಲ್ಲಭನ ಶಾಸನದ ಕಂದಪದ್ಯಗಳು ಪ್ರಮುಖ ಪುರಾವೆಗಳಾಗಿದ್ದವು.

ಶಾಸನದ ಕೊನೆಯಲ್ಲಿನ ಗದ್ಯದ ಸಾಲುಗಳ ಅರ್ಥ :

ಹೀಗೆಂದು ಲೋಕವೆಲ್ಲ ಹೊಗಳುವಂತೆ ನಡೆದುಕೊಂಡ ಜಿನವಲ್ಲಭನ ಸುಧರ್ಮಸಂತತಿಯಲ್ಲಿ ತೊಡಗಿದ ಗುಣಗಳ ಸಮೂಹವನ್ನು ಈ ವೃಷಭಗಿರಿಯ ಸಿದ್ಧಶಿಲೆಯಲ್ಲಿ ಎಱೆಯಮ್ಮ ಎಂಬುವನು ಕೊರೆದನು (ಟಂಕೋತ್ಕೀರ್ಣ್ಣಮ್ಮಾಡಿದಂ).

ಇಲ್ಲಿಯೂ, ಜಿನವಲ್ಲಭನ ಲೋಕಪ್ರಸಿದ್ಧಿಯ ಬಗ್ಗೆ ತಿಳಿಸುತ್ತ, ಧರ್ಮಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ಆತನ ಅತಿಶಯವಾದ ಗುಣಗಳ ಬಗ್ಗೆ ಹೇಳಲಾಗಿದೆ. ಶಾಸನವಿರುವ ಬೊಮ್ಮಲಗುಟ್ಟವನ್ನು ಇಲ್ಲಿ ಮತ್ತೊಮ್ಮೆ 'ವೃಷಭಗಿರಿ' ಎಂದು ಕರೆದಿರುವುದಲ್ಲದೆ, ಶಾಸನ ಕೆತ್ತಲಾಗಿರುವ ಬಂಡೆಯನ್ನು ಮುಕ್ತಜೀವಿಗಳು ನೆಲಸುವ ಪವಿತ್ರ 'ಸಿದ್ಧಶಿಲೆ'[೨೪] ಎಂದೇ ಕರೆದಿರುವುದು ಗಮನಾರ್ಹ. ಶಾಸನದ ಕೊನೆಯ ಈ ಸಾಲಿನಲ್ಲಿ ಎಱೆಯಮ್ಮ ಎಂಬ ಶಿಲ್ಪಿಯು ಕಲ್ಲಿನ ಮೇಲೆ ಈ ಶಾಸನದ ಅಕ್ಷರಗಳನ್ನು ಉತ್ಕೀರ್ಣಿಸಿದನೆಂದು ಹೇಳಲಾಗಿದೆ. ಪ್ರಾಚೀನವಾದ ತಾಮ್ರ ಶಾಸನ ಅಥವಾ ಶಿಲಾಶಾಸನಗಳ ಅವುಗಳ ಕೊನೆಯಲ್ಲಿ ಆ ಶಾಸನವನ್ನು ಕೊರೆಯುತ್ತಿದ್ದ ಶಿಲ್ಪಿಯ ಹೆಸರನ್ನೂ ಹೇಳುವುದು ಕಂಡುಬರುತ್ತದೆ. ಶಾಶಸನವನ್ನು ಕೊರೆಯುತ್ತಿದ್ದ ಶಿಲ್ಪಿಗಳು ಸಾಮಾನ್ಯವಾಗಿ ತಮ್ಮನ್ನು 'ರೂವಾರಿ'(< ರೂಪಾಕಾರಿ)ಗಳೆಂದೂ, 'ಸರಸ್ವತೀಗಣದಾಸಿ'ಗಳೆಂದೂ ಕರೆದುಕೊಂಡಿದ್ದಾರೆ.[೨೫]

ಒಟ್ಟಾರೆಯಾಗಿ, ಜಿನವಲ್ಲಭನ ಶಾಸನವು ಕನ್ನಡದ ಆದಿಕವಿ ಪಂಪನಿಗೆ ಸಂಬಂಧಿಸಿದ ಹಲವು ಹೊಸ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿ, ಆತನ ಚರಿತ್ರೆಯನ್ನು ಸ್ಪಷ್ಟವಾಗಿ ತಿಳಿಯಲು ಸಹಾಯಕವಾದ ಅತ್ಯಮೂಲ್ಯವಾದ ಸಾಧನವಾಗಿದೆ. ಸುಮಾರು ಒಂದು ಸಾವಿರ ವರ್ಷಗಳ ಕಾಲ ತಿಳಿಯದೇ ಇದ್ದ ವಿಷಯಗಳ ಬಗ್ಗೆ ತಿಳಿಸಿಕೊಟ್ಟ ಪ್ರಾಚೀನ ಶಾಸನ ಇದಾಗಿದೆ. ಇದರ ಮಹತ್ವವನ್ನರಿತ ಭಾರತಸರ್ಕಾರವು ಈ ಶಾಸನವನ್ನು ರಾಷ್ಟ್ರೀಯಸ್ಮಾರಕಗಳ ಪಟ್ಟಿಯಲ್ಲಿ ಸೇರಿಸಿದೆ.

ಅಡಿಟಿಪ್ಪಣಿಗಳು :

೧. ತೀರ್ಥಂಕರರ ತಪೋರಕ್ಷಣೆಯನ್ನು ಮಾಡುತ್ತ ಅವರಿಗೆ ಸೇವೆಸಲ್ಲಿಸುವ ಭಕ್ತೆ ; ಇಪ್ಪತ್ತಾಲ್ಕು ತೀರ್ಥಂಕರರಲ್ಲಿ ಪ್ರತಿಯೊಬ್ಬ ತೀರ್ಥಂಕರನ ಬಳಿಯಲ್ಲಿಯೂ ಇರುವ ಶಾಸನದೇವತೆ ; ಈಕೆಯ ಪತಿ ಯಕ್ಷ. ಆದಿತೀರ್ಥಂಕರ ವೃಷಭದೇವನ ಯಕ್ಷಿ ಚಕ್ರೇಶ್ವರಿ. ಎರಡನೇ ತೀರ್ಥಂ ಅಜಿತನಾಥನ ಯಕ್ಷಿ ರೋಹಿಣಿ ; ೨೪ನೇ ತೀರ್ಥಂಕರ ವರ್ಧಮಾನನ ಯಕ್ಷಿ ಸಿದ್ಧಾಯಿನೀ.

೨. ಕಾಯೋತ್ಸರ್ಗ : ಶರೀರಾದಿಗಳ ಮಮತೆಯನ್ನು ತೊರೆದುಆತ್ಮವನ್ನು ಸುಮುಖ ಮಾಡಿಕೊಳ್ಳುವ ಆವಶ್ಯಕ ಕ್ರಿಯೆ. ಕಾಯದ ಮೇಲಿನ ಅಭಿಮಾನವನ್ನು ತ್ಯಜಿಸಿ ಆತ್ಮಧ್ಯಾನ ಮಾಡುವುದು.ಎರಡೂ ಕೈಗಳನ್ನು ಇಳಿಬಿಟ್ಟು, ನಿಂತು ಸ್ತೋತ್ರ, ಧ್ಯಾನಾದಿಗಳನ್ನು ಮಾಡುವುದು.

೩. ಕೆಲವು ಪುಸ್ತಕಗಳಲ್ಲಿ ಮುದ್ರಿಸಲಾಗಿರುವ ಶಾಸನಪಾಠದಲ್ಲಿ 'ಸಕಳಕಳಾಳಾಪ ಪ್ರವೀಣಂ' ಎಂದಿದೆ. ಇದು ತಪ್ಪು ಬಳಕೆಯಾಗಿದ್ದು,

'ಸಕಳಕಳಾಕಳಾಪ ಪ್ರವೀಣಂ' ಎಂಬುದು ಸರಿಯಾದ ರೂಪವೆಂಬುದನ್ನು ಡಾ. ವೆಂಕಟಾಚಲಶಾಸ್ತ್ರೀ ಅವರು ಆಧಾರಸಹಿತವಾಗಿ ತೋರಿಸಿಕೊಟ್ಟಿದ್ದಾರೆ. ಆಸಕ್ತರು ಗಮನಿಸಬಹುದು : 'ಶಾಸ್ತ್ರೀಯ, ಸಂಪುಟ–೧', 'ಜಿನವಲ್ಲಭನ ಕುರ್ಕ್ಯಾಲ ಶಾಸನದ ಅರ್ಥ' : ಒಂದನೇ ಅಡಿಟಿಪ್ಪಣಿ, ಪುಟ ೨೫೯.

೪. 'ಕಮ್ಮೆ' ಎಂಬ ಪದವು ದೇಶವಾಚಕವಾಗಿಯೂ, ಕುಲ ಅಥವಾ ವಂಶವಾಚಕವಾಗಿಯೂ ಬಳಕೆಯಾಗಿದೆ.

ಉದಾ : ದೇಶವಾಚಕ ಪ್ರಯೋಗಕ್ಕೆ : ಆ ಧರಣೀಪ್ರಿಯ ಕಟಾಕ್ಷಧರ ವಿಭ್ರಮ ಭ್ರಮಣಮಗ್ಗಳದ ಕಮ್ಮೆನಾಡು (ಶಾಂತಿಪುರಾಣ. ೧–೪೩) ಅಗ್ಗಳಿಕೆಯ ಕಮ್ಮೆದೇಶವನಲಂಕರಿಸಿದುದು ಪುಂಗನೂರ್ (ಅಜಿತನಾಥ ಪುರಾಣ. ೧–೨೪).

ಕುಲವಾಚಕ ಪ್ರಯೋಗಕ್ಕೆ : ಬ್ರಾಹ್ಮಣರೊಳು ಕಮ್ಮೆ ಮೊದಲಾದೆಂಟು ಕುಲವಕ್ಕು (ಮಂಗರಾಜ ನಿಘಂಟು. ೭೫–೭)

ಕಮ್ಮೆಕುಲದಿಂದೆ ಮೆರೆದಿರ್ಪ ವಿಪ್ರನಿರ್ಪಂ (ಬಸವರಾಜದೇವರ ರಗಳೆ. ೧–೯೮)

೫. ತೆಲಂಗಾಣ ರಾಜ್ಯದಲ್ಲಿರುವ ಜನಗಾಂವ್ ಜಿಲ್ಲೆಯ ಈಗಿನ ನಿಡಿಗೊಂಡ ಎಂಬ ಸ್ಥಳವೇ ಪಂಪನ ಪೂರ್ವಜರು ನೆಲಸಿದ್ದ, ಶಾಸನೋಕ್ತ ನಿಡುಂಗೊಂಡೆಯಾಗಿತ್ತು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದ್ದು, ಸದ್ಯದಲ್ಲಿ ಈ ಹೇಳಿಕೆ ಬಹುಜನ ಸಮ್ಮತವಾಗಿದೆ.

೬. ಪಂಪನ ತಂದೆಯ ಹೆಸರನ್ನು ಮೊದಲು ಅಭಿರಾಮದೇವರಾಯ ಎಂದು ತಪ್ಪಾಗಿ ಓದಿಕೊಂಡಿದ್ದು, ಜಿನವಲ್ಲಭನ ಶಾಸನವು ದೊರೆತು ಪ್ರಕಟವಾದ ಬಳಿಕ ಪಂಪನ ತಂದೆಯ ಹೆಸರು ಅಭಿರಾಮದೇವರಾಯ ಅಲ್ಲ! ಭೀಮಪ್ಪಯ್ಯ ಎಂದು ಸ್ಪಷ್ಟವಾಗಿ ತಿಳಿದುಬಂದಿತು.

೭. ಡಾ. ಎಂ.ಎಂ ಕಲಬುರ್ಗಿಯವರು ಪಂಪನ ತಾಯಿಯ ಹೆಸರು ಅಬ್ಬಣಬ್ಬೆ ಅಲ್ಲ ವಬ್ಬಣಬ್ಬೆ ಇರಬೇಕು ಎಂದಿದ್ದರಲ್ಲದೆ, ಡಾ.ಪಿ.ಬಿ.

ದೇಸಾಯಿಯವರು ಪಂಪನ ತಾಯಿ ಅಬ್ಬಣಬ್ಬೆಯು ಜೋಯಿಸಸಿಂಘನ ಮೊಮ್ಮಗಳಲ್ಲ, ಮಗಳು ಎಂದಿದ್ದರು. ಆದರೆ ಈ ಬಗ್ಗೆ ಸ್ಪಷ್ಟನೆ ಕೊಡುತ್ತ ಡಾ. ಕಲಬುರ್ಗಿಯವರು "ಪಂಪನ ತಾಯಿಯು ಜೋಯಿಸಸಿಂಘನ ಮಗಳಲ್ಲ, ಮೊಮ್ಮಗಳು. ಅವಳ ಹೆಸರು ವಬ್ಬಣಬ್ಬೆಯಲ್ಲ, ಅಬ್ಬಣಬ್ಬೆ ಎಂದು ಇನ್ನೊಮ್ಮೆ ಸೂಚಿಸಬಯಸುತ್ತೇನೆ" ಎಂದು ದಾಖಲಿಸಿದ್ದಾರೆ. ('ಅಬ್ಬಣಬ್ಬೆ : ಮಗಳಲ್ಲ–ಮೊಮ್ಮಗಳು': 'ಮಾರ್ಗ. ಸಂ–೨', ಪುಟ ೪೫)

೮. ಕೊಂಡಕುಂದ ಅಥವಾ ಕುಂದಕುಂದ ಎಂಬ ಆಚಾರ್ಯರು ಜೈನಪರಂಪರೆಯಲ್ಲಿ ಸುಪ್ರಸಿದ್ಧರು. ಅವರ ವಂಶದಲ್ಲಿ ಪ್ರಸಿದ್ಧರಾದ ಜಯಣಂದಿಸಿದ್ಧಾಂತಭಟಾರರಿಗೆ ಜಿನವಲ್ಲಭನು ಶಿಷ್ಯನಾಗಿದ್ದನು. ಕವಿ ಪಂಪನೂ ಸಹ ತನ್ನ ಆದಿಪುರಾಣದಲ್ಲಿ ತನ್ನ ಗುರುಪರಂಪರೆಯನ್ನು ಸ್ಮರಿಸುವಾಗ ಮಲಧಾರಿಮುನಿ, ದೇವೇಂದ್ರಮುನಿ, ಜಯನಂದಿಮುನಿಯರನ್ನು ನೆನೆದಿದ್ದಾನೆ(೧–೧೩). ಮಾತ್ರವಲ್ಲದೆ, ತನ್ನನ್ನು 'ಕೊಂಡಕುಂದಾನ್ವಯನಂದನಶುಕಂ' ಎಂದು ಕರೆದುಕೊಂಡಿದ್ದಾನೆ(೧–೧೪).

೧೦. ಅರಿಕೇಸರಿಯು ಪಂಪನಿಗೆ ದಾನವಾಗಿ ನೀಡಿದ್ದ ಧರ್ಮವುರ(ಧರ್ಮಪುರ)ವುಈಗಿನ ಯಾವ ಪ್ರದೇಶವಾಗಿದೆ ಎಂಬ ಬಗ್ಗೆ ಸಾಕಷ್ಟು ಚರ್ಚೆ ನಡೆದು ವಿದ್ವಾಂಸರು ಬೇರೆ ಬೇರೆಯದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುತ್ತ

ಡಾ.ಟಿ.ವಿ. ವೆಂಕಟಾಚಾಲಶಾಸ್ತ್ರೀ ಅವರು "ಈಚೆಗೆ ಕುರ್ಕ್ಯಾಲ್ ಶಾಸನ ದೊರೆತ ಮೇಲೆ ಅದರ ನೆಲೆ ತಿಳಿಯುವುದು ಸಾಧ್ಯವಾಗಿದೆ ..ಶಾಸನ ದೊರೆತ ಸ್ಥಳಕ್ಕೆ ಹತ್ತಿರದಲ್ಲಿರುವ ಕುರ್ಕ್ಯಾಲ್ ಗ್ರಾಮ ಹಾಗೂ ಅದಕ್ಕೆ ಸಮೀಪದ ನೇಲಕೊಂಡಪಲ್ಲಿ, ಕೊಂಡಪಲ್ಲಿ ಎಂಬ ಇನ್ನೆರಡು ಉಪಗ್ರಾಮಗಳು ಸೇರಿ ಹಿಂದೆ ಧರ್ಮವುರವಾಗಿದ್ದಿರಬೇಕು ಎಂದು ಊಹಿಸಬಹುದು." ಎಂದಿದ್ದಾರೆ. (ಪಂಪ ಸಂಪುಟ : (ಸಂ) ಪ್ರೊ. ಟಿ.ವಿ. ವೆಂಕಟಾಚಾಲಶಾಸ್ತ್ರೀ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬, ಪ್ರಸ್ತಾವನೆ, ಪುಟ ಥಥಋು)

೧೧. ಶಾಸನದಲ್ಲಿ "ಕುಲದೈವಮಾದ್ಯನ್ತ ಜಿನಬಿಂಬಗಳುಮಂ ಮಾಡಿಸಿದಂ" ಎಂದಿರುವುದರಿಂದ ಆದಿಯಿಂದ ಅಂತ್ಯದವರೆಗಿನ

ಜಿನಮೂರ್ತಿಗಳನ್ನು ಕೆತ್ತಿಸಿದನು ಎಂದು ತಿಳಿಯಬೇಕಾಗುತ್ತದೆ. ಆಗ ಮೊದಲಿಂದ ಕೊನೆಯವರೆಗಿನ ಇಪ್ಪತ್ನಾಲ್ಕು ತೀರ್ಥಂಕರರ

ಪ್ರತಿಮೆಗಳನ್ನು ಹಾಕಿಸಿದನು ಎಂದರ್ಥವಾಗುತ್ತದೆ. ಆದರೆ ಆ ಎಲ್ಲ ಇಪ್ಪತ್ನಾಲ್ಕು ಜಿನಮೂರ್ತಿಗಳು ಶಾಸನದ ಆಸುಪಾಸಿನಲ್ಲಿರುವುದಿಲ್ಲ. ಆದುದರಿಂದ ಕೆಲವು ವಿದ್ವಾಂಸರು ಆದಿ ಮತ್ತು ಅಂತ್ಯದ ಇಬ್ಬರು ತೀರ್ಥಂಕರರ ಮೂರ್ತಿಗಳನ್ನು ಜಿನವಲ್ಲಭ ಕೆತ್ತಿಸಿರಬೇಕು ಎಂದು ಹೇಳಿ ಚಕ್ರೇಶ್ವರಿ ಶಿಲ್ಪದ ಮೇಲ್ಭಾಗದಲ್ಲಿರುವ ಎರಡು ಜಿನಮೂರ್ತಿಗಳೇ ಆ ಎರಡು ತೀರ್ಥಂಕರರ ಪ್ರತಿಮೆಗಳು ಎನ್ನುತ್ತಾರೆ.

೧೨. ಪಂಪಭಾರತ : ೧೪–೪೮ ; ಪಂಪ ಸಂಪುಟ : (ಸಂ) ಪ್ರೊ. ಟಿ.ವಿ. ವೆಂಕಟಾಚಾಲಶಾಸ್ತ್ರೀ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬,

೧೩. ಡಾ. ಡಿ.ಎಲ್. ನರಸಿಂಹಾಚಾರ್, ಪಂಪಭಾರತ ದೀಪಿಕೆ, ಪುಟ ೫೭೨ (ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ೧೯೭೬)

೧೪. 'ಗಂಗಾಧರಂ ಶಾಸನ : ಒಂದು ತಿದ್ದುಪಡಿ' : ಕನ್ನಡ ನುಡಿ, ೧೯೬೮ ಮೇ.

೧೪ಎ. 'ಗಂಗಾಧರಂ ಶಾಸನ – ತಿದ್ದುಪಡಿಯ ಗಡಿಬಿಡಿ' : ಕನ್ನಡ ನುಡಿ ೧೯೬೮ ಅಗಸ್ಟ್.

೧೫. 'ಅಬ್ಬಣಬ್ಬೆ : ಮಗಳಲ್ಲ–ಮೊಮ್ಮಗಳು': 'ಮಾರ್ಗ. ಸಂ–೨', ಪುಟ ೪೫

೧೬. ಪಂಪ ಮತ್ತು ಜಿನವಲ್ಲಭರ ತಂದೆಯಾದ ಭೀಮಪಯ್ಯನನ್ನೇ ಇಲ್ಲಿ 'ಭೀಮ' ಎಂದು ಕರೆಯಲಾಗಿದೆ. ಪಂಪ ತನ್ನ ಪೂರ್ವಜರ ಬಗ್ಗೆ ಹೇಳುತ್ತಿರುವ ಪಂಪಭಾರತದ ಪದ್ಯವೊಂದರಲ್ಲಿ (೧೪–೪೭) 'ಅಭಿರಾಮದೇವರಾಯ' ಎಂದಿದ್ದ ಪಾಠಾಂತರವನ್ನು 'ಭೀಮನಾಮಧೇಯಂ' ಎಂದು ತಿದ್ದಿ ಸರಿಪಡಿಸಿಕೊಳ್ಳುವುದಕ್ಕೂ ಶಾಸನಪಾಠದಲ್ಲಿರುವ 'ಭೀಮ' ಎಂಬ ಈ ಹೆಸರು ಸಕಾಯಕವಾಗಿದೆ.

೧೭. ಅಜಿತ ತೀರ್ಥಕರ ಪುರಾಣಂ, ೧೨–೪೦, (ಸಂ) ಬಿ.ಎಸ್. ಸಣ್ಣಯ್ಯ, ರಾಮೇಗೌಡ, (ಪ್ರ. ಗೀತಾ ಬುಕ್ಹೌಸ್, ಮೈಸೂರು) ೧೯೮೮

೧೮. "ಎನ್ನನ್ನಿಜೋನ್ನತಿಯಿಂದಮೀ ಪತಿಯೆಂದು ಮೆಚ್ಚಿ ವಿನಾಯಕಂ ತಾನ್ನಿಮಿರ್ಚುಗೆ ಕಬ್ಬಮಂ ನಯದಿಂ ಗುಣಾರ್ಣವ ಭೂಪನಾ (ಪಂಪಭಾರತ : ೧–೭)

೧೯. ಪಂಪಭಾರತ : ೧–೫೦

೨೦. ಅನುಪ್ರೇಕ್ಷೆ (ಪುಟ ೧೪) ಹಾಗೂ ದ್ವಾದಶಾನುಪ್ರೇಕ್ಷೆ (ಪುಟ ೧೩೩)ಗಳ ವಿವರವನ್ನು 'ಜೈನಪರಿಭಾಷಾ ರತ್ನಕೋಶ' (ಸಂ)

ತ.ಸು.ಶಾಮರಾಯ ಮತ್ತು ಹಂ.ಪ.ನಾಗರಾಜಯ್ಯ. ಪ್ರ. ಕನ್ನಡ ಸಾಹಿತ್ಯ ಪರಷತ್ತು, ಬೆಂಗಳೂರು. ೧೯೮೧. ಈ ಕೃತಿಯಲ್ಲಿ ಗಮನಿಸಬಹುದು.

೨೧. ಡಾ. ವೆಂಕಟಾಚಲಶಾಸ್ತ್ರೀ : 'ಶಾಸ್ತ್ರೀಯ, ಸಂಪುಟ–೧' 'ಜಿನವಲ್ಲಭನ ಕುರ್ಕ್ಯಾಲ ಶಾಸನದ ಅರ್ಥ', ೧೪ನೇ ಅಡಿಟಿಪ್ಪಣಿ, ಪುಟ ೨೬೨.

೨೨. ಅದೇ, ಪುಟ ೨೫೯ ; ತೆಲುಗು ಭಾಷೆಯಲ್ಲಿರುವ ಈ ಮೂರೂ ಶಾಸನಸ್ಥ ಕಂದಪದ್ಯಗಳಿಗೆ ಡಾ. ವೆಂಕಟಾಚಲಶಾಸ್ತ್ರೀ ಅವರು ಹೊಸಗನ್ನಡದಲ್ಲಿ ಬರೆದಿರುವ ತಾತ್ಪರ್ಯಾರ್ಥವನ್ನೇ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ಇಲ್ಲಿ ಯಥಾವತ್ತಾಗಿ ಕೊಡಲಾಗಿದೆ.

೨೩. ಅದೇ, ೧೫ನೇ ಅಡಿಟಿಪ್ಪಣಿ, ಪುಟ ೨೬೨.

೨೪. ಈಷತ್ ಪ್ರಾಗ್ಭಾರವೆಂಬ ಸಿದ್ಧಕ್ಷೇತ್ರದ ಮಧ್ಯದಲ್ಲಿರುವ ಶುದ್ಧಸ್ಫಟಿಕದ ಶಿಲೆ ;ಇದು ಬಿಚ್ಚಿದ ಕೊಡೆಯ ಆಕಾರದಲ್ಲಿದೆ. ಇದು ಎಂಟು ಗಾವುದ ದಪ್ಪವಾಗಿಯೂ, ನಲವತ್ತೈದು ಲಕ್ಷ ಯೋಜನ ವಿಸ್ತಾರವಾಗಿಯೂ ಇದೆ. ಇಲ್ಲಿ ಘನೋದಧಿ, ಘನವಾತ, ತನುವಾತ ಎಂಬ ಮೂರು ವಾಯುಗಳು ಮಾತ್ರ ಇವೆ, ಇನ್ನೇನೂ ಇಲ್ಲ. ಈ ಶೀಲೆಯ ನೆತ್ತಿಯಲ್ಲಿ ಮುಕ್ತರಾದ ಸಿದ್ಧರು ನೆಲಸುತ್ತಾರೆ. – 'ಜೈನಪರಿಭಾಷಾ ರತ್ನಕೋಶ,' ಪುಟ ೨೭೬.

೨೫. ಡಾ.ಎಂ. ಚಿದಾನಂದಮೂರ್ತಿ : 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪುಟ, ೬೧, (ಪ್ರ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೯). ಆಸಕ್ತರು ಇದೇ ಕೃತಿಯ 'ಶಾಸನಗಳಲ್ಲಿ ವಿಷಯಾನುಪೂರ್ವಿ' ಎಂಬ ಅಧ್ಯಾಯವನ್ನು ಗಮನಿಸಬಹುದು.

❐❐

ಹರಿಹರನ ಭಕ್ತಿಯ ನೆಲೆಗಳು

ಡಾ. ಪೂರ್ಣಿಮಾ ಎಸ್.

❖

ಭಕ್ತಿಗೆ 'ಭಂಡಾರಿ' ಬಸವಣ್ಣನವರಾದರೆ ಭಕ್ತಿಗೆ 'ಮಹಾಕವಿ' ಹರಿಹರ. ಹಾಗಾಗಿಯೇ ರಾಷ್ಟ್ರಕವಿ ಕುವೆಂಪುರವರು ಹೀಗೆ ಹೇಳುತ್ತಾರೆ; "ಬಸವಣ್ಣನವರು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಾಡಿದ ಮಹಾಕ್ರಾಂತಿಯನ್ನೇ ಹರಿಹರ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ್ದಾನೆ" ಎಂಬುದು ಅಕ್ಷರಶಃ, ಸತ್ಯವಾದದ್ದು. ಕಾಲ–ಭಾಷೆ–ಪ್ರದೇಶದ ದೃಷ್ಟಿಯಿಂದ ವಚನಕಾರರಿಗೆ ಅತ್ಯಂತ ಸಮೀಪನಾದವನಾಗಿದ್ದ ಹರಿಹರ ವಚನಕಾರರ ಗಾಢ ಪ್ರಭಾವಕ್ಕೆ ಒಳಗಾಗಿ ಬಸವಾದಿ ಶಿವಶರಣರ ಎಲ್ಲ ತತ್ವಗಳನ್ನು ಸಿದ್ಧಾಂತಗಳನ್ನು ಆದರ್ಶಗಳನ್ನು ಅರಿತು ಅಳವಡಿಸಿಕೊಂಡಿರುವುದನ್ನು ಹರಿಹರನ ರಚನೆಗಳಲ್ಲಿ ಸುಸ್ಪಷ್ಟವಾಗಿ ಕಾಣಬಹುದು. ಸ್ತ್ರೀಯರನ್ನ ನಾಯಕಿಯರನ್ನಾಗಿ ಮಾಡಿಕೊಂಡು ಕಾವ್ಯಗಳನ್ನ ಮತ್ತು ರಗಳೆಗಳನ್ನು ಮೊಟ್ಟಮೊದಲಿಗೆ ರಚಿಸಿದವನು ಹರಿಹರ. ಈತನ ಗಿರಿಜಾ ಕಲ್ಯಾಣದಲ್ಲಿನ ಗಿರಿಜೆ ತನ್ನ ಉಗ್ರ ತಪಸ್ಸಿನ ಭಕ್ತಿಯ ಮೂಲಕ ತನ್ನಿದ್ದಲ್ಲಿಗೆ ಶಿವನನ್ನ ಬರಮಾಡಿಕೊಂಡ ಮಹಾನ್ ಸದ್ಭಕ್ತೆಯಾಗಿ ಗೋಚರಿಸುತ್ತಾಳೆ. ಹಾಗೆಯೇ ಕಾರಿಕಾಲಮ್ಮೆಯ ರಗಳೆ, ಪಾಂಡೆ ಮಹಾದೇವಿ ರಗಳೆ, ಕೋಳೂರು ಕೊಡಗೂಸಿನ ರಗಳೆ, ಅಮ್ಮೆವ್ವೆಯ ರಗಳೆ, ವೈಜಕವ್ವೆಯ ರಗಳೆ, ಹೆರೂರು ಹೆಣ್ಣಿನ ರಗಳೆ, ನಿಂಬವ್ವೆಯ ರಗಳೆ, ಚೋಳಿಯಕ್ಕನ ರಗಳೆ, ಮಹಾದೇವಿ ಅಕ್ಕನ ರಗಳೆ, ತಿರುನೀಲಕ್ಕರ (ತಿರುನೀಲಕ್ಕರನಿಗಿಂತ ವಧುವಿನ ಮಹತ್ವ ಅಧಿಕವಾಗಿರುವ) ರಗಳೆ. ಹೀಗೆ ಹತ್ತಾರು ರಗಳೆಗಳಲ್ಲಿ ಮಹಿಳಾ ಭಕ್ತೆಯರನ್ನೇ ಕೇಂದ್ರವಾಗಿಟ್ಟುಕೊಂಡು ಹರಿಹರ ರಚಿಸಿದ್ದಾನೆ. ಹರಿಹರನ ಆರಾಧ್ಯದೈವ ಹಂಪೆಯ ವಿರೂಪಾಕ್ಷನಾದ್ದರಿಂದ ೧೦೮ ರಗಳೆಗಳಲ್ಲೂ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ವಿರೂಪಾಕ್ಷನ ಸ್ತುತಿಯೊಂದಿಗೆ ಮುಕ್ತಾಯವಾದರೂ; ಎಲ್ಲಗಳೆರಗಳಲ್ಲೂ ಶಿವನೊಂದಿಗೆ ಸೂಕ್ತ ಸ್ಥಾನಮಾನವನ್ನು ಶೈಲಜೆಗೂ ನೀಡುವ ಮೂಲಕ ಹೆಣ್ಣಿಗೆ ಹಾಗೂ ಸ್ತ್ರೀಭಕ್ತಿಗೆಷ್ಟು ಪ್ರಾತಿನಿಧ್ಯ ನೀಡಿದ್ದನೆಂಬುದನ್ನು ಅರಿಯಬಹುದು.

ಹರಿಹರನ ರಗಳೆಗಳಲ್ಲಿ ಭಕ್ತಿಯೇ ಮೂಲವಾಗಿದ್ದರೂ ಭಕ್ತರ ಮತ್ತು ಭಕ್ತಿಯ ಹಲವು ಸ್ವರೂಪಗಳನ್ನು ಕಾಣಬಹುದು. ಬಸವರಾಜದೇವರ ರಗಳೆಯಲ್ಲಿ ಬಸವಣ್ಣನ ಭಕ್ತಿಯ ಜೀವನವನ್ನು ಮತ್ತು ಇಹಲೋಕವನ್ನೇ ಪರವನ್ನಾಗಿ ಮಾಡಿಕೊಂಡದ್ದನ್ನು; ಅಕ್ಕಮಹಾದೇವಿ ರಗಳೆಯಲ್ಲಿ ಗುರು–ಲಿಂಗ–ಜಂಗಮ ತ್ರಿವಿಧ ಭಕ್ತಿಯ ಕರಾರನ್ನೊಡ್ಡಿ ಅದನ್ನು ಒಪ್ಪಿದವರೇ ಉಲ್ಲಂಘನೆ ಮಾಡಿದಾಗ ಭವಬಂಧನಗಳನ್ನೆಲ್ಲ ಮೀರಿ ವೈರಾಗ್ಯನಿಧಿ ಆದಂತಹದ್ದು; ಪ್ರಭುದೇವರ ರಗಳೆಯಲ್ಲಿ ನಿರ್ವಾಣಯನು ಅಲ್ಲಯ್ಯನಾಗಿ ಕಾಮಲತೆಯೊಂದಿಗೆ ಭವಭೋಗಗಳನ್ನನುಭವಿಸಿ ಪತ್ನಿ ವಿಯೋಗದೊಂದಿಗೆ ಹಠಾತ್ ಸಿದ್ಧ ಪುರುಷನಾಗಿ "ನಡೆದುದೇ ಬಟ್ಟೆಯಾದುದು ಶಿವನ ಮದಕರಿಗೆ ನುಡಿದುದೆ ವೇದವಾದುದು, ಲಿಂಗವಂತಗೆ ಶಿವನ ಅಪರವತಾರ ಅಲ್ಲಮ ಎಲ್ಲಿದ್ದನೋ ಅಲ್ಲಿಗೆ ವಸಂತ ಮಾಸವಾದ ಬಗೆಯನ್ನು"; ನಂಬಿಯಣ್ಣನ ರಗಳೆಯಲ್ಲಿ ಸೌಂದರ ಪೆರುಮಾಳನ್ನು ತೊತ್ತಿನ ಮಗನೆಂದು ಹೇಳಿದರೂ ಕೊನೆಗೆ ಪರವೆಯನ್ನು ನಂಬಿಯಣ್ಣನಿಗೆ ವಿವಾಹ ಮಾಡಿಸಲು ಶಿವ ಕುಂಟಲಗಿತ್ತಿ ವೇಷ ಧರಿಸಿದ್ದಲ್ಲದೆ ದೇಶಪರ್ಯಟನೆಯಲ್ಲಿ ನಂಬಿಯಣ್ಣ ಸಂಕಿಲೆಯನ್ನು ವಿವಾಹವಾದಾಗ ರಾಜ್ಯದಲ್ಲಿ ಒದಗಿದ ಕ್ಷಾಮದ ಬೇಗೆಯನ್ನು ಪರಿಹರಿಸಲು ಮನೆಗಳ ಮುಂದೆ ಶಿವ ಭತ್ತದ ಮೂಟೆಗಳನ್ನು ಹೊತ್ತು ಹಾಕಿದ ಹಮಾಲಿಯೂ ಆಗುವುದು ಭಗವಂತ ಭಕ್ತರಿಗೋಸ್ಕರ ಏನೂ ಬೇಕಾದರೂ ಮಾಡಬಲ್ಲನೆಂಬುದನ್ನು ಸಾಬೀತುಪಡಿಸುತ್ತಾನೆ. ಹೀಗೆ ಬಸವಣ್ಣ ಅಕ್ಕಮಹಾದೇವಿ ನಂಬಿಯಣ್ಣ ಅಲ್ಲಮಪ್ರಭು ಮೊದಲಾದ ರಗಳೆಗಳಲ್ಲಿ ಕಾರಣಿಕ ಭಕ್ತಿಯ ಸ್ವರೂಪಗಳನ್ನು ಕಂಡುಬರುತ್ತದೆ. ಕೇಶಿರಾಜ ದಂಡನಾಯಕ ರಗಳೆಯಲ್ಲಿ ಭಾಗ್ಯಶ್ರೀಯನ್ನು ಬಿಟ್ಟು ಭಕ್ತಿಶ್ರೀಗೆ ನಿಷ್ಠನಾದ ಕೇಶಿರಾಜ ಶರಣ ಸತಿಯಾಗಿ ಲಿಂಗವೇ ಪತಿಯಾದ ಭಕ್ತಿಯ ಸ್ವರೂಪವನ್ನು ಕಾಣಬಹುದು.

"ಮೇದಿನಿಗೆ ಬೀದಿಗರುವಾದುದುನೆನ್ನಯ ಭಕ್ತಿ" ಎಂದು ಗುಪ್ತ ಭಕ್ತನಾದ ಮಾದರ ಚೆನ್ನಯ್ಯ ಹಳಹಳಿಸಿದರೆ; ಗುಪ್ತಭಕ್ತೆಯಾದ ಕಾರಿಕಾಲಮ್ಮೆ "ಭಕ್ತಿ ಹರಿ ಹಂಚಾಯಿತಿನ್ನೆಂತು ಸೈರಿಪೆಂ" ಎಂದು ಮನೆಮಠ ಸಂಸಾರ ಎಲ್ಲವನ್ನು ಬಿಟ್ಟು ಹಠಯೋಗಿನಿಯಾಗಿರುವುದನ್ನು ತಿಳಿಯಬಹುದು. ತಿರುನೀಲಕಂಠ ದಂಪತಿಗಳು "ಮುಟ್ಟಿದರೆ ಶಿವನಾಣೆ": ಎಂಬ ಗುಪ್ತಪ್ರತಿಜ್ಞೆಯನ್ನು ೯೫ ವರ್ಷಗಳ ಮುಪ್ಪಾನೆ ಮುಪ್ಪು ಆಗುವವರೆಗೆ ಕಾಪಾಡಿಕೊಂಡ ಬಂದ ಬಗೆಯನ್ನು; ಪುಷ್ಪರಗಳೆ ಮತ್ತು ಬಸವರಾಜ ರಗಳೆಯಲ್ಲಿ 'ಕೇತಕಿ ಪುಷ್ಪ'ವನ್ನು ಶಿವನ ಗುಪ್ತಭಕ್ತಿಗೆ ಹೋಲಿಸುತ್ತಾ "ಹೊರಗೆ ಮುಳ್ಳು ಒಳಗೆ ಕಂಪು ಆಹಾ ದಿಕ್ಕು ದಿಕ್ಕಿಗೆ ಸುಗಂಧದ ಸೂರೆ ಮಾಡುವ ಕೇತಕಿ, ನಿನ್ನ ಪರಿಮಳವು ಸುಳಿಗೊಂಡು ಬೆಳೆದು ಕವಲಿರಿಯಿತೋ" ಎನ್ನುವಲ್ಲೆಲ್ಲಾ ಹರಿಹರನ ಗುಪ್ತ ಭಕ್ತಿಯ ಸ್ವರೂಪಗಳನ್ನು ಮನಗಾಣಬಹುದು.

ಲೋಕಕ್ಕೆ ತಂದೆಯಾದ ಶಿವನಿಗೆ ತಂದೆ ತಾಯಿಗಳಿಲ್ಲ ಮನೆಮಠವಿಲ್ಲ.. ವೆಂದರಿತು ಅಮ್ಮವ್ವೆ ಶಿವನ ಜಟೆ ಬಿಡಿಸಿ ನೀರು ಹಾಕಿ ಹಾಲು ನೀಡಿ ಎಣ್ಣೆಯಂ ಪೂಸಿ ಮೈಯ್ಯೊತ್ತಿ ಮಜ್ಜನಕೆರೆದು ಜೋ ಜಂಗಮಕಾರ ಶರಣರಾಧಾರ ಜೊ ಎಂದು ಲಾಲನೆ ಪಾಲನೆ ಮಾಡಿ ಶಿವನಿಗೆ ತಾಯಿಯಾದ ಕಾರುಣ್ಯ ಭಕ್ತಿಯ ಮಹಿಮೆಯನ್ನು ಅಮ್ಮವ್ವೆಯ ರಗಳೆಯಲ್ಲಿ ನೋಡಬಹುದು. ಹಾಗೆಯೇ ಮೆರೆಮಿಂಡದೇವನ ರಗಳೆಯಲ್ಲಿ ಭಕ್ತರನ್ನು ಕಡೆಗಣಿಸಿ ನಂಬಿಯಣ್ಣನಿಗೆ ಮತ್ತು ನಂಬಿಯಣ್ಣನ ಹಿಂದೆ ಹೋದ ಶಿವನಿಗೂ ಬಹಿಷ್ಕಾರ ಹಾಕಿದ ಮಹಾಭೂಪನ ರೌದ್ರ ಭಕ್ತಿಯ ಸ್ವರೂಪವನ್ನು ಗುರುತಿಸಬಹುದು. ಸ್ವತಃ ಶಿವನೆ ಭಕ್ತರು ಭಗವಂತನ ಅಧೀನವಲ್ಲ; ಭಗವಂತನೆ ಭಕ್ತರ ಪರಾಧೀನ ಭಕ್ತರಿದ್ದರೆ ತಾನೆ ಶಿವನಿಗೆ ಅಸ್ತಿತ್ವ ಎಂದು ಭಕ್ತರ ಹಿರಿಮೆ ಗರಿಮೆಗಳನ್ನು ಸಾಕ್ಷಾತ್ ಶಿವನೇ ಕೊಂಡಾಡಿದ್ದಾನೆ.

ಕಾಶ್ಮೀರ ದೇಶದಲ್ಲಿನ ಭಾರತಿಪೀಠದ ಸುವರ್ಣಭಟ್ಟನ ಮಗ ಮಲುಹಣನಿಗೆ ಪ್ರಿಯತಮೆ ಮಲುಹಣಿ ತನ್ನ ಮೇಲಿರುವ ಒಲವನ್ನು ಶಿವನ ಕಡೆ ತಿರುಗಿಸಿ ಪ್ರಾರ್ಥಿಸು ಆಗ ಶಿವನೇ ನಮ್ಮಿಬ್ಬರನ್ನು ಒಂದುಗೂಡಿಸುತ್ತಾನೆ ಎಂಬುದಕ್ಕನುಗುಣವಾಗಿ ಮಲುಹಣ ಹಾಗೆಯೇ ಮಾಡುತ್ತಾನೆ. ಶಿವನು ಭಕ್ತರ ಇಷ್ಟಾರ್ಥಗಳು ಲೌಕಿಕವಾಗಿರಲಿ ಆಲೌಕಿಕವಾಗಿರಲಿ ಒಟ್ಟಿನಲ್ಲಿ ಭಕ್ತರು ಸಂತೋಷವಾಗಿರುವುದನ್ನು ಬಯಸುವ ಮಹಾಭಕ್ತವತ್ಸಲಾಗಿದ್ದಾನೆ.

ಶಿವನಿಗೆ ಕಣ್ಣಿತ್ತ ಬೇಡರ ಕಣ್ಣಪ್ಪ; ಪ್ರತಿ ಸೋಮವಾರ ತನ್ನ ತಾಯಿ ಶಿವನಿಗೆ ಹಾಲು ಕುಡಿಸಿ ಬರುವಳೆಂದು ಅಕ್ಷರಶಃ ನಂಬುವ ಕೋಳೂರು ಕೊಡಗೂಸು; ತಿರುನೀಲಕ್ಕರನ ವಧು/ಸತಿಯ ಉಗುಳು ತಾಗಿರುವಲ್ಲೆಲ್ಲಾ ಶಿವನ ದೇಹ ಕಾಂತಿಮಯವಾಗಿಯೂ ಎಂಜಲು ಉಗುಳು ತಾಗದೆ ಉಳಿದ ದೇಹ ಭಾಗದಲ್ಲಿ ಬೊಕ್ಕೆ/ಗಾಯಗಳಾಗಿರುವುದನ್ನು ಶಿವ ತಿರುನೀಲಕ್ಕರನಿಗೆ ತೋರಿಸಿ ದಂಪತಿಗಳು ಒಂದಾಗುವಂತೆ ಸೂಚಿಸಿ "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂದು ಸಾಬೀತುಪಡಿಸುವುದನ್ನು ಹಾಗೂ ಜಾತಿಯಲ್ಲಿ ಅಂತ್ಯಜನಾದ ತಿರುನಾಳ್ ಪೋವರನು ಎರಡು ಮೂಡೆಗಳನ್ನು ಹೊತ್ತುಕೊಂಡು ಮನದೊಳಗೆ ಶಿವನನ್ನ ತುಂಬಿಕೊಂಡು ಬೀಗುತ್ತಾ ಬಿಕ್ಕುತ್ತಾ ತೂಗುತ್ತಾ ತೊನೆಯುತ್ತಾ ಲೋಕದ ಪರಿವೇ ಇಲ್ಲದೆ ಕುಣಿಕುಣಿಯುವುದನ್ನು "ಎರಡನರಿಯದ ನನ್ನ ಭಕ್ತನು ನೆನೆವುತ್ತ ನೆನೆವುತ್ತ ತಿರುನಾಳಾದ ಎನ್ನ ಆಳಾದ" ಎಂದು ಶಿವ ಪಾರ್ವತಿಗೆ ತೋರಿಸುತ್ತಾ ಹೇಳುವಲೆಲ್ಲಾ ಶಿವನಿಗೆ ಆಗಮಯುಕ್ತವಾದ ಸಾಂಪ್ರದಾಯಿಕ ಆಡಂಬರ ಪೂಜೆಗಿಂತ ನಿಷ್ಕಪಟ ಮುಗ್ಧ ಭಕ್ತಿಯು ಶಿವನಿಗೆ ಮೆಚ್ಚುಗೆಯಾಗುವ ವಿಧಾನಗಳನ್ನು ಗ್ರಹಿಸಬಹುದು.

ಕೃಷಿಕನಾದ ಇಳೆಯಾಂಡ ಗುಡಿಮಾರ ಭೌತಿಕ ಕೃಷಿಯೊಂದಿಗೆ ಮಾಡುವ ಆಧ್ಯಾತ್ಮಿಕ ಕೃಷಿಯನ್ನು; ಕುಂಬಾರನಾದ ಗುಂಡಯ್ಯ ಅಂತರಂಗ ಬಹಿರಂಗಗಳ ಘಟಕಾಯಕದ ಸುನಾದದಿಂದಲೆ ಭೂಲೋಕ ದೇವಲೋಕಗಳಲ್ಲೂ ಶಿವನನ್ನು ಕುಣಿ ಕುಣಿಸುವ ಸಮ್ಮೋಹನ/ಪಾರವಶ್ಯ ಭಕ್ತಿಯ ಪರಿ; ಬೆಸ್ತರನವನಾದ ಅತಿಭಕ್ತ ತನ್ನ ಕಾಯಕದಲ್ಲಿ ಮೊದಲು ದೊರೆತ ಮೀನನ್ನು ಶಿವಾರ್ಪಣಗೊಳಿಸುವ ರೀತಿ; ಮಡಿವಾಳನಾದ ತಿರುಕುರುಪ್ಪೆಯ ತೊಂಡರನು ಪಾಪ ಎಂಬ ಮಲಿನವಸ್ತ್ರವನ್ನು ಸುತ್ತಿಕಟ್ಟಿ ಕೋಪ ಎಂಬ ಕತ್ತೆಯ ಬೆನ್ನೇರಿಸಿಕೊಂಡು ಶಿವಭಕ್ತಿ ರಸದೊಳೆಯ ದಡಕ್ಕೆ ಬಂದು ಧೈರ್ಯ ಎಂಬ ಕಲ್ಲಿನ ಮೇಲೆ ತಾಪತ್ರೆಯಗಳಿಂದ ಕುದಿದಾರಿದ ನೀರಿನಲ್ಲಿ ತೊಳೆದು ಏಕನಿಷ್ಠೆಯಿಂದ ಹಿಂಡಿ ಶಿವಪ್ರಸಾದದ ಗಂಜಿ ಹಾಕಿ ಶಿವಸತ್ಯವೆಂಬ ಬಿಸಿಲಿನಲ್ಲಿ ಒಣಗಿಸಿ ಶರಣ ಸಂಘದ ಹೊಳಪಿನಿಂದ ಒಪ್ಪವಿಟ್ಟ ಬಟ್ಟೆಗಳನ್ನು ಶಿವಪಾದ ಬಿಡದಂತೆ ಮಡಿಚಿ ತನ್ನ ಮನದ ಮಡಿಯೊಂದಿಗೆ ಭಕ್ತ ಜನಕ್ಕೆ ಮಡಿವಸ್ತ್ರವನ್ನು ಕೊಡುತ್ತಿದ್ದ. ಹೀಗೆ ಕಾಯಕನಿಷ್ಠಾ ಭಕ್ತಿಯ ಸ್ವರೂಪಗಳು ಗಮನಾರ್ಹವಾದವು.

ದಾಸೋಹ ನಿಷ್ಠಾ ಭಕ್ತಿಗೆ ಅತ್ಯುತ್ತಮ ಉದಾಹರಣೆ ಎಂದರೆ ನಿಂಬಿಯಕ್ಕನ ರಗಳೆ. ಪರರ ಮನೆಯ ಜೀತದಾಳಗಿದ್ದ ನಿಂಬಿಯಕ್ಕ ತನ್ನ ಕಾಯದಿಂದ ಶಿವಭಕ್ತರನ್ನು ತೃಪ್ತಿಪಡಿಸಿ ಕೈಲಾಸವನ್ನೇ ಒಂದು ವಾರ ತನ್ನ ಸುಪರ್ದಿಗೆ ತೆಗೆದುಕೊಂಡು ಮುಕುತಿಯನ್ನು ಮಾರಗೊಂಡಂತಹ 'ಕಾಯದಾಸೋಹ' ನೇಮವು ಭಕ್ತಿಯ ಅನನ್ಯತೆಯನ್ನು ಸೂಚಿಸುತ್ತದೆ. ಹೊಲೆಯನೋರ್ವನಿಗೆ ಊಟ ಮಾಡಿಸಿದ್ದಕ್ಕೆ ಚಂದಿಮರಸ ಕೆಂಬಾವಿ ಭೋಗಣ್ಣನಿಗೆ ಬಹಿಷ್ಕಾರ ಹಾಕಿದರೆ ಲಿಂಗಗಳೆಲ್ಲ ಕೆಂಬಾವಿ ಊರಿಗೆ ಬಹಿಷ್ಕಾರ ಹಾಕಿ ಭೋಗಣ್ಣನ ಬೆನ್ನು ಹತ್ತುವ ಪರಿಯನ್ನು ನೋಡಬಹುದು.

ಹೇಳಿದರೆ ಶಿವಲೀಲೆ, ಬರೆದರೆ ಶಿವಚರಿತ್ರೆ, ತೊಡಗಿದರೆ ಶಿವಮತಪ್ರಸಾರ– ಇವು ಹರಿಹರನ ಧ್ಯೇಯೋದ್ದೇಶವಾಗಿದ್ದವು. ಜೈನ, ವೈದಿಕರ ರಾಜಸತ್ತಾನಿಷ್ಠೆ ಮತ್ತು ಕರ್ಮಾಚರಣೆಗಳನ್ನು ತಿರಸ್ಕರಿಸಿ, ಭಕ್ತಸತ್ತಾನಿಷ್ಠೆ ಶಿವಧರ್ಮನಿಷ್ಠೆಗಳನ್ನು ಪುರಸ್ಕರಿಸಿದವನು ಹರಿಹರ. ಹಾವಿನಾಳ ಎಂಬ ಗ್ರಾಮದಲ್ಲಿದ್ದವರೆಲ್ಲಾ ಬಹುಪಾಲು ಜನ ಶಿವಬ್ರಾಹ್ಮಣರಾಗಿದ್ದು ೧೮ ವರ್ಣಗಳಲ್ಲಿ ತಾವೇ ಶ್ರೇಷ್ಠರೆಂದು ಬೀಗುತ್ತಿದ್ದವರ ಪಂಥಾಹ್ವಾನ ಸ್ವೀಕರಿಸಿದ ಕಲ್ಲಯ್ಯ 'ಕೃಷ್ಣಶುನಕ'ನಿಂದ ಯಜುರ್ವೇದದ ವೇದಪಠಣ ಮಾಡಿಸಿ ಶಿವಬ್ರಾಹ್ಮಣರನ್ನೆಲ್ಲ ಮಣಿಸಿದ ಕಲ್ಲಯ್ಯ ಶರಣಾಗುವಂತೆ ಮಾಡುತ್ತಾನೆ. ಪಾಂಡ್ಯ ದೇಶದ ಭವಿಯಾಗಿದ್ದ ರಾಜನನ್ನ ರಾಣಿ 'ಮಹಾದೇವಿ' ಭಕ್ತನನ್ನಾಗಿ ಪರಿವರ್ತಿಸುತ್ತಾಳೆ. ಶಿವ ಭಕ್ತರ ಮನೆಯಲ್ಲಿ ಹುಟ್ಟಿದ ವೈಜಕವ್ವ ಜೈನ ಸೋದರತ್ತೆ ಮನೆಗೆ ಅನಿವಾರ್ಯವಾಗಿ ಸೊಸೆಯಾಗಿ ಹೋದರೂ ತನ್ನ ಶಿವನಿಷ್ಠೆ ಶಿವಪೂಜೆ ಮೊದಲಾದ ತನ್ನತನಗಳನ್ನು ಬಿಟ್ಟುಕೊಡದೆ ಜೈನ ಧರ್ಮದ

ಯತಿ ಸಮೂಹದ ಬೇಡಿಕೆಯಂತೆ ಬಸದಿಯ ಬಾಗಿಲು ತೆಗೆಯಲು ಪ್ರಾರ್ಥಿಸಿದರೆ ಬಾಗಿಲು ತೆರೆದು ಬಸದಿಯಲ್ಲಿನ ಅರಹಂತನಲ್ಲಿ ಶಿವನ ತಲೆ ಮೂಡಿರುತ್ತದೆ. ಹೆರೂರು ಹೆಣ್ಣಿನ ರಗಳೆಯಲ್ಲಿಯೂ ಜೈನ ಧರ್ಮದ ಮೇಲೆ ಶೈವ ಧರ್ಮದ ಮೇಲಾಟವನ್ನು ಹಾಗೂ ಇರಿ ಭಕ್ತನ ರಗಳೆಯಲ್ಲಿ ವೈಷ್ಣವ ಪಂಥಿಯರು ಶೈವ ಮತಾಚಾರಗಳನ್ನು ಸ್ವೀಕರಿಸಿದ ಮಾಹಿತಿಗಳು ಯಥೇಚ್ಛವಾಗಿದೆ. ಹೀಗೆ ಹರಿಹರನ ಕೆಲವು ರಗಳೆಗಳು ಶಿವಮತ ಪ್ರಚಾರದ ಅಭಿಲಾಷೆಯನ್ನು ವ್ಯಕ್ತಪಡಿಸುತ್ತದೆ

ಶಿವ ಬ್ರಾಹ್ಮಣರಲ್ಲಿ ಹುಟ್ಟಿದ ರುದ್ರಪಶುಪತಿಯು ಒಮ್ಮೆ ಪುರಾಣಭಟ್ಟನು ಹೇಳಿದ ಕಥೆಯಲ್ಲಿ ಶಿವನು ನಂಜನುಂಡದ್ದನ್ನು ಕೇಳಿ ಗಾಬರಿಯಿಂದ ಮೂರ್ಚೆಗೊಂಡು ಶಿವಪ್ಪನ ಸಾವನ್ನು ಸಹಿಸಲಾಗದೆಂದು ಯಾರು ಎಷ್ಟೇ ಹೇಳಿದರೂ ಕೇಳದೆ ಆತ್ಮಾಹುತಿಗೆ ಪ್ರಯತ್ನಿಸುತ್ತಿದ್ದಾಗ ಸಾಕ್ಷಾತ್ ಶಿವನೇ ತನಗೆ ಮರಣವಾಗದು ಎಂದೂ ಪರಿಪರಿಯಾಗಿ ಹೇಳಿದರು ಕೇಳದೆ ಹಠ ಮಾಡಿದಾಗ ಶಿವ ರುದ್ರಪಶುಪತಿಯನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಕಾರ್ಕೋಟಕ ವಿಷವಿರುವ ನನ್ನ ನೀಲಕಂಠವನ್ನೆ ನೋಡುತ್ತಿರು ವಿಷ ಹೊಟ್ಟೆಯೊಳಗೆ ಹೋಗಿ ನನಗೆ ಅಪಾಯವಾದರೆ ಆಗ ನೀನು ಆತ್ಮಾಹುತಿ ಮಾಡಿಕೋ ಎಂದು ಹೇಳಿರುವಲ್ಲಿ ರುದ್ರ ಪಶುಪತಿಯ ಮತಿ ಭ್ರಾಂತಿಯ ಮುಗ್ಧ ಭಕ್ತಿಯ ಸ್ವರೂಪ ವ್ಯಕ್ತಗೊಂಡಿದೆ. ಹೀಗೆ ಹರಿಹರ ರಗಳೆಗಳಲ್ಲಿ ವೈವಿಧ್ಯಮಯ ಭಕ್ತರ ವೈವಿಧ್ಯಮಯ ಭಕ್ತಿರಸಾಮೃತದ ಸ್ವಾಧವನ್ನು ಅನುಭವಿಸಬಹುದು.

ಒಟ್ಟಾರೆ ಹರಿಹರನ ರಗಳೆಗಳಲ್ಲಿ ಗುಪ್ತ ಭಕ್ತಿ, ರೌದ್ರಭಕ್ತಿ, ಕಾರಣಿಕರ ಭಕ್ತಿ, ತ್ರಿವಿಧ ಭಕ್ತಿ, ಶರಣ ಸತಿ ಲಿಂಗಪತಿ, ಕಾಯಕ ಮತ್ತು ದಾಸೋಹ ನಿಷ್ಠಾ ಭಕ್ತಿಗಳು, ಮುಗ್ಧ ಭಕ್ತಿಯು ಮೋಹಾಪಾಶ ಭಕ್ತಿಗಳು ಅಲ್ಲದೆ ಮತಿಭ್ರಾಂತಿ ಭಕ್ತಿ ಮೊದಲಾದ ಭಕ್ತಿಯ ಪರಿಪರಿಯ ಸ್ವರೂಪಗಳನ್ನು ಮನಗಾಣಬಹುದು.

❐❐

ಪಂಪ: ಕುಲಂ ಕುಲಮಲ್ತು ಎಂಬ ಪ್ರತಿರೋಧದ ದನಿ

ಡಾ. ಜಯಪ್ರಕಾಶ್ ಶೆಟ್ಟಿ ಎಚ್.

❖

ಪಂಪ ತನ್ನ ಕಾವ್ಯವನ್ನು 'ಈ ತೆರದ ಇತಿಹಾಸ' ಎನ್ನುತ್ತಾನೆ. ಹಾಗಿದ್ದರೆ ಆ ಇತಿಹಾಸ ಯಾವುದು? ಅದು ಕೇವಲ ಅರಿಕೇಸರಿ, ರಾಷ್ಟ್ರಕೂಟರನ್ನು ಕುರಿತ ರಾಜಸತ್ತೆಯ ಇತಿಹಾಸವೇ? ಮುಳಿಯ ತಿಮ್ಮಪ್ಪಯ್ಯನವರು ತಮ್ಮ 'ನಾಡೋಜಪಂಪ'ದಲ್ಲಿ ಅಂತಹದ್ದೊಂದು ಇತಿಹಾಸದ ಬೆನ್ನುಹತ್ತು ಸಾಕಷ್ಟುದೂರ ಪ್ರಯಾಣಿಸಿದ್ದಾರೆ, ಕೆಲವೆಡೆ ಆ ಎಳೆಗಳನ್ನು ಹೊಂದಿಸಲಾರದೆ ಹೆಣಗಿದ್ದಾರೆ. ಉಳಿದಂತೆ ಮಹಾಕಾವ್ಯವನ್ನು ಇತಿಹಾಸವೆಂದು ಕರೆಯುವ ಹಿನ್ನೆಲೆಯಲ್ಲಿ ಅದು ಮಹಾಭಾರತವನ್ನೇ ಇತಿಹಾಸ ಎನ್ನುತ್ತಿದೆಯೇ? ಎಂಬ ಅನುಮಾನವೂ ಸಹಜ. ಆದರೆ 'ಇತಿಹಾಸ ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂಬ ಅಂಬೇಡ್ಕರರ ಪ್ರಸಿದ್ಧ ಹೇಳಿಕೆಯ ಬೆಳಕಿನಲ್ಲಿ ಗಮನಿಸುವುದಾದರೆ ಚರಿತ್ರೆಯು ಜನಬದುಕುಗಳಿಗೆ ಸಂಬಂಧಿಸಿದ್ದಾಗುತ್ತದೆ. ನಮ್ಮ ನಮ್ಮ ಬದುಕಿನ ಗತಿಯ ಗುರುತಾಗುತ್ತದೆ. ಹಾಗಿದ್ದರೆ ಪಂಪನ 'ಈ ತೆರದ ಇತಿಹಾಸ'ವು ರಾಜಸತ್ತೆಯಿಂದ ಜನತಾಬದುಕಿನ ಹಿನ್ನೆಲೆಯದಾಗಿರಬಹುದೆ? ಇತಿಹಾಸ ನಿರೂಪಣೆಯನ್ನು ರಾಜಸತ್ತೆ, ಮಹಾಕಾವ್ಯದ ಕಥೆ ಎಂಬ ರೂಢಿಯ ನಿರೂಪಣೆಗಳನ್ನು ದಾಟಿ ಜನಚರಿತ್ರೆಯ ಅರ್ಥದಲ್ಲಿ ಗಮನಿಸದನೆ? ಈ ಪ್ರಶ್ನೆಗಳನ್ನು ಹಿಂಬಾಲಿಸಿದರೆ ಪ್ರಾಯಶಃ ಆಗ ನಮ್ಮ ಚರಿತ್ರೆಯ ಕಣ್ಣು ಅರಮನೆಯ ಆವರಣವನ್ನು ದಾಟಿ ಜನಬದುಕಿನ ಬಯಲಿನತ್ತ ಹರಿಯುತ್ತದೆ ಮತ್ತು ಅದು ನಮ್ಮ ನಮ್ಮ ಬದುಕುಗಳನ್ನು ನಿರ್ಧರಿಸಿರುವ ಹಾಗೂ ನಿರ್ಧರಿಸುತ್ತಿರುವ ಸಾಮಾಜಿಕ ಸತ್ಯಗಳ ಕಡೆಗೆ ಚಲಿಸುತ್ತದೆ. ದೀರ್ಘ ಇತಿಹಾಸದ ಪುರಾವೆಗಳನ್ನಿಟ್ಟು ಸಾಗುತ್ತಿರುವ ನೆಲದೊಡಲ ನೀರಹರಿವಲ್ಲಿ ಬೆರೆತು, ಒಡಲ ನೆತ್ತರಿಗೂ ಕಲೆತು ಹರಿದ, ಹರಿಯುತ್ತಿರುವ ಸತ್ಯವಾಗುತ್ತದೆ. ನಮ್ಮ ಅನ್ನ, ಅರಿವು, ನುಡಿ, ನಡೆಗಳಿಗೆ ಗುರುತಿಟ್ಟು ಅಂಕೆಯಲ್ಲಿಟ್ಟ ಅಂತಹ ಸತ್ಯವನ್ನು ಕುರಿತ ಹುಡುಕಾಟವಾಗುತ್ತದೆ. ಜನರ ಬದುಕಿಗೆ ಬೇಲಿಯಿಕ್ಕಿ, ಭಾಗಮಾಡಿ ಬಾಳುಕೆಡಿಸಿದ ಬಾನಗಡಿಯ ಶೋಧವಾಗುತ್ತದೆ.

ಪ್ರಾಯಶಃ ಪಂಪನ ಭಾರತವನ್ನು ನಾವು ಓದಬೇಕಿರುವ ಮುಖ್ಯವಾದ ಎಳೆಯೊಂದು ಹೀಗೆಯೇ ತೆರೆದುಕೊಳ್ಳಬೇಕಿದೆ.

ಈವರೆಗೆ ಪಂಪಕಾವ್ಯವನ್ನು ರಸಕಾವ್ಯವಾಗಿ ಗೊತ್ತಾಗದ ಮತ್ತು ಇದ್ದಿರದ ಯುಗಮೌಲ್ಯ ಎಂಬ ಸ್ಥಿರಸಮಾಜದ ಸರಕಿನ ದಾಖಲೆಯಾಗಿ, ವೀರಕಾವ್ಯವಾಗಿ ಓದಿರುವುದೇ ಹೆಚ್ಚು. ಶೃಂಗಾರದ ಉಲ್ಲಾಸ, ವೀರದ ಮೌಲ್ಯಕವಚದಲ್ಲಿ ಪಂಪನನ್ನು ಯುಗದ ಕವಿಯಾಗಿಸಿ, ಯುಗದ ಸತ್ಯ ಮತ್ತು ವರ್ತಮಾನದ ಸತ್ಯಗಳಿಗೆ ಹಾಕಿರುವ ಮುಸುಕನ್ನು ಗಮನಿಸದಿರುವುದೇ ಹೆಚ್ಚು. ಪ್ರಾಯಶಃ ಇನ್ನಾದರೂ ಈ ಮುಸುಕು ಸರಿಸಿಕೊಂಡು ಪಂಪಕಾವ್ಯದ ಮಾತು ಮತ್ತು ಮೌನಗಳನ್ನು ಓದಬೇಕಾಗಿದೆ. ಅಂತಹ ಓದಿನಿಂದ ಈವರೆಗೆ ತೆರೆಯದ ಆತನ 'ಈ ತೆರದ ಇತಿಹಾಸದ' ಎಳೆಯನ್ನು ನಮ್ಮೊಂದಿಗೆ ಜೋಡಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಕಾವ್ಯವನ್ನು ರಾಜಸತ್ತೆಯ ಆವರಣದಿಂದ ಲೋಕಸತ್ತೆಯ ಬಯಲಿಗೆ ತಂದುಕೊಳ್ಳಬೇಕಾಗಿದೆ. ಮಾತಿಲ್ಲದವರು ಮಾತಾಡಿದ ಘಳಿಗೆ ಮತ್ತು ಕಾರಣಗಳನ್ನು ವಿವರಿಸಿಕೊಳ್ಳಬೇಕಾಗಿದೆ. ಅಷ್ಟೇ ಅಲ್ಲ, ಕೊನರಿಕ್ಕತೊಡಗಿದ ಅವರ ಮಾತುಗಳನ್ನು ಕಸಿದ, ಕತ್ತರಿಸಿದ ಕುಡುಗೋಲುಗಳ ಅಲಗು, ಹಿಡಿಕೆಗಳ ಸಂದುಗಳಿಗೆ ಸಿಕ್ಕಿಬಿದ್ದ ನಮ್ಮನ್ನೇ ಮುಟ್ಟಿ ಮೈದಡವಿ ಎಚ್ಚರಾಗಬೇಕಾಗಿದೆ. ಪ್ರಾಯಶಃ ನಾವು ಅರಿಯಬೇಕಿರುವ ಚರಿತ್ರೆಯ ಅಗತ್ಯದ ಓದು ಮತ್ತು ಅರಿವು ಅದು. ಪಂಪಕಾವ್ಯಗಳಲ್ಲಿ ಆ ಅರಿವನ್ನು ಎಚ್ಚರಿಸುವ ಎಳೆಗಳಿವೆ. ಹಾಗಾಗಿ ಪಂಪನನ್ನು ಮತ್ತೆ ಬೇರೆಯದೇ ರೀತಿಯಲ್ಲಿ ಓದಬೇಕಾಗಿದೆ.

ನಾಡರೋಗದ ನಾಡಿಮಿಡಿತ

ಜನಮನಕ್ಕೆ ಅಗತ್ಯವಾದ 'ಮನುಷ್ಯಜಾತಿ ತಾನೊಂದೆ ವಲಂ' ಎಂಬ ವಿವೇಕದ ತೋರುದೀಪವನ್ನು ನೆಟ್ಟ ಈ ನಾಡಗುರು ತನ್ನ ಕಾವ್ಯಗಳಲ್ಲಿ ಅದಿಲ್ಲದ ಕತ್ತಲೆಯ ಲೋಕದ ಖಾರಸ್ತಾನವನ್ನು ಬಿಡಿಸಿಟ್ಟಿದ್ದಾನೆ. ಆ ಹಾದಿಯಲ್ಲಿ ಆತ ಭಾರತವೆಂಬ 'ನಮ್ಮ ಭಾರತ'ವನ್ನು. ಮನುಷ್ಯರ ನಡುವೆ ಗೋಡೆಕಟ್ಟಿ ಅಸಮಾನ ಬದುಕನ್ನು ಖಾತರಿಪಡಿಸಿಕೊಂಡೇ ಬಂದ ಔಷಧಿಯಿಲ್ಲದ ಕಾಯಿಲೆಯಾದ ಕುಲ/ವರ್ಣ ಅಥವಾ ಜಾತಿ ಎಂಬ ವ್ಯಾದಿಯು ಬೇರುಬಿಟ್ಟು ಆಳುತ್ತಿರುವ ಪರಿಯನ್ನು ಕಾಣಿಸಿದ್ದಾನೆ. ಹುಟ್ಟಿದ ತೊಡಗಿ ಬದುಕಿನ ಕೊನೆಯ ಬಿಂದುವನ್ನೂ ದಾಟಿ ನೆನಪಿನ ನಕ್ಷೆಯಲ್ಲೂ ಬೆಂಬಿಡದೆ ಹಿಂಬಾಲಿಸುವ ಜಾತಿರೋಗವನ್ನು ತೋರಿದ್ದಾನೆ. ಇದು ಹೇಗೆ ಕೆಲವು ಬೇಟೆಗಾರರ ಹಲವು ಬಲಿಪಶುಗಳ ಲೋಕವೆಂಬುದನ್ನು ವಿವರಿಸಿದ್ದಾನೆ. ಹೀಗಾಗಿ ಪಂಪನ ಭಾರತವು ಈ ದಿಸೆಯ ಬಲವಾದ ಬೇರು, ಟಿಸಿಲು, ಎಲೆ, ಟೊಂಗೆಗಳನ್ನು ತೋರುತ್ತದೆ. ಯಾಕೆಂದರೆ ಜಾತಿ ಎಂಬ ಕಲ್ಪಿತವನ್ನು ನಿರಾಕರಿಸಿ ಚರಿತ್ರೆಯೇ ಸಾಧ್ಯವಿರದ ನೆಲದಲ್ಲಿ ಪಂಪನ 'ಈ

ತೆರೆದ ಇತಿಹಾಸ ಕಥನವು' ಅಂತಹ ತಂತುವೊಂದರ ನಾಜೂಕು ಹೆಣಿಗೆ ಎಂಬುದನ್ನು ಮರೆಯಬಾರದು. 'ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನ್ ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ' ಎಂದು ಕರ್ಣಾನ್ವಯದ ಕಥನವಾಗಿಸಿದ ಕವಿ ಕರ್ಣನಿಗೆ ಕೊಟ್ಟ ಪ್ರತಿನಿಧೀಕರಣದ ಹಿನ್ನೆಲೆಯಲ್ಲಿ ಗಮನಿಸಿದರೆ ಈ ತೆರೆದ ಇತಿಹಾಸದೊಳಗಿನ 'ಇತಿಹಾಸ' ನಿಧಾನವಾಗಿ ತೆರೆದುಕೊಳ್ಳುತ್ತದೆ. ಕನ್ನಡ ಸಾಹಿತ್ಯದ ವಿಕಾಸವನ್ನು ಕುರಿತು ಮಾತನಾಡುತ್ತಾ ತೇಜಸ್ವಿಯವರು ಇಡಿಯ ಕನ್ನಡಸಾಹಿತ್ಯ ಚರಿತ್ರೆಯ ಚಲನೆಯನ್ನು ಶೂದ್ರ – ವೈದಿಕ ಸಂಘರ್ಷ ಎನ್ನುತ್ತಾರೆ. ಬಹುಶಃ ಇದೇ ಮಾತನ್ನು ಇನ್ನಷ್ಟು ವ್ಯಾಪ್ತಗೊಳಿಸಿ ಭಾರತದ ಬದುಕಿನ ಇತಿಹಾಸಕ್ಕೆ ಅನ್ವಯಿಸಿದರೆ ಈ ನೆಲದ ಇತಿಹಾಸವು ಆಳುವವರ ನಡುವಿನ ಸಂಘರ್ಷಕ್ಕಿಂತ ಬಾಳುಗಳನ್ನು ಬದುಕಗೊಡದ ಕುಲವ್ಯಸನಿಗಳ ಜೊತೆಗಿನ ಗುದ್ದಾಟದ ಚರಿತ್ರೆಯಾಗುತ್ತದೆ. ಬಹುಶಃ ಪಂಪ ಇಂತಹದ್ದೊಂದು ಗುದ್ದಾಟದ ಮತ್ತೊಂದು ತುದಿಯ ರೂಪವಾಗಿ ಕರ್ಣನನ್ನು ನಿಲ್ಲಿಸಿಕೊಂಡು ಕಾವ್ಯದ ಆರಂಭದಿಂದ ಕೊನೆಯ ತನಕ ಈ ತಂತ್ರಗಾರರ ತಂತ್ರಗಳನ್ನು ತೆರೆದಿಡುತ್ತಾ ಹೋಗಿದ್ದಾನೆ. ಅದನ್ನು ಎಚ್ಚರದಿಂದ ಗಮನಿಸಲು ಸೂಚನೆ ಕೊಡುವಂತೆ 'ನೆನೆಯದಿರಣ್ಣ' ಎಂದು ಎದೆಗೆ ಹತ್ತಿರದವನಾಗಿ ಮಾತಾಡಿದ್ದಾನೆ.

ಮುಗಿಯದ ಕದನ

ಜಾತಿ ಈ ನೆಲದ ಸತ್ಯ. ಈ ರೋಗ ಅಂಚನ್ನಷ್ಟೇ ಕಾಡಿದ್ದಲ್ಲ, ಈ ದೇಶದ ಅಂತಃಸತ್ವವನ್ನೇ ಹಾಳುಗೆಡವಿದೆ. ಯಾಕೆಂದರೆ ಈ ಹೊರೆಯಿಂದಾಗಿಯೇ ಇಷ್ಟೊಂದು ಸಂಖ್ಯೆ, ಸಮೃದ್ಧಿಯುಳ್ಳ ನೆಲ ಯಾರ್ಯಾರದೋ ವಸಾಹತಾಯಿತು. ಅತ್ಯಂತ ಪುರಾತನ ನಾಗರಿಕತೆಯ ಆವರಣವೆನಿಸಿ, ಅಪಾರ ಸಾಹಿತ್ಯಾಭಿವ್ಯಕ್ತಿಗಳೂ, ಬಹುವಿಧದ ಭಾಷೆ, ಕಸುಬು ಕೌಶಲ್ಯಗಳ ಜೊತೆ ಸಮೃದ್ಧವಾದ ನೈಸರ್ಗಿಕ ಸಂಪತ್ತನ್ನೂ, ಲಾಗಾಯ್ತಿನಿಂದ ಅಪಾರವಾದ ಮಾನವಸಂಪನ್ಮೂಲವನ್ನೂ ಹೊಂದಿರುವ ಈ ನೆಲ ಯಾರ್ಯಾರದೋ ದಾಳಿಗೆ ತುತ್ತಾಯಿತು. ತನಗಿಂತ ಇತ್ತೀಚೆಗೆ ಚರಿತ್ರೆಯ ಭೂಪಟದಲ್ಲಿ ಕಾಣಿಸಿಕೊಂಡ ದೇಶಗಳಿಗಿಂತಲೂ ಅನೇಕ ವಿಚಾರಗಳಲ್ಲಿ ಹಿಂದೆ ಬೀಳುವಂತಾಯಿತು. ಈ ಸತ್ಯಗಳನ್ನು ನಮಗೆ ನಾವೇ ಕೇಳಿಕೊಂಡು ಪ್ರಾಮಾಣಿಕವಾಗಿ ಉತ್ತರಿಸಿಕೊಳ್ಳಲು ಮುಂದಾದಾಗ ಮಾತ್ರವೇ ಮನುಷ್ಯರನ್ನು ಒಡೆದಿಟ್ಟು ಆಳಿದ ಹೊರಗಿಡುವ ರಾಜಕಾರಣವಾದ ಜಾತಿ/ವರ್ಣ ಅಥವಾ ಕುಲ ಎಂಬ ಅಸಲಿ ಜಾಡ್ಯದ ಪರಿಣಾಮಗಳು ಕಾಣಿಸುತ್ತವೆ. ಮನುಷ್ಯನ ಉದಾರಚರಿತೆಯ ಬಗೆಗೆ ನಮ್ಮ ಉದ್ಘೋಷಗಳು ಏನೇ ಇದ್ದರೂ ಹಂಚಿ ತಿನ್ನುವ ಬದಲು ಹೊಂಚಿ ತಿಂದ ಕ್ಷುಲ್ಲಕ ಜಾಣ್ತನ ಕಾಣಿಸುತ್ತದೆ. ಹಾಗಾಗಿ ಬಹುಶಃ ಇದನ್ನು ಬಿಟ್ಟು ಭಾರತದ ಚರಿತ್ರೆಯನ್ನು ಓದಲಾಗದು. ಈ ನೆಲದ ಬೆನ್ನುಹುರಿಯನ್ನೇ

ಶಿಥಿಲಗೊಳಿಸಿದ ಈ ಕುಲವ್ಯಸನದ ಆಪತ್ತನ್ನೇ ನಮ್ಮ ಪ್ರಜ್ಞಾವಂತ ಮಾನವೀಯ ಮನಸ್ಸುಗಳು ಮತ್ತೆ ಮತ್ತೆ ಮುಖಾಮುಖಿಯಾಗಿವೆ. ಹಾಗಾಗಿ ಕುಲಚರ್ಚೆ ಮತ್ತೆ ಮತ್ತೆ ಎದುರಾಗಿದೆ. ಪ್ರಶ್ನೆ, ನಿರಾಕರಣೆ, ಮನವಿ, ಆಗ್ರಹ, ಆಕ್ರೋಶಗಳ ರೂಪದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡು ಮತ್ತೆ ತಣ್ಣಗಾಗಿ ಮತ್ತೆ ಮತ್ತೆ ತಲೆ ಎತ್ತುತ್ತಲೇ ಬರಬೇಕಾದ ಅನಿವಾರ್ಯತೆಯನ್ನು ಈ ನೆಲ ಅನುಭವಿಸಿದೆ. ಪಂಪ ಕುಲ ಎಲ್ಲಿದೆ? ಎನ್ನುವ ಮೂಲಭೂತ ಪ್ರಶ್ನೆ ಎತ್ತಿದರೆ ಪ್ರಾಚೀನ ಸಾಹಿತ್ಯದ ಮತ್ತುಳಿದ ಮುಖಗಳು ಕಾಲಕಾಲಕ್ಕೆ ಅದನ್ನು ಬೇರೆ ಬೇರೆ ರೂಪದಲ್ಲಿ ಎದುರಾಗಿವೆ. ಕನಕನೂ 'ಕುಲ ಕುಲ ಕುಲವೆಂದು ಒಡೆದಾಳದಿರಿ(ಹೊಡೆದಾಡದಿರಿಗಿಂತ ಕಾರ್ಯಚಟುವಟಿಕೆಯ ಹಿನ್ನೆಲೆಯಲ್ಲಿ ಈ ಅರ್ಥವೇ ಹೊಂದುತ್ತದೆ.), ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ?' ಎನ್ನುವ ಅದೇ ಪ್ರಶ್ನೆಯನ್ನು ಕೇಳಿದ. ಕರ್ಣದಲ್ಲಿ ಜನಿಸಿದವರುಂಟೆ ಎಂದ ಶರಣರು, ಮುಟ್ಟಾದ ಮೂರುದಿನಕ್ಕೆ ಹುಟ್ಟಿಬಂದವರಲ್ಲಿ ಶ್ರೇಷ್ಠ – ಕನಿಷ್ಠ ಎಂದರೇನು ಎಂದ ತತ್ವಪದಕಾರರು ಎಲ್ಲರಲ್ಲೂ ಅದೇ ಪ್ರಶ್ನೆ ಇದೆ. ಆದರೆ ಪ್ರಶ್ನೆಗಳು ಉಳಿದಿವೆ, 'ಮೂಲವ್ಯಾದಿಯ ಬೇತಾಳ' ನೆಲವನ್ನು ಬಾಧಿಸುತ್ತಲೇ ಉಳಿದಿದೆ. ಪ್ರಶ್ನೆಗಳನ್ನು ಉತ್ತರಿಸುವ ಬದಲು ದಮನಿಸುವ ಪ್ರಶ್ನಾಪ್ರತಿರೋಧವನ್ನು ಜವಾಬ್ದಾರಿಯಿಂದ ನಿರ್ವಹಿಸಿಕೊಂಡು ಬರಲಾಗಿದೆ. ಹಾಗಾಗಿ ಜಾತಿ ಉಳಿದಿದೆ, ಪ್ರಶ್ನೆ ಮರುಕಳಿಸುತ್ತಿದೆ. ಸೋತವರು ಉಸಿರು ಪಡೆದಾಗ ಮಾತಾಡಿದ್ದಾರೆ, ಆ ಮಾತುಗಳನ್ನು ಕಸಿಯಲು ನಿಂತವರು ಮತ್ತೆ ಅದನ್ನೇ ಮಾಡಿದ್ದಾರೆ. ಯುದ್ಧ ನಿಂತಿಲ್ಲ, ಇತಿಹಾಸ ಚಲಿಸುತ್ತಿದೆ.

ಪಂಪಭಾರತವು ಪಾಂಡವ–ಕೌರವರ ನೆಲದ ಹಕ್ಕಿನ ಸೀಮಿತ ಕದನವನ್ನಷ್ಟೇ ಅಲ್ಲ, ಅದನ್ನೂ ಮೀರಿದ ಭಯಂಕರವೂ, ನಾಜೂಕೂ ಆದ ನಿಲುಗಡೆಯಿಲ್ಲದ ಕದನದ ಕಥೆ. ಯಾಕೆಂದರೆ ಅದು ಕಾಣುವ ಯುದ್ಧ, ಅಲ್ಲಿ ರಣರಂಗವಿದೆ. ಅದು ನಿರ್ದಿಷ್ಟ ದಿನದಂದು ಆರಂಭಗೊಂಡು ನಿಲ್ಲಬೇಕಾದ ಹೊತ್ತು ನಿಂತುಹೋಗುತ್ತದೆ. ಅದಕ್ಕೆ ಸಾಧನವಾಗಿ ಚತುರಂಗ ಬಲಗಳು, ಅವುಗಳ ನಡುವಿನ ಮಲ್ಲಾಮಲ್ಲಿ ಎಲ್ಲವೂ ಇದೆ. ಆದರೆ ನಾವು ಹುಡುಕಿಕೊಳ್ಳಬೇಕಾದ ಇನ್ನೊಂದು ಯುದ್ಧ ಹಾಗಲ್ಲ. ಅಲ್ಲಿ ಸಂಖ್ಯೆ, ಸಂಘಟನೆ, ಸಂಚುಗಳ ಕಾರ್ಯಾಚರಣೆಯ ಪರಿ ಬೇರೆ. ಇಲ್ಲಿ ರಣರಂಗ, ಕತ್ತಿ, ಚತುರಂಗದಳ ಯಾವುವೂ ಕಾಣಿಸವು. ಕಡಿಯುವ ಕೈ, ತುಂಡಾಗುವ ಕುತ್ತಿಗೆಗಳೂ ಅರಿವಿಗೆ ಬರಲಾರವು. ಮೆದುಳನ್ನು ಮಾಯಮಾಡುವ ಈ ಮಾಯಕ ಎಂದು ಆರಂಭವಾಯಿತೋ ಕಾಣೆ? ಆದರೆ ಇಂದಿಗೂ ನಿಂತಿಲ್ಲ. ನಿಲ್ಲಲಾರದೋ ಏನೋ? ಹುಲ್ಲಿನಲ್ಲಿ ಕುತ್ತಿಗೆ ಅರಿಯುವ ಈ ಕಾಳಗ ಸೇನೆ, ಚತುರಂಗವೆಂಬ ಪಾರಿಭಾಷಿಕ ಪದ, ಸಾಧನಗಳಿಲ್ಲದೆಯೋ ನಡೆಯುತ್ತಲೇ ಬಂದಿದೆ. ಆದರೆ ಇದು ಸಂಘಟಿತ ಯುದ್ಧ. ಪಂಪ ಇಂತಹದ್ದೊಂದು

ಸಂಘಟಿತ ಯುದ್ಧದ ಸ್ಪಷ್ಟವಾದ ಚಿತ್ರ ಬಿಡಿಸಿಡಲು ಭಾರತ ಕಥೆಯೆಂಬ ಹಲಗೆಯನ್ನು ಬಳಸಿದ್ದಾನೆ. ಹೀಗಾಗಿ ಇತಿಹಾಸದ ಈ ಪಾಠವನ್ನು ಬಚ್ಚಿಟ್ಟುಕೊಂಡ ಪಂಪನ ಭಾರತವನ್ನು ನಾವು ಕಣ್ಣು ತೆರೆದು ಓದುವ ಅಗತ್ಯವಿದೆ.

ಪ್ರತಿರೋಧವೆಂದರೆ ಹಕ್ಕು ಕೇಳುವುದಷ್ಟೇ ಅಲ್ಲ

ಪ್ರತಿರೋಧವನ್ನು ಯಾಜಮಾನ್ಯಕ್ಕೆ ಸೆಡ್ಡುಹೊಡೆಯುವ ಬಂಡಾಯವೆಂಬ ದನಿಯಲ್ಲಿಯೇ ಗಮನಿಸುತ್ತೇವೆ. ಎಲ್ಲ ಕಾಲದಲ್ಲೂ ಅವಕಾಶ ವಂಚಿತರು ತಮ್ಮ ಹಕ್ಕಿಗಾಗಿ ಮಾಡುವ ದನಿಗಳು ಆಳುವಕೇಂದ್ರದ ನಿರಾತಂಕ ನಡೆಗೆ ತಡೆ ಒಡ್ಡುವುದರಿಂದ ಸಹಜವಾಗಿಯೇ ಸಮುದಾಯ ಮುಂಚಲನೆಯ ಆ ಆಗ್ರಹಗಳು ಪ್ರತಿರೋಧಿದನಿಗಳೇ ಆಗಿರುತ್ತವೆ. ಮುಮ್ಮುಖ ಚಲನೆಯನ್ನು ಆಗ್ರಹಿಸುವ ಈ ದನಿಗಳನ್ನು ಅಧಿಕಾರದ ವಿರುದ್ಧದ ಬಂಡಾಯವಾಗಿ ಪ್ರತಿರೋದದ ನೆಲೆಯಲ್ಲಿ ಗುರುತಿಸುವುದು ಸಮಸ್ಯೆಯಲ್ಲ. ಆದರೆ ಅಧಿಕಾರ ಮತ್ತು ಅಧೀನದ ಈ ಸಂಬಂಧವನ್ನು ದಾಟಿ ಪರಸ್ಪರ ಭಿನ್ನ ಅಧಿಕಾರದ ಭಿನ್ನ ಬಿಂದುಗಳು ಭಿನ್ನ ನಡೆಗಾಗಿ ಎದುರಾಳಿಯಾಗಿ ನಿಂತು ನಡೆಸುವ ಹಿತಾಸಕ್ತಿ ಕದನವನ್ನು ಹೇಗೆ ಗುರುತಿಸಬೇಕು? ಚಲನೆಯನ್ನು ಆಗ್ರಹಿಸುವ ಪ್ರತಿರೋಧಕ್ಕಿಂತ ಭಿನ್ನವಾಗಿ ಜಡತೆಯನ್ನು ಆಗ್ರಹಿಸಿ ಚಲನೆಯ ವೇಗವನ್ನು ತಡೆಯಲು ನೋಡುವ ಈ ತಿಕ್ಕಾಟವನ್ನು ಹೇಗೆ ವಿವರಿಸಬೇಕು? ಹಾಗೆಯೇ ತಮ್ಮ ಒತ್ತುವರಿಯನ್ನು ತೆರವು ಮಾಡಲಿಚ್ಚಿಸದ, ಒತ್ತುವರಿಯ ಕೋಟೆಯನ್ನು ಬಲಿಯುತ್ತಲೇ ಇರುವ ಆಗ್ರಹ, ನಿರಾಕರಣೆಗಳನ್ನು ಹೇಗೆ ವಿವರಿಸಬೇಕು? ತಮ್ಮ ಗುರುತುಗಳನ್ನು ಮುಂದಿಟ್ಟು ಮೌನವಾಗಿಸುವ ನಡೆಗಳನ್ನು ವಿವರಿಸಿಕೊಳ್ಳಬೇಕಾದುದು ಹೇಗೆ? ಯಾಕೆಂದರೆ ಜನ್ಮದತ್ತವಾದ ಜಾತಿಯೇ ಮನುಷ್ಯನ ಯೋಗ್ಯತೆಯನ್ನು ನಿರ್ಧರಿಸುವ ಆವರಣದ ಕರ್ಷಣವನ್ನೇ ತನ್ನ ಕಾವ್ಯದ ಮುಖ್ಯ ಎಳೆಯಾಗಿಸಿರುವ ಪಂಪಕಾವ್ಯದಲ್ಲಿ ಈ ಸಂಬಂಧವಾದ ಬಹುನಡೆಗಳಿವೆ. ಅಲ್ಲಿ ಕುಲದ ವಾಗ್ಯುದ್ಧಗಳಿಗೆ ಬಹುಕೋನದ ಹೊರಚಾಚುಗಳಿವೆ. ಅವೆಲ್ಲವನ್ನೂ ಬಂಡಾಯ, ಪ್ರತಿರೋಧದ ದನಿಗಳು ಎನ್ನಲಾಗದು. ಖಚಿತವಾಗಿ ತೋರುವಂತೆ ನಿಶ್ಚಿತವಾದ ಅಧಿಕಾರ ಕೇಂದ್ರವೊಂದನ್ನು ಗುರುತಿಸಿ ಸ್ಥಾಪಿತ ಕುಲವನ್ನು ನಿರಾಕರಿಸುವ ನೆಲೆಯಿಂದ ಬರುವ ಪ್ರತಿರೋಧದ ಕಡೆಗೆ ಕೊಟ್ಟಿರುವ ಒತ್ತು ಸ್ಪಷ್ಟವಿದೆ. ಅದರ ಜೊತೆಗೆ ಪ್ರಶ್ನೆಯನ್ನೇ ನಿರಾಕರಿಸುವ ಮುಕ್ತವಲಯದ ಅನಿರ್ಬಂಧಿತ ಅಧಿಕಾರದಿಂದ ತೊಡಗಿ ಒತ್ತುವರಿಯ ಹಿಡಿತ ಕರಗುತ್ತಿರುವ ಸಂಕಟಗಳಾಗಿ ತೆರೆಯುವ ಚರಿತ್ರೆಯ ಚಲನೆಗೆ ಬೆಚ್ಚುವ, ಅದಕ್ಕೆ ಒತ್ತಾಸೆಯಾಗುವ, ಹಿಮ್ಮುಖವಾಗಿ ಚಲಿಸುವ ಮತ್ತು ಹಾಗೆ ಬಿಡುಗಡೆಗೊಳ್ಳುವುದನ್ನು ಬಾಚಿ ತಬ್ಬಿಕೊಳ್ಳುವ ಮುಖಗಳ ನಡುವಿನ ಸಂಘರ್ಷವನ್ನು ಪಂಪಕಾವ್ಯ ಅತ್ಯಂತ ಎಚ್ಚರದಲ್ಲಿ ಬಿಡಿಸಿಟ್ಟಿದೆ. ಅದಕ್ಕಿಂತ ಮುಖ್ಯವಾಗಿ

ಪ್ರಜಾಸತ್ತಾತ್ಮಕವಾದ ರಾಜಕೀಯ ಬಾಳನ್ನು ಬಾಳುತ್ತಿರುವ ವರ್ತಮಾನಕಾಲದ ಅಗತ್ಯವನ್ನು ವಿವರಿಸಿಕೊಡುವಂತೆ ರಾಜ್ಯಶಕ್ತಿಯ(ಸ್ಟೇಟ್ ಪವರ್) ಮೂಲಕ ಸಾಂವಿಧಾನಿಕ ಅವಕಾಶವನ್ನು ಪಡೆಯುತ್ತಿರುವ ಎಲ್ಲ ಅಸಮಾನ ಬದುಕುಗಳಿಗೆ ಅರ್ಥವಾಗುವ ಪ್ರತಿರೋಧದ ಮಾದರಿಯನ್ನು ಪಂಪ ಕಟ್ಟಿಕೊಟ್ಟಿದ್ದಾನೆ. ಆದ್ದರಿಂದ 'ಕುಲಂ ಕುಲಮಲ್ತು ಎಂದ ಪಂಪನಲ್ಲಿಯ ಪ್ರತಿರೋಧವನ್ನು ಬೇರೆ ತುದಿಯಿಂದ ಓದಬೇಕಿದೆ. ಯಾಕೆಂದರೆ ಪಂಪನಲ್ಲಿ ಪ್ರತಿಗಾಮಿಗಳು ಮಾತ್ರವಲ್ಲ ಬಂಡಾಯಗಾರರೂ ಬೆತ್ತಲಾಗುವುದಿದೆ, ಬಂಡಾಯದ ದನಿಗೆ ದನಿತುಂಬುವುದಿದೆ. ದನಿಕಳೆದುಕೊಂಡವರು ದನಿ ಎತ್ತರಿಸುವ ಬೆಳಕು ಹರವಾಗುವುದಿದೆ. ಹಾಗಾಗಿ ಪಂಪಭಾರತದಲ್ಲಿ ಕುಲವನ್ನು ಕುರಿತ ಪ್ರತಿರೋಧದ ನೆಲೆಗಳನ್ನು ಅಂಚು ಮತ್ತು ಕೇಂದ್ರಗಳ ಕರ್ಷಣದ ಸರಳಾರ್ಥದಲ್ಲಷ್ಟೇ ಅಲ್ಲ, ಅದಲು ಬದಲಾಗುವ ಅಂಚು ಮತ್ತು ಕೇಂದ್ರಗಳ ನೆಲೆಯಿಂದಲೂ ಗಮನಿಸಬೇಕಾಗಿದೆ.

ಹೀಗೆ ಕುಲವಾದಿಗಳ ಜಾಡು ಹಿಂಬಾಲಿಸುವ ಪಂಪನಲ್ಲಿ ಈ ಮಾನದಂಡವನ್ನು ಯಾರು, ಯಾಕೆ ಮತ್ತು ಹೇಗೆಲ್ಲಾ ಬಳಸುತ್ತಾರೆ ಎಂಬ ವಿವರಗಳ ಜೊತೆ ಪ್ರತಿರೋಧವು ಕೆನೆಗಟ್ಟುವಲ್ಲಿ ಸಂಭವಿಸಿದ ವಿಕಾಸವಿದೆ. ಹಾಗಾಗಿ ಪಂಪನಲ್ಲಿ ಕುಲವು ನಿರಾತಂಕವಾಗಿ ನಿರ್ಭೀತವಾಗಿ ತನ್ನನ್ನು ತೋರಿಕೊಂಡು ಆರಂಭಗೊಳ್ಳುತ್ತದೆಯಾದರೂ ನಿದ್ರಿಸುವುದಿಲ್ಲ. ತನ್ನ ನೆಮ್ಮದಿಯನ್ನು ಕದಡಿದ ಮಾತಾಗಿ ಸಿಡಿದು ನಿಂತ ಎಚ್ಚರ ಮತ್ತು ಆ ಎಚ್ಚರಕ್ಕೆ ಕಾರಣವಾದ ಊರುಗೋಲಿನ ಆಸರೆಗಳು ಒಡ್ಡಿದ ಸವಾಲುಗಳಿಗೆ ಕನಲುತ್ತದೆ. ಮಾತಾಡುವ ನಾಲಗೆಗೆ ಕುದಿದಂತೆ, ಊರುಗೋಲಿಗೂ ಕಿಡಿಕಾರುತ್ತದೆ. ಮಾತು, ಮೈ, ಮೊಲೆಹಾಲುಗಳಿಗೂ ಗುರುತು ಹಚ್ಚಿ ವಿಂಗಡಿಸಿ ಕಂಗೆಡಿಸಲು ಹೆಣಗುತ್ತದೆ. ಈ ಉರಿಯನಂಜಿನ ಬಲಿಪಶುವಾಗಿ ಮುದುಡಿದ ಮತ್ತು ಸಿಡಿದ ಸಿಡಿಗುಂಡಿನ ಸಾಮಾಜಿಕ ರಸದಂತೆ ಪಂಪನಲ್ಲಿ ಕರ್ಣರಸಾಯನವಿದೆ. ಹಾಗಾಗಿ ಕುಲಕದನ ಎಂದಾಗ ಓದುಗಲೋಕ ಚಕ್ಕನೆ ಕರ್ಣನನ್ನು ಅಪ್ಪಿಕೊಳ್ಳುವುದುಂಟು. ಅದು ಸರಿಯಲ್ಲವೆಂದೇನಲ್ಲ. ಆದರೆ ಕುಲವೆಂದರೆ ಕರ್ಣನಷ್ಟೇ ಅಲ್ಲ. ಕುಲದ ಯುದ್ಧಗಳು ಮೇಲುತುದಿ ಮತ್ತು ಕೆಳತುದಿಗಳ ಸರಳ ಕದನವಷ್ಟೇ ಅಲ್ಲ. ಅದಕ್ಕಾಗಿ ಪಂಪನಲ್ಲಿರುವ ಈ ಚರ್ಚೆಯ ಸೂಕ್ಷ್ಮ ಸಂದರ್ಭಗಳು, ಅಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗಳು ಮತ್ತು ಸಂವೇದನೆಗಳ ಪರಿಗಳನ್ನು ಗಮನಿಸಬೇಕು. ಯಾಕೆಂದರೆ ಇಲ್ಲೊಂದು ವಿಶಿಷ್ಟವಾದ ಕ್ರೋನೋಲಜಿ ಇದೆ.

ಮಾತುಸೋತ ಭಾರತದ ಮೊದಲ ಪುಟ

ಪಂಪಭಾರತದ ಆರಂಭದಲ್ಲೇ ಎರಡು ಪುಟ್ಟ ಗದ್ಯಗಳ ನಡುವಿನ ಒಂದು ವೃತ್ತದಲ್ಲಿ ಮುಗಿಯುವ ಚಿಕ್ಕ ಘಟನೆಯಿಂದಲೇ ಮಹಾಭಾರತದ ಅಧಿಕಾರದ ಕಥೆ

ಆರಂಭಗೊಳ್ಳುತ್ತದೆ. ವಾಸ್ತವದಲ್ಲಿ ಪಂಪ ಹೇಳುವ 'ಈ ತೆರದ ಇತಿಹಾಸ'ದ ಮೊದಲ ಪುಟ ಇಲ್ಲಿಂದಲೇ ಮೊದಲಾಗುತ್ತದೆ. ಇದು ಮೊದಲ ಆಶ್ವಾಸದ ವಂಶಾವತರಣ ಭಾಗ. ಗಂಗೆಯ ತಡಿಯಲ್ಲಿ ದೋಣಿ ನಡೆಸುತ್ತಿದ್ದ ದಾಸರಾಜನ ಮಗಳಾದ ಬೆಸ್ತರ ಹೆಣ್ಣು ಮತ್ಸ್ಯಗಂಧಿ(ಸತ್ಯವತಿ)ಯೊಂದಿಗಿನ ವೃದ್ಧ ಪರಾಶರನ ಸಮಾಗಮದ ಕಥೆ. ಆದರೆ ಈ ಹಳೆಯ ಕಥೆ ಪಂಪನ ಕಾವ್ಯಕಟ್ಟೋಣದ ಭಾಷಿಕಚಿತ್ರದಲ್ಲಿ ಆತ ಬರೆಯಹೊರಟ ಭಾರತದ ಇತಿಹಾಸಕ್ಕೆ ಮುನ್ನುಡಿಯಂತೆಯೇ ಒದಗಿಬಂದಿದೆ. ಪುಟ್ಟ ಸಂಭಾಷಣೆ ಹಾಗೂ ವರದಿರೂಪದ ಸಂಕ್ಷಿಪ್ತವಿವರಗಳಷ್ಟೇ ಇರುವ ಈ ಭಾಗ ವಂಶಾವತರಣದ ಬೀಜವಾಗುವ ಜೊತೆಗೆ ಮಾತುಸೋತ ಭಾರತದ ಇತಿಹಾಸ ವರ್ತಮಾನಗಳನ್ನು ಜೋಡಿಸುವ ಪುಟ್ಟ ಸೇತುವೆಯೂ ಆಗಿದೆ.

ಗಂಗೆಯ ತಡಿಗೆ ನದಿ ದಾಟಲೆಂದು ಬಂದ ವೃದ್ಧಪರಾಶರ ದೋಣಿ ನಡೆಸುತ್ತಿದ್ದ ಬೆಸ್ತರ ಹುಡುಗಿ ಮತ್ಸ್ಯಗಂಧಿಯ ಜೊತೆ ನಡೆಸಿದ ಸಂಭಾಷಣೆ, ಸಂಭೋಗ, ಪುತ್ರಫಲ, ಅದನ್ನು ಒಡಗೊಂಡು ಹೋಗುವ ವಿವರಗಳಲ್ಲಿ ತೆರೆದುಕೊಳ್ಳುವ ಮಾತುಕತೆ, ಕ್ರಿಯೆ, ಫಲಿತ ಮತ್ತು ಉಪಭೋಗಗಳು ಈ ನೆಲದ ಇತಿಹಾಸವನ್ನೇ ಸೂಕ್ಷ್ಮವಾಗಿ ಕಾಣಿಸುತ್ತವೆ. ("ಅಲ್ಲಿಗೆ ಒರ್ಮೆ ಬ್ರಹ್ಮರ ಮೊಮ್ಮನಪ್ಪ ವೃದ್ಧಪರಾಶರಮುನೀಂದ್ರನ್ ಉತ್ತರಾಪಥಕ್ಕೆ ಪೋಗುತ್ತುಂ ಬಂದು ತೊಱೆಯಂ ಪಾಯಿಸೆಂಬುದುಂ, ಸಾಸಿರ್ವರ್ ಏಱಿದೊಡಲ್ಲದೆ ಈ ಓಡು ನಡೆಯದು ಎಂಬುದುಂ, ಆಮ್ ಅನಿಬರ ಬಿಣ್ಪುವಪ್ಪೆಂ ಏಱಿಸು ಎಂದೊಡೆ, ಅಂತೆ ಗೆಯ್ವೆನ್ ಎಂದು ಓಡಂ ಏಱಿಸಿ ನಡೆಸುವಲ್ಲಿ, ದಿವ್ಯ ಕನ್ನಿಕೆಯನ್ ಅಟ್ಟಿಕುರ್ತು ನೋಡಿ ಮನದೊಳ್ ಸೋಲ್ತು.............. ಕೂಡುವೆಡೆಯೊಳ್ ಜ್ಞಾನಸ್ವರೂಪಂ ಮಹಾಮುನಿಪಂ ಪುಟ್ಟಿದನ್. ಅಂತು ದಿವ್ಯಮುನಿಗಳ್ಗೆ ಏಗೆಯ್ದೊಡಂ ತೀರದೇ? ಅಂತು......... ವ್ಯಾಸಭಟ್ಟಾರಕಂ ಪುಟ್ಟುವುದುಂ ಆತನನ್ ಒಡಗೊಂಡು ಸತ್ಯವತಿಗೆ ಪುನಃ ಕನ್ಯಾಭಾವಮಂ ದಯೆಗೆಯ್ದು ಪರಾಶರಂ ಪೋದನ್" (ಪಂ.ಭಾ, ೧– ೬೮ ರ ನಂತರದ ಗದ್ಯ ಹಾಗೂ ವೃತ್ತ)). ನದಿ ದಾಟಿಸಲು ಹೇಳುವ ಪರಾಶರನಿಗೆ ದೋಣಿಯ ಅವಕಾಶ, ಅಗತ್ಯವನ್ನು ಹೇಳುವಂತೆ ಮತ್ಸ್ಯಗಂಧಿ 'ಸಾವಿರಮಂದಿ ಏರಿದೊಡಲ್ಲದೆ ಈ ದೋಣಿ ನಡೆಯಲಾರದು' ಎನ್ನುತ್ತಾಳೆ. ಬಹುಜನರ ಉಪಸ್ಥಿತಿ/ಪಾಲ್ಗೊಳ್ಳುವಿಕೆ ಇಲ್ಲದೆ ದೋಣಿ ಚಲಿಸದು ಎನ್ನುವ ಆಕೆಗೆ ಸಾವಿರವೆಂದರೆ ಸಾವಿರವೇ, ಅದು ಪ್ರಜಾಸತ್ತೆಯ ಸಾಮಾನ್ಯವಿವೇಕದಂತೆ ಒನ್ ವೋಟ್ ಒನ್ ವ್ಯಾಲ್ಯು. ಆದರೆ ಪರಾಶರನದು ಜಾತಿಸತ್ತೆಯ ವಿಪರೀತಬುದ್ಧಿ. ಹಾಗಾಗಿ 'ಅಷ್ಟು ಜನರ ತೂಕಕ್ಕೆ ತಾನೊಬ್ಬನೇ ಸಮನಾಗಿದ್ದೇನೆ' ಎಂಬುದು ಆತನ ಉತ್ತರ. ಮತ್ಸ್ಯಗಂಧಿಯ ಪ್ರಶ್ನೆ ಒಂದಕ್ಕೆ ಒಂದು ಸಮವೆಂದರೆ, ಪರಾಶರನ ಉತ್ತರದಲ್ಲಿ ಆಕೆ ಹೇಳುವ ಒಂದುಸಾವಿರಕ್ಕೆ ಆತನೊಬ್ಬನೇ ಸಮ. ಅಂದರೆ

ಸಾವಿರದ ಹಲವುಗಳಿಗೆ ಹಲವಲ್ಲ, ಒಬ್ಬನೇ! (೧೦೦೦=೧). ಒನ್ ವೋಟ್ ಒನ್ ವ್ಯಾಲ್ಯು ಅಲ್ಲ. ಒಂದು ಕಡೆ ಅದು ಹೌದು, ಆದರೆ ಮತ್ತೊಂದು ತುದಿಗೆ ಒಂದು ಓಟು ಸಾವಿರಕ್ಕೆ ಸಮ. ಪರಾಶರ ಮತ್ತು ಮತ್ಸ್ಯಗಂಧಿಯ ಮೌಲ್ಯ ಒಂದೇ ಅಲ್ಲ. ಹೀಗೆ ಮತ್ಸ್ಯಗಂಧಿಗೆ ಪರೋಕ್ಷವಾಗಿ ಆತ ತಾನಾರೆಂಬುದನ್ನು ಹೇಳುತ್ತಿದ್ದಂತೆಯೇ ಆಕೆಯ ಮಾತು ನಿಲ್ಲುತ್ತವೆ. ಜಾತಿಸತ್ತೆಯ ವಿಪರೀತದೆದುರು ಪ್ರಜಾಸತ್ತೆಯ ವಿವೇಕ ಮೌನವಾಗುವಂತೆ ಆಕೆ ಪ್ರತಿಕ್ರಿಯೆ, ಪ್ರತಿಸ್ಪಂಧನೆಯೇ ಇಲ್ಲದ ಮೌನಕ್ಕೆ ಸರಿಯುತ್ತಾಳೆ. ಪರಾಶರನಿಗೆ ಪ್ರತಿಕ್ರಿಯೆ, ಪ್ರತಿರೋಧಗಳೇ ಇಲ್ಲದ ತಡೆಯಿಲ್ಲದ 'ಹಕ್ಕು' ದಕ್ಕಿಬಿಡುತ್ತದೆ.

ಕುತೂಹಲದ ಸಂಗತಿಯೆಂದರೆ ಭಗವದ್ಗೀತೆಯ ೭ನೇ ಅಧ್ಯಾಯದ ೩ನೇ ಶ್ಲೋಕವು ಮನುಷ್ಯ ಸಾಮಾನ್ಯರು ಮತ್ತು ಸಿದ್ಧಿ ಪಡೆದವರ ತುಲನೆಯಲ್ಲಿ, "ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ। ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ॥ (ಭ.ಗೀ,೭-೩) ಎಂದು ಇದೇ ಭಾಷೆಯನ್ನು ಬಳಸುತ್ತದೆ. ಅದು ಅಧ್ಯಾತ್ಮಿಕಲೋಕದ ಆತ್ಮತತ್ವದ ಚರ್ಚೆಯಾಗಿ ಅರ್ಥೈಸಲ್ಪಡುತ್ತಿದೆ ಎಂಬುದು ನಿಜ. ಆದರೆ ವೃದ್ಧಪರಾಶರ ತನ್ನನ್ನು ಸಾವಿರಕ್ಕೆ ಸಮನೆಂಬಲ್ಲಿ ತನ್ನ ಸಿದ್ಧಿಯನ್ನು ತೋರಿದ ಎಂದಷ್ಟೇ ಅರ್ಥೈಸಲಾಗದು. ಯಾಕೆಂದರೆ ಈ ಸಿದ್ಧ ಆಕೆಯ ದೋಣಿ ಏರಿದ್ದಷ್ಟೇ ಅಲ್ಲ, ಬಯಸಿ ಕೂಡಿ ಪರಿಣಾಮವನ್ನೂ ಪಡೆದು ಒಡಗೊಂಡು ಹೊರಟನೆಂಬುದನ್ನು ಗಮನಿಸಬೇಕು. ಹಾಗಾಗಿ ಅಲ್ಲಿ ಪರಾಶರನ ಸಾಮಾಜಿಕ ಹಿನ್ನೆಲೆ ಗೌಣವಲ್ಲ.

'ನಾಲಗೆ ಕುಲಮಂ ತುಬ್ಬುವವೋಲ್' ಎಂದು ಕರ್ಣನನ್ನು ಚುಚ್ಚಿದ ದ್ರೋಣ ಕರ್ಣನ ನಾಲಗೆಯಲ್ಲಿ ಕುಲ ಹುಡುಕಿ, ಆತನ ಮೇಲೆ ದಾಳಿನಡೆಸಿದ. ಕರ್ಣ ಕುಲೀನರಿಗೆ ಎದುರಾಡಿದನೆಂಬ ಈ ಆಕ್ಷೇಪವು ಕುಲವ್ಯವಸ್ಥೆಯ ಮೇಲ್ತುದಿಯ ದ್ರೋಣನ ಪ್ರತಿಕ್ರಿಯೆ. ಹದ್ದು ಮೀರಿದ ಮಾತಿನಲ್ಲಿ ಸಂಸ್ಕಾರವಿಲ್ಲದ ಕರ್ಣನ ಕುಲ ಕಾಣುತ್ತದೆ ಎಂಬುದು ದ್ರೋಣನ ತರ್ಕ. ವ್ಯವಸ್ಥೆಯನ್ನು ಉಲ್ಲಂಘಿಸಿ, ಕುಲಗೌರವ ನೀಡದೆ ಕರ್ಣ ಸೊಕ್ಕು ತೋರಿದ ಎಂಬುದು ಆತನ ತಕರಾರು. ಹೀಗೆ ತನ್ನ ಸಾಮಾಜಿಕ ಬಲದಿಂದ ಕರ್ಣನ ಯೋಗ್ಯತೆ ಅಳೆಯುವ ದ್ರೋಣ ಆತನನ್ನು ಅಯೋಗ್ಯನೆಂದು ಘೋಷಿಸುತ್ತಾನೆ. ಇದು ಮಾತನ್ನೇ ಗುರುತಾಗಿ ಬಳಸಿ ಕುಲವನ್ನು ಅಳೆದ ಮೇಲ್ಜಾತಿ ಮನಸ್ಸಿನ ನಡೆ. ಅಂತೆಯೇ ಮತ್ಸ್ಯಗಂಧಿಯೂ ಮಾತಲ್ಲೇ ಗುರುತಿಸುತ್ತಿದ್ದಾಳೆ. ಆದರೆ ಸಾಮಾಜಿಕ ಬಂಡವಾಳವಿಲ್ಲದ ಆಕೆಯ ಗುರುತಿಸುವಿಕೆ ಮತ್ತು ಪ್ರತಿಕ್ರಿಯೆಗಳು ದ್ರೋಣನಿಗಿಂತ ಭಿನ್ನ. ಎರಡೂ ಭಾಷೆಯನ್ನೇ ಅಳೆಯುತ್ತವೆ ಮತ್ತು ಭಾಷೆಯನ್ನೇ ಬಳಸುತ್ತವೆ. ದ್ರೋಣನಲ್ಲಿ ಮಾತು ಆರ್ಭಟಿಸುತ್ತದೆ. ಆದರೆ ಮತ್ಸ್ಯಗಂಧಿಯಲ್ಲಿ ಮಾತೇ ಸಾಯುತ್ತದೆ.

ಕುಲ ಕೆಲವರಿಗೆ ಅಲಂಕಾರ, ಮತ್ತೆ ಕೆಲವರಿಗೆ ಸಂಕಟದ ಹೊರೆ. ಸಾಮಾನ್ಯವಾಗಿ ಅಲಂಕಾರವು ತೋರಿ ಮೆರೆಯುತ್ತದೆ, ಸಂಕಟವು ಒಳಗೇ ಕುಸಿಯುತ್ತದೆ. ಸಂಭ್ರಮ, ಸಂಕಟಗಳೆರಡೂ ಭಾಷೆಯಲ್ಲೇ ನಿಜಗೊಳ್ಳುತ್ತವೆ. ಸಂಭ್ರಮವು ಶಬ್ದಾಲಂಕಾರದಂತೆ ಪ್ರಕಟವಾಗಬಹುದು, ಅರ್ಥಾಲಂಕಾರದಂತೆ ಸೂಚಿತವೂ ಆಗಬಹುದು. ಇನ್ನು ಸಂಕಟದ ಕಥೆ ಬೇರೆ. ಭಾಷೆಯ ಮತ್ತೊಂದು ಸೆರಗನ್ನು ಆತುಕೊಳ್ಳುವ ಅದರ ಅಭಾಷಿಕತೆಯೂ ಬೇಟೆಯ ಶಿಕಾರಿಯಾಗಬಹುದು. ಸಾಮಾಜಿಕ ತುದಿಗಳು ಬೇರಾದಂತೆ ಪ್ರತಿಕ್ರಿಯೆಗಳು ಬದಲಾಗುತ್ತವೆ. ಹಾಗಾಗಿ ದ್ರೋಣನ ದಾಳಿಗೆ ಭಿನ್ನವಾಗಿ ಮತ್ಸ್ಯಗಂಧಿಯದು ಪೂರ್ಣ ಶರಣಾಗತಿ. ಹೊಳೆ ದಾಟಿಸಲು ಕೇಳಿದವನಿಗೆ ಮತ್ಸ್ಯಗಂಧಿ ದೋಣಿಯ ಅಗತ್ಯವನ್ನು ಅರುಹುತ್ತಾಳೆ. ಆದರೆ ಪರಾಶರನ ಉತ್ತರ ಆಕೆಯ ಬಾಯಿ ಮುಚ್ಚಿಸುತ್ತದೆ. ಮಾತಿಂದಲೇ ಪರಾಶರನ ಇರವಿನ ಅರಿವು ಪಡೆಯುತ್ತಲೇ ಸಾಮಾಜಿಕ ಬಂಡವಾಳವಿಲ್ಲದ ಮತ್ಸ್ಯಗಂಧಿಯ ಮಾತು ಸತ್ತು ನಾಲಗೆ ನಿರಸನಗೊಳ್ಳುತ್ತದೆ. ಆ ಓಡು, ಒಡಲುಗಳೆರಡೂ ಪರಾಶರನ ಹಕ್ಕಿನ ಸರಕುಗಳಾಗುತ್ತವೆ. ಆತ ದೋಣಿ ಮತ್ತು ದೇಹಗಳೆರಡನ್ನೂ ಏರಿ ಇಳಿಯುತ್ತಾನೆ. ಈ ಅನಿಯಂತ್ರಿತ ಅಧಿಕಾರ ಮತ್ತು ಅಧೀನ ಪರಂಪರೆಗಳ ಮುಖಾಮುಖಿಯಲ್ಲಿ ಪರಾಶರನ ಸ್ವಾತಂತ್ರ್ಯದ ಆಜನ್ಮಸಿದ್ಧ ಹಕ್ಕು ಮೇಲುಗೈ ಪಡೆಯುತ್ತದೆ. ಆತ ಪ್ರತಿರೋಧವಿಲ್ಲದೆ ಆಕೆಯನ್ನು ಅನುಭವಿಸುತ್ತಾನೆ. ಪಂಪ 'ದಿವ್ಯಮುನಿಗಳ್ಗೆ ಏಗೆಯ್ದೊಡಂ ತೀರದೆ?' ಎಂದು ಉದ್ಗಾರವೆತ್ತುತ್ತಾನೆ. 'ಮಾತುಸೋತ ಭಾರತವೆಂಬ' ಭಾರತದ ಇತಿಹಾಸದ ಪುಟ ಹೀಗೆ ತೆರೆದುಕೊಳ್ಳುತ್ತದೆ.

ಪರಾಶರ ತಾನು ಮತ್ಸ್ಯಗಂಧಿಯಿಂದ ಬಯಸಿದ್ದನ್ನು ಪಡೆದ. ಬಂದ, ಕಂಡ, ಕೂಡಿದ, ಬೆಸಲಾದ ಗಂಡುಮಗುವನ್ನು ಒಡಗೊಂಡು ಹೊರಟೇಬಿಟ್ಟ. ಕಥೆ ಹೇಳುವಂತೆ ಕನ್ಯತ್ವವನ್ನು ಕಳೆದುಕೊಂಡಾಕೆ ಕಳೆದವನಿಂದಲೇ ಮರಳಿ ಪಡೆದಳಂತೆ! ಆದರೆ ಪರಾಶರನಿಗೆ ಮಾತು ಸೋತವಳು ಶಂತನುವಿಗೆ ತನ್ನಪ್ಪನನ್ನು ಕೇಳಿ ಪಡೆಯುವಂತೆ ವಿನಂತಿಸುತ್ತಾಳೆ. ಆತನೆದುರು ಮಾತು ಸತ್ತವವಳಿಗೆ ಅರಸ ಶಂತನುವಿನ ಎದುರು ಮಾತು ಹುಟ್ಟುತ್ತದೆ!. ಹೀಗೆ ಇಬ್ಬರ ನಡುವಿನ ಅವಳ ವ್ಯವಹಾರ ಎರಡು ತೆರನಾಗಿ ಇಲ್ಲಿ 'ಮನುಷ್ಯಜಾತಿ ತಾನೊಂದೆ ವಲಂ' ಅಲ್ಲ ಎಂಬುದು ಸಿದ್ಧವಾಗುತ್ತದೆ. ಪರಾಶರನಿಗೆ ಮೂಕಿಯಾಗಿ ಮೈಕೊಟ್ಟವಳು, ಶಂತನುವಿಗೆ ಕೈಹಿಡಿಯಲು ಅನುಮತಿಯ ಹಾದಿ ಬೇಕೆನ್ನುತ್ತಾಳೆ.

ತಲೆ ತೋಳುಗಳ ಮುದ್ದಾಟ ಗುದ್ದಾಟ

ಲೋಕವನ್ನು ಅಸಿ ಮಸಿಗಳೇ ಕೂಡಿ ಆಳಿವೆ. "ಪ್ರಾಚೀನ ಮತ್ತು ಮಧ್ಯಯುಗಗಳಲ್ಲಿ ಬ್ರಾಹ್ಮಣರು ಕ್ಷತ್ರಿಯ ವರ್ಗದೊಡನೆ ಶಾಮೀಲಾಗಿ ಜನಸಮುದಾಯವನ್ನು ಆಳಿದರು.

ಆಗ ಬ್ರಾಹ್ಮಣನು ಲೇಖನಿಯಿಂದಲೂ, ಕ್ಷತ್ರಿಯ ತನ್ನ ಖಡ್ಗದಿಂದಲೂ ತಮ್ಮ ಅಧಿಪತ್ಯ ಸಾಧಿಸಿದರು" (ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ: ೯, ೧೯೯೮, ಪು:೨೩೩). ಸಾಮಾನ್ಯವಾಗಿ ಅಸಿ ಮಸಿಗಳು ಒಂದನ್ನೊಂದು ಅನುಸರಿಸಿದ್ದೇ ಹೆಚ್ಚು. ಕೆಲವೊಮ್ಮೆ ಎದುರಾಳಿಯಾಗಿ ನಿಂತುದಿದೆ. ಯಾರು ಹೆಚ್ಚೆಂಬ ಮೇಲಾಟದಲ್ಲಿ ಪುರಾಣ, ಚರಿತ್ರೆಗಳನ್ನು ಹೆಣೆದಿವೆ. ಇವು ಸಂಘರ್ಷಕ್ಕೆ ನಿಂತಾಗ ನೆಲದ ಚರಿತ್ರೆಯೇ ಬದಲಾಗಿದೆ. ಪಂಪಕಾವ್ಯವು ಬ್ರಾಹ್ಮಣ್ಯ ಮತ್ತು ಕ್ಷಾತ್ರದ ನಡುವಣದ ಈ ಸಂಕೀರ್ಣ ಸಂಬಂಧದಲ್ಲಿರುವ ಮಹಾಭಾರತವೆಂಬ ಮಹಾಸಂಘರ್ಷದ ಬೀಜವನ್ನು ತನ್ನ ರೂಪಕ ಭಾಷೆಯಲ್ಲಿ ಅಚ್ಚುಕಟ್ಟಾಗಿ ಕಟ್ಟಿದೆ.

ಆರಂಭದಲ್ಲೇ ಬರುವ ಪರಶುರಾಮ – ಭೀಷ್ಮರ ಕಾಳಗದಲ್ಲಿ ಗುರು ಸೋತು ಗುರುತನ ಗೆಲ್ಲುತ್ತದೆ. ಆದರೆ ಅಲ್ಲಿ ಕುಲದ ಕುಲುಮೆಯಿಲ್ಲ. ಅದು ದ್ರೋಣ – ದ್ರುಪದರಲ್ಲಿದೆ. ಒಡನೋದಿದ ಇವರ ಓದಿನೋತ್ತರದ ಭೇಟಿ ಗೆಳೆತನವಲ್ಲ, ವೈರವನ್ನು ಸಮೆಯುತ್ತದೆ. ಅವಕಾಶ ಬೇಡಿ ಬಂದ ಮಸಿಯನ್ನು ಅವಮಾನಿಸುವ, ಅವಮಾನಕ್ಕೆ ಪ್ರತಿಯಾಗಿ ಪ್ರತೀಕಾರದ ಪ್ರತಿಜ್ಞೆಗೈಯುವ, ಅವಮಾನಕ್ಕೆ ಅವಮಾನದ ಉಡುಗೊರೆ ಕೊಡುವ ಈ ಸರಣಿ ಮಹಾಭಾರತದ ಬೀಜ ಬಿತ್ತಿ, ವರ್ಣಸಂಕಟದಲ್ಲಿ ವಂಶಸಂಕಟದ ಮರಿಹಾಕುತ್ತದೆ. ಬಲವು ಬುದ್ಧಿಯನ್ನು ಅಪಮಾನಿಸಿ, ಬುದ್ಧಿ ರಾಜ್ಯಶಕ್ತಿಯನ್ನು ಸದೆಬಡಿವ ಪ್ರತಿಜ್ಞೆಗೈಯುವ ಮೂಲಕ ಮಹಾಭಾರತದ ಪೂರ್ವರಂಗವು ಬಲಿಯುತ್ತದೆ. ಪಾತ್ರಗಳಾಗದೆ ಕುಲಗಳಾಗಿ ಎದುರಾಗುತ್ತವೆ. ದ್ರೋಣ ದ್ವಿಜನಾಗಿ, ದ್ರುಪದ ಮಹೀಪತಿಯಾಗಿ ಕುಲಗುರುತುಗಳ ವರ್ಣ ಭಾಷೆಯಲ್ಲಿ ಮೂಡುತ್ತಾರೆ. ದ್ರುಪದ, "ಮಹೀಪತಿಗಂ ದ್ವಿಜ ವಂಶಜಂಗಂ ಏತಱ ಕೆಳೆ? ಇಂತು ನಾಣಿಲಿಗರಪ್ಪರೆ ಮಾನಸರ್"(ಪಂ.ಭಾ, ೨–೪೮) ಎಂದೇ ದ್ರೋಣನನ್ನು ಅಣಕಿಸುತ್ತಾನೆ. ಅನಿಯಂತ್ರಿತ ಅಧಿಕಾರಕ್ಕೆ ಬದಲಾಗಿ ಅವಮಾನಿತನಾದ ದ್ರೋಣ, "ಈ ಸಭಾವಳಯದೊಳ್ ಎನ್ನನ್ ಏಳಿಸಿದ ನಿನ್ನನ್ ಅನಾಕುಳಂ ಎನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ"(ಪಂ.ಭಾ,೨–೫೦) ಎಂದು ಪ್ರತೀಕಾರದ ಮಾತಾಡುತ್ತಾನೆ. ಅದನ್ನು ಅರ್ಜುನನ ಮೂಲಕ ಈಡೇರಿಸಿಕೊಂಡು ದ್ರುಪದನನ್ನು ತನ್ನ ಮಂಚದ ಕಾಲಿಗೆ ಕಟ್ಟಿಕೊಳ್ಳುವ ದ್ರೋಣ ಆತನ ತಲೆಯ ಮೇಲೆ ಕಾಲನ್ನಿಟ್ಟು, "ಎಮ್ಮಂ ಬಡ ಪಾರ್ವರನ್ ಅರಸರೆ ಈಗಟ್ ಅಱಿವಿರ ಅಱೆಯಿರೋ ಪೇೞಿಂ"(ಪಂ.ಭಾ,೨–೬೩) ಎಂದು ಅದೇ ಭಾಷೆಯಲ್ಲಿ ಸಾಯುವಂತೆ ಸರಸ ನುಡಿದು ಅವಮಾನಿಸುತ್ತಾನೆ. ಈ ಸೇಡು, ಕೇಡುಗಳು ಮುಂದುವರಿಯುತ್ತವೆ. ದ್ರೋಣನನ್ನು ಕೊಲ್ಲುವ ಮಗ, ಅರ್ಜುನನನ್ನು ವರಿಸುವ ಮಗಳಿಗಾಗಿ ದ್ರುಪದ ತಪಸ್ಸುಮಾಡುತ್ತಾನೆ. ಮುಂದೆ ಭಾರತಯುದ್ಧದಲ್ಲಿ ದ್ರೋಣ

ದ್ರುಪದನನ್ನು ಕೊಲ್ಲುತ್ತಾನೆ. ದ್ರುಪದನ ಮಗ ದೃಷ್ಟದ್ಯುಮ್ನನಿಂದ 'ಪೆಣನಿಱಿದು ಪಗೆಗೊಂಡಂತೆ' ದ್ರೋಣ ಎಳೆಗೋಣ ಸಾವು ಸಾಯುತ್ತಾನೆ. ಆದರೆ ಸರಣಿ ಇಲ್ಲಿಗೂ ನಿಲ್ಲದೆ ದ್ರೋಣನ ಮಗ ಅಶ್ವತ್ಥಾಮ ದೃಷ್ಟದ್ಯುಮ್ನನನ್ನು ನಿದ್ರೆಯಲ್ಲಿಯೇ ಕೊಲ್ಲುತ್ತಾನೆ. ಹೀಗೆ ಮನುಷ್ಯರಲ್ಲ ವರ್ಣಗಳೇ ಹೊಯ್ದಾಡುವ ಈ ತಿಕ್ಕಾಟದಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರಿಯ ಕುಲಗಳು ತಮ್ಮದೇ ಹಿತಾಸಕ್ತಿಗಾಗಿ ತಾವೇ ಇಳಿದು ನೇರ ಹೋರಾಡುತ್ತವೆ. ಆದರೆ ಅದು ಅಷ್ಟಕ್ಕೇ ನಿಲ್ಲದೆ ಮಹಾರಣರಂಗವೇ ಅದರ ಭಾಗವಾಗುತ್ತದೆ.

ಆಯುಧ ಪ್ರದರ್ಶನದ ನಡುವೆ ಕಾಣಿಸಿಕೊಂಡ ಕರ್ಣ ಶರಪರಿಣತಿ ತೋರಿ ಅರ್ಜುನನನ್ನು ಅಣಕವಾಡಿ ಈ ರಂಗವೇ ರಣರಂಗವಾಗಲಿ ಎನ್ನುತ್ತಾನೆ. ಆಗ ಕೃಪ ದ್ರೋಣರುಗಳು ಕೂಡಿ, "ನೀಂ ನಿನ್ನ ತಾಯ ತಂದೆಯ ದೆಸೆಯಂ ಬಗೆಯದೆ ನುಡಿವಂತಾವುದು ಸಮಕಟ್ಟು ನಿನಗಂ ಅರಿಕೇಸರಿಗಂ" ಎಂದು ಆತನ ಕುಲ ಕೆದಕುತ್ತಾರೆ. ದಿಕ್ಕುತೋಚದ ಕರ್ಣ ಮಾತಳಿದು ಮೈಬೆವರಿ 'ಪಂದೆಯನ್ನು ಪಾವರ್ದಂತೆ' ಇದ್ದುದನ್ನು ಕಂಡ ದುರ್ಯೋಧನ ಸಿಡಿಯುತ್ತಾನೆ. ಕರ್ಣನ ಕುಲಮೂಲ ಕೆದಕಿದ ಕೃಪದ್ರೋಣರುಗಳನ್ನು ಉದ್ದೇಶಿಸಿ, "ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ? ಕುಲಮನಿತು ಪಿಕ್ಕದಿರಿಂ ನೀಂ ಒಲಿದೆಲ್ಲಿ ಪುಟ್ಟಿ ಬಳೆದಿರೊ!? ಕುಲಮಿರ್ದುದೇ ಕೊಡದೊಳಂ ಶರಸ್ತಂಭದೊಳಂ?" ಎಂದು ಅವರ ಕುಲವನ್ನೇ ಜಾಲಾಡುತ್ತಾನೆ. ಅಷ್ಟೇ ಅಲ್ಲ, "ಕರ್ಣನನ್ ಈಗಳೆ ಕುಲಜನನ್ನಾಗಿ ಮಾಡಿ ತೋರ್ಪೆನ್" ಎಂದು ಕೈಹಿಡಿದು ನಡೆಸಿ ಕನಕಪೀಠಕ್ಕೇರಿಸಿ ಬ್ರಾಹ್ಮಣರಿಂದಲೇ ಪುಣ್ಯೋದಕ ಸುರಿಸಿ ಅಭಿಷೇಕದೊಂದಿಗೆ ಅಂಗರಾಜ್ಯದ ಅಧಿಕಾರ ನೀಡುತ್ತಾನೆ. ದುರ್ಯೋಧನನ ಈ ಸಂವಾದ ಮತ್ತು ಕ್ರಿಯಾಚರಣೆಗಳಲ್ಲಿ, ಹುಟ್ಟನ್ನೇ ಆಧರಿಸಿದ ಶ್ರೇಷ್ಠತೆಯ ನೆವದಲ್ಲಿ ಸಮಾಜವನ್ನೇ ಆಳುವ ಕುತಂತ್ರಕ್ಕೆ ವಿಜ್ಞಾನ ಮತ್ತು ತರ್ಕದ ಮೂಲಕದ ಡಿಕ್ಕಿಯಿದೆ. ಅಧಿಕಾರವೇ ಕುಲವೆಂಬಂತೆ ಕರ್ಣನಿಗೆ ಪಟ್ಟಕಟ್ಟುವ ದುರ್ಯೋಧನ ಬಲ, ವೀರಗಳಲ್ಲಿ ಅಲ್ಲದೆ, ಹುಲ್ಲಿನ ಜೊಂಡು, ಕೊಡಗಳಲ್ಲಿ ಕುಲವಿತ್ತೇ? ನೀವಾದರೂ ಎಲ್ಲಿ ಹುಟ್ಟಬೇಕೆಂದು ಬಯಸಿ, ಅಹವಾಲು ಸಲ್ಲಿಸಿ ಹುಟ್ಟಿದಿರೋ? ಎಂದು ಅಣಕಿಸುತ್ತಾನೆ. ಕರ್ಣನನ್ನು ಕುಲಜನನ್ನಾಗಿ ಮಾಡಿತೋರಿಸುತ್ತೇನೆ ಎನ್ನುತ್ತಾನೆ. ಹೀಗೆ ತೋಳ್ಬಲವು ರಾಜ್ಯಾಧಿಕಾರವನ್ನೇ ಕುಲವೆನ್ನುವ ಜೊತೆಗೆ ತಾನೇ ಮಿಗಿಲೆಂದು ಪ್ರಕಟಿಸಿಕೊಳ್ಳುತ್ತದೆ.

ಆದರೆ ಇದು ಕರ್ಣ ಸಮರ್ಥನೆಯ ದ್ರೋಣ, ಕೃಪರ ಪ್ರತಿರೋಧವಷ್ಟೇ ಆಗದೆ ಆ ಕಾಲಘಟ್ಟದ ಪ್ರಭುತ್ವದ ಅಪೇಕ್ಷೆಯ ಅಭಿವ್ಯಕ್ತಿಯೂ ಹೌದು. ಯಾಕೆಂದರೆ ಅಂದಿನ ಬಹುತೇಕ ಅರಸು ಮನೆತನಗಳಿಗೆ ಶ್ರಮಮೂಲದ ಕೌಶಲ ಜಗತ್ತಿನ ಬೇರುಗಳಿವೆ. ಅವು ಬಲವನ್ನೇ ಆಧರಿಸಿ ಅಧಿಕಾರ ಮತ್ತು ಕುಲಮೌಲ್ಯ ಗಳಿಸಿವೆ. 'ಬೀರಮೆ ಕುಲ'ವೆಂಬ ದುರ್ಯೋಧನ ಹಾಗೂ 'ಅಣ್ಮು ಕುಲಂ' ಎಂಬ ಭೀಷ್ಮಪಟ್ಟಬಂಧ ಸಂದರ್ಭದ ಕರ್ಣನ

ಮಾತುಗಳಲ್ಲಿ ಆ ಚಾರಿತ್ರಿಕಸತ್ಯವಿದೆ. ಕ್ಷಾತ್ರದ ದಿಟ್ಟತೆಯಲ್ಲಿ ಬ್ರಾಹ್ಮಣ್ಯದ ಶ್ರೇಷ್ಠತೆಯ ನಿರಾಕರಣೆ ಇದೆ. ಅಷ್ಟೇ ಅಲ್ಲ, ಬೇಡನೊಬ್ಬನ ಕೈಯಲ್ಲಿ ಮತ್ತೊಂದು ರಾಮಾಯಣ (ಹಾವನೂರ ವರದಿ) ಬರೆಸಿ ಅಧಿಕಾರವಂಚಿತರ ಕೈಗೆ ಅಧಿಕಾರವಿತ್ತು ಸ್ವಾಭಿಮಾನತುಂಬಿದ ದೇವರಾಜ ಅರಸರಂತಹ ಧೀಮಂತ ಪ್ರಭುತ್ವಗಳನ್ನು ನೆನಪಿಸುವಂತೆ, 'ಕರ್ಣನನ್ನು ಕುಲಜನನ್ನಾಗಿ ಮಾಡಿ ತೋರಿಸುವ' ಪ್ರಭುತ್ವದ ಪ್ರತಿರಾಜಕಾರಣವಿದೆ. ಅಂಚನ್ನು ಕೇಂದ್ರಕ್ಕೆ ತರುವ ಕಲ್ಯಾಣ ಆರ್ಥಿಕತೆಗಾಗಿ ಪ್ರಭುತ್ವವು ನಡೆಸುವ ಪಟ್ಟಭದ್ರರ ಜೊತೆಗಿನ ಗುದ್ದಾಟವಿದೆ. ಹೀಗೆ ಈ ವಾದ ಮತ್ತು ಉಪಕ್ರಮಗಳಲ್ಲಿ ಚಾರಿತ್ರಿಕ ಸತ್ಯದೊಂದಿಗೆ ಕುಲವೆಂಬ ಕಲ್ಪಿತಕ್ಕೆ ಎದುರಾಗಿ ಪ್ರಭುತ್ವದ ಇಚ್ಛಾಶಕ್ತಿಯು ಕಟ್ಟಿತೋರಿದ ಪರ್ಯಾಯವಿದೆ. ಆದರೆ ಮುಂಚಲನೆಗೆ ಪ್ರತಿರೋಧಿಯಾದುದರಲ್ಲಿ ಈ ಮಾನವೀಯ ಉದಾರ ಮುಖವಿಲ್ಲ.

ಕುಲದ ಆಟಗಳಲ್ಲಿ ಅದರ ಯಥಾಸ್ಥಿತಿವಾದಿ ಯತ್ನಗಳನ್ನೂ ಪಂಪ ಅಷ್ಟೇ ಗಂಭೀರವಾಗಿ ಮುಂದಿಟ್ಟಿದ್ದಾನೆ. ಆ ಮೂಲಕ ಜಾತಿಯ ಪ್ರತಿರೋಧಗಳು ಬಯಸುವ ಮತ್ತು ತಡೆಯುವ ಚಲನೆಯ ಗತಿಯನ್ನು ತೋರಿದ್ದಾನೆ. ಕರ್ಣನಿಗೆ ಸರದಿ ಕಾಯಲು ಹೇಳುವ ಭೀಷ್ಮನ ಮಾತು ಈ ಹಿನ್ನೆಲೆಯಲ್ಲಿ ಗಮನಿಸಬೇಕಾದುದು. ಭೀಷ್ಮನನ್ನು ಕುರಿತ ಕರ್ಣನ ಆಕ್ಷೇಪಕ್ಕೆ ಕುದಿದ ದ್ರೋಣ ಕರ್ಣನ ಕುಲವನ್ನು ಹಳಿಯುತ್ತಾನೆ. ಇದಕ್ಕೆ ಪ್ರತಿಯಾಗಿ ದ್ರೋಣನ ಕುಲವ್ಯವಸನಕ್ಕೆ ಡಿಕ್ಕಿಯಾಗುವ ಬರದಲ್ಲಿ ಕರ್ಣ ಭೀಷ್ಮನ ಸೋಲು ಇಲ್ಲವೇ ಸಾವಿನ ತನಕ ಬಿಲ್ಲನ್ನೇ ಹಿಡಿಯಲಾರೆ ಎನ್ನುತ್ತಾನೆ. ಈ ಜಗಳದ ನಡುವೆ ಸುಮ್ಮನಿದ್ದ ಭೀಷ್ಮನೆಂಬ ಹಿರೀಕ, ಕರ್ಣನಲ್ಲಿ ಕಲಿತನದ ಉರ್ಕು, ಜವ್ವನವ ಸೊರ್ಕುಗಳನ್ನು ಕಂಡನಲ್ಲದೆ, ದ್ರೋಣನಲ್ಲಿ ದೋಷವನ್ನೇ ಕಾಣದಾದ!? ಅಷ್ಟೇ ಅಲ್ಲ, ನಾವೆಲ್ಲರೂ ನಮ್ಮ ಸರದಿ ಕಾಯಬೇಕೆಂಬ ಮೂಲಕ ಪರೋಕ್ಷವಾಗಿ ವೈದಿಕದ ಕರ್ಮಸಿದ್ಧಾಂತವನ್ನೇ ಮಂಡಿಸಿದ. ಬ್ರಾಹ್ಮಣ್ಯವನ್ನು ವಿಮರ್ಶಿಸದೆ, ಕೆಳತುದಿಯ ಶೂದ್ರಕರ್ಣನನ್ನು ಕುಟುಕಿದ. ವಯೋವೃದ್ಧ, ಜ್ಞಾನವೃದ್ಧನಾಗಿಯೂ ಮೇಲ್ತುದಿಗೆ ಮೌನವಾಗಿ ತಳವರ್ಣದ ಕರ್ಣನನ್ನಷ್ಟೇ ಅಣಕವಾಡಿದ ಪಾಳೇಗಾರಿ ನಡೆಯಲ್ಲಿ ತಲೆಯ ಮೇಲಿನ ಕಾಲನ್ನಲ್ಲ, ಕಾಲಡಿಯ ತಲೆಯನ್ನಷ್ಟೇ ಪಳಗಿಸಲು ನೋಡಿದ.

ನಾನೆಂಬುದೇ ಪ್ರಮಾಣ

ಕುಲವೆಂಬುದು ಮೂಲತಃ 'ನಾನು' ಎಂಬ ಉತ್ತಮಪುರುಷವು ಅವನು, ನೀನು ಎಂಬ ಪ್ರಥಮ ಇಲ್ಲವೇ ಮಧ್ಯಮ ಪುರುಷಗಳಿಂದ ಬೇರಾಗುವ ವಿಂಗಡನೆ. ಹಾಗಾಗಿ ಅದು ಮೂಲತಃ ಒಳಗೊಳ್ಳುವಿಕೆಯಲ್ಲ, ಹೊರಗಿಡುವಿಕೆ. ಅಧಿಕಾರದಿಂದ ಹೊರಗಿಡುವಿಕೆ. ಅದೊಂದು ಪಕ್ಕಾ ರಾಜಕಾರಣ. ಈ ಕುಲಕೋಶವು ಎಚ್ಚರಾಗುವ ಸಂದರ್ಭಗಳನ್ನು

ಪಂಪನ ಭಾರತ ಅತ್ಯಂತ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದೆ. ನಾನು ಎನ್ನುವುದರ ಜೊತೆ ಮತ್ತಷ್ಟು ತೂಕದೊಂದಿಗೆ ಬೆರೆಯುವ ಮತ್, ಎಮ್ಮ ಎನ್ನುವ ಬಹುವಚನಗಳನ್ನೂ ಕಾಣಿಸಿದೆ. ಹಾಗಾಗಿ 'ನಾನು' ಎಂಬ ಆತ್ಮಾರ್ಥಕ ಸರ್ವನಾಮವೇ ಕುಲವಾದದ ಬೆನ್ನೆಲುಬು. ಇಲ್ಲಿ 'ನಾನೇ' ಪ್ರಮಾಣ. ನಾನು ಮತ್ತು ನೀನು/ಅವನು ಎಂಬ ಎದುರಾಳಿಗಳಲ್ಲಿ ಅವನು ಮತ್ತು ನೀನುಗಳ ತೂಕ ಸಿದ್ಧವಾಗುವುದೇ 'ನಾನು' ಎನ್ನುವ ಪ್ರಮಾಣದ ಆಧಾರದ ಮೇಲೆ.

ಮುಖ್ಯವಾದ ಕೆಲವು ಸಂದರ್ಭಗಳನ್ನು ಗಮನಿಸುವುದಾದರೆ ಕೃಷ್ಣ ಹೇಳುವ ಕರ್ಣನ ಜನ್ಮರಹಸ್ಯದಲಿ ಪ್ರಸ್ತಾಪವಾಗುವ ಸತ್ಯಂತಪ ಋಷಿಗಳ ವೃತ್ತಾಂತದಲ್ಲಿ ದುರ್ಯೋಧನ ತನಗಿಂತ ಕರ್ಣನಿಗೆ ಮೊದಲಮಣೆ ನೀಡಿದ್ದಕ್ಕೆ ಅಸಮಾಧಾನಿತನಾಗಿ, "ಆನಿರೆ ನಿಮಿದೇಕೆ ದಯೆಗೈದಿರೋ ಮೀಂಗುಲಿಗಂಗೆ?"(ಪಂ.ಭಾ,೯–೬೭) ಎಂದು ಕುಲಾಧಾರಿತ ಶ್ರೇಷ್ಠತೆಯನ್ನೇ ನೆನಪಿಸುತ್ತಾನೆ. ಹಾಗೆಯೇ ಕಳಶಜನಿಂ ಬಳಿಕ್ಕೆ ಕರ್ಣಂಗೆ ಎಂದ ಪಟ್ಟವನ್ನು ಅಶ್ವತ್ಥಾಮನಿಗೆ ಹೇಗೆ ಕಟ್ಟಲಿ ಎಂದು ಅಸಹಾಯಕತೆ ವ್ಯಕ್ತಪಡಿಸಿದ ದುರ್ಯೋಧನನಿಗೆ, "ಬೀರವಟ್ಟಮನ್ ಆನಿರೆ ನೀನೀ ಸೂತ ಸುತಂಗೆ ಎಡೆಗೊಂಡು ಕೈವಾರದಿಂದ ಒಸೆದಿತ್ತೊಡಂ ಏನಾಂಯ್ತು?' ……ಈ ಖಳನ್ ಇಲ್ಲಿ…………ಅಟ್ಟಾಡಿದೊಡಲ್ಲದೆ ವೈರಿಸಂಹಾರಕಾರಣ ಚಾಪಮನ್ ಆನ್ ಈ ಸಂಗರದೊಳ್ ಪಿಡಿಯೆಂ ಗಡಾ."(ಪಂ.ಭಾ, ೧೨–೪೩) ಎಂದು ತನ್ನ ಸರದಿಯ ಉಲ್ಲಂಘನೆಗೆ ಅಶ್ವತ್ಥಾಮ ಕಿಡಿಕಾರುತ್ತಾನೆ. ಅಷ್ಟೇ ಅಲ್ಲ, ಪುರಾಣ, ಚರಿತ್ರೆಗಳ ಪಾರಂಪರಿಕ ಸರಕನ್ನು ಝಳಪಿಸಿ ಹಿನ್ನೆಲೆಯಿಲ್ಲದವರ ಬಾಯಿ ಮುಚ್ಚಿಸುವ ಗ್ರೇಟ್ ಹೆರಿಟೇಜ್‌ನ ವಾರಿಸುದಾರನಂತೆ, "ಪಗೆಯಂದಮುಂ ಆ ರಾಮರ್ ಪಗೆಯೊಳ್ ಸಮಂ. ಅವರ ಪಿಡಿವ ಬಿಲ್ ಬಿಲ್. ಎಮ್ಮಂಬುಗಳುಂ ಅವರಿತ್ತ ನಲ್ಲಂಬುಗಳ್" (ಪಂ.ಭಾ,೧೨–೩೯) ಎಂದು ಹಿರಿಮೆ ಹೇಳಿಕೊಳ್ಳುತ್ತಾನೆ. ಇನ್ನು 'ಮತ್' ಎಂಬುದರ ಅಸಮಾಧಾನ, ನಿರಾಸೆಯ ಇನ್ನೊಂದು ಉದಾಹರಣೆಯಾಗಿ ಕರ್ಣಸಾರಥ್ಯಕ್ಕೆ ಕೋರಿದ ದುರ್ಯೋಧನನಿಗೆ ಪ್ರತಿಕ್ರಿಯಿಸುವ ಶಲ್ಯಪ್ರಸಂಗವಿದೆ. ಇಲ್ಲಿ ವರ್ಣವ್ಯವಸ್ಥೆಯನ್ನೇ ತಿರುವುಮುರುವು ಮಾಡಿದ ವಿಪರೀತವೆಂಬಂತೆ ಶಲ್ಯ ತಳಮಳಿಸುತ್ತಾನೆ. ದುರ್ಯೋಧನ ಯಾರಿಗೂ ಕೊಡದ ಉದ್ಯೋಗವನ್ನೇ ತನಗೆ ಕೊಟ್ಟಿದ್ದಾನೆಂದು ವ್ಯಂಗ್ಯವಾಗಿ, "ಪಿಂದೆ ಕಡಂಗಿ ತೇರನೆಸಗೆಂಬವನ್ ಅಂಬಿಗನ್, ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸೆದಿರ್ಪವನುಂ ತುಱುಕಾಱನ್ ಆಗೆ ಮತ್ ಸ್ಯಂಧನ ಚೋದನಕ್ರಮಂ ಅದುಂ ಪೊಲೆಯಂಗೆ ಅಮರ್ದಿರ್ಕುಂ" (ಪಂ.ಭಾ,೧೨–೯೪) ಎನ್ನುತ್ತಾನೆ. ಇಲ್ಲಿ ಶಲ್ಯನ ಮಾತಲ್ಲಿರುವ ಮತ್/ನನ್ನ ಎಂಬುದರ ಸಂಕಟ/ತೊಳಲಾಟವನ್ನು ಗಮನಿಸಬೇಕು.

ಇವೆಲ್ಲವೂ ಕುಲಚೌಕಟ್ಟುಗಳ ಮೇರೆಗೆ ಯಾರಿಗೆ ಅಧೀನವಾಗಬಹುದು ಮತ್ತು ಯಾರಿಗೆ ಅಧೀನವಾಗಕೂಡದು ಎಂಬಲ್ಲಿ 'ನಾನು' ಎಂಬ ಪ್ರಮಾಣದ ಸಮ್ಮತಿ ಮತ್ತು ನಿರಾಕರಣಗಳು.

ಪುರಾಣದ ಈ ಕಥೆಯ ಜೊತೆಗೆ ಚರಿತ್ರೆಯನ್ನೂ ಸೇರಿಸಿಕೊಂಡು 'ನಾನೆಂಬ' ಈ ಪ್ರಮಾಣವು ಹೇಗೆ ವರ್ತಿಸಿದೆ? ಈ ನಾನು, ನನ್ನದು ಯಾಕಾಗಿ ಹೋರಾಡಿದೆ? ಅದರ ಆತ್ಯಂತಿಕ ಗುರಿಯಲ್ಲಿ ದೇಶ, ನೆಲ ಅಥವಾ ಸ್ವಾಮಿಹಿತವಿತ್ತೇ? ಎಂಬ ಪ್ರಶ್ನೆಯನ್ನಿಟ್ಟು ಹುಡುಕಿದರೆ ಪ್ರಾಯಶಃ ನಿರಾಸೆಯೇ ಎದುರಾಗುತ್ತದೆ. ಯಾಕೆಂದರೆ ಅದಕ್ಕೆ ತನ್ನ ಅಸ್ತಿತ್ವದ ಕಾಳಜಿ ಹೊರತಾಗಿ ಮಿಕ್ಕೆಲ್ಲವೂ ಗೌಣ. ಅದನ್ನು ಚರಿತ್ರೆ ಮತ್ತೆ ಮತ್ತೆ ಸಾಕ್ಷಿ ತೋರಿ ದೃಢೀಕರಿಸಿದೆ. ಯಾವ ಪೂರ್ವಗ್ರವಿಲ್ಲದೆ ಸಮಾಜವನ್ನು ಒಡೆದು ಹಿತಾಸಕ್ತಿಯನ್ನಷ್ಟೇ ಮುಖ್ಯವಾಗಿಸಿಕೊಂಡ ಕುಲವಾದಿಗಳೇ ಆಳಿದ ಈ ದೇಶ ಹೇಗೆಲ್ಲಾ ಯಾರ್ಯಾರ ದಾಳಿಗೆ ಗುರಿಯಾಯಿತು ಎಂಬುದನ್ನು ಪರಿಶೀಲಿಸಿದರೆ ಈ ಸತ್ಯ ಬೆತ್ತಲಾಗಿಯೇ ಮೈದೋರಿಕೊಳ್ಳುತ್ತದೆ. ಅಂದಿನಿಂದ ಇಂದಿನವರೆಗೆ ಈ 'ನಾನು' ಮಾಡಿದ ಮತ್ತು ಮಾಡುತ್ತಿರುವ ಅನಾಹುತ ಕಾಣಿಸುತ್ತದೆ. ಪಂಪನ ಭಾರತ ಈ ಚರಿತ್ರೆಯ ಸತ್ಯ ಹಾಗೂ ವರ್ತಮಾನದ ವಾಸ್ತವವನ್ನು ಪುರಾಣಕಥೆಯ ಕನ್ನಡಿಯಲ್ಲಿ ತೋರಿದೆ. ಹಿರಿಮೆಯ ಹೆಚ್ಚುಗಾರಿಕೆಯ ಕಥೆಯಲ್ಲಿಯೇ ಮೆರೆದ ಈ 'ನಾನು' ನೀನುವಿನ ಜೊತೆಗೆ ಕರಗದೇ ಹೋದುದರಿಂದ ಇಡಿಯ ಕೌರವ ಸೇನೆ ಕರಗಿತು ಮಾತ್ರವಲ್ಲ ಇಷ್ಟೊಂದು ಅಗಾಧಪ್ರಮಾಣದ ಮಾನವ ಹಾಗೂ ನೈಸರ್ಗಿಕ ಸಂಪನ್ಮೂಲವಿರುವ ದೇಶವೂ ಸೊರಗಿತು ಎಂಬುದನ್ನು ಮರೆಯಬಾರದು.

ಅಶ್ವತ್ಥಾಮನದು ಕುಲದ ಸೊಕ್ಕಿನ ಪ್ರತಿರೋಧ. ತನಗೆ ಅವಕಾಶವಾಗಲಿಲ್ಲ ಎಂಬುದನ್ನು ಬಿಟ್ಟು ಅಲ್ಲಿ ದುರ್ಯೋಧನ ಗೆಲ್ಲಲಿ ಎಂಬುದಿತ್ತಂತಿಲ್ಲ. ಆನಿರೆ? ನೀನು ಕರ್ಣನಿಗೆ ಯಾಕೆ ಕಟ್ಟಿದೆ? ಎಂಬುದಷ್ಟೇ ಆತನ ಆಕ್ಷೇಪ. ಆತ ಭೀಷ್ಮನ, ದ್ರೋಣನ ಮುಂದೆ ಶಲ್ಯನ ಪಟ್ಟಸಂದರ್ಭಗಳಲ್ಲಿ ಈ ಆಕ್ಷೇಪವನ್ನು ಎತ್ತಿಲ್ಲ. ಅವರೆಲ್ಲರೂ ಸಿಡಿಯುವುದು ಕರ್ಣನ ವಿಚಾರದಲ್ಲೇ ಎಂಬುದನ್ನು ಗಮನಿಸಿ. ಪ್ರಾಯಶಃ ಪಾರಂಪರಿಕ ಮೀಸಲಾತಿಯನ್ನೇ ಅನುಭವಿಸಿದ ಈ ರೂಪಗಳು ಕಲ್ಯಾಣ ಮಾದರಿಯ ಕಾರ್ಯಕ್ರಮಕ್ಕೆ ಹೇಗೆ ತಡೆಯೊಡ್ಡುತ್ತಾ ಬಂದಿವೆ ಎಂಬ ಚರಿತ್ರೆಯ ನೆರಳೇ ಇಲ್ಲಿದೆ. ಅಕ್ಷರ ದಾಸೋಹದ ಸಂದರ್ಭ, ಅನ್ನದ ತಟ್ಟೆಗೆ ಬಿದ್ದ ಮೊಟ್ಟೆ ಇಲ್ಲೆಲ್ಲಾ ಆದ ಪ್ರತಿರೋಧವನ್ನು ಗಮನಿಸಿ. ಅಂಚಿಗೆ ಸಿಗುವ ಯಾವ ಅವಕಾಶವನ್ನೂ ಸಹಿಸದವರು ಒಡ್ಡುತ್ತಾ ಬಂದ ಪ್ರತಿರೋಧವಿದು. ಅಧಿಕಾರದ ಯಾವ ಸಣ್ಣ ಅವಕಾಶವೂ ತಮ್ಮ ಕೈತಪ್ಪಿ ಹೋಗದಂತೆ ಕಾಯುವ ಕಾವಲಿದು. ಪಂಪ ಯಾಕೆ ದೊಡ್ಡವನು ಎಂದರೆ ಆತ ಕೇವಲ ಕರ್ಣನ ಮೂಲಕ ಅವಖಾಶವಂಚಿತರ

ದನಿ ಕೇಳಿಸಿದ್ದಷ್ಟೇ ಅಲ್ಲ, ಆ ದನಿಗಳಿಗೆ ಎದುರಾದ ದಾಳಿಯ ದನಿಗಳನ್ನೂ ಕಟ್ಟಿಕೊಟ್ಟಿದ್ದಾನೆ. ಕುಲದ ನೆಲೆಯ ಪ್ರತಿರೋಧಗಳು ಕೇವಲ ಮೇಲ್ಮುಖ ಚಲನೆ ಮಾತ್ರವಲ್ಲ, ಹಿಮ್ಮುಖ ಚಲನೆಯೂ ಹೌದು. ಪಂಪ ಈ ಕಾವಲು ಪಡೆಯ ಸಂಘಟಿತ ಯತ್ನವನ್ನು ಇನ್ನಷ್ಟು ಮೊನಚಾಗಿ ಕಟ್ಟಿಕೊಟ್ಟಿದ್ದಾನೆ.

ನಿಜದೊಳೆ ಭೂಪರೆಂಬರ್ ಅವಿವೇಕಿಗಳ್

ಇತಿಹಾಸವೆಂಬ ನಿಡುಬರಗಾಲದಲ್ಲಿ ತಳವರ್ಗಗಳಿಗೆ ಅಪರೂಪದ ಮಳೆಹನಿಗಳಷ್ಟೇ ದಕ್ಕಿವೆ. ಅಲ್ಲಿ ಸಾಸಿವೆಯ ಸುಖಕ್ಕೆ ಸಾಗರದಷ್ಟು ದುಃಖವುಂಡ ಬಾಳಿಗೂ ನಂಜುಕಾರಿದ ನಂಜಿನ ಉರಿಗಳಿವೆ. 'ರಾಜಾನಾಂ ಪ್ರತ್ಯಕ್ಷ ದೇವತಾ' ಎಂಬ ಲೋಕಹಿತದ ಮಾತಿನಡಿಗೆ ದೇವರ ಕರುಣೆಯ ಕಣ್ಣು ಕಿತ್ತು ಕುರುಡಾಗಿಸಿದ ಕೈಗಳಿವೆ. ಹುಟ್ಟಿನ ಹುಟ್ಟು ಹಾಕಿದ ನಾವೆಯಾಚೆಗೆ ಕೈಚಾಚಿ ಮಿಕ್ಕವರನ್ನೂ ಒಳಕರೆವ ಔದಾರ್ಯವನ್ನು ಅವಿವೇಕವೆಂದುದಿದೆ. ಅನಿಯಂತ್ರಿತ ಅಧಿಕಾರಕ್ಕೆ ಆಪತ್ತೊದಗುವ ಭಯದಲ್ಲಿ ಹೊರಗಿದ್ದುದು ಒಳಬರದಂತೆ ಕಾವಲು ಕಾದುದಿದೆ. ಈ ಎಚ್ಚರದ ಕಾವಲನ್ನು ಕುರಿತು ಪ್ರಸ್ತಾಪಿಸುತ್ತಾ, "ಇಂಡಿಯಾದ ಆಳುವ ವರ್ಗವು ತನಗಿರುವ ವಿಶೇಷ ಸೌಲಭ್ಯ, ಅಧಿಕಾರಗಳನ್ನು ಬಿಟ್ಟುಕೊಡಲು ನಿರಾಕರಿಸುವುದಷ್ಟೇ ಅಲ್ಲ. ಅದು ಶ್ರಮಿಕವರ್ಗದ ರಾಜಕೀಯ ಬೇಡಿಕೆಗಳ ಬಗ್ಗೆ ಕುಚೋದ್ಯದ ಮಾತುಗಳನ್ನಾಡಿ ಹಂಗಿಸುವ ಅವಕಾಶಗಳನ್ನು ಚನ್ನಾಗಿ ಉಪಯೋಗಿಸಿಕೊಳ್ಳುತ್ತದೆ" (ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ: ೯, ೧೯೯೮, ಪು:೨೫೫) ಎನ್ನುತಾರೆ ಅಂಬೇಡ್ಕರ್. 'ಕರ್ಣರಸಾಯನ'ದ ಭಾರತಬಿತ್ತಿಯಲ್ಲಿ ಪಂಪ ಇತಿಹಾಸದ ಈ ಮುಖ್ಯವಾದ ಎಳೆಯನ್ನು ಕಾವ್ಯದುದ್ದಕ್ಕೂ ಎಳೆದು ತಂದಿದ್ದಾನೆ.

ಪಂಪಭಾರತದ ಕರ್ಣನದು ವಿಶೇಷವಾದ ಪಾತ್ರ. ಅದು ಬೆಳ್ಳಾಳಂತೆ ಬೆವರುವಲ್ಲಿ ಮಾತು ಹುಟ್ಟಿದ ಬಹುದೊಡ್ಡ ಜಿಗಿತ. ಕಲ್ಯಾಣರಾಜ್ಯದ ಸಬಲೀಕರಣದ ಮುಂಚಲನೆಯ ಫಲಾನುಭವಿಯಂತೆ 'ಮೂಕನಿಗೆ ಬಾಯಿಬಂದ' ಮಾದರಿ. ಅಧಿಕಾರದ ಪಾಲುದಾರಿಕೆ, ಪಾಲ್ಗೊಳ್ಳುವ ಆನಂದದಲ್ಲಿ ತಲೆಯೆತ್ತಿ ನಡೆದ ನಡೆ. ಅನಿಯಂತ್ರಿತ ಅಧಿಕಾರಕ್ಕೆ ಎದುರಾದ ಆತಂಕ. ಸಾಮಾನ್ಯರ ಪ್ರತಿನಿಧೀಕರಣದಲ್ಲಿ ಮೂಡಿದ ನೆಲದ ದನಿ. ನೆಲದ ಪೈರುಕೊಯ್ದು ಮಾತು ಕತ್ತರಿಸಿದ ಕೈಗಳು ಈ ಹೊಸನುಡಿಗೆ ಬೆದರಿವೆ. ಅದನ್ನು ಹಿಸುಕಿ ಹಾಕಲು ಕಾತರಿಸಿವೆ. ಹಾಗಾಗಿ ಈ ಮುಂಚಲನೆಗೆ ಸತತ ಪ್ರತಿರೋಧ ಒಡ್ಡುತ್ತಲೇ ಬಂದಿವೆ. ಪ್ರಾಯಶಃ ನಮಗೆ ಪ್ರತಿರೋಧ ಎಂದಾಗಲೆಲ್ಲಾ ಮೇಲ್ಮುಖವಾಗಿ ಸಿಡಿಯುವ ಸಿಡಿತಗಳಷ್ಟೇ ಅಲ್ಲ, ಒಳಗೇ ಉರಿದು ಬೂದಿ ಮಾಡುವ ಒಲೆಯೊಳಗಿನ ಬೆಂಕಿ ಕಾಣಿಸಬೇಕು.

ಕೆಳಗಿನಿಂದ ಮೇಲೇಳುವ ತಲೆಗಳನ್ನು ಕೆಳಗೊತ್ತುವ ಖಾಲುಗಳು ಒಡ್ಡುವ ಪ್ರತಿರೋಧಗಳ ಕುರಿತು ಅರಿವಿರಬೇಕು. ಹಕ್ಕು ಕೇಳುವವರ ಅಗತ್ಯದ ಮಾತು ಮತ್ತು ನಿರಾಕರಣೆಗಳ ನಡುವಣ ತಿಕ್ಕಾಟ ಗಮನದಲ್ಲಿರಬೇಕು. ಹೇಗೆ ನಾಲ್ಮಡಿ ಕೃಷ್ಣರಾಜ ಒಡೆಯರು ಮಿಲ್ಲರ್ ಕಮಿಷನ್ ತಂದಾಗ ಪ್ರತಿರೋಧ ಎದುರಿಸಿದರು? ಹೇಗೆ ದೇವರಾಜ ಅರಸರು ಹಾವನೂರು ವರದಿ ಜಾರಿಮಾಡಿಸಿ ಅಪಪ್ರಚಾರ ಅನುಭವಿಸಿದರು? ಮಂಡಲ್ ಕಮಿಷನ್ ಜಾರಿಮಾಡಲು ಹೊರಟ ವಿ.ಪಿ ಸಿಂಗ್ ಯಾವ ಪ್ರತಿಕ್ರಿಯೆಯನ್ನು ಪಡೆದರು? ವರ್ತಮಾನ ಕಾಲದ ಸಾಮಾಜಿಕ ಆರ್ಥಿಕ ಸಮೀಕ್ಷೆಯ ಬಗೆಗೆ ಯಾರು ಬೆಂಕಿಯುಗುಳುತ್ತಿದ್ದಾರೆ? ಯಾರು ಮಿಲ್ಲರ್ ಕಮಿಷನ್ ಜಾರಿಗೆ ಪ್ರತಿರೋಧವಾಗಿ ರಾಜಿನಾಮೆಯನ್ನು ಬರೆದಿಟ್ಟು ಚರಿತ್ರೆಯ ಪುಟ ಸೇರಿದರು? ಆ ಚರಿತ್ರೆಯನ್ನು ನೆನಪಿಸದೆ ಉಳಿಯುವ ಜಾಣ್ಮನವನ್ನು ಯಾರು ಮಾಡಿದರು? ಈ ಜಾಣ್ಮನಕ್ಕೆ ಬೇರೆ ಬೇರೆ ವಿಧಗಳಲ್ಲಿ ಯಾರು ಸಹತಾಳ ಹಾಕಿದರು? ಹಾಗೆ ತಾಳಹಾಕಿದವರು ಈ ಸಮಾಜವೆಂಬ ಕಟ್ಟಡದ ಯಾವ ಮಹಡಿಯಲ್ಲಿದ್ದರು? ಎಂಬುದನ್ನು ಗಮನಿಸಿಕೊಂಡರೆ ಪ್ರತಿರೋಧದ ಬೇರೆಯದೇ ಆದ ಮುಖ ಖಂಡಿತವಾಗಿಯೂ ಕಾಣಿಸುತ್ತದೆ. ಪಂಪನ ಭಾರತ ಅದನ್ನು ಕರ್ಣನೆಂಬ ಪುಟದಲ್ಲಿ ಅಚ್ಚುಕಟ್ಟಾಗಿ ದಾಖಲಿಸಿದೆ.

ಅವಕಾಶದಿಂದ ಹೊರಗಿಡುವ ಯತ್ನಗಳು ಕರ್ಣನನ್ನು ಎಳವೆಯಿಂದಲೇ ಬೆನ್ನಟ್ಟುತ್ತವೆ. ಆತನ ಮೈಗವಚವನ್ನು ಇಂದ್ರ ದಾನದ ಹೆಸರಲ್ಲಿ ಅಪಹರಿಸಿದ. ಕಲಿತ ವಿದ್ಯೆಯು ಫಲಿಸದಿರಲಿ ಎಂದು ಕಲಿಸಿದಾತನೇ ಶಪಿಸಿದ. ತಾಯಿ ಪುರಿಗಣೆಯನ್ನು ಬಳಸದಂತೆ ಬೇಡಿದಳು. ಆಯಕಟ್ಟಿನ ಘಳಿಗೆಯಲ್ಲಿ ಕೃಷ್ಣ ಸಂಬಂಧದ ಎಳೆ ಚಾಚಿ ಹುಟ್ಟಿನ ಗುಟ್ಟಲ್ಲಿ ಮನದ ಕದವನ್ನೇ ಮುರಿಯಲೆತ್ನಿಸಿದ. ದ್ರೋಣ, ಕೃಪ, ಅಶ್ವತ್ಥಾಮರು ಒಬ್ಬರನ್ನೊಬ್ಬರು ಹಿಂಬಾಲಿಸಿ ಕುಲದ ಕೆಸರನ್ನು ಎಸೆದು ನಿತ್ಯಫಲಕವನ್ನು ತೋರಿದರು. ಆತನ ಮಾತಲ್ಲಿ 'ಕುಲವನ್ನು ತುಬ್ಬುವ ನಾಲಗೆ" ಹುಡುಕಿದರು. ಈ ಸೂತಜ, ಅಂಬಿಗ, ಕುಲಹೀನ ಅಧಿಕಾರಕ್ಕೆ ಅಯೋಗ್ಯನೆಂದೇ ಚೀರಿದರು. ಅಷ್ಟೇ ಅಲ್ಲ, ನೆಲ ಮತ್ತು ಗೆಳೆತನದ ನೆಲೆಗೊಟ್ಟು ಕೈಹಿಡಿದ ಅಧಿಕಾರದ ತಾಯ್ತನವನ್ನೂ ಸಹಿಸಲಿಲ್ಲ. "ನಿಜದೊಳೆ ಭೂಪರೆಂಬರ್ ಅವಿವೇಕಿಗಳಪ್ಪರ್" ಎಂದು ಕರುಣೆಯನ್ನೂ ಅವಿವೇಕವೆಂದರು. ಸಾವಿನ ನಂತರವೂ ಅರಸನ ಅಳುವನ್ನು 'ಅಂಬಿಗನೊಳಾದುದಿದು ಋಣಸಂಬಂಧಂ' ಎಂದು ಗೇಲಿ ಮಾಡಿದರು. ಹೀಗೆ ಹೆಜ್ಜೆ ಹೆಜ್ಜೆಗೂ ಕುಲವನ್ನೇ ಬೇಟೆಯಾಡಿದ ಬೇಟೆಗಾರರಿಗೆ ಮಾತು ಕಲಿತ ಕರ್ಣ ಉತ್ತರಿಸುತ್ತಲೇ ಬಂದ. 'ನಿಮ್ಮ ಕುಲ ವಾಕುಲವನ್ನುಂಟು ಮಾಡುಗುಂ' ಎಂದ. 'ವಿಷಮೊಳ್ಳೆಗುಳ್ಳೊಡಂ ಅದು ಒಳ್ಳೆಯೆ ಕಾಳಿಯ ನಾಗ' ಅಲ್ಲ ಎಂದು ತಿರಸ್ಕರಿಸಿದ. ದೋಣಿಯೇರಿದ ಪರಾಶರನಿಗೆ ಸೊಲ್ಲುಸತ್ತ ಬೆಸ್ತರಹೆಣ್ಣಿನಂತೆ

ಈ ರಾಧೆಯ ಮಡಲಿನ ಬೆಸ್ತರ ಹುಡುಗ ಬಾಯಿಮುಚ್ಚಲಿಲ್ಲ. ಆತ ಮಾತಾಡುತ್ತಲೇ ನಡೆದ. ಆತನ ಆಗ್ರಹಕ್ಕೆ ಸಾಮಾಜಿಕ ಅಧಿಕಾರ ಆತಂಕಗೊಂಡಿತು. ಸಂಖ್ಯೆ ಇಲ್ಲವಾದರೂ ಅದಕ್ಕೆ ಸಂಘವಿತ್ತು, ಸಂತತಿಯ ಸರದಿಯಿತ್ತು. ಅಲ್ಲಿ ಅಪ್ಪ ಹೊತ್ತುದನ್ನು ಮಗ ಹೆಗಲಿಗೇರಿಸಿ ನಡೆದ. ಅಪ್ಪ ಆಡಿದ್ದನ್ನೇ ಮಗ ಮತ್ತಷ್ಟು ಒರಟಾಗಿಸಿದ. ಹೀಗೆ ಅಧಿಕಾರದ ಮೇಲಿನ ಅಗೋಚರ ಅಧಿಕಾರವು ಕುಸಿತದ ಕನಸಿಗೆ ಬೆಚ್ಚಿದಂತೆ ಮತ್ತಷ್ಟು ಪೆಡಸಾಯ್ತು. ಸಾವಿರಕ್ಕೆ ಸಮವೆಂಬ ಭ್ರಮೆಯನ್ನು ಬಿತ್ತಿ ಬೆಳೆದುದು ಸಾವಿರದಲ್ಲೊಂದಾಗಲು ನಿರಾಕರಿಸಿ ಹಿಮ್ಮುಖವಾಗಿಯೇ ನಡೆದು ಕುಲವೆಂಬ ಕುಲುಮೆಯನ್ನೇ ಕನವರಿಸಿತು. ತನ್ನ ಕಾವಲಿಗೆ ನಿಲ್ಲದ ಅಧಿಕಾರವನ್ನು ಅವಿವೇಕಿ ಎಂದೇ ಜರೆಯಿತು. ಅದರ ಈ ನಡೆ ಚರಿತ್ರೆಯಷ್ಟೇ ಅಲ್ಲ, ವರ್ತಮಾನವೂ ಹೌದು.

ಅಕ್ಷರದ ಕಾವಲುಕೋಟೆ ಮತ್ತು ಬಿರುಕು

ಪಂಪನ ಭಾರತದಲ್ಲಿ ಪರಾಶರನ ಪ್ರಕರಣ ಹಾಗೂ ದ್ರುಪದ–ದ್ರೋಣರ ಮುಖಾಮುಖಿಯನ್ನು ಹೊರತುಪಡಿಸಿ ಬಹುಮುಖ್ಯವಾಗಿ ಅನಿಯಂತ್ರಿತ ಅಧಿಕಾರದ ಕಾವಲಿಗಾಗಿ ಟೊಂಕಕಟ್ಟಿ ನಿಂತು ಗುದ್ದಾಡುವ ಬಳಗವು ವ್ಯಕ್ತಿಗತ ಮತ್ತು ಸಾಂಘಿಕ ಎಂಬ ಎರಡೂ ನೆಲೆಯಲ್ಲಿ ಹೋರಾಡಿದೆ. ಅಧಿಕಾರದ ಅವಕಾಶಕ್ಕೆ ತನ್ನ ಅನುಮತಿಯಿರದ ವರ್ಗವು ಪ್ರವೇಶಿಸದಂತೆ ತಡೆದಿದೆ. ಅದು ಹಾಗೆ ಕಾದುಕೊಂಡ ಅಧಿಕಾರದ ಅತ್ಯಂತ ಆಯಕಟ್ಟು ಅವಕಾಶವೆಂದರೆ ಅಕ್ಷರ ಅಥವಾ ವಿದ್ಯೆ. ಇಲ್ಲಿಗೆ ತಳವರ್ಗವು ಪ್ರವೇಶವೇ ಆಗದಂತೆ ಅದು ನಿರಂತರ ಎಚ್ಚರವಹಿಸಿದೆ. ಇದರ ಭಾಗವಾಗಿ ಆ ಆವರಣದಿಂದಲೇ ದೂರ ಇಡುವ ಜೊತೆಗೆ ಅಲ್ಲಿಗೆ ಹೇಗೋ ತಲುಪಿದವರು ಒಳಬರದಂತೆ ಬಾಗಿಲನ್ನೇ ಮುಚ್ಚುವ ಯತ್ನಗಳನ್ನೂ ಅದು ಚಾಲ್ತಿಯಲ್ಲಿರಿಸಿದೆ. ಪ್ರಾಯಶಃ ಚರಿತ್ರೆಯ ಉದ್ದಕ್ಕೂ ಸಾಗಿಬಂದ ತಳಸಮುದಾಯಗಳ ಮುಂಚಲನೆಯ ತುಡಿತದಂತಿರುವ ಕರ್ಣನಿಗೆ ಈ ಕಾರಣಕ್ಕಾಗಿಯೇ ನಿರಾಕರಣಗಳು ಎದುರಾಗುತ್ತವೆ. ಅಷ್ಟೇ ಅಲ್ಲ, ಅಲ್ಲಿ ಕಲಿತ ವಿದ್ಯೆ ಅಗತ್ಯದ ಘಳಿಗೆಯಲ್ಲಿ ಕೈಗೂಡದಿರಲಿ ಎಂದು ಅಮಾನವೀಯವಾಗಿ ಶಪಿಸುವ ಪರಶುರಾಮ ಸಿಗುತ್ತಾನೆ. ವಾಸ್ತವದಲ್ಲಿ ಇದು ಬರಿಯ ಪುರಾಣವಲ್ಲ. ನೆಲದ ಕಥೆ. ಕಲಿಸುವ ಗುರುವೇ ಜಾತಿಯ ಹೊಂಡದಲ್ಲಿ ಮುಳುಗಿ ನಿನಗೆ ತಾನು ಕಲಿಸಿದ್ದು ಫಲಿಸದಿರಲಿ ಎಂದು ಶಪಿಸುವ ವಿಚಿತ್ರ. ಮಾನಸಿಕವಾಗಿ ಆತನನ್ನು ಕುಗ್ಗಿಸುವ ಈ ಮಾದರಿ ಜಗತ್ತಿನ ಯಾವ ಮೂಲೆಯಲ್ಲೂ ಸಿಗಲಾರದು! ಮೂರ್ತಿತ್ರಯರಿಗೆ ಸಮನಾಗಿ 'ಗುರುವೆಂಬ' ದೈವಪದವಿಯಲ್ಲಿ ಕುಳಿತವನದೂ ಜಾತಿ ಮನಸ್ಸಾಗಿ ಉಳಿದುಬಿಡುವುದಿದೆಯಲ್ಲಾ ಅದು ದುರಂತ, ಆದರೆ ಸತ್ಯ. ಪ್ರತಿಭೆಯ ಕಥೆ ಹೇಳುವವರ ಕಥೆ ಇದು. ನಮ್ಮ ಅಕ್ಷರದ ಇತಿಹಾಸದಲ್ಲಿ ಮೈಮರೆಸಿಕೊಂಡು ಅಡಗಿರುವ ಈ ಲೋಕವಿರೋಧಿ ಇತಿಹಾಸದಲ್ಲಿ

ನಮ್ಮೆದೆಗೆ ಬಿದ್ದ ಅಕ್ಷರಗಳು ನಿಜವಾಗಿಯೂ ಈ ಕಾವಲುಕೋಟೆಯನ್ನು ಕತ್ತರಿಸಿ ಬಿದ್ದ ಮಳೆಯ ಹನಿಗಳೇ ಆಗಿವೆ.

ಕಲಿತುದನ್ನು ಕಾಣಿಸುವ ಪ್ರದರ್ಶನವೇದಿಕೆಯಲ್ಲಿ ಮತ್ತೊಮ್ಮೆ ಅದೇ ಮೂಲದಿಂದ ಕರ್ಣ ಜಾತಿಯ ಕಾರಣದಿಂದಲೇ ನಿರಾಕರಣದ ಬಿರುಸುಮಾತಿಗೆ ಗುರಿಯಾಗುತ್ತಾನೆ. ಈ ಮಾತುಗಳನ್ನೆಲ್ಲಾ ಆಡುವವರು ಹಾದಿಹೋಕರೋ, ಅರಿವಿಲ್ಲದ ದಡ್ಡರೋ ಅಲ್ಲ. ಅದು ಸಾಮಾಜಿಕ ಮಾನ್ಯತೆಯುಳ್ಳ ಬುದ್ದಿಜೀವಿ ವರ್ಗದ ಮಾತು. ಪ್ರತಿಭಾ ಪಲಾಯನದ ಕಥೆಗಳನ್ನು ಕಟ್ಟುವವರೇ ಪ್ರತಿಭೆಗೆ ಕುಲದ ಅಡಿಪಾಯ ಬೇಕೆಂದು ವಾದಿಸುವ ನಿರ್ಲಜ್ಜ ಪರಿ!? ಅವರದೇ ತಕ್ಕಡಿಯಿಟ್ಟು ಮಾಡುವ 'ಆವುದು ಸಮಕಟ್ಟು ನಿನಗಂ ಅರ್ಜುನಂಗಂ?' ಎಂಬ ತುಲನೆ. ಅಲ್ಲಿ ಸಹಜವಾಗಿ ಯಾವುದೂ ಇಲ್ಲದವನು ಮಾತು ಕಳೆದುಕೊಳ್ಳುತ್ತಾನೆ. ಹಾಗಾಗಿ ಶತಮಾನಗಳಲ್ಲಿ ಮಾತು ಕಳೆದುಕೊಂಡು ಸಮ್ಮತಿಸಿ ಕತ್ತು ಕೆಳಗಿಟ್ಟ ಈ ನೆಲದ ಬಾಯಿಗಳಂತೆ ಕರ್ಣನೂ ಕೊರಳುಬಗ್ಗಿಸಿ ಏನನ್ನು ಉತ್ತರಿಸಬೇಕೆಂಬ ಅರಿವಿಲ್ಲದಂತಾಗಿ, 'ಬೆಳ್ಳಾಳಂತೆ ಬೆವರುತ್ತಾನೆ'. ಆಗ ದುರ್ಯೋಧನ ಕರ್ಣನ ನೆರವಿಗೆ ಬರುತ್ತಾನೆ. ಮಾತು ಕಸಿದುಕೊಂಡವರ ಮಾತನ್ನು ಕಸಿಯದೆ, ಮಾತಿಲ್ಲದವರಿಗೆ ಮಾತುಕೊಡುವ (ಕಲ್ಯಾಣ ಆರ್ಥಿಕತೆಯ ಮಾದರಿ) ಕೆಲಸ ಮಾಡುತ್ತಾನೆ. ಕುಲಜನಲ್ಲದ ಕರ್ಣನನ್ನು ಕುಲಜನನ್ನಾಗಿ ಮಾಡುವಂತೆ ಅಂಗರಾಜ್ಯದ ಅಧಿಕಾರ ಕೊಟ್ಟು ಅಧಿಕಾರದ ಉದಾತ್ತಿಕೆ ತೋರುತ್ತಾನೆ. ಇದು ಕರ್ಣನೊಳಗೆ ತುಂಬಿದ ಆತ್ಮವಿಶ್ವಾಸದಿಂದ ಕಂಗೆಟ್ಟ ಅನಿಯಂತ್ರಿತ ಅಧಿಕಾರಕೇಂದ್ರವು ಮತ್ತೆ ಕುಲವೆಂಬ ಅದೇ ಆಯುಧವನ್ನು ಝಳಪಿಸಿ ಆ ಮಾತುಗಳ ಕತ್ತುಹಿಸುಕಲೆತ್ನಿಸಿದರೂ ಆರಂಭಗೊಂಡ ಮಾತು ನಿಲ್ಲಲಿಲ್ಲ. ('ಇವರು ಬಾಯಿ ಬಿಟ್ಟಾಗ ಅವರ ಬಾಯಿ ಕಟ್ಟಿತು'– ಸಾವಿರಾರು ನದಿಗಳು) ಅಂತೆಯೇ ಕರ್ಣ ಮುಂದೆ ಮಾತಾಡುತ್ತಲೇ ಹೋದಣಾದರೂ ಅದು ಭಾರತದ ತಳವರ್ಗದ ಚರಿತ್ರೆಯ ದುರಂತಸತ್ಯವೂ ಆಗಿರುವಂತೆ ಒಂಟಿ ದನಿಯಾಗಿಯೇ ನಿಲ್ಲುತ್ತದೆ. ಆದರೆ ಅಲ್ಲಿ ಅಪ್ಪನ ತರುವಾಯ ಮಗನ ಹೆಗಲು ಸಿದ್ಧವಾಗುತ್ತದೆ. ಅಧಿಕಾರದ ಕಾರುಣ್ಯವನ್ನು ಪಡೆದ ವಲಯದ ವಿರುದ್ಧದ ಅದರ ಪ್ರತಿರೋಧಗಳು ಮತ್ತಷ್ಟು ಒರಟಾಗುತ್ತವೆ. ಅಷ್ಟೇ ಅಲ್ಲ, ಅದು ತನ್ನ ಹಿನ್ನೆಲೆಯನ್ನು ಮತ್ತಷ್ಟು ಕನವರಿಸುತ್ತದೆ. 'ನಮ್ಮ ಪಿಡಿವ ಬಲ್ಲೇ ಅವರ ಪಿಡಿವ ಬಿಲ್ಲು, ನಮ್ಮಂಬುಗಳೇ ಅವರಿತ್ತ ನಲ್ಲಂಬುಗಳು' ಎಂದು ಪುರಾಣದ ಬೇರುಗಳೊಂದಿಗೆ ಬೆಸೆದ ಹಿರಿಮೆಯ ಹಿನ್ನೆಲೆಯ ಭಿತ್ತಿ ಕಟ್ಟಿಕೊಳ್ಳುವುದು ಹೆಚ್ಚುತ್ತದೆ. ದ್ರೋಣನಲ್ಲಿ ಕಾಣದುದು ಅಶ್ವತ್ಥಾಮನಲ್ಲಿ ಕಾಣುತ್ತದೆ. ಆತ ಕುಲವನ್ನು ನಾಲಗೆ ತುಬ್ಬುತ್ತದೆ ಎಂದಷ್ಟೇ ಹೇಳಿದರೆ, ಅಶ್ವತ್ಥಾಮ ಸೂತ, ಅಂಬಿಗ ಅಂತಲೇ ಚುಚ್ಚುತ್ತಾನೆ. ಮಾತಿಲ್ಲದವರ ಮಾತುಗಳು ಹೆಚ್ಚಿದಂತೆ ಇವರ ಹತಾಶೆ ಹೆಚ್ಚಿ, ಬೈಗುಳಗಳು ಹೆಚ್ಚುತ್ತವೆ. ಚರಿತ್ರೆಯ ಗತಿಯಲ್ಲಿ ಅನಿಯಂತ್ರಿತ

ಅಧಿಕಾರವು ಅನುಭವಿಸಿದ ಅಭದ್ರತೆಗಳು ವಿಸ್ತರಿಸಿದಂತೆಲ್ಲಾ ಅದರ ಆಕ್ರೋಶಗಳು, ಪ್ರತಿರೋಧಗಳು ಮತ್ತಷ್ಟು ನಿಖರ ಮತ್ತು ವಾಚ್ಯವಾಗುತ್ತವೆ. ಪಂಪಕಾವ್ಯ ಈ ಸಾಮಾಜಿಕ ಸೌಂದರ್ಯವನ್ನು ಚನ್ನಾಗಿ ಬಿಡಿಸಿಟ್ಟಿದೆ.

ಸಂಭವಾಮಿಯಲ್ಲ ಚಕ್ರವ್ಯೂಹ

ಆಳುವವರ್ಗವು ಯಾವಾಗಲೂ ನಿರುತ್ತರ, ನಿರಾಕ್ಷೇಪವನ್ನೇ ಬಯಸಿದೆ, ಅದನ್ನೇ ಒತ್ತಾಯಿಸಿದೆ. ಚ್ಯತಿಯಾದಾಗ ದೈವವೇ ಅವತರಿಸಿ ಹಳೆಯಹಚ್ಚಡವನ್ನೇ ಮುಚ್ಚಿ ಇದ್ದುದನ್ನು ಇದ್ದಂತೆಯೇ ಕಾಯುವ ಕಾವ್ಯ, ಪುರಾಣ, ಶಾಸ್ತ್ರಗಳನ್ನು ಕಟ್ಟಿದೆ. ಆದರೆ ಚರಿತ್ರೆಯ ಚಕ್ರದಲ್ಲಿ ಅದು ನಿಜಗೊಳ್ಳಲಿಲ್ಲ. ಚಕ್ರವನ್ನು ಹಿಂದಕ್ಕೆ ತಳ್ಳಿನಿಲ್ಲಿಸುವ ಸಂಭವಾಮಿ ಸಂಭವಿಸಲೇ ಇಲ್ಲ. ಬದಲಾಗಿ ದೋಣಿ, ದೇಹಗಳಲ್ಲಿ ಮಾತು ಹುಟ್ಟಿದೆ. ಅಂಚಿನವರೆಗೂ ಹನಿಹರಿದು ಪ್ರತಿರೋಧದ ಹಸಿರು ಪೈರು ಬೆಳೆದಿದೆ. ಮೌನದ ಪುಟದಲ್ಲಿ ಮೂಡಿದ ಈ ಮಾತುಗಳು ಮುಗಿಯದ ಮಹಾಕದನದ ಅಂಕಣಗಳನ್ನೂ ಕಟ್ಟಿವೆ. ಸಾಮಾಜಿಕ ಹಾಗೂ ರಾಜಕೀಯ ಪಲ್ಲಟಗಳು ಚಿತ್ರಗಳನ್ನು ಬದಲಿಸಿವೆ. ಹೀಗಾಗಿ ಪರಾಶರನಿಗೆ ಎದುರಾಗದುದು ದ್ರೋಣ, ಕೃಪ, ಅಶ್ವತ್ಥಾಮರಿಗೆ ಎದುರಾದುವು. ಆದರೆ ಸಂಭವದ ಪುರಾಣ ಬರೆದವರು ಅದನ್ನೇ ಕಾದು ಕೂರಲಿಲ್ಲ, ಹಳೆಯದನ್ನು ಹದತಪ್ಪದಂತೆ ಉಳಿಸಲು ಒಬ್ಬರಾದ ಮೇಲೆ ಒಬ್ಬರು ಸರದಿ ತಪ್ಪಿಸದೆ ಹೆಣಗುತ್ತಾರೆ. ಸಂಖ್ಯೆ ಇಲ್ಲದೆಯೂ ಸಾಂಘಿಕ ಸದ್ದುಮಾಡುತ್ತಾರೆ. ಅಧಿಕಾರ ಕಳಚುತ್ತಿರುವ ಆತಂಕದಲ್ಲಿ ವ್ಯಗ್ರವಾಗುತ್ತಾರೆ. ಸಿಟ್ಟು, ಆಕ್ರೋಶ, ಆಕ್ರಮಣ, ಬೈಗುಳಗಳಲ್ಲಿ ಮತ್ತಷ್ಟು ಒರಟಾಗುತ್ತಾರೆ. ಹೀಗೆ ಹೊಳೆಯಲ್ಲಿ ಹಾದಿತೆರೆದ ನಿರುತ್ತರದ ಚರಿತ್ರೆಯಿಂದ ತೊಡಗುವ ಪಂಪ ತಲೆ ಮತ್ತು ತೋಳುಗಳ ನಡುವಿನ ಮೇಲಾಟ, ಕುಲಹೀನತೆಯ ಫಲಕವಿಟ್ಟು ಕೋಟೆಯೊಳಗೆ ಬರದಂತೆ ಕಾಯುವ ತೋಳು, ತಲೆಗಳ ತಂತ್ರಗಾರಿಕೆ, ಒಂದಾಗಿ ಮತ್ತು ಬೇರಾಗಿ ನಡೆಸುವ ಸವಾರಿಯ ಚಿತ್ರಗಳನ್ನು ಕಲಸಿ ಭಾರತವೆಂಬ ಕಲಹರಂಗದ ಕೊಲಾಜ್ ಬರೆಯುತ್ತಾನೆ.

ಪಂಪಕಾವ್ಯದ ಕುಲಚರ್ಚೆ ಎಂದಾಗ ಕರ್ಣನನ್ನೇ ಕುರಿತ ಕೆಲವು ಪ್ರಕರಣಗಳನ್ನು ಗಮನಿಸಲಾಗುತ್ತದೆ. ಆದರೆ ಕುಲವಿಚಾರ ಅಷ್ಟು ಸರಳವಲ್ಲ. ಯಾಕೆಂದರೆ ಇಲ್ಲಿ ಕುಲದ ಹೇರಿಕೆ, ಅನುರೋಧ, ಪ್ರತಿರೋಧಗಳಿಗೆ ಬಹುರೂಪವಿದೆ. ಅಲ್ಲಿ ಹಲ್ಲೆಕೋರರು ಮತ್ತು ಹಲ್ಲೆಗೊಳಗಾಗುವವರಷ್ಟೇ ಎದುರಾಳಿಗಳಲ್ಲ. ಹಲ್ಲೆಕೋರರೂ ಬಲಿಪಶುಗಳ ಪರವಾಗುವ, ಅವರೇ ಬಲಿಪಶುಗಳನ್ನು ಬಲಿಗೈಯುವ ಹಾಗೂ ಏನನ್ನೂ ಮಾಡಲಾಗದ ಕೈಕಟ್ಟಿಸಿಕೊಂಡ ಜಟ್ಟಿಗಳಂತೆ ಚಡಪಡಿಸುವ ಭಿನ್ನ ರೂಪಗಳಿವೆ. ಇನ್ನೊಂದು ಕಡೆಯಿಂದ ಉತ್ತರಿಸುವ ಹಾದಿ ತಿಳಿಯದೆ ಕಣ್ಣಲ್ಲಿ ನೆಲ ಸೀಳುವ ಅಸಹಾಯಕತೆಯ ಜೊತೆ

ಅಸ್ಮಿತೆಯ ಅತಿಸಣ್ಣ ಅವಕಾಶದಲ್ಲೇ ಕಾಲಮಾನದ ಸಿಟ್ಟಿನ ಆಸ್ಫೋಟವಿದೆ. ಬೇರನ್ನೇ ಬೆದಕುವ ತರ್ಕವಿದೆ. ಬೇಟೆಗಾರರೇ ಕೂಟವಾಗಿ, ಎದುರಾಳಿಗಳಾಗಿ ಒಂದಾಗಿ ಮತ್ತು ಬೇರಾಗಿ ಎಸೆದ ಬಾಣಗಳಿಗೆ ನರಳುವ ಮಿಕಗಳಿವೆ. ಸಂಕಟದಲ್ಲಿ ಸಂಭವಿಸಿದ ಪ್ರತಿರೋಧಗಳಿವೆ. ಹಾಗಾಗಿ ಚರಿತ್ರೆಯ ಚಕ್ರವನ್ನು ನಿಲ್ಲಗೊಡದ ಒತ್ತಡಗಳಲ್ಲಿ ಸಂಭವಾಮಿಯಲ್ಲ, ಮಾತಿಲ್ಲದವರ ಮಾತುಕೊಲ್ಲುವ ಚಕ್ರವ್ಯೂಹಗಳು ಅವತರಿಸಿದವು.

ಮಾತು ಮುಗಿಸುವ ಮುನ್ನ

ಮತ್ಸ್ಯಗಂಧಿಗೆ ಎದುರಾದ ಪರಾಶರನ ರೂಪದಲ್ಲಿ 'ಸಾವಿರಕ್ಕೆ ಸಮನಾದ ಒಂದ'ನ್ನು ತಂದು ಕುಲವ್ಯಸನದ ಅನಿರ್ಬಂಧಿತ ಅಧಿಕಾರ ಕಥನವನ್ನು ಆರಂಭಿಸುವ ಪಂಪ ಕಾವ್ಯದುದ್ದಕ್ಕೂ ಅದು ಎದುರಿಸುವ ಬಿಕ್ಕಟ್ಟುಗಳನ್ನು ಪೋಣಿಸಿಕೊಳ್ಳುತ್ತಾ ಹೋಗುತ್ತಾನೆ. ಹೀಗೆ ಭಾರತಕಥೆಯ ಕ್ಯಾನ್ವಾಸಿನಲ್ಲಿ ಈ ನೆಲದ ಅಸಲಿಸತ್ಯವಾದ ಕುಲ/ಜಾತಿಯ ಅನಾಹುತಕಾರಿ ಅಸಮಾನತೆ ಮತ್ತು ಅದಕ್ಕೇ ಅಂಟಿಕೊಂಡವರ ಅಮಾನವೀಯ ಕುಹಕ, ಸಿಟ್ಟು, ಅಸಮಾಧಾನಗಳನ್ನು ತರುವ ಪಂಪ ಕೊನೆಯಲ್ಲಿ ಅಂತಹ ಜಾತಿವಾಸನೆಯಿಂದ ಮುಕ್ತಗೊಂಡ ನಿರ್ಜಾತೀಕರಣದ ನಡೆಯೊಂದನ್ನು ದಾಖಲಿಸುತ್ತಾನೆ. ಅದರ ಭಾಗವಾಗಿಯೇ ಭಾರತಕಥೆಗೆ ಅನುಬಂಧವಾಗಿ ತನ್ನ ವಂಶಕತೆಯನ್ನೂ ಜೋಡಿಸುವ ಪಂಪ 'ನಿಜಯಶವನ್ನು ಕರಿದು ಮಾಡಿಕೊಂಡ' ತನ್ನ ವಂಶದ ಹಿರೀಕ ಮಾಧವಸೋಮಯಾಜಿಯ ಬಗ್ಗೆ ವಿಷಾದಿಸುತ್ತಾನೆ. 'ನಂಬಲೇ ಅಸಾಧ್ಯವೆಂಬಂತೆ ಉತ್ತಮದ ಬ್ರಾಹ್ಮಣಜಾತಿಯ ವಿಪ್ರಕುಲ'ದವನಾಗಿಯೂ ಜಾತಿಯಿಲ್ಲದ, ಹಿಂಸೆಯ ಪ್ರತಿಪಾದನೆ ಮತ್ತು ಆಚರಣೆಗಳಿಂದ ಮುಕ್ತವಾದ ಜೈನವನ್ನು ದೊರೆಧರ್ಮವೆಂದು ಅಪ್ಪಿಕೊಂಡ ತಂದೆ ಅಭಿರಾಮದೇವರಾಯನ ದಾಟುವಿಕೆಗೆ ಸಂಭ್ರಮಿಸುತ್ತಾನೆ. ಈ ಸಂಕಟ ಮತ್ತು ಸಂಭ್ರಮಗಳಿಗೆ ಪಂಪನ ಕಾವ್ಯವಸ್ತುವಿನ ಜೊತೆಗೆ ನಂಟಿದೆ. ಯಾಕೆಂದರೆ ಜಾತಿಯೊಳಗಿದ್ದು ಅದನ್ನೇ ಆಚರಿಸಿ ಬಂಧಿಯಾದ ಅಜ್ಜನ ಕುರಿತ ಮರುಕ ಹಾಗೂ ಆ ಕಕ್ಷೆಯನ್ನು ದಾಟಿ ತನ್ನ ಬದುಕನ್ನು ಉತ್ತರೋತ್ತರವಾಗಿ ಉನ್ನತೀಕರಿಸಿಕೊಂಡ ಅಪ್ಪನ ಬಗೆಗಿನ ಬೆರಗು ಮೆಚ್ಚುಗೆಗಳಲ್ಲಿ ಕುಲವೆಂಬ ಸಾಮಾಜಿಕ ಬಂಡವಾಳದ ಸಣ್ಣತನಗಳನ್ನು ಕುರಿತ ಆತನ ತಿರಸ್ಕಾರವಿದೆ. ಹಾಗಾಗಿ ಇದು ಕೇವಲ ಪಂಪನ ವಂಶಾವಳಿಯಲ್ಲ. ಕಾವ್ಯದ ಎಳೆಯಾಗಿ ಹೆಣೆಯಲಾದ ಕುಲದ ಇತಿಹಾಸಕ್ಕೆ ಸಂಬಂಧಿಸಿದ ಕವಿಯ ಪ್ರತಿಕ್ರಿಯೆ. ಮನುಷ್ಯಬದುಕನ್ನು ಬೆಂಬಿಡದೆ ಕಾಡುತ್ತಲೇ ಬಂದ ಜಾತಿ ಎಂಬ ಅಸತ್ಯವೂ, ಅಮೂರ್ತವೂ ಆದ ರಚನೆಯ ಹೊರೆಯಿಂದ ಚಾಂಡಾಲನಷ್ಟೇ ಅಲ್ಲ, ಬ್ರಾಹ್ಮಣನೂ ಬಿಡುಗಡೆಗೊಳ್ಳಬೇಕಾಗಿದೆ ಎಂಬ ಎಚ್ಚರ. ಯಾಕೆಂದರೆ ಇಲ್ಲಿ ಕುಲಕಿರೀಟದ ಭಾರ ಹೊತ್ತವನಿಂದ ಹಿಡಿದು ಕುಲಹೀನನೆಂಬ ಹೇರು ಹೊತ್ತವನ ತನಕ ಎಲ್ಲರೂ

ಬಾಧಿತರೆ. ಆದರೆ ಅದನ್ನು ಸಾವಿರಕ್ಕೆ ಸಮವಾಗುವ ತೂಕದ ಗೀಳಿನಲ್ಲಿ ಬಳಲಿಯೂ, ಅದು ಇರುವಂತೆಯೇ ಇರಲೆಂದು ಸಂಭ್ರಮಿಸಿ ಹಾರೈಸುವ ಮನಸ್ಸುಗಳಿಗೆ ಕೊರತೆಯಿಲ್ಲ. ಪಂಪನ ಭಾರತವೆಂಬ 'ಈ ತೆರದ ಇತಿಹಾಸ'ದ ಮುಖ್ಯ ಎಳೆಯಾಗಿ ಪರಾಶರನಿಂದ ತೊಡಗಿ ಪರಶುರಾಮ, ಕೃಪ, ದ್ರೋಣ, ಅಶ್ವತ್ಥಾಮರಷ್ಟೇ ಅಲ್ಲದೆ ಅಲ್ಲಲ್ಲಿ ಇದನ್ನೇ ಬಯಸುವ ದುರ್ಯೋಧನ, ಭೀಷ್ಮ, ಶಲ್ಯಾದಿಗಳು ಈ ಇರವು ಬದಲಾಗದಿರಲೆಂದೇ ಬಯಸುವವರು. ಇದಕ್ಕೆದುರಾಗಿ 'ಬಗೆವಾಗಳ್ ಈಗಳ್ ಈ ಕಲಹದೊಳಣ್ಣ ನಿಮ್ಮ ಕುಲ ವಾಕುಲಮಂ ನಿಮಗುಂಟುಮಾಡುಗುಂ' ಎಂದಂದು ಈ ಗೀಳನ್ನು ನಿಚ್ಚಳವಾದ ರೋಗವೆಂದೇ ಸಾರಿದ ಕರ್ಣನೆಂಬ ಒಂಟಿದನಿ ಇದೆ. ಆ ದನಿಯನ್ನೇ ಭಾರತದ ಕೇಂದ್ರವಾಗಿಸಿ, ಅದನ್ನು ಕರ್ಣರಸಾಯನವೆಂದೇ ಕರೆದು, 'ನೆನೆಯುವುದಾದರೆ ಕರ್ಣನನ್ನು ನೆನೆ' ಎಂದು 'ಕರ್ಣಪ್ರಸಾರ'ಕ್ಕೆ ಆದ್ಯತೆಕೊಟ್ಟ ಪಂಪ ಈ ಗೀಳಿಗೆ ಅಂಟದೆ ದಾಟಿದವರ ಪರ ನಿಲ್ಲುತ್ತಾನೆ. ಭಾರತ ಕಥೆಯೊಂದಿಗೆ ತನ್ನ ವಂಶಕಥೆಯನ್ನೂ ಬೆಸೆದು ತನ್ನಪ್ಪನ ಪ್ರಜ್ಞಾಪೂರ್ವಕ ದಾಟುವಿಕೆಯನ್ನು ಬಾಯ್ತುಂಬಿ ಹೊಗಳಿ ಸಾವಿರಕ್ಕೆ ಸಮವಾದ ಸಾಮಾಜಿಕ ಬಂಡವಾಳವನ್ನು ನಿರಾಕರಿಸುತ್ತಾನೆ. ಜಾತಿಯಿಲ್ಲದ ಧರ್ಮಸಮೂಹವಾಗುವ ಮುಂಚಲನೆ ತೋರುವ ತನ್ನಪ್ಪನನ್ನು ಅಭಿನಂದಿಸಿ, ಹಾಗಾಗದ ಅಜ್ಜನ ಬಗೆಗೆ ಮರುಕಪಡುತ್ತಾನೆ. ಹೀಗೆ ಮೀರಲಾರದವರ ಗೀಳಿನ ಇತಿಹಾಸದೊಂದಿಗೆ ಬೆರೆಯುವ ತನ್ನ ಹಿರೀಕರ ಇತಿಹಾಸದಿಂದ ಬಿಡಿಸಿಕೊಳ್ಳುವ ಕುಲನಿರಸನವನ್ನು ಕಥಿಸುವ ಪಂಪನ ಹಾದಿಯಲ್ಲಿ ಭಾರತದೊಳಗಿನ ಭಾರತದ ಪುರೋಗಾಮಿ ಚಲನೆಯೊಂದು ಮೈತಳೆಯುತ್ತದೆ. ಹೀಗೆ ಕುಲಕೋಟಲೆಯ ಶೋಧದ ಕೀಲಿಕೈಯಾಗಿಸಿಕೊಂಡ ಕರ್ಣನ ಮೂಲಕ ಕುಲದ ಬಲೆಯಲ್ಲಿ ಬಳಲುವ ಜಾತಿಗ್ರಸ್ತ ಲೋಕವೊಂದರ ಚಿತ್ರವನ್ನು ಬಿಡಿಸಿಡುವ ಪಂಪ, ಚರಿತ್ರೆಯ ಈ ಅರಿವಿನಿಂದ ಪಾಠ ಕಲಿತ ತನ್ನಪ್ಪನ ವಿವೇಕದ ಹಾದಿಯನ್ನು ಕೈವಾರಿಸುತ್ತಾನೆ.

ಮುಖ್ಯಾಮುಖ್ಯತೆಯಲ್ಲಿ ಮಾತು ಕಳೆದುಕೊಂಡ ಭಾರತವನ್ನು ಉಲ್ಲೇಖಿಸಿ ಕಥಾಹೂರಣವನ್ನು ಮೊದಲುಗೊಳ್ಳುವ ಪಂಪ, ಈ ಅಸಮಾನ ಭಾರತದ ಕೇಡಿನ ವಿವರವಾದ ನಕ್ಷೆ ಬರೆಯುತ್ತಾ ಅದರೊಳಗೇ ಮೂಡುವ ಬಹುತ್ವದ ದನಿಗಳನ್ನು ಆಲಿಸುತ್ತಾನೆ. ಹೀಗೆ ಕಾವ್ಯಕಥೆ ಎಂಬ ಕಡಲನ್ನು ಈಜುತ್ತಾ ಸಾಗಿದವನಿಗೆ ಕೊನೆಗೂ ಕಂಡದ್ದು ಮತ್ತು ಕೇಳಿಸಿದ್ದು ಈ ನೆಲದೊಡಲಿನ ಅಂತಿಮ ಸತ್ಯವೇ. ತುಂಬಿದ ಕಡಲೊಳಗೆ ಈಜುತ್ತಾ ಅದರ ನೀರಿನ ಒಳತಳವನ್ನು ಅರಿಯುವ ಅನುಭವದ ಹಾದಿಯಲ್ಲಿ ಹೀಗೆ ಅನುಭವಿಸಿದ್ದನ್ನು ನಿರಾಕರಿಸಿ ಆತ ಸತ್ಯಕ್ಕೆ ದ್ರೋಹ ಮಾಡಿಕೊಳ್ಳಲಿಲ್ಲ. ಹಾಗಾಗಿ ಕಾವ್ಯಕ್ಕೆ ಕೊಟ್ಟ ಶಿರೋನಾಮೆ, ಕಾವ್ಯದ ನಡುವಿನ ಉದ್ಗಾರಗಳನ್ನು ದಾಟಿ ಅದನ್ನು ಅನೇಕರ ಭಾರತವಾಗಿಯೇ ಕಾಣುತ್ತಾನೆ. ಭಾರತವೆಂದರೆ ಏನು? ಅದು ಒಬ್ಬರ ಕಥೆಯಲ್ಲ,

ಇನ್ನೊಬ್ಬರನ್ನು ಹೊರಗಿಟ್ಟ ರಾಜಕಾರಣವಲ್ಲ. ಬದಲಾಗಿ ಬುಡ ಯಾವುದೆಂಬ ಗುರುತನ್ನೇ ಅಳಿಸಿಕೊಂಡ ಆಲದ ಮರವಾಗಿ ಎಲ್ಲ ಬಾಗಿಲುಗಳನ್ನೂ ತೆರೆದಿಟ್ಟ ಬಹುತ್ವದ ನೆಲೆ ಎಂಬುದನ್ನು ಖಚಿತವಾಗಿ ಅರಿಯುತ್ತಾನೆ. ಅಂತಿಮವಾಗಿ ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರೂ ಅಲ್ಲ ಎನ್ನುವ ಬಹುರೂಪದಿಂದ ಪೂಜ್ಯವಾಗುವ ಭಾರತವನ್ನು ದರ್ಶಿಸಿದ ಅತ್ಯಂತ ಎತ್ತರದ ಕವಿಚೇತನವಾಗಿ ಪಂಪ ಮೂಡಿಬರುತ್ತಾನೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪ್ರಾಯಶಃ ನಾವು ಒಪ್ಪಿಕೊಂಡ ಪ್ರಜಾಸತ್ತೆಗಾಗಿ ಅಂಬೇಡ್ಕರ್ ಭೀಮರಾಯರು ಕೊಟ್ಟ ಸಂವಿಧಾನವೆಂಬ ಪವಿತ್ರಗ್ರಂಥವು ಪ್ರತಿಪಾದಿಸುವ 'ಒಬ್ಬ ಮನುಷ್ಯ ಒಂದು ಮೌಲ್ಯ' ಎಂಬ ಆಶಯಕ್ಕೆ ಹತ್ತಿರವಾಗುತ್ತಾನೆ. ಸಾವಿರಕ್ಕೆ ಸಮವಾದ ಒಂದರ ಬದಲಿಗೆ ಸಾವಿರದೊಳಗಿನ ಸಾವಿರವನ್ನು ಗೌರವಿಸುವ ಬಹುವಚನ ಭಾರತವನ್ನು ಮುಂದಿಡುತ್ತಾನೆ. ಇದು ಕಥೆಯ ಮೈಗೆಡಿಸಿ ಕಟ್ಟುವುದಕ್ಕಾಗಿ ಆತ ಈಜಿದ ಭಾರತದಿಂದ ಅರಿತ ಅರಿವು. ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿ ಎಂಬ ಗಂಭೀರವೂ, ವಿಸ್ತಾರವೂ ಆದ ಕಥೆಯೆಂಬ ಕಡಲೊಳಗಿನ ಅಸಲಿಸತ್ಯ. ಹಾಗಾಗಿ ಅಟ್ಟಿಯಿಂದಾರಂಭಿಸಿ ಅಟ್ಟಿಯಲ್ಲೇ ಮುಗಿಸುವ ಪಂಪ ಯಾರನ್ನೂ ಹೊರಗಿಡದ ಪ್ರೀತಿಯಲ್ಲದೆ ದ್ವೇಷವನ್ನು ಕಾರಿಕೊಳ್ಳಲಾರ. ಆತ ಕಾರ್ಕೋಟಕವಾಗದೆ ಬೆಳದಿಂಗಳಾಗಿದ್ದಾನೆ.

ಪರಾಮರ್ಶನ ಸಾಹಿತ್ಯ

೧. ಪಾ.ವೆಂ. ಆಚಾರ್ಯ, ಪದಾರ್ಥ ಚಿಂತಾಮಣಿ, ನವಕರ್ನಾಟಕ ಪ್ರಕಾಶನ ಬೆಂಗಳೂರು, ೧೯೯೮

೨. ಎಸ್.ಎಸ್.ಒಡೆಯರ್ (ಸಂ). 'ಮಹಾಕವಿ ಪಂಪ ಹಾಗು ಅವನಕೃತಿಗಳು' ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ೧೯೬೬,೧೯೬೯

೩. ಚಿದಾನಂದಮೂರ್ತಿ ಎಂ., ಹೊಸತು ಹೊಸತು, ಕನ್ನಡ ವಿಶ್ವವಿದ್ಯಾನಿಲಯ; ಹಂಪಿ ೧೯೯೩

೪. ಎಸ್. ಜಾಫೆಟ್(ಸಂ), ಅಂಬೇಡ್ಕರ್ ಚಿಂತನೆಗಳ ಪ್ರವೇಶಿಕೆ, ಅಂಬೇಡ್ಕರ್ ಅಧ್ಯಯನ ಕೇಂದ್ರ, ರಾಷ್ಟ್ರೀಯ ಕಾನೂನುಶಾಲೆ ಬೆಂಗಳೂರು, ೨೦೧೫

೫. ಜಿ.ಎಚ್.ನಾಯಕ, ಮತ್ತೆ ಮತ್ತೆ ಪಂಪ, ಅಹರ್ನಿಶಿ ಪ್ರಕಾಶನ; ಶಿವಮೊಗ್ಗ ೨೦೦೮

೬. ಎಲ್.ಬಸವರಾಜು, ಪಂಪನ ಸಮಸ್ತಭಾರತ ಕಥಾಮೃತ,ಗೀತಾ ಬುಕ್ ಹೌಸ್; ಮೈಸೂರು ೨೦೦೦

೭. ಎಲ್.ಬಸವರಾಜು.(ಸಂ), ಪಂಪ ಭಾರತ, ಮುದ್ದುಶ್ರೀ ಗ್ರಂಥಮಾಲೆ; ಬೆಂಗಳೂರು ೨೦೦೯

೮. ಮುಳಿಯ ತಿಮ್ಮಪ್ಪಯ್ಯ ನಾಡೋಜ ಪಂಪ:, ಎಂ.ಕೇಶವ ಭಟ್ಟ(ಸಂ), ಗೀತಾ ಬುಕ್ ಹೌಸ್; ಮೈಸೂರು ೧೯೭೭.

೯. ಎಂ.ಎಂ ಕಲ್ಬುರ್ಗಿ, ಮಾರ್ಗ–೧, ಕರ್ನಾಟಕ ಬುಕ್ ಏಜನ್ಸಿ; ಬೆಂಗಳೂರು. ೧೯೯೫

೧೦. ಎಂ.ಎಂ ಕಲ್ಬುರ್ಗಿ, ಮಾರ್ಗ–೨, ಕರ್ನಾಟಕ ಬುಕ್ ಏಜನ್ಸಿ; ಬೆಂಗಳೂರು ೧೯೯೫

೧೧. ವಡ್ಡರ್ಸೆ ರಘುರಾಮ ಶೆಟ್ಟಿ, ಬಹುರೂಪಿ ಅರಸು, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೧೬

೧೨. ಎ.ಎಂ. ರಾಜಶೇಖರಯ್ಯ(ಸಂ), ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು,

ಸಂ: ೯, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೧೯೯೮
೧೩. ಕೆ.ಈ. ರಾಧಾಕೃಷ್ಣ (ಸಂ), ಪಂಪಾಧ್ಯಯನ, ಸಪ್ನ ಬುಕ್ ಹೌಸ್; ಬೆಂಗಳೂರು ೨೦೧೦,
೧೪. ಟಿ.ವಿ.ವೆಂಕಟಾಚಲ ಶಾಸ್ತ್ರಿ(ಸಂ), ಪಂಪ ಸಂಪುಟ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ ೨೦೦೬
೧೫. ಜಿ.ಎಸ್. ಶಿವರುದ್ರಪ್ಪ(ಸಂ) ಪಂಪ ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾನಿಲಯ ೧೯೭೪,
೧೬. ಜಿ.ಎಸ್. ಶಿವರುದ್ರಪ್ಪ(ಸಂ), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೨, ಬೆಂಗಳೂರು ವಿಶ್ವವಿದ್ಯಾಲಯ ೧೯೭೫
೧೭. ತಿ.ನಂ.ಶ್ರೀಕಂಠಯ್ಯ., ಪಂಪ, ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು ೧೯೫೭

❒❒

ಜೈಮಿನಿ ಭಾರತ ಮತ್ತು ಯಕ್ಷಗಾನ ಪ್ರಸಂಗಗಳು

ಉಮೇಶ ಶಿರೂರು

❖

ಯಕ್ಷಗಾನ ಪ್ರಸಂಗ ಸಾಹಿತ್ಯ ಸುಮಾರು ಎಂಟು ನೂರು ವರ್ಷಗಳ ಇತಿಹಾಸ ಹೊಂದಿದ್ದು ಸಾವಿರಕ್ಕೂ ಹೆಚ್ಚು ಕವಿಗಳು ಸುಮಾರು ಆರು ಸಾವಿರಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹದಿನಾರನೆಯ ಶತಮಾನದಿಂದ ಕನ್ನಡದಲ್ಲಿ ಯಕ್ಷಗಾನ ಶೈಲಿಯಲ್ಲಿ ಕಾವ್ಯ ರಚನೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭವಾಗಿರುವುದು ಕಂಡು ಬರುತ್ತದೆ. ಈ ಪ್ರಸಂಗ ಕೃತಿಗಳು ಕೇವಲ ರಂಗ ಪಠ್ಯಗಳಾಗಿರದೆ ಕಾವ್ಯದ ಸೊಬಗನ್ನು ಹೊಂದಿರುವ ಮುನ್ನೂರರಿಂದ ಆರುನೂರು ಪದ್ಯಗಳನ್ನು ಒಳಗೊಂಡ ಕಿರುಕಾವ್ಯಗಳಾಗಿ ಜನಪ್ರಿಯಗೊಂಡಿವೆ. ಇಲ್ಲಿ ಕನ್ನಡ ಸಾಹಿತ್ಯಗಳಲ್ಲಿ ಕಂಡು ಬರುವ ಮತ್ತೇಭ ವಿಕ್ರೀಡಿತ, ಶಾರ್ದೂಲ ವಿಕ್ರೀಡಿತ ವೃತ್ತಗಳು, ಭಾಮಿನಿ, ವಾರ್ಧಕ, ಪರಿವರ್ಧಿನಿ, ಶರ ಮೊದಲಾದ ಷಟ್ಪದಿಗಳು, ಕಂದಪದ್ಯ, ದ್ವಿಪದಿಗಳು, ಸಾಂಗತ್ಯ ಛಂದಸ್ಸಿನ ಪದ್ಯಗಳು ಜೊತೆಗೆ ಯಕ್ಷಗಾನದ್ದೇ ಆದ ವಿಶಿಷ್ಟ ಮಟ್ಟುಗಳು (ವಿವಿಧ ರಾಗ, ತಾಳಗಳ ಬಂಧ) ಹೀಗೆ ವಿವಿಧ ಛಂದಸ್ಸಿನ ಪದ್ಯಗಳನ್ನು ಯಕ್ಷಗಾನ ಕವಿಗಳು ತಮ್ಮ ಕಿರುಕಾವ್ಯಗಳಲ್ಲಿ ಬಳಸಿ ಕೊಂಡಿರುವುದು ಯಕ್ಷಗಾನ ಪ್ರಸಂಗಗಳ ವಿಶಿಷ್ಟತೆಯಾಗಿದೆ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಜೈಮಿನಿ ಭಾರತ ಅತ್ಯಂತ ಜನಪ್ರಿಯವಾದ ಕಾವ್ಯ. ನವರಸ ಭರಿತವಾದ ಆಕರ್ಷಕವಾದ ಕಥಾವಸ್ತು, ಹೃದಯಂಗಮ ವರ್ಣನೆ, ಉತ್ತಮ ಪಾತ್ರಪೋಷಣೆ ಹಾಗೂ ನಿರೂಪಣೆ, ನಾಟಕೀಯ ಅಂಶಗಳು, ಶಬ್ದಾಲಂಕಾರ ಅರ್ಥಾಲಂಕಾರಗಳ ಸೊಬಗು, ನೀತಿಬೋಧೆ ಹಾಗೂ ಕೃಷ್ಣಭಕ್ತಿಯ ಪರಾಕಾಷ್ಠೆ ಇತ್ಯಾದಿ ಉತ್ತಮ ಅಂಶಗಳಿಂದ ಕೂಡಿದ ಲಕ್ಷ್ಮೀಶ ಕವಿಯ ವಾರ್ಧಕ ಷಟ್ಪದಿಯ ಈ ಕಾವ್ಯ ಯಕ್ಷಗಾನ ಕವಿಗಳಿಗೆ ಬಹಳ ಪ್ರಿಯವಾದ ಕಾವ್ಯವಾಗಿ ಅವರ ಕಿರುಕಾವ್ಯಗಳಿಗೆ ಆಕರ ಗ್ರಂಥವಾಗಿ ಹತ್ತಾರು ಯಕ್ಷಗಾನ ಪ್ರಸಂಗ ಕೃತಿಗಳ ರಚನೆಗೆ ಮೂಲವಾಗಿದೆ.

ಲಕ್ಷ್ಮೀಶನ ಜೈಮಿನಿ ಭಾರತವನ್ನು ಆಧರಿಸಿ ಅನೇಕ ಯಕ್ಷಗಾನ ಪ್ರಸಂಗಗಳನ್ನು ಯಕ್ಷಗಾನ ಕವಿಗಳು ರಚಿಸಿದ್ದು ಕಂಡು ಬರುತ್ತದೆ. ಅವುಗಳಲ್ಲಿ ಹದಿನೇಳನೆಯ ಶತಮಾನದ ಶಿವಪುರದ ರಾಮ ಕವಿಯ ತಾಮ್ರಧ್ವಜನ ಕಾಳಗ ಮೊದಲನೆಯದ್ದು ಎನ್ನಬಹುದು. ನಂತರ ಹದಿನೆಂಟನೆಯ ಶತಮಾನದ ಅಂತ್ಯ ಭಾಗದಲ್ಲಿದ್ದ ದೇವಿದಾಸ ಬಭ್ರುವಾಹನ ಕಾಳಗ ರಚಿಸಿದ್ದರೆ, ಹತ್ತೊಂಭತ್ತನೆಯ ಶತಮಾನದಲ್ಲಿದ್ದ ಮೂಲ್ಕಿ ರಾಮಕೃಷ್ಣಯ್ಯರ ಸುಧನ್ವಕಾಳಗ, ಅಜ್ಜನಗದ್ದೆ ಶಂಕರನಾರಾಯಣ ಅವರ ಅನುಸಾಲ್ವ ಗರ್ವಭಂಗ, ನೀಲಧ್ವಜನ ಕಾಳಗ, ಮಾಲೆಕೋಡ್ಲು ಶಂಭು ಭಟ್ಟರ ಚಂದ್ರಹಾಸೋಪಖ್ಯಾನ, ಇಪ್ಪತ್ತನೆಯ ಶತಮಾನದಲ್ಲಿದ್ದ ಹಿರಿಯ ಬಲಿಪ ನಾರಾಯಣ ಭಾಗವತರ ವೀರವರ್ಮ ಕಾಳಗ, ಬಡೆಕ್ಕಿಲ ವೆಂಕಟರಮಣ ಭಟ್ಟ, ಶಿರೂರು ಫಣಿಯಪ್ಪಯ್ಯ, ಜಾನಕೈ ತಿಮ್ಮಪ್ಪ ಹೆಗಡೆ ಮೊದಲಾದ ಕವಿಗಳು ರಚಿಸಿದ ಯೌವನಾಶ್ವನ ಕಾಳಗ, ಕಿರಿಕ್ಕಾಡು ವಿಷ್ಣು ಭಟ್ಟ ಹಾಗೂ ಹೊಸ್ತೋಟ ಮಂಜುನಾಥ ಭಾಗವತರ ಸೀತಾ ಪರಿತ್ಯಾಗ, ಪ್ರೊ ಎಂ ಎ ಹೆಗಡೆಯವರ ಸೀತಾವಿಯೋಗ ಮತ್ತು ಲವಕುಶ ಇವು ಜೈಮಿನಿ ಭಾರತ ಆಧಾರಿತ ಪ್ರಮುಖ ಯಕ್ಷಗಾನ ಪ್ರಸಂಗ ಕೃತಿಗಳಾಗಿವೆ.

ಜೈಮಿನಿ ಭಾರತವನ್ನು ಆಧರಿಸಿ ಪ್ರಸಂಗ ಕೃತಿ ರಚಿಸಿರುವ ಯಕ್ಷಗಾನ ಕವಿಗಳು ಲಕ್ಷ್ಮೀಶನ ಪದ್ಯಗಳನ್ನು ತಮ್ಮ ಪ್ರಸಂಗಗಳಲ್ಲಿ ಹೇಗೆ ಬಳಸಿಕೊಂಡಿದ್ದಾರೆ ಮತ್ತು ವಾರ್ಧಕ ಷಟ್ಪದಿಯ ಮೂಲ ಪದ್ಯಗಳಲ್ಲಿ ಕೆಲವೊಂದು ಪದ್ಯಗಳನ್ನು ತಮ್ಮ ಕೃತಿಗಳಲ್ಲಿ ಸೃಜನಶೀಲವಾಗಿ ಯಕ್ಷಗಾನ ಸಾಹಿತ್ಯದ ಶೈಲಿಯಲ್ಲಿ ಹೇಗೆ ಮಾರ್ಪಡಿಸಿ ಬಳಸಿದ್ದಾರೆ ಎಂಬ ಬಗ್ಗೆ ಎರಡು ಕೃತಿಗಳ ಉದಾಹರಣೆ ಮೂಲಕ ವಿವರಿಸುವ ಪ್ರಯತ್ನ ಮಾಡಿದ್ದೇನೆ.

೧. ಪ್ರಸಂಗ: ತಾಮ್ರಧ್ವಜನ ಕಾಳಗ, ಕವಿ: ರತ್ನಪುರದ ರಾಮ ಬಡಗುತಿಟ್ಟು ನಡುತಿಟ್ಟುಗಳಲ್ಲಿ ಸಾಂಪ್ರದಾಯಕ ಪ್ರದರ್ಶನಕ್ಕೆ ಪ್ರಸಿದ್ದವಾದ ಯಕ್ಷಗಾನ ಪ್ರಸಂಗ ತಾಮ್ರಧ್ವಜನ ಕಾಳಗ. ಇದನ್ನು ರಚಿಸಿದ ರವಿ ರತ್ನಪುರದ ರಾಮ. ಇವನು ಹದಿನೇಳನೆಯ ಶತಮಾನದ ಯಕ್ಷಕವಿಯಾಗಿದ್ದು ತಾಮ್ರಧ್ವಜನ ಕಾಳಗ ಮತ್ತು ಮೂಲಕಾಸುರ ಕಾಳಗ ಎಂಬ ಎರಡು ಯಕ್ಷಗಾನ ಪ್ರಸಂಗ ಕೃತಿಗಳನ್ನು ರಚಿಸಿದ್ದಾನೆ. ಇವನು ಉತ್ತರ ಕನ್ನಡದ ಜೋಯಿಡಾ ತಾಲೂಕಿಗೆ ಸೇರಿದವನು. ಇವನು ಕಶ್ಯಪ ಗೋತ್ರಕ್ಕೆ ಸೇರಿದ ಬ್ರಾಹ್ಮಣ. ತಂದೆ ಶಂಕರ, ತಾಯಿ ಸರಸ್ವತಿ, ಅಜ್ಜ ತಿರುಮಲಾರ್ಯ . ಕರ್ನಾಟಕ ಯಕ್ಷಗಾನ ಕವಿಚರಿತ್ರೆಯಲ್ಲಿ ಇವನನ್ನು ಶಿವಪುರದ ರಾಮ ಎಂದು ಉಲ್ಲೇಖಿಸಲಾಗಿದೆ.

ಹನ್ನಾರು ಮಾಗಣೆ ಅಡಿಕೆಶಿನ್ನಿ ಎಂಬಲ್ಲಿ ತಾಮ್ರಧ್ವಜ ಕಾಳಗದ ತಾಳೆಗರಿ ಹಸ್ತಪ್ರತಿ ದೊರಕಿದ್ದು ಅದರ ಕಾಲ ಜನವರಿ ೧೨ ೧೬೯೧. ಹೀಗಾಗಿ ಕವಿಯ ಕಾಲ ಹದಿನೇಳನೆಯ ಶತಮಾನವಿರಬೇಕೆಂದು ಡಾ ಶಿವರಾಮ ಕಾರಂತರು ನಿರ್ಣಯಿಸಿದ್ದಾರೆ.

"ಈ ಕವಿಯು ಬಳಸಿದ ವೈವಿಧ್ಯಪೂರ್ಣವಾದ ಯಕ್ಷಗಾನ ಛಂದೋಬಂಧಗಳು ಪ್ರಸಂಗದ ರಸಾಭಿವ್ಯಂಜನೆಗೆ ಪೂರಕವಾಗಿವೆ. ಇವನ ಕಾವ್ಯದ ಮನೋಹರತೆಯು ಗಮನಾರ್ಹವಾಗಿದೆ. ಅನುಪ್ರಾಸದ ವೈಭವ, ಲಾಟಾನು ಪ್ರಾಸದ ಸೊಬಗು, ಸಂವಾದ ವಿಶೇಷತೆ ಇವನ ಕಾವ್ಯದ ಶ್ರೇಷ್ಠತೆ" ಎನ್ನುವುದು ಯಕ್ಷಗಾನ ವಿದ್ವಾಂಸರಾದ ಡಾ ಕಬ್ಬಿನಾಲೆ ವಸಂತ ಭಾರದ್ವಾಜರ ಅಭಿಪ್ರಾಯ.

ತಾಮ್ರಧ್ವಜನ ಕಾಳಗ ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಆಧಾರಿತ ಪ್ರಸಂಗ. ಜೈಮಿನಿ ಭಾರತದ ಇಪ್ಪತ್ತೈದು ಮತ್ತು ಇಪ್ಪತ್ತಾರನೆಯ ಸಂಧಿಯಲ್ಲಿ ಈ ತಾಮ್ರಧ್ವಜ ಮತ್ತು ಮಯೂರಧ್ವಜರ ಕಥೆ ಬರುತ್ತದೆ. ಈ ಪ್ರಸಂಗದಲ್ಲಿರುವ ಒಟ್ಟು ಪದ್ಯಗಳ ಸಂಖ್ಯೆ ೨೦೭. ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರು ತಾಮ್ರಧ್ವಜನ ಕಾಳಗ ಪ್ರಸಂಗ ಕೃತಿಯನ್ನು ೧೯೫೨ ರಲ್ಲಿ ಪ್ರಕಟಿಸಿದ್ದಾರೆ.

ಜೈಮಿನಿ ಭಾರತ ಮತ್ತು ಯಕ್ಷಗಾನ ಪ್ರಸಂಗ ಪದ್ಯಗಳಲ್ಲಿರುವ ಸಾಮ್ಯತೆ

ಮಹಾಭಾರತ ಯುದ್ಧದ ನಂತರ ಧರ್ಮರಾಜ ವೇದವ್ಯಾಸರ ಸಲಹೆಯಂತೆ ಬಂಧುಹತ್ಯಾ ದೋಷ ನಿವಾರಣೆಗೆ ಅಶ್ವಮೇಧಯಾಗ ಮಾಡಲು ನಿರ್ಧರಿಸಿ, ಯಾಗದ ಕುದುರೆಯನ್ನು ಪೂಜಿಸಿ ದಿಗ್ವಿಜಯಕ್ಕೆ ಬಿಡುತ್ತಾನೆ .ಅರ್ಜುನ, ಅನಿರುದ್ಧ, ವೃಷಕೇತು, ಅನುಸಾಲ್ವರನ್ನು ಒಳಗೊಂಡ ಸೈನ್ಯ ಕುದುರೆಯ ರಕ್ಷಣೆಯ ಕಾರ್ಯ ಕೈಗೊಂಡು, ನೀಲಧ್ವಜ, ಹಂಸಧ್ವಜ, ಬಬ್ರುವಾಹನರನ್ನು ಗೆದ್ದು, ಅವರನ್ನು ಕೂಡಿಕೊಂಡು ರತ್ನಪುರಕ್ಕೆ ಬರುತ್ತಾರೆ. ಅಲ್ಲಿ ತಾಮ್ರಧ್ವಜ ತನ್ನ ತಂದೆ ಮಯೂರಧ್ವಜನ ಯಾಗದ ಅಶ್ವದ ರಕ್ಷಣೆಗೆ ಬರುವಾಗ ಪಾಂಡವರ ಅಶ್ವ ಎದುರಾಗುತ್ತದೆ. ಆಗ ಕುದುರೆಯನ್ನು ಕಟ್ಟಿ, ತಾಮ್ರಧ್ವಜ ಯುದ್ಧ ಮಾಡುವ ಸನ್ನಿವೇಶದ ಪದ್ಯಗಳು ಇಲ್ಲಿವೆ.

೧. i) ಜೈಮಿನಿ ಭಾರತ ಸಂಧಿ–೨೫, ಪದ್ಯ–೩೦, ವಾರ್ಧಕ ಷಟ್ಪದಿ

ಅನಿರುದ್ಧನಂ ಗೆಲ್ದು ವೃಷಕೇತುವಂ ಕೆಡಹ।
ಲನುಸಾಲ್ವನಿದಿರಾದೊಡಾತನ ಪರಾಕ್ರಮವ ।
ನನುವರದೊಳುರೆ ಮುರಿದು ಕೃತವರ್ಮ ಸಾತ್ಯಕಿ ಪ್ರದ್ಯುಮ್ನರಂ ಸೋಲಿಸಿ॥
ಅನುಪಮ ಬಲಂ ಬಭ್ರುವಾಹನಂ ಕಾದಲವ।
ನನುವನೊಪ್ಪಂಗೆಡಿಸಿ ಹಂಸಧ್ವಜನ ಜಯವ।
ನನುಕರಿಸಿ ಯೌವನಾಶ್ವಾಸಿತಧ್ವಜರಂ ತಗುಳ್ದವಂ ಬೊಬ್ಬಿರಿದನು॥೩೦॥

ಇದನ್ನು ಯಕ್ಷಗಾನ ಕವಿ ರತ್ನಪುರದ ರಾಮ ಪ್ರಸಂಗದಲ್ಲಿ ಅಳವಡಿಸಿದ್ದು ಹೀಗೆ

ii) ತಾಮ್ರಧ್ವಜನ ಕಾಳಗ ಪದ್ಯ–೬೮, ವಾರ್ಧಕ ಷಟ್ಪದಿ

ಅರಸ ಕೇಳೀ ಪರಿಯಲನಿರುದ್ಧನನುಸಾಲ್ವ।
ತರಣಿನಂದನನ ಸುತ ಪ್ರದ್ಯುಮ್ನ ಹಂಸಕೇ।
ತುರುಪರಾಕ್ರಮಿ ಬಭ್ರುವಾಹನಾದ್ಯಮಿತ ಬಲ ಸಾಂಬ ಸಾತ್ಯಕಿ ಮುಖ್ಯರ ॥
ಧುರದೊಳ್ ಪಲಾಯನಂ ಗೆಯ್ಸಿ ಹರಿರವದಿಂದ।
ಬರಲನಿತರೊಳ್ ಪಾರ್ಥ ಚಾಪ ಶರಮಂ ತುಡುಕಿ।
ಸರಳಸೈವರೆಯಲ್ಕೆ ನಗುತ ತಾಮ್ರಧ್ವಜಂ ಫಲುಗುಣನೊಳಿಂತೆಂದನು ॥೬೮॥

೨.i) ಜೈಮಿನಿ ಭಾರತ , ಸಂಧಿ –೨೫ ಪದ್ಯ– ೩೬ (ವಾರ್ಧಕ ಮೊದಲಾರ್ಧ)

ಬಿಲ್ಮುರಿಯೆ ಮತ್ತೊಂದು ಬಿಲ್ಗೊಂಡು ಕೋಪದಿಂ ।
ಪಲ್ಮೊರಿಯುತೊಡನೆ ತಾಮ್ರಧ್ವಜಂ ತೆಗೆದಾರ್ದಿ।
ಸಲ್ಮಹಿಯೊಳರ್ಜುನನ ತೇರೊಂದುಯೋಜನಂ ಪೋಗೆ ತರಹರಿಸಿಕೊಳುತೆ॥

ii) ಯಕ್ಷಗಾನ ತಾಮ್ರಧ್ವಜನ ಕಾಳಗ, ಪದ್ಯ– ೭೭, ರಾಗ–ಶಂಕರಾಭರಣ, ತ್ರಿವುಡೆ ತಾಳ

ಕರದ ಚಾಪ ಮುರಿಯೆ ಹಲುವ ಮೊರೆದು ಬಿಲುವನು ।
ತ್ವರಿತದಿಂದ ಪಿಡಿದು ಬೊಬ್ಬಿರಿವುತೆಚ್ಚನು॥
ನರನ ತೇರು ಯೋಜನೊಂದು ತಿರುಗಿ ಬಂದುದು ।
ಮರಳಿ ವಿಜಯನೆಸುಗೆಗಂಬರವ ಸಾರ್ದುದು ॥

೩.i) ಜೈಮಿನಿ ಭಾರತ, ಸಂಧಿ –೨೫ ಪದ್ಯ– ೪೫ (ವಾರ್ಧಕ ಮೊದಲಾರ್ಧ)

ಹರಿ ಬಳಿಕ ತನ್ನ ರಥಮಂ ಬಿಟ್ಟು ಫಲುಗುಣನ ।
ವರ ವರೂಥಾಗ್ರದೊಳ್ ಚಮ್ಮಟಿಕೆ ವಾಘೆಯಂ।
ಧರಿಸಿ ತುರಗಂಗಳಂ ಚಪ್ಪರಿಸಲೆಡಬಲಕೆ ವಾಯುವೇಗದೊಳಡರ್ದು॥

ii) ತಾಮ್ರಧ್ವಜನ ಕಾಳಗ, ಪದ್ಯ–೮೬, ರಾಗ–ಭೈರವಿ ಏಕ ತಾಳ

ಹರಿ ನಿಜ ತೇರನು ಬಿಟ್ಟು ।ಬಂದು। ನರನ ರಥದೊಳಡಿಯಿಟ್ಟು॥
ತುರಗವ ಚಪ್ಪರಿಸುತ್ತ ।ಅತಿ। ಹರುಷದೊಳಂಬ ತೆಗೆದಿತ್ತ ॥

೪. i)ಜೈಮಿನಿ ಭಾರತ , ಸಂಧಿ –೨೫ ಪದ್ಯ–೫೨ (ವಾರ್ಧಕ ಮೊದಲಾರ್ಧ)

ಪಡೆ ಮಡಿಯೆ ರೋಷದಿಂದಾಗ ತಾಮ್ರಧ್ವಜಂ ।
ನುಡಿದನಸುರಾಂತಕನೊಳೆಲೆ ದೇವ ಸೈನ್ಯಮಂ।
ತಡೆಗಡಿದೊಡೇನಹುದು ಹಿಂದೆ ಪಾರ್ಥಂಗಾಗಿ ನಿನ್ನ ಪುಣ್ಯವನಿತ್ತಲಾ॥

ii) ತಾಮ್ರಧ್ವಜನ ಕಾಳಗ, ಪದ್ಯ–೯೩, ರಾಗ–ಪಂಚಾಗತಿ, ಮಟ್ಟೆ ತಾಳ

ಪಡೆಯನೆಲ್ಲ ಕಡಿದು ಬಿಡುವ ।ಗೊಡವೆಯಾಕೆ ಹಿಂದೆ ನರಗೆ ।

ದುಡಿದ ಪುಣ್ಯವಿತ್ತು ಕಷ್ಟ ।ಬಡುವೆ ಸುಮ್ಮನೆ ॥

ತಾಮ್ರಧ್ವಜ ಅರ್ಜುನನನ್ನು ಮೂರ್ಛೆಗೊಳಿಸಿ, ಪಾಂಡವರ ಕುದುರೆಯೊಂದಿಗೆ ಹಿಂತಿರುಗಿ ಬಂದಾಗ ತಂದೆ ಮಯೂರಧ್ವಜ, ಶ್ರೀ ಕೃಷ್ಣ ತನ್ನ ರಾಜ್ಯಕ್ಕೆ ಬಂದಾಗ ಅವನೊಡನೆ ಯುದ್ಧ ಮಾಡಿ ಬಂದು ಅವನ ದರ್ಶನದ ಅವಕಾಶವನ್ನು ತಪ್ಪಿಸಿದ ಮಗನ ಮೇಲೆ ಕೋಪಗೊಳ್ಳುವ ಸನ್ನಿವೇಶದ ಕೆಲವು ಪದ್ಯಗಳು ಇಲ್ಲಿವೆ.

೫.i) ಜೈಮಿನಿ ಭಾರತ, ಸಂಧಿ –೨೫ ಪದ್ಯ–೫೯ (ವಾರ್ಧಕ ಮೊದಲಾರ್ಧ)

ಜೀಯ ಪುಸಿಯಲ್ಲ ಪಾಂಡವರಾಯನಶ್ವಮಂ

ಕಾಯ ಬಂದಿಹ ಬಭ್ರುವಾಹನಾದಿಗಳನೊ।

ತ್ತಾಯದಿಂದೆಲ್ಲರಂ ಸದೆಬಡಿದುರುಳ್ಚಿ ಬಳಿಕೈದೆ ಕೃಷ್ಣಾರ್ಜುನರನು॥

ii) ತಾಮ್ರಧ್ವಜನ ಕಾಳಗ, ಪದ್ಯ–೧೦೦, ೧೦೧ ರಾಗ–ಕಾಂಭೋಜಿ, ಝಂಪೆ ತಾಳ

ಜೀಯ ಕೇಳ್ ಪುಸಿಯಲ್ಲ ಗಜಾಪುರಾಧಿಪ ಧರ್ಮ।

ರಾಯನಧ್ವರದ ಹಯವಿದನು॥

ಕಾಯಬಂದಿಹ ವಿಬುಧವಲ್ಲಭನು ಹರಿಸುತ ಸ।

ಹಾಯದಿಂದಮಿತ ಬಲ ಸಹಿತ॥೧೦೦॥

ಆಯಿತಾಹವ ಬಭ್ರುವಾಹನಾದಿಗಳನೊ।

ತ್ತಾಯದಿಂ ಸದೆಬಡಿದುರುಳ್ಚಿ ॥

ಆ ಯಮಜನನುಜಾತನಸುವನೊಪ್ಪಂಗೆಡಿಸಿ।

ತೋಯಜದಳಾಂಬಕನ ಗೆಲಿದು॥೧೦೧॥

೬.i) ಜೈಮಿನಿ ಭಾರತ, ಸಂಧಿ –೨೫ ಪದ್ಯ–೬೧ (ವಾರ್ಧಕ ಮೊದಲಾರ್ಧ)

ಮತ್ತೆ ಸುತನಂ ನೋಡಿ ಬೈದನೆಲವೊ ಪೋ।

ಗತ್ತ ನಿನ್ನಂ ಮಾಳ್ಪುದೇನಮಲ ತುಲಸಿಯಂ।

ದುತ್ತಿವಿಡಿದಬ್ಜಮಂ ಮಾಣುತುತ್ತರದ ಕುಸುಮದ ತೊಡವುಗಟ್ಟುವಂತೆ ॥

ii) ತಾಮ್ರಧ್ವಜನ ಕಾಳಗ, ಪದ್ಯ–೧೦೪, ರಾಗ–ಕೇದಾರ ಗೌಳ ಝಂಪೆ ತಾಳ

ಈ ತುರಗವನು ತಂದನು ।ಎನುತ ತನು।ಜಾತನನು ಬೈದೆಂದನು ॥

ಪರಮ ಪಾವನ ತುಳಸಿಯ ।ತೊರೆದಣುಗ। ಪರಮಳಿಪ ಸುಮಾಲೆಯ ॥

ಧರಿಸಿದಂದದಿ ಹಯವನು ।ತಂದಿತ್ತೆ ।ಮರುಳೆ ಇನ್ನೇನೆಂಬೆನು॥

ಜೈಮಿನಿ ಭಾರತದ ಇಪ್ಪತ್ತಾರನೆಯ ಸಂಧಿಯಲ್ಲಿ ಕೃಷ್ಣ ಮಯೂರಧ್ವಜನ ಭಕ್ತಿ ನಿಷ್ಠೆಯ ಹಿರಿಮೆಯನ್ನು ತೋರಿಸಲು ಬ್ರಾಹ್ಮಣನ ವೇಷದಲ್ಲಿ ಅರ್ಜುನನೊಡನೆ ರತ್ನಪುರಕ್ಕೆ

ಬರುತ್ತಾನೆ. ಆಗ ಬರುವ ದಾರಿಯಲ್ಲಿ ನೋಡುವ ವೇಶ್ಯಾವಾಟಿಕೆ ವರ್ಣನೆ, ಚಂದ್ರೋದಯದ ವರ್ಣನೆ, ಸೂರ್ಯೋದಯದ ವರ್ಣನೆ ಮೊದಲಾದ ವರ್ಣನೆಗಳನ್ನು ಸುಮಾರು ಲಕ್ಷ್ಮೀಶ ಇಪ್ಪತ್ತೈದು ಪದ್ಯಗಳಲ್ಲಿ ಮಾಡಿದ್ದಾನೆ. ಯಕ್ಷಗಾನ ಕವಿ ರತ್ನಪುರದ ರಾಮನು ಇವು ಯಕ್ಷಗಾನ ಪ್ರದರ್ಶನಗಳಿಗೆ ಅಗತ್ಯವಿಲ್ಲವಾದರೂ ಕಾವ್ಯದಲ್ಲಿ ವರ್ಣನೆಗಳನ್ನು ತರುವ ಉದ್ದೇಶದಿಂದ ತಾನೂ ಕೂಡ ಈ ಎಲ್ಲ ವರ್ಣನೆಗಳನ್ನು ೩೦ ಪದ್ಯಗಳಲ್ಲಿ ಮಾಡಿದ್ದಾನೆ. ಅವುಗಳಲ್ಲಿ ಕೆಲವು ಹೀಗಿವೆ.

೭.i) ಜೈಮಿನಿ ಭಾರತ, ಸಂಧಿ –೨೬ ಪದ್ಯ–೭ (ವಾರ್ಧಕ ಕೊನೆಯಾರ್ಧ)

ಊರ ಜನಮೆಲ್ಲಮುಂ ಮರೆದೊರಗಲಲ್ಲಲ್ಲಿ ।
ಮಾರಜ ಭ್ರಮೆಯಿಂದೆ ಪೊರಮಟ್ಟು ಸಂಚರಿಪ ।
ಚಾರು ಜಲರುಹ ವದನೆಯರ ಬೇಟದಾಟದ ಪಲವು ಬಗೆಯ ಚೇಷ್ಟೆಗಳನು ॥

ii) ತಾಮ್ರಧ್ವಜನ ಕಾಳಗ, ಪದ್ಯ–೧೧೬, ರಾಗ–ಸೌರಾಷ್ಟ್ರ ತ್ರಿವುಡೆ ತಾಳ

ಊರೊಳೆಲ್ಲರು ನಿದ್ರೆಗೆಯ್ದಿರೆ ಮಾರಹತಿಗೆ ।
ಕೇರಿ ಕೇರಿಯೊಳಲ್ಲಿಗಲ್ಲಿಗೆ । ಚಾರು ಜಲರುಹ ವದನೆಯರುಗಳು ।
ಕಾರುಗತ್ತಲೆಯೊಳಗೆ ಕುರುಹನು ।ತೋರದಂತೆ॥

೮.i) ಜೈಮಿನಿ ಭಾರತ, ಸಂಧಿ –೨೬ ಪದ್ಯ–೨೬ (ವಾರ್ಧಕ)

ಗಾಲಿಯೊಂದೇ ರಥಕೆ ಜೋಡಾಗಿ ಪೂಡುವೊಡೆ ।
ಸಾಲದೇಳೇಹಯಂ ನಡೆಸುವೊಡೆ ಸಾರಥಿಗೆ ।
ಕಾಲಿಲ್ಲ ಲೋಕ ಯಾತ್ರೆಯನೊಲ್ಲೆನೆಂದೊಡಾಗದೆ ತನಗೆ ತಿರುಗಲೇಕೆ॥
ಕಾಲಗತಿಯಂ ಮೀರಬಾರದಿಂತೆಂಬುದಂ ।
ಮೂಲೋಕಕೆಚ್ಚರಿಸುವಂತೆ ಪೂರ್ವಾಚಲದ ।
ಮೇಲೆ ಮೂಡಿದನೆಂದಿನವೊಲಬ್ಜಬಾಂಧವಂ ನಯನಾಂಧಮಂದಡಗಳು॥

ii) ತಾಮ್ರಧ್ವಜನ ಕಾಳಗ, ಪದ್ಯ–೧೪೨, ೧೪೩, ೧೪೪, ೧೪೫ , ದ್ವಿಪದಿ

ಸೂತನಿಗೆ ಕಾಲಿಲ್ಲ ರಥವ ನಡೆಸಲ್ಕೆ। ಆ ತುರಗವೇಳು ಜೋಡಾಗಿ ಮಾಡಲ್ಕೆ ॥
ಒಂದು ಗಾಲಿಯು ರಥಕೆ ಲೋಕಯಾತ್ರೆಯನು ।ಮುಂದೆ ತಾನೊಲ್ಲದಡೆ ತೀರದೆಂಬುದನು॥
ಕಾಲವಶವನು ಮೀರಬಹುದೆ ಎಂಬುದನು । ಮೂಲೋಕಕೆಚ್ಚರಿಸುವಂತೆ ಭಾಸ್ಕರನು॥
ಮೂಡಿದನು ಪೂರ್ವಾಚಲಾದ್ರಿಶಿಖರದಲಿ। ವೋಡಿತು ತಮಸ್ತೋಮ ಕೂಡೆ ನಿಮಿಷದಲಿ॥

ಮುಂದೆ ಬ್ರಾಹ್ಮಣ ವೇಷದ ಕೃಷ್ಣ,ತನ್ನ ಮಗನನ್ನು ಸಿಂಹದಿಂದ ಕಾಪಾಡಲು ಮಯೂರಧ್ವಜನ ಅರ್ಧ ದೇಹವನ್ನು ತುಂಡರಿಸಿ ಕೊಡುವಂತೆ ಕೇಳುವುದು,

ಮಯೂರಧ್ವಜ ತನ್ನ ಮಗ ಮತ್ತು ಹೆಂಡತಿಯರಿಂದಲೇ ತನ್ನ ದೇಹ ಸೀಳಿಸಿ ಕೊಡುವುದು, ಕೊನೆಗೆ ಅವನ ಭಕ್ತಿಗೆ ಮೆಚ್ಚಿ ಶ್ರೀ ಕೃಷ್ಣ ಅನುಗ್ರಹಿಸುವುದು ಈ ಕಥೆಯ ಮುಖ್ಯಾಂಶವಾಗಿದೆ.

೯. i) ಜೈಮಿನಿ ಭಾರತ, ಸಂಧಿ –೨೬ ಪದ್ಯ–೩೧ (ವಾರ್ಧಕ ಮೊದಲಾರ್ಧ)

ಪರಸಲಾಗದು ನಮಸ್ಕಾರಕ್ಕೆ ಮುನ್ನ ಭೂ।
ಸುರರನ್ಯರಂ ತನ್ನ ಸಂಕಟ ನಿಮಿತ್ತದಿಂ ।
ದರಸಂಗೆ ಭಿನ್ನಪಂಗೈವನಾಶೀರ್ವಾದಮಂ ಮೊದಲೆ ಮಾಡದಿಹನೆ॥

ii) ತಾಮ್ರಧ್ವಜನ ಕಾಳಗ, ಪದ್ಯ–೧೪೯, ರಾಗ ನೀಲಾಂಬರಿ, ರೂಪಕ ತಾಳ

ಪರಸಲಾಗದು ನಮಸ್ಕಾರದಿಂ ಮುಂಚೆ ಭೂ।
ಸುರನ್ಯಾಯವೆಂಬುದು ಸರಿಯು॥
ಪಿರಿದು ಸಂಕಟದಿಂದ ಬಂದಾ ನಿಮಿತ್ತದೊ।
ಳರಸಗೆ ಬಿನ್ನಪಗೆಯ್ದು ॥

೧೦.i) ಜೈಮಿನಿ ಭಾರತ, ಸಂಧಿ –೨೬ ಪದ್ಯ–೪೦ (ವಾರ್ಧಕ ಮೊದಲಾರ್ಧ)

ಈ ಮಗನ ಮೇಲೆ ನಿನಗಾಸೆಯುಳ್ಳೊಡೆ ಬಿಡುವೆ।
ನಾ ಮಯೂರಧ್ವಜನ ದೇಹಾರ್ಧಮಂ ಕೊಂಡು ।
ಬಾ ಮಹೀಪಾಲನಲ್ಲಿಗೆ ಪೋಗು ಕೊಲ್ಲೆನಾನನ್ನೆಗಂ ನಡೆಯೆನಲ್ಕೆ॥

ii) ತಾಮ್ರಧ್ವಜನ ಕಾಳಗ, ಪದ್ಯ–೧೬೫, ರಾಗ ಮಾರವಿ, ಏಕ ತಾಳ

ಈ ಮಗನಾಸೆ ನಿನಗಿರೆ ಬೇಗದೊ।ಳಾಮಹೀವಲ್ಲಭನ ॥
ಕೋಮಲ ಮೈಭಾಗವ ತಂದೀಯೆನೆ। ನಾ ಮನದಲಿ ನೋಡಿ ॥

೧೧. i)ಜೈಮಿನಿ ಭಾರತ, ಸಂಧಿ –೨೬ ಪದ್ಯ–೪೬ (ವಾರ್ಧಕ)

ತರಿಸಿ ಗಂಗಾ ತೋಯಮಂ ಮಜ್ಜನಂಗೈದು।
ಪರಮ ಸಾಲಗ್ರಾಮ ತೀರ್ಥಮಂ ಕೈಕೊಂಡು।
ತರುಣ ತುಳಸೀದಳದ ಮಾಲೆಯಂ ಕಂಧರದೊಳಾಂತು ಮಂಟಪಕೆ ಬಂದು॥
ನೆರೆದ ಭೂಸುರ ಸಭೆಗೆ ಸಾಷ್ಟಾಂಗದಿಂದೆರಗಿ ।
ಕರಯುಗಳಂ ಮುಗಿದು ನಿಂದು ಬಿನ್ನೈಸಿದಂ ।
ಧರಣೀಶ್ವರಾಗ್ರಣಿ ಮಯೂರಧ್ವಜಂ ಜನಾಧೀಶ ಕೇಳ್ ಕೌತುಕವನು॥

ii) ತಾಮ್ರಧ್ವಜನ ಕಾಳಗ, ಪದ್ಯ–೧೭೩, ವಾರ್ಧಕ

ಅರಿದರ್ಧ ದೇಹಮಂ ಕೊಡುವೆ ನಿನಗೆಂದು ಭೂ।

ಸುರಗಭಯವಿತ್ತು ಗಂಗಾತೋಯಮಂ ತರಿಸಿ ।
ಹರುಷದಿಂ ಮಜ್ಜನವ ಗೆಯ್ದು ಸಾಲಗ್ರಾಮ ತೀರ್ಥಮಂ ಕೈಗೊಂಡನು॥
ತರುಣ ತುಲಸಿಯ ದಂಡಮಾಲಿಕೆಯನಾಂತು ನಿಜ।
ಕೊರಳೊಳಗೆ ಬಳಿಕ ಮುಖಮಂಟಪಕೆ ಬಂದಲ್ಲಿ ।
ನೆರೆದಿಹ ಸಮೂಹಕಾನಂದದಿಂದೆರಗಿ ಸಾಷ್ಟಾಂಗದಿಂ ವಂದಿಸಿದನು ॥

೨. ಪ್ರಸಂಗ: ಯೌವನಾಶ್ವನ ಕಾಳಗ, ಕವಿ ಶಿರೂರು ಫಣಿಯಪ್ಪಯ್ಯ

ಇದೇ ರೀತಿ ಇನ್ನೊಂದು ಜೈಮಿನಿ ಭಾರತ ಆಧಾರಿತ ಯಕ್ಷಗಾನ ಪ್ರಸಂಗ ಶಿರೂರು ಫಣಿಯಪ್ಪಯ್ಯ (ಜನನ೧೯೧೮–ಮರಣ ೨೦೦೪) ವಿರಚಿತ ಯೌವನಾಶ್ವನ ಕಾಳಗ. ಇವರು ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಶಿರೂರು ಗ್ರಾಮದವರು. ಹದಿನೈದು ಯಕ್ಷಗಾನ ಪ್ರಸಂಗ ಕೃತಿಗಳನ್ನು ರಚಿಸಿದ್ದಾರೆ. ೧೯೪೦ರಲ್ಲಿ ಇವರು ಜೈಮಿನಿ ಭಾರತದ ೨, ೩ ಮತ್ತು೪ ನೆಯ ಸಂಧಿಯಲ್ಲಿ ಬರುವ ಕಥೆಯನ್ನು ಆಧರಿಸಿ ರಚಿಸಿದ ಈ ಪ್ರಸಂಗ ಕೃತಿಯನ್ನು ೨೦೨೧ ರಲ್ಲಿ ಡಾ ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಸಂಪಾದಕತ್ವದಲ್ಲಿ ಫಣಿಗಿರಿ ಪ್ರತಿಷ್ಠಾನ ಪ್ರಕಟಿಸಿದೆ.

ಈ ಕವಿ ಕೂಡ ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಹಲವು ಪದ್ಯಗಳನ್ನು ಮಾರ್ಪಡಿಸಿ ತನ್ನ ಕೃತಿಯಲ್ಲಿ ಯಕ್ಷಗಾನ ಶೈಲಿಯಲ್ಲಿ ಬಳಸಿದ್ದಾರೆ.

೧.i) ಜೈಮಿನಿ ಭಾರತ, ಸಂಧಿ ೨ ಪದ್ಯ ೧೬ (ವಾರ್ಧಕ)

ಕೆತ್ತ ಬಲ್ಗತ್ತಲೆಗೆ ತರಣಿ ಮುಂಗಾಣದಿರೆ ।
ಪೊತ್ತುವೆಳಗಂ ಬೇರೆ ತೋರ್ಪರಾರ್ ಬಿಡದೆ ಘ।
ರ್ಮೋತ್ತರಕೆ ಮಾರುತಂ ಬೆಮರ್ದೊಡಾರ್ ಬೀಸುವರ್ ಬಳಿಕಾಲವಟ್ಟದಿಂದ॥
ಕೃತ್ತಿಮದ ವಿಷದ ಸೋಂಕಿಗೆ ಗರುಡನಳವಳಿಯೆ।
ಮತ್ತೆ ರಕ್ಷೆಗೆ ಮಂತ್ರಿಸುವರಾರು ಭೂಪ ನೀ।
ನೊತ್ತುವನುತಾಪಕೆಡೆಗೊಟ್ಟೊಡಾರ್ ಬಿಡಿಸುವರ್ ಪೇಳೆಂದನಾ ಮುನಿಪನು॥

ii) ಯೌವನಾಶ್ವನ ಕಾಳಗ, ಪದ್ಯ ೨೫, ವಾರ್ಧಕ

ಚಾರುಕಗ್ಗತ್ತಲೆ ತರಣಿ ಮುಂಗಾಣದಿರೆ ।
ದಾರಿಯಂಗಾಣಿಸುವರಾರು ಮುಗಿಲೇಳ್ಗಗಮ್।
ಮಾರುತಂ ಬೆಮರಿದೊಡೆ ಮನುಜರಾರ್ ಬೀಸುವರ್ ಬಳಿಕಾಲವಟ್ಟದಿಂದ॥
ಘೋರವಿಷ ಸೋಂಕಿದಡೆ ಗರುಡನಳವಳಿಯೆ ಮ।
ತ್ತಾರು ರಕ್ಷೆಗೆ ಮಂತ್ರಿಸುವರು ಪೇಳವನೀಶ ।
ನೀ ರೀತಿಯೊತ್ತುವನು ತಾಪಕೆಡೆಗೊಟ್ಟರಾರ್ ಬಿಡಿಸುವರ್ ಪೇಳೆಂದನು॥

೨.i) ಜೈಮಿನಿ ಭಾರತ, ಸಂಧಿ ೨, ಪದ್ಯ ೫೪ (ವಾರ್ಧಕ)

ದಾಯಾದ್ಯರಿಲ್ಲ ಮಾರ್ಮಲೆವ ಪರಮಂಡಲದ ।
ನಾಯಕರ ಸುಳಿವಿಲ್ಲ ನಿನ್ನಾಣೆಗೆಲ್ಲಿಯುಮ ।
ಪಾಯಮವನಿಯೊಳಿಲ್ಲಮಿನ್ನು ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ ॥
ವಾಯುನಂದನ ಧನಂಜಯರೊಳೆರವಿಲ್ಲ ಮಾ।
ದ್ರೇಯರೊಳ್ ತಪ್ಪಿಲ್ಲ ಚತುರಂಗಕೆಡರಿಲ್ಲ ।
ರಾಯ ನಿನಗೇನು ಮಾಡುವ ರಾಜಕಾರ್ಯಮೆಂದನು ಮುರಧ್ವಂಸಿ ನಗುತ॥

ii) ಯೌವನಾಶ್ವನ ಕಾಳಗ, ಪದ್ಯ ೧೧೦, ವಾರ್ಧಕ

ಅರಸ ಕೇಳ್ ದಾಯಾದ್ಯರಿಲ್ಲ ಮಾರ್ಮಲೆವವರ್ ।
ಪರಮಂಡಲದ ನಾಯಕರ ಸುಳುಹದಿಲ್ಲ ತವ।
ಧರೆಯೊಳಗಪಾಯಮೇನಿಲ್ಲ ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ ॥
ಮರುತನಂದನ ಧನಂಜಯರೊಳೆರಡಿಲ್ಲ ಯಮ।
ಲರೊಳು ತಪ್ಪಿಲ್ಲ ಚತುರಂಗಕೆಡರಿಲ್ಲ ಪೇ।
ಳರಸ ನಿನಗೇನು ಮಾಡುವ ರಾಜಕಾರ್ಯವೆಂದನು ಮುರಧ್ವಂಸಿ ನಗುತ ॥

೩.i) ಜೈಮಿನಿ ಭಾರತ, ಸಂಧಿ ೪, ಪದ್ಯ ೨ (ವಾರ್ಧಕ)

ಉದ್ರೇಕದಿಂ ಮುನಿವರನೊಳಾಡಿ ತಪ್ಪಿದ ಗು।
ರುದ್ರೋಹಮೊಂದಚ್ಯುತನೊಳಾಡಿ ಹೊಳೆದ ದೈ।
ವದ್ರೋಹಮೆರಡರಸನವಸರಕೊದಗದ ಸ್ವಾಮಿದ್ರೋಹಮೈದೆ ಮೂರು॥
ಮದ್ರಚಿತ ವೀರಪ್ರತಿಜ್ಞೆ ಕೈಗೂಡದಾ।
ತ್ಮದ್ರೋಹಮದುವೆ ನಾಲ್ಕಿದರ ಸಂಗಡಕೆ ಧ।
ರ್ಮದ್ರೋಹಮೈದಾಗದಿಹುದೆ ತನಗಶ್ವಮಂ ಕಂಡು ಕೊಂಡೊಯ್ಯದಿರಲು॥

ii) ಯೌವನಾಶ್ವನ ಕಾಳಗ, ಪದ್ಯ ೧೪೮, ವಾರ್ಧಕ

ತರಳ ಕೇಳ್ಮೈ ಮುನಿಪನೊಡನಾಡಿ ತಪ್ಪಿರ್ದ।
ಗುರುದ್ರೋಹ ಮೊಂದಚ್ಯುತನೊಳಾಡಿ ಹೊಳೆದಿರ್ದ।
ಉರು ದೈವದ್ರೋಹಮೆರಡರಸನವಸರಕೊದಗದಿಹ ಸ್ವಾಮಿದ್ರೋಹ ಮೂರು॥
ಗರುವದಿಂದಾನಂದೊರೆದ ಭಾಷೆ ಕೈಗೂಡ ।
ದುರುತರಾತ್ಮದ್ರೋಹ ನಾಲ್ಕಿದರ ಸಂಗಡವೆ।
ಬರುವ ಧರ್ಮದ್ರೋಹಮೈದಾಗದಿಹುದೆ ತನಗಶ್ವಮನೊಯ್ಯದಿರಲು ॥

೪ i) ಜೈಮಿನಿ ಭಾರತ, ಸಂಧಿ ೨ ಪದ್ಯ ೫೯, (ವಾರ್ಧಕ)

ಆಹಾ ಮಹಾದೇವ ಚಿತ್ರಮಂ ಕೇಳಿದೆವ ।
ಲಾ ಹಲವು ಲೋಕಮಂ ಕೊಳ್ಳದೇ ನಿನ್ನುದರ।
ಮಹಾ ನಿಶಾಚರಿಯರಲ್ಲವೇ ನರಕಾಸುರನ ಮನೆಯ ಬಾಲಕಿಯರು।
ಈ ಹದಿರದೇಕೆ ಕರಡಿಯ ಮಗಳನಾಳ್ದ ನಿನ।
ಗೋಹೋ ಧರೆಯೊಳದ್ಭುತಾಕಾರರಾರೊ ನಿ।
ನ್ನೊಹೆಗಳ ಬಲ್ಲೆ ನಾನಿತ್ತ ಭಾಷೆಗೆ ತಪ್ಪೆನೆಂದು ಭೀಮಂ ನುಡಿದನು ॥

ii) ಯೌವನಾಶ್ವನ ಕಾಳಗ, ಪದ್ಯ–೧೯೯, ರಾಗ ಕಾಂಭೋಧಿ,ಝುಂಪೆ ತಾಳ

ಹರಹರೇನಿದು ಚಿತ್ರವರಿತೆವೈ ಈರೇಳು।ಧರೆಗಳನು ಕೊಳದೆ ನಿನ್ನುದರ॥
ಮುರಮಥನ ಕೇಳ್ ನಿಶಾಚರಿಯರಲ್ಲವೆ ದುರುಳ ನರಕನರಮನೆ ಬಾಲಕಿಯರು ॥
ಕರಡಿಯಾತ್ಮಜೆಯನೆಂತಾಳ್ದೆ ನೀನೆಲೆ ದೇವ।ಧರೆಯೊಳದ್ಭುತ ರೂಪ ನೀನು॥
ಅರಿಯಲಸದಳವು ನಿನ್ನಾಕಾರಗಳನೆನ್ನ।ಬರಿದೆ ಜರೆಯದಿರು ಕೇಳೆಂದ॥

೫.i) ಜೈಮಿನಿ ಭಾರತ, ಸಂಧಿ ೪ ಪದ್ಯ ೪ (ವಾರ್ಧಕ)

ಪಾತಕಿಗೆ ನುಡಿದ ನುಡಿ ಪುಸಿಯಹುದು ಪರದಾರ।
ಸೂತಕಿಗೆ ನೆನೆದೆಣಿಕೆ ಬಯಲಹುದು ಗುರು ವಿಪ್ರ।
ಘಾತಕಿಗೆ ಕಾಣ್ಬೊಡವೆ ಮರೆಯಹುದು ತಥ್ಯವಿದು ಜಗದೊಳೆನಗಾವ ಭವದ।
ಜಾತಕಿಲ್ಬಿಷವೊ ಯಾದವಕುಲ ಮಹಾಂಬುನಿಧಿ ।
ಶೀತಕಿರಣಂ ತನ್ನ ಶರಣರನುಳಿದನೊ ಹಯ।
ಮೇತಕಿಂತಕಟ ಕಾಣಿಸದೊ ಶಿವಶಿವಯೆಂದು ಪವನಜಂ ಚಿಂತಿಸಿದನು॥

ii) ಯೌವನಾಶ್ವನ ಕಾಳಗ, ಪದ್ಯ–೧೫೦,೧೫೧, ಸಾಂಗತ್ಯ

ಪಾತಕಿ ನುಡಿದ ಸೊಲ್ ಪುಸಿಯೈಸೆ ಪರದಾರ। ಸೂತಕಿಗೆಣಿಸಿದ್ದು ಬಯಲು॥
ಭೂತಳಾಮರ ಘಾತಕಿಗೆ ಕಾಣ್ಬೊಡವೆ ಕಾಣ।ದಾ ತೆರನಹುದಿದು ನಿಜವು॥
ತನಗಾದ ಭವದ ಪಾತಕವೊ ಯಾದವಕುಲ।ವನಧಿಚಂದ್ರಮನು ನಿರ್ದಯದಿ॥
ಇನಿತು ಗೈದನೊ ಹಯವನು ಕಾಣದಾದೆ ನೀ । ತನಕವೇಕಕಟ ಹಾ ಶಿವನೆ॥

ಇದೇ ರೀತಿ ಜೈಮಿನಿ ಭಾರತ ಆಧರಿಸಿ ಯಕ್ಷಗಾನ ಕವಿಗಳು ರಚಿಸಿದ, ಸುಧನ್ವ ಕಾಳಗ, ಬಬ್ರುವಾಹನ ಕಾಳಗ ಹಾಗೂ ಇತರ ಪ್ರಸಂಗ ಕೃತಿಗಳಲ್ಲಿ ಕೂಡ ಲಕ್ಷ್ಮೀಶನ ಪದ್ಯಗಳನ್ನು ತಮ್ಮ ಕೃತಿಗಳಲ್ಲಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಯಕ್ಷಗಾನ ಕವಿ ತಮ್ಮ ಸ್ವ ಸಾಮರ್ಥ್ಯದಿಂದ ನೂರಾರು ಪದ್ಯಗಳನ್ನು ರಚಿಸಿದ್ದರೂ, ಅಲ್ಲಲ್ಲಿ ಲಕ್ಷ್ಮೀಶನ ಕಾವ್ಯದ ಪದ್ಯಗಳನ್ನು ಮಾರ್ಪಡಿಸಿ ಬಳಸಿರುವುದು ಅವರು ಮೂಲ ಕವಿಗೆ ಕೊಡುವ ಗೌರವವೆಂದು ಪರಿಗಣಿಸಬಹುದು.

ಆಧಾರ ಗ್ರಂಥಗಳು:

೧. ಲಕ್ಷ್ಮೀಶ ಕವಿಯ ಜೈಮಿನಿ ಭಾರತ

೨. ರತ್ನಪುರದ ರಾಮ ಕವಿಯ ತಾಮ್ರಧ್ವಜ ಯಕ್ಷಗಾನ ಪ್ರಸಂಗ, ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯ ಉಡುಪಿ, ೧೯೫೨

೩. ಶಿರೂರು ಫಣಿಯಪ್ಪಯ್ಯ ವಿರಚಿತ ಯಕ್ಷಗಾನ ಪ್ರಸಂಗ ಯೌವನಾಶ್ವನ ಕಾಳಗ, ಡಾ ಕಬ್ಬಿನಾಲೆ ವಸಂತ ಭಾರದ್ವಾಜ್, ಫಣಿಗಿರಿ ಪ್ರತಿಷ್ಠಾನ, ೨೦೨೧

❒❒

ಅಸಾಮಾನ್ಯರ ಅಬ್ಬರದಲ್ಲಿ ಶ್ರೀಸಾಮಾನ್ಯರ ಹುಡುಕಾಟ

ಡಾ. ಶೋಭಾರಾಣಿ ಎಸ್.

❖

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗದ್ಯವಾಗಲಿ ಅಥವಾ ಪದ್ಯವಾಗಲಿ ಎರಡೂ ಕಾವ್ಯವೆನಿಸಿಕೊಳ್ಳುತ್ತಿದ್ದವು. ಪದ್ಯಕಾವ್ಯ, ಗದ್ಯಕಾವ್ಯ, ದೃಶ್ಯ ಕಾವ್ಯ ಹೀಗೆ ಸೃಜನಶೀಲ ಬರಹ ಯಾವುದೇ ಪ್ರಕಾರದಲ್ಲಿದ್ದರೂ ಅದನ್ನು ಕಾವ್ಯವೆಂದೇ ಕರೆಯುವ ರೂಢಿ ಇತ್ತು. ಈ ಹಿನ್ನೆಲೆಯಲ್ಲಿ ಪ್ರಾಚೀನ ಕನ್ನಡ ಕಾವ್ಯವೆಂದರೆ ಅದರಲ್ಲಿ ಗದ್ಯ ಮತ್ತು ಪದ್ಯ ಈ ಎರಡೂ ರೂಪಗಳಲ್ಲಿ ರಚನೆಯಾದ ಸಾಹಿತ್ಯವನ್ನು ಗಮನಿಸಬೇಕಾಗುತ್ತದೆ. ಕನ್ನಡ ಕಾವ್ಯಗಳನ್ನು ಅನುಲಕ್ಷಿಸಿ, ಪ್ರಸ್ತುತ ವಿಷಯದ ಅಧ್ಯಯನದ ದೃಷ್ಟಿಯಿಂದ ಒಟ್ಟು ಕನ್ನಡ ಕಾವ್ಯಗಳನ್ನು ಕಾಲಾನುಕ್ರಮಣಿಕೆಯಲ್ಲಿ ಮೂರು ಘಟ್ಟಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಜೊತೆಗೆ ಆಯಾ ಕಾಲಘಟ್ಟಗಳ ಯುಗಧರ್ಮಗಳು ಮತ್ತು ತಾತ್ವಿಕತೆಗಳನ್ನು ಪ್ರಧಾನವಾಗಿರಿಸಿಕೊಳ್ಳಲಾಗಿದೆ.

೧. ಆರಂಭದಿಂದ– ೧೨ನೇ ಶತಮಾನದ ಸಾಮಾಜಿಕ ಚಳುವಳಿಯವರೆಗಿನ ಕಾವ್ಯಗಳು

೨. ಸಮಾಜೋ–ಆರ್ಥಿಕ ಚಳುವಳಿಯ ನಂತರದ ಕಾಲಾವಧಿಯಿಂದ ಆಧುನಿಕ ಸಾಹಿತ್ಯದ ಆರಂಭದವರೆಗೆ ರಚನೆಯಾದ ಕಾವ್ಯಗಳು

೩. ಆಧುನಿಕ ಕನ್ನಡ ಕಾವ್ಯಗಳು (೨೦ನೇ ಶತಮಾನ)

ಈ ಅಂಶಗಳನ್ನು ವಿವರಿಸಿಕೊಳ್ಳುವ ಉದ್ದೇಶದಿಂದ ಪ್ರತಿ ಘಟ್ಟದಿಂದ ಕೆಲವು ಕಾವ್ಯಗಳನ್ನು ಮಾತ್ರ ಪ್ರಾತಿನಿಧಿಕವಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕನ್ನಡ ಕಾವ್ಯ ನಿರ್ಮಿತಿಯ ಆರಂಭಕಾಲದ ಉಪಲಬ್ಧ ಕೃತಿಗಳಿಗೆ ಸಂಬಂಧಿಸಿದಂತೆ ಅಸಾಮಾನ್ಯರ ಅಬ್ಬರದಲ್ಲಿ ಶ್ರೀಸಾಮಾನ್ಯರ ಹುಡುಕಾಟವು ಅಕ್ಷರಶ: ಹುಡುಕಾಟವೇ ಆಗಿದೆ. ಅದರಲ್ಲೂ ವಿಶೇಷವಾಗಿ ಹತ್ತರಿಂದ ಹನ್ನೆರಡನೇ ಶತಮಾನಗಳ ಕಾಲದ

ಹರಹಿನಲ್ಲಿ ರಚನೆಗೊಂಡಿರುವ ಕಾವ್ಯಕೃತಿಗಳನ್ನು ಅನುಲಕ್ಷಿಸಿ ಹೇಳುವಾಗ ಇದು ನಿಜಕ್ಕೂ ಮರುಭೂಮಿಯಲ್ಲಿ ಓಯಸಿಸ್ ಕಂಡಂತೆ. ಇಲ್ಲಿ ಸಾಮಾನ್ಯರ ಪ್ರತಿನಿಧಿಕರಣ ಇಲ್ಲವೇ ಇಲ್ಲ ಎನ್ನುವಂತಿಲ್ಲ, ಆದರೆ ಅದರ ಪ್ರಮಾಣ ಅತ್ಯಂತ ವಿರಳ ಮತ್ತು ಗೌಣ.

ಕನ್ನಡದ ಮೊದಲ ಕೃತಿ ಕವಿರಾಜಮಾರ್ಗವು

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಂ ಆರ್ಪರ್ ಆ ನಾಡವರ್ಗಳ್
ಚದುರರ್ ನಿಜದಿಂ; ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್

ಎಂದು ನಾಡವರ್ಗಳ ಕಲಾಸಕ್ತಿ, ಮೆಚ್ಚಿ ಹೊಗಳಿದ್ದರೂ, ಈ ಶ್ರೀಸಾಮಾನ್ಯರು ಕಾವ್ಯಕೃತಿಗಳನ್ನು ಬರೆಯಲು ದೊರೆತ ಅವಕಾಶಗಳು ಮತ್ತು ಇವರು ಬರೆದದ್ದಕ್ಕೆ ದೊರೆತ ಮನ್ನಣೆಗಳನ್ನು ಕುರಿತು ನಮಗೆ ದಾಖಲೆಗಳು ದೊರೆತಿಲ್ಲ. ಜೊತೆಗೆ ಈ ಕಾಲದಲ್ಲಿ ರಚನೆಯಾದ ಕಾವ್ಯಕೃತಿಗಳು ಕೂಡ ಶ್ರೀಸಾಮಾನ್ಯನನ್ನು ಮುಖ್ಯಭೂಮಿಕೆಯ ಒಳಗೆ ತಂದುಕೊಂಡದ್ದೂ ವಿರಳ ಎನಿಸುತ್ತದೆ. ಈ ಮಾತಿಗೆ ವಡ್ಡಾರಾಧನೆ ಮತ್ತು ಪಂಪಭಾರತದಂತಹ ಕೃತಿಗಳು ಕ್ವಚಿತ್ತಾಗಿಯಾದರೂ ಅಪವಾದಗಳಾಗಿ ನಿಲ್ಲುತ್ತವೆ.

ವಡ್ಡಾರಾಧನೆಯ ಕಥೆಗಳಲ್ಲಿ ರಾಜ–ರಾಣಿಯರು, ಸನ್ಯಾಸಿಗಳು, ಮಂತ್ರಿ–ಸೇನಾನಿಗಳು, ವರ್ತಕ– ವ್ಯಾಪಾರಿಗಳ ಚಿತ್ರಗಳೇ ಹೆಚ್ಚಾಗಿದ್ದರೂ ವಿರಳವಾಗಿ ಜನಸಾಮಾನ್ಯರ ಬಾಳು, ವ್ಯವಹಾರ, ಮಾತುಕತೆ, ಮನೋಧರ್ಮಗಳು ಅಲ್ಲಲ್ಲಿ ಚಿತ್ರಣಗೊಂಡಿವೆ. ಸುಕುಮಾರಸ್ವಾಮಿಯ ಕಥೆಯ ಗಂಭೀರೆ ಎಂಬ ಮುದುಕಿ, ಚಾಣಕ್ಯ ರೀತಿಯ ಕಥೆಯ ಅರವಟ್ಟಿಗೆಯ ವೃದ್ಧೆ, ತಳವರನ ಜಾಣಮಗಳು ಸುಮತಿಯ ಕಥೆಗಳು ಸಾಮಾನ್ಯ ಜನರಲ್ಲಿರುವ ಅದ್ಭುತವಾದ ಸಮಯಪ್ರಜ್ಞೆ, ಲೋಕಜ್ಞಾನ, ಜಾಣತನ, ಬದುಕುವ ಕಲೆ, ಧೈರ್ಯಗಳ ರೂಪಕಗಳಾಗಿವೆ. 'ಭದ್ರಬಾಹು ಭಟಾರರ ಕಥೆ'ಯ 'ನಂದಿಮಿತ್ರನ ಪ್ರಸಂಗ' ಜನಸಾಮಾನ್ಯನೊಬ್ಬ ತನ್ನ ಕಷ್ಟಪರಂಪರೆಗಳ ನಡುವೆಯೂ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿದ್ದರ ಚಿತ್ರಣವನ್ನು ಒಳಗೊಂಡಿದೆ. ಇಲ್ಲಿ ನಂದಿಮಿತ್ರನ ಆಧ್ಯಾತ್ಮಿಕ ಸಾಧನೆಗಿಂತ ಮುಖ್ಯವೆಸುವುದು, ಕಾಷ್ಟಕೂಟನು ಈ ತಬ್ಬಲಿ ಹುಡುಗನನ್ನು ತನ್ನ ಸ್ವಾರ್ಥಸಾಧನೆಗೆ ಬಳಸಿಕೊಳ್ಳುವ ಬಗೆ, ಅಗಾಧ ಶಕ್ತಿ ಸಾಮರ್ಥ್ಯದ ನಂದಿಮಿತ್ರ ಕಾಷ್ಟಕೂಟನ ಅಡಿಯಾಳಾಗಿ ಸವೆಸುವ ಜೀತದ ಬದುಕು ಮತ್ತು ಅದರಿಂದ ಹೊರಬರುವಲ್ಲಿ ತೋರಿದ ಧೈರ್ಯ ಮತ್ತು ಸಾಧಿಸಿದ ಉನ್ನತಿಕೆಗಳು. 'ಬೀದಿಗೆ ಬಿದ್ದ ಮಕ್ಕಳು ಗದ್ದುಗೆ ಏರುತ್ತಾರೆ'ಎಂಬ ಜನಪದ ನಿರೀಕ್ಷೆ –ಹಾರೈಕೆಗಳು ನಂದಿಮಿತ್ರನ ಕಥೆಯ ಆದ್ಯಂತ ಆವರಿಸಿರುವುದು ಓದುಗರ ಗಮನಕ್ಕೆ ಬಾರದೆ ಹೋಗುವುದಿಲ್ಲ.

ಆದರೆ ಇದು ವಡ್ಡಾರಾಧನೆಯ ಧಾರ್ಮಿಕ ಪಾತಳಿಯೊಳಗೆ ಬೂದಿ ಮುಚ್ಚಿದ ಕೆಂಡದಂತೆ ಅಂತರ್ಗತವಾಗಿ ಹುದುಗಿದೆ ಅಷ್ಟೇ.

ಕನ್ನಡ ಕಾವ್ಯಗಳಲ್ಲಿ ಸಾಮಾನ್ಯರ ಬದುಕು ನಿರೂಪಣೆಗೆ ಒಳಪಡುವುದು ಅಂತರ್ಗತವಾಗಿಯೇ. ಅದು ಬಾಹ್ಯವಾಗಿ ಪ್ರಕಟಗೊಳ್ಳುವುದು ತೀರ ಅಪರೂಪ. ಆದಿಪುರಾಣ ಮತ್ತು ಪಂಪ ಭಾರತಗಳನ್ನು ಗಮನಿಸಿದರೂ ಇದು ಸ್ಪಷ್ಟವಾಗುತ್ತದೆ. ಶ್ರೀಮತಿಯ ದಾದಿಯಾದ ಪಂಡಿತೆ ಹೆಸರಿಗೆ ತಕ್ಕಂತೆ ಪಾಂಡಿತ್ಯವುಳ್ಳವಳು; ಶ್ರೀಮತಿಗೆ ಸಕಲ ಶಿಕ್ಷಣವನ್ನೂ ನೀಡಿ 'ಪರಮ ಪಂಡಿತೆ' ಯನ್ನಾಗಿಸಿದವಳು. ಶ್ರೀಮತಿ– ವಜ್ರಜಂಘರ ಸಮಾಗಮದ ಪ್ರಸಂಗದಾದ್ಯಂತ ಈಕೆಯ ಬುದ್ಧಿವಂತಿಕೆ ಮತ್ತು ಸಮಯ ಪ್ರಜ್ಞೆಗಳು ಹರಳುಗಟ್ಟಿವೆ. ಪಂಪಭಾರತ ಕವಿಯ ದೃಷ್ಟಿಯಿಂದ ಲೌಕಿಕ ಕಾವ್ಯ. ಹೀಗಾಗಿ ತನಗೆ ಸರಿ ಎನಿಸಿದ ಮಾರ್ಗದಲ್ಲಿ ಬದುಕಿನ ಸತ್ಯಗಳನ್ನು ಶೋಧಿಸಲು ಅವನಿಗೆ ಸ್ವಾತಂತ್ರ್ಯವಿದೆ. ಹಾಗಾಗಿ ಆದಿಪುರಾಣದಲ್ಲಿಲ್ಲದ ಶ್ರೀಸಾಮಾನ್ಯ ಪಾತ್ರಗಳ ಪ್ರವೇಶ ಪಂಪಭಾರತದಲ್ಲಾಗುತ್ತವೆ. ಪಾಂಡವರು ವನವಾಸಕ್ಕೆ ತೆರಳುವ ಸಂದರ್ಭ, ಕೀಚಕ ಪ್ರಸಂಗ ಮೊದಲಾದ ಕಡೆಗಳಲ್ಲಿ ಪ್ರಭುತ್ವಕ್ಕೆ ಇರದ ವಿವೇಕ ಶ್ರೀಸಾಮಾನ್ಯರ ಮಾತಿನಲ್ಲಿ ಪ್ರಕಟಗೊಳ್ಳುತ್ತವೆ.

ಪ್ರಭುತ್ವದ ಭಯ/ನಿಯಂತ್ರಣಗಳೇನೇ ಇದ್ದರೂ ಸಂದರ್ಭೋಚಿತವಾಗಿ ಜನಸಾಮಾನ್ಯರ ಪ್ರತಿಕ್ರಿಯೆಗಳು ದಾಖಲಾಗಿವೆ. ಕೇವಲ ವಿವೇಕ ಮಾತ್ರವಲ್ಲ ಪರಾಕ್ರಮದಲ್ಲೂ ಶ್ರೀಸಾಮಾನ್ಯರು ಹಿಂದೆ ಬಿದ್ದಿಲ್ಲ. ತುರುಗೋಳಿನಲ್ಲಿ ತುರುಗಾರರು ನಡೆಸಿದ ಹೋರಾಟವು ಕೇವಲ ಪ್ರತಿಷ್ಠೆಯ ಯುದ್ಧವಾಗಿರದೆ ಗೋಪಾಲಕರ ಪಾಲಿಗೆ ಬದುಕಿನ ಉಳಿವಾಗಿರುತ್ತದೆ, ತಮ್ಮ ಕಸುಬು, ಅದರಿಂದ ತಾವು ಕಟ್ಟಿಕೊಂಡ ಬದುಕಿನ ಬಗೆಗೆ ಅಪಾರ ವಿಶ್ವಾಸ ಮತ್ತು ಶ್ರದ್ಧೆಯುಳ್ಳ ಜನಸಾಮಾನ್ಯರು ಎಲ್ಲೆಲ್ಲಿ ಅದಕ್ಕೆ, ಅದರ ಉಳಿವಿಗೆ ಆತಂಕಗಳು ಬಂದಿವೆಯೋ ಅಲ್ಲೆಲ್ಲ ಪ್ರಾಣವನ್ನು ಲೆಕ್ಕಿಸದೆ ಹೋರಾಡುವ ಕೆಚ್ಚನ್ನು ತಮ್ಮದೇ ನಿರಂತರ ಹೋರಾಟದ ಬದುಕಿನಿಂದ ಗಳಿಸಿರುತ್ತಾರೆ. ಇನ್ನು ಯುದ್ಧ ಭೂಮಿಯಲ್ಲಂತೂ ರಾಜಭಕ್ತಿಗಾಗಿ, ವೀರಸ್ವರ್ಗಕ್ಕಾಗಿ, ಜೋಳವಾಳಿಗಾಗಿ ಹೋರಾಡುವ ಸಾಮಾನ್ಯ ಸೈನಿಕರ ಸಂಖ್ಯೆಯೇನೂ ಕಡಿಮೆಯಿಲ್ಲ. ರಾಜ್ಯಭಕ್ತಿಯೋ, ವೀರಸ್ವರ್ಗವೋ, ಜೋಳವಾಳಿಯೋ ಯಾವುದಕ್ಕಾದರೇನು! ಕೊನೆಗೆ ಬಲಿಯಾಗುವುದು ಶ್ರೀಸಾಮಾನ್ಯನೇ ತಾನೇ! ಕುವೆಂಪುರವರ 'ಸ್ಮಶಾನ ಕುರುಕ್ಷೇತ್ರಂ' ನಾಟಕ ಈ ಸಂದರ್ಭವನ್ನು ಬಹಳ ಮನೋಜ್ಞವಾಗಿ ಮತ್ತು ವಿಚಾರಪೂರ್ಣವಾಗಿ ಮರು ನಿರ್ಮಿಸಿದೆ.

'ಪಂಪಭಾರತ'ದಲ್ಲಿ ಯುದ್ಧವೊಂದರ ಪ್ರಸಂಗದಲ್ಲಿ ಯುದ್ಧದಲ್ಲಿ ಹೋರಾಡಿ 'ವೀರಸ್ವರ್ಗ'ವನ್ನು ಪಡೆಯುತ್ತೇನೆ ಎನ್ನುವ ವೀರಸೈನಿಕರು ಒಂದೆಡೆಯಾದರೆ, ಅವರ

ಪತ್ನಿಯರ ನಿರ್ಧಾರ ಮತ್ತೊಂದೆಡೆ. ವೀರಮರಣಕ್ಕೆ ಸಿದ್ಧವಾಗಿರುವ ಪ್ರಿಯಕರನನ್ನು ಹುರಿತುಂಬಿಸಿ ತಾನೂ ನಾಳೆ ಅವನೊಡನೆ ಸಹಗಮನ ಮಾಡುವುದಾಗಿ ಒಬ್ಬಳು ನಿರ್ಧರಿಸಿದರೆ, ಮತ್ತೊಬ್ಬಳು 'ತನಗೆ ಓಲೆಭಾಗ್ಯವಿರುವುದರಿಂದ ನಿನಗೆ ಸಾಯುವ ಸಂದರ್ಭವೇ ಬರುವುದಿಲ್ಲ' ಎಂದು ಗಂಡನನ್ನು ಯುದ್ಧಕ್ಕೆ ತೆರಳಲು ಪ್ರೋತ್ಸಾಹಿಸುತ್ತಾಳೆ. ಈ ವೀರರ ಮತ್ತು ಅವರ ಮಡದಿಯರ ಮಾತುಗಳು ಧೀರೋದಾತ್ತತೆಯ ನುಡಿಗಳಂತೆ ಕಂಡು ಓದುಗರಲ್ಲಿ ರೋಮಾಂಚನ ಮೂಡಿಸುತ್ತವೆ ನಿಜ; ಆದರೆ ಇದೆಲ್ಲದರ ಆತ್ಯಂತಿಕ ಪರಿಣಾಮ ಸಾವು– ನೋವುಗಳೆ ಎಂದಾದಾಗ ಈ ಎಲ್ಲಾ ಮಾತುಗಳು ಸಿನಿಕತೆಯನ್ನು ಧ್ವನಿಸುತ್ತವೆ. ತಮ್ಮ ಪ್ರತಿಷ್ಠೆ ಮತ್ತು ಹಿತಾಸಕ್ತಿಗಳ ಸಾಧನೆಗಾಗಿ ಪ್ರಭುತ್ವವು ಹೇಗೆ ಸಾಮಾನ್ಯ ಜನರಲ್ಲಿ ಋಣದ, ಸ್ವರ್ಗ– ನರಕಗಳ ನಂಬಿಕೆಗಳನ್ನು ಬಿತ್ತುತ್ತವೆ ಮತ್ತು ಹೇಗೆ ಈ ನಂಬಿಕೆಗಳನ್ನು ಅನುಕರಣೀಯ ಆದರ್ಶಗಳನ್ನಾಗಿ, ಮೌಲ್ಯಗಳನ್ನಾಗಿ ಬಿಂಬಿಸಿ ಅವರ ಅಭಿಪ್ರಾಯಗಳನ್ನು ನಿಯಂತ್ರಿಸುತ್ತವೆ ಎಂಬುದನ್ನು ಗಮನಿಸಿದರೆ ಜನಸಾಮಾನ್ಯರ ವಿವೇಕಪ್ರಜ್ಞೆಯನ್ನು ಪ್ರಭುತ್ವ ಹೈಜಾಕ್ ಮಾಡಿರುವ ಕ್ರಮ ಸ್ಪಷ್ಟವಾಗುತ್ತದೆ.

ರನ್ನನ 'ಸಾಹಸಭೀಮ ವಿಜಯಂ' ಕೃತಿ ಅದ್ಭುತವಾದ ಕಾವ್ಯಾಂಶಗಳನ್ನು ಒಳಗೊಂಡ ಕಾವ್ಯ ಎಂಬುದರಲ್ಲಿ ಎರಡು ಮಾತಿಲ್ಲ. ರನ್ನನೇ ಹೇಳಿಕೊಂಡಂತೆ ವಾಗ್ದೇವಿಯ ಭಂಡಾರದ ಬೀಗಮುದ್ರೆಯನ್ನು ಒಡೆದಿರುವುದೂ ಸತ್ಯ. ಆದರೆ ಒಂದೆರಡು ಕಡೆಗಳಲ್ಲಿ ಬಿಟ್ಟರೆ ಉಳಿದಂತೆ ಇಡೀ ಕಾವ್ಯ ಅಸಾಮಾನ್ಯರ ಕತೆಯಾಗಿಯೇ ಹೇಳಲ್ಪಟ್ಟಿದೆಯೇ ಹೊರತು ಶ್ರೀಸಾಮಾನ್ಯರ ದನಿ ವಿಶೇಷವಾಗಿ ಕೇಳುವುದಿಲ್ಲ. ಪಿಶಾಚಿಗಳ ಹಿಂಡಿನಿಂದ ತಮ್ಮ ಒಡೆಯರ ಹೆಣಗಳನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾದ ಸೈನಿಕರು ದುರ್ಯೋಧನನನ್ನು ಕುರಿತು 'ಅಂಧನೃಪನಸುತನಯೋ ಜಾತ್ಯಂಧನೆಯೋ ಮೆಟ್ಟದೆ ಅಗಲ್ದು ಪೋಗು' ಎನ್ನುವ ಮರುಳುಗಳು ದುರ್ಯೋಧನನೊಡನೆ ಮಾತಿಗಿಳಿಯುವಂತಹ ಕೆಲವು ಪ್ರಸಂಗಗಳನ್ನು ಹೊರತುಪಡಿಸಿದರೆ ಉಳಿದಂತೆ ಕಾವ್ಯ ರಾಜರ, ಮಂತ್ರಿಗಳ, ಅತಿರಥ –ಮಹಾರಥಿಗಳ ವರ್ಣನೆಯಿಂದ ತುಂಬಿದೆ. ಹೀಗಲ್ಲದೆ, ಭೀಮನ ಸಾಹಸದ ವರ್ಣನೆಗೆ ಕೊಟ್ಟಷ್ಟು ಆದ್ಯತೆಯನ್ನು ಅದರ ಪರಿಣಾಮದ ಚಿಂತನೆಗೆ ನೀಡಿದ್ದರೆ ರನ್ನನು ಕನ್ನಡ ಕಾವ್ಯ ಪರಂಪರೆಯಲ್ಲಿ ಅರ್ಥಪೂರ್ಣ ಮಾದರಿಯೊಂದರ ಮಾರ್ಗಪ್ರವರ್ತಕನಾಗುತ್ತಿದ್ದ ಎನಿಸುತ್ತದೆ.

ಈ ಘಟ್ಟದಲ್ಲೇ ಗಮನಿಸಬಹುದಾದ ಮತ್ತೆ ಕೆಲವು ಕಾವ್ಯಕೃತಿಗಳು ನಾಗವರ್ಮನ 'ಕರ್ನಾಟಕ ಕಾದಂಬರಿ', ನಾಗಚಂದ್ರನ 'ಪಂಪ ರಾಮಾಯಣ' ಹಾಗೂ ಜನ್ನಕವಿಯ 'ಯಶೋಧರ ಚರಿತೆ'. ಕಥೆ–ಒಳಕಥೆಗಳ, ಭವಾವಳಿಗಳ ನಿಬಿಡ ಕಾನನದಂತಿರುವ 'ಕಾದಂಬರಿ' ಕಾವ್ಯ ಹಲವು ಜನಸಾಮಾನ್ಯರನ್ನು ಮುಖ್ಯಕಥೆಯೊಳಗೇ ಚಿತ್ರಿಸಿದೆ.

ವೈಶಂಪಾಯನ ಗಿಳಿ ಹೇಳುವ, ಆ ಮೂಲಕ ಕವಿ ಕಟ್ಟಿಕೊಡುವ ಜೀವನ ದರ್ಶನಗಳು ಶ್ರೀಸಾಮಾನ್ಯರ ಬದುಕಿನ ಮೌಲ್ಯಗಳೇ ಆಗಿರುವುದು ಗಮನಾರ್ಹ. ಜಾಬಾಲಿ ಮಹರ್ಷಿಗಳ ಆಶ್ರಮದ ವರ್ಣನೆಯು ಯಾವ ಕೃತಕ ವೈಭವಗಳೂ ಇಲ್ಲದ ಸಾತ್ವಿಕ /ಸರಳ ಬದುಕಿನ ತಾಪಸಿಗಳ ಜೀವನಕ್ಕೆ ಕನ್ನಡಿ ಹಿಡಿದಂತಿದೆ. ಕಾವ್ಯದುದ್ದಕ್ಕೂ ಬರುವ ಕಂಚುಕಿಯರು, ಸಖಿಯರು, ಸೇವಕಿಯರ ಮಾತುಗಳಲ್ಲಿ ಪ್ರಕಟವಾಗುವ ವಿವೇಕ ಮತ್ತು ಲೋಕಜ್ಞಾನವನ್ನು ಕಂಡಾಗ ಕವಿಗೂ ಅರಿವಿಲ್ಲದೆ ಈ ಸಾಮಾನ್ಯ ಜನರು ಕಾವ್ಯದೊಳಗೆ ಅನಿವಾರ್ಯ ಮತ್ತು ಪ್ರಧಾನ ಎಂಬಂತೆ ಬೆರೆತುಬಿಟ್ಟಿದ್ದಾರೆ ಹಾಗೂ ಇವರಿಲ್ಲದೆ ಕಾವ್ಯಕ್ಕೆ ವಾಸ್ತವವಾಗಿ ಚಲನೆಯೇ ಇರುತ್ತಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ನಾಗಚಂದ್ರನ 'ಪಂಪರಾಮಾಯಣ' ಕಾವ್ಯವಾಗಿ ಅಗ್ಗಳಿಕೆಯುಳ್ಳದ್ದು.

ಮಾನವ ಸ್ವಭಾವಗಳ ಸೂಕ್ಷ್ಮ ಪರಿಚಯ, ಪಾತ್ರ ಚಿತ್ರಣಗಳಲ್ಲಿ ಪ್ರಕಟವಾಗಿರುವ ಕವಿಪ್ರತಿಭೆ ಅಸದೃಶವಾದುದು ನಿಜ. ಆದರೆ ಕಾವ್ಯವನ್ನು ಒಟ್ಟಂದದಲ್ಲಿ ಗಮನಿಸಿದಾಗ ಅಲ್ಲಿರುವುದು ಅದೇ ಭವಾವಳಿಗಳ ವರ್ಣನೆ; ಚಕ್ರವರ್ತಿಗಳ, ದೈತ್ಯರಾಜರ, ಮಹಾವೀರರ ಬದುಕು; ಯುದ್ಧ– ಸಾಹಸ– ಪರಾಕ್ರಮಗಳ ಚಿತ್ರಣವೇ. ನಾಗಚಂದ್ರ ರಾವಣನ ಪಾತ್ರವನ್ನು ಸಾಕಷ್ಟು ಉದಾತ್ತಗೊಳಿಸಿದ್ದನಾದರೂ ಅದು ಅಷ್ಟಕ್ಕೇ ನಿಂತುಬಿಡುತ್ತದೆ. ಕುವೆಂಪುರವರ "ರಾಮಾಯಣ ದರ್ಶನಂ" ನಲ್ಲಿಯಂತೆ ಮಾನವೀಯ ನೆಲೆಯಲ್ಲಿ ಬೆಳೆದು ನಿಲ್ಲುವುದಿಲ್ಲ. ಇಲ್ಲಿ ಶ್ರೀಸಾಮಾನ್ಯರೇನಿದ್ದರೂ ಪ್ರಬಲವರ್ಗದಿಂದ ನಿಯಂತ್ರಿಸಲ್ಪಡುವ ಅಥವಾ ಶರಣಾಗತಿಗೆ ಸಲ್ಲುವ ಶಬರರಾಗಿಯೋ, ಮುಖ್ಯಪಾತ್ರಗಳ ದುರ್ಗತಿಗೆ ಮರುಗುವ ಗುಂಪಾಗಿಯೋ, ಹೊಗಳುಭಟ್ಟರಾಗಿಯೋ ಕಾಣಿಸಿಕೊಳ್ಳುತ್ತಾರೆ. ಕಾವ್ಯದಲ್ಲಿ ಶ್ರೀಸಾಮಾನ್ಯರ ಬದುಕಿನ ಚಿತ್ರಣವೆಂದರೆ ಕೇವಲ ಯುದ್ಧಭೂಮಿಯದ್ದು. ಇಲ್ಲಿ ಅವರು ಯಥಾಪ್ರಕಾರ ವೀರಯೋಧರಾಗಿ ಕಾದಾಡಿ ಮಡಿಯುವ ಯುದ್ಧ ಸಾಧನಗಳಷ್ಟೇ ಆಗಿದ್ದಾರೆ.

'ಯಶೋಧರ ಚರಿತೆ' ರಾಜನಾದ ಯಶೋಧರನ ಬದುಕು ಮತ್ತು ಆತನ ಕೇವಲಸಿದ್ಧಿಯ ಕಥೆ. ಇಲ್ಲಿ ಪ್ರಧಾನ ಆದ್ಯತೆ ಯಶೋಧರ ಪ್ರತಿನಿಧಿಸುವ ಉನ್ನತ ವರ್ಗದ ಬದುಕಿನ ಚಿತ್ರಣಕ್ಕೆ. ಇದರ ನಡುವೆಯೂ ಜನ್ನ ಆನುಷಂಗಿಕವಾಗಿ ಪರ್ಯಾಯ ಸಂಸ್ಕೃತಿಯನ್ನು ವರ್ಣಿಸುತ್ತಾನೆ; ಜೈನಧರ್ಮದ ವ್ರತಾಚರಣೆಗಳ ಎದುರಿಗೆ ಕಾಡಿನಮಾರಿ ಜಾತ್ರೆಯನ್ನು ಮುಖಾಮುಖಿ ಮಾಡುತ್ತಾನೆ; ಕೃತಿಯ ಆರಂಭದಲ್ಲೇ ಅರಣ್ಯ ಸಂಸ್ಕೃತಿಯ ದೈವಾಚರಣೆಯ ವಿವರಗಳನ್ನು ವಿಸ್ತಾರವಾಗಿ ನೀಡುತ್ತಾನೆ. ಆದರೆ ಅಂತಿಮವಾಗಿ ಅವನ ಒಲವಿರುವುದು ಜಿನಮತದ ಸಿದ್ಧಾಂತಗಳ ಕಡೆಗೇ. ಹಾಗಾಗಿಯೇ ಮಾರಿದತ್ತ

ಮತ್ತು ಮಾರಿದೇವತೆ ಇಬ್ಬರೂ ಕೊನೆಯಲ್ಲಿ ಮನಃಪರಿವರ್ತನೆಗೊಂಡು ಹಿಂಸೆಯನ್ನು ತ್ಯಜಿಸಿ ಅಹಿಂಸಾವ್ರತಿಗಳಾದರು ಎನಿಸುವಲ್ಲಿ ಕಾವ್ಯವನ್ನು ಕೊನೆಗೊಳಿಸಿದ್ದಾನೆ ಕವಿ.

ಇಲ್ಲಿನ ಮತ್ತೊಂದು ಮುಖ್ಯ ಪಾತ್ರ ದೂದವಿ. ಅಮೃತಮತಿಯ ಕೆಳದಿಯೂ ಆದ ಈಕೆ 'ಅತಿನುತ್ನಗೀತ ಪಾತನವಿಕಲಸ್ವಾಂತೆ' ಯಾಗಲು ಹೊರಟ ಅಮೃತಮತಿಯನ್ನು ತಡೆಯಲು ಪರೋಕ್ಷವಾಗಿ ಪ್ರಯತ್ನಿಸುತ್ತಾಳಾದರೂ ಆಕೆಯ ವಿವೇಕದ ಮಾತುಗಳು ಅಮೃತಮತಿಯನ್ನು ತಲುಪುವುದೇ ಇಲ್ಲ. ಅಮೃತಮತಿಯ ಅಸಂಗತ ನಡೆಯನ್ನು ನೇರವಾಗಿ ಟೀಕಿಸಿ ಬುದ್ಧಿ ಹೇಳುವ ಅಧಿಕಾರ ದೂದವಿಗಿಲ್ಲ. ಎಷ್ಟಾದರೂ ಸಾಮಾನ್ಯ ಸೇವಕಿಯಾದ ಆಕೆ ಪ್ರಭುತ್ವಕ್ಕೆ ಅಧೀನ. ಇನ್ನು ಸಾಮಾನ್ಯ ಮಾವುತನಾದ ಅಷ್ಟಾವಂಕ ಮಹಾರಾಣಿ ಅಮೃತಮತಿಯ ಬಯಕೆಗೆ ಒದಗಿದ ಸಾಧನ. ಕವಿಯ ದೃಷ್ಟಿಯಲ್ಲಿ ಬದಗ, ಕ್ಷುದ್ರ ಸೇವಕ, ಅಲ್ಪಮಾನವ. ಅಮೃತಮತಿಯ ಮನೋಭಿಲಾಶೆಯನ್ನೂ ಮತ್ತು ಯಶೋಧರನ ಮನಃಕ್ಲೇಶವನ್ನೂ ಸುದೀರ್ಘವಾಗಿ ವರ್ಣಿಸಿರುವ ಜನ್ನ ಅಷ್ಟಾವಂಕನಿಗೆ ಅಮೃತಮತಿಯಲ್ಲಿ ಎಂತಹ ಸ್ನೇಹವಿತ್ತು? ಎಂತಹ ಭಾವನೆ ಇತ್ತು? ಎಂಬುದನ್ನು ಸೂಚಿಸುವ ಗೋಜಿಗೂ ಹೋಗುವುದಿಲ್ಲವೆಂಬುದನ್ನು ಗಮನಿಸಿದಾಗ ಮತ್ತೊಮ್ಮೆ ಅಸಾಮಾನ್ಯರ ಅಬ್ಬರದಲ್ಲಿ ಶ್ರೀಸಾಮಾನ್ಯ ಕಳೆದುಹೋಗಿದ್ದಾನೆ ಎನಿಸುತ್ತದೆ.

ವಚನ ಚಳುವಳಿಯ ನಂತರದ ಕಾಲಾವಧಿಯಿಂದ ಆಧುನಿಕ ಸಾಹಿತ್ಯದ ಆರಂಭದವರೆಗಿನ ಕಾಲ ಕನ್ನಡ ಕಾವ್ಯ ಜಗತ್ತಿನಲ್ಲಿ ವಿಶಿಷ್ಟವೂ ವಿಭಿನ್ನವೂ ಆದದ್ದು. ಇದು ವಸ್ತುವೈವಿಧ್ಯತೆಯಿಂದ ಹಿಡಿದು ಅಭಿವ್ಯಕ್ತಿ ಕ್ರಮ ಮತ್ತು ಆಶಯಗಳವರೆಗೂ ಹೊಸತನವನ್ನು ಮೈಗೂಡಿಸಿಕೊಂಡಿತು. ಹನ್ನೆರಡನೇ ಶತಮಾನದಲ್ಲಿ ಜರುಗಿದ ಸಾಮಾಜಿಕ, ಆರ್ಥಿಕ ಮತ್ತು ಭಕ್ತಿ ಕೇಂದ್ರಿತ ಚಳುವಳಿಯ ಪ್ರಭಾವ ಅಂದಿನ ಕವಿಗಳ ಲೋಕಗ್ರಹಿಕೆಯ ಮೇಲೆ ಅಪಾರ ಪರಿಣಾಮ ಬೀರಿತು. ಲೋಕಗ್ರಹಿಕೆಯಲ್ಲಿ ಆದ ಈ ಪಲ್ಲಟ/ ಬದಲಾವಣೆ ಅವರ ಕಾವ್ಯ ರಚನೆಯನ್ನು ಪ್ರಭಾವಿಸಿತು. ಇದರ ಪರಿಣಾಮವಾಗಿ ಧಾರ್ಮಿಕತೆಯ ಜಾಗದಲ್ಲಿ ಅನುಭಾವ/ಅಧ್ಯಾತ್ಮ ಮತ್ತು ಪುರಾಣದ ಜಾಗದಲ್ಲಿ ಚರಿತ್ರೆ / ವರ್ತಮಾನಗಳು ಸ್ಥಳ ಪಡೆದವು. ಈ ಗುರುತರ ಬದಲಾವಣೆಗಳು ಹರಿಹರ ಮತ್ತು ರಾಘವಾಂಕರಂತಹ ಕವಿಗಳನ್ನು ಸೃಷ್ಟಿಸಿತು.

ಹರಿಹರನ ಗಿರಿಜಾ ಕಲ್ಯಾಣ –ಹಿಮವಂತರಾಜನ ಮಗಳು ರಾಜಕುಮಾರಿ ಗಿರಿಜೆಯ ವಿವಾಹದ ಕಥೆಯಾದರೂ ಕಾವ್ಯದೊಳಗೆ ಹಲವಾರು ಸಂದರ್ಭ/ ವರ್ಣನೆಗಳು, ಮುನಿಕುಮಾರರ, ಋಷ್ಯಾಶ್ರಮಗಳ ದಿನಚರಿ, ಬೇಡರ ಬದುಕು, ಬೇಟೆಯ ಚಿತ್ರಗಳು, ಶಬರ ಸ್ತ್ರೀಯರ ಕಲೆಗಾರಿಕೆ ಮೊದಲಾದ ಹತ್ತಾರು ವಿವರಗಳಿಂದ ತುಂಬಿದೆ. ಆದರೆ

ಈ ವರ್ಣನೆಗಳು ಪ್ರಾಚೀನ ಕನ್ನಡ ಕಾವ್ಯಗಳ ಅಷ್ಟಾದಶವರ್ಣನೆಗಳಿಂದ ಹೊರತಾದುದಲ್ಲ. ಹಾಗಾಗಿ ಇಂತಹ ವರ್ಣನೆಗಳಲ್ಲಿ ಸಾಮಾನ್ಯರ ದೈನಂದಿನ ಬದುಕನ್ನು ಹರಿಹರ ಚಿತ್ರಿಸಿದ್ದಾನಾದರೂ ಅದು ತೀರಾ ಹೊಸದು ಅಥವಾ ವಿಶಿಷ್ಟ ಎಂದೆನಿಸುವುದಿಲ್ಲ. ಹಾಗೆ ನೋಡಿದರೆ ಸಾಮಾನ್ಯತೆ ಮತ್ತು ಶ್ರೀಸಾಮಾನ್ಯರು ಕಾವ್ಯದ ಪ್ರಧಾನ ಭೂಮಿಕೆಯಲ್ಲಿ ಕಾಣಿಸಿಕೊಂಡಿರುವುದು ಹರಿಹರನ ರಗಳೆಗಳಲ್ಲಿ. ಹರಿಹರನ ಬಹುತೇಕ ರಗಳೆಗಳ ನಾಯಕರು ತಳಸಮುದಾಯಗಳ ಶಿವಭಕ್ತರು. ರಗಳೆಗಳ ನಾಯಕರಾಗಲು ಅವರ ಸಾಮಾಜಿಕ ಮತ್ತು ಆರ್ಥಿಕ ಅಂತಸ್ತುಗಳಾವುವೂ ಕಾರಣವಾಗದೆ, ಕೇವಲ ದಡಭಕ್ತಿ ಮತ್ತು ಶಿವನಿಷ್ಠೆಗಳೆ ಪ್ರಧಾನವಾಗುತ್ತವೆ. ಹರಿಹರ ತನ್ನ ಕಾವ್ಯಗಳಿಗೆ ನಾಯಕರನ್ನು ಆಯ್ದುಕೊಳ್ಳುವಲ್ಲಿಯೇ ಸಾಮಾನ್ಯರಲ್ಲಿರುವ ಅಸಾಮಾನ್ಯತೆಯನ್ನು ಅರ್ಹತೆಯಾಗಿ/ ಮಾನದಂಡವಾಗಿ ಸ್ವೀಕರಿಸಿದ್ದಾನೆ. ಹಾಗಾಗಿ ಬ್ರಾಹ್ಮಣ–ಕ್ಷತ್ರಿಯ– ವೈಶ್ಯ– ಶೂದ್ರರೆನ್ನದೆ, ಅರಸ –ಸೇವಕರನ್ನದೆ, ನಾಡು– ಕಾಡವರೆನ್ನದೆ ಎಲ್ಲರ ಬದುಕೂ ಕಾವ್ಯಕ್ಕೆ ವಸ್ತುವಾಗಿವೆ; ಎಲ್ಲರೂ ಅವರವರ ಬದುಕಿನ ನಾಯಕರೇ ಆಗಿರುತ್ತಾರೆ. ಈ ಸಮಾನತೆಯ ನೆಲೆಯೊಳಗೆ ಎಲ್ಲರೂ ಒಂದೇ. ಇಲ್ಲಿ ಯಾರು ಹೆಚ್ಚಲ್ಲ, ಯಾರೂ ಕಡಿಮೆಯಲ್ಲ. ಇಂತದೊಂದು ಅದ್ಭುತವಾದ ಜೀವನದರ್ಶನ ಹರಿಹರನ ರಗಳೆಗಳಲ್ಲಿದೆ ಮತ್ತು ಈ ಕಾಣ್ಕೆಯ ಹಿಂದೆ ನಿಸ್ಸಂದೇಹವಾಗಿ ವಚನ ಚಳವಳಿಯ ಪ್ರಭಾವವಿದೆ.

'ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು ಎರಡಿಲ್ಲ' ವೆಂಬ ತತ್ವವನ್ನು ಜಗತ್ತಿಗೆ ಸಾರುವುದೇ ಮುಖ್ಯ ಉದ್ದೇಶವಾಗುಳ್ಳ 'ಹರಿಶ್ಚಂದ್ರ ಕಾವ್ಯ' ತನ್ನ ಕಥಾಹಂದರದೊಳಗೆ ಹರಿಶ್ಚಂದ್ರನ ಶಿವಭಕ್ತಿ –ನಿಷ್ಠೆಗಳ ಪ್ರಕಟಣೆಗಿಂತ ಮೇಲಾಗಿ ಆತನ ಸತ್ಯ ಸಂಧತೆಯ ಪ್ರಕಟಕ್ಕೆ ವಿಶೇಷ ಒತ್ತು ನೀಡುತ್ತದೆ. ಇದರೊಂದಿಗೆ ಅಂದಿನ ಸಾಮಾಜಿಕ ಸಂದರ್ಭದಲ್ಲಿನ ಸರ್ವ ಸಮಾನತೆಯ ಮೌಲ್ಯ ಕಾವ್ಯದೊಳಗೂ ಇಳಿದಿದೆ. ಹಾಗಾಗಿ ಇಲ್ಲಿ ಆತನ ಸತ್ಯನಿಷ್ಠೆ ಮಾತ್ರವಲ್ಲದೆ ಅವನೊಳಗೆ ಜಾತ್ಯಾಭಿಮಾನದ ದೋಷವೂ ನಿಕಷಕ್ಕೆ ಒಡ್ಡಲ್ಪಡುತ್ತದೆ. ಹಾಗೆ ನೋಡಿದರೆ ಹರಿಶ್ಚಂದ್ರ ಕಾವ್ಯ' ಅರಸನಾದ ಹರಿಶ್ಚಂದ್ರ ಕಾಲಾಂತರದಲ್ಲಿ ತನ್ನೊಳಗಿದ್ದ ಶ್ರೇಷ್ಠತೆಯ ದುರಭಿಮಾನವನ್ನೂ, ಶ್ರೀಮಂತಿಕೆಯ ಹಮ್ಮುಗಳನ್ನೂ ನೀಗಿಕೊಂಡು ನಿರಂತರ ಕಷ್ಟ ಪರಂಪರೆಯೊಳಗೆ ಬೆಂದು, ಪುಟಕ್ಕಿಟ್ಟ ಚಿನ್ನದಂತೆ ಹೊರಬರುವ ಕಥೆ. ಚಾಂಡಾಲಕನ್ಯೆಯರಿಗೂ ಹರಿಶ್ಚಂದ್ರನಿಗೂ ನಡೆಯುವ ವಾದ ಅಂದು ಸಮಾಜದಲ್ಲಿದ್ದ ಶ್ರೇಷ್ಠ– ಕನಿಷ್ಠಗಳೆಂಬ, ಮೇಲು– ಕೀಳುಗಳೆಂಬ ತಾರತಮ್ಯವನ್ನು ನೇರವಾಗಿ ಪ್ರಶ್ನಿಸುತ್ತದೆ. ಹೀಗೆ ಪ್ರಶ್ನಿಸುವವರು ಚಾಂಡಾಲಕನ್ಯೆಯರಾದ ಗಾನರಾಣಿಯರು ಎಂಬುದು ಕಾವ್ಯವನ್ನು ಮತ್ತಷ್ಟು ಜನಪರಗೊಳಿಸುತ್ತದೆ. ಒಂದೊಮ್ಮೆ 'ಹೊಲತಿಯರು ನೀವೆನೆ ನಿಮ್ಮ ಜವ್ವನದ ಸೊಕ್ಕು, ರೂಪಿನ ಗಾಡಿ ಏತಕೆ ಯೋಗ್ಯಮಂ' ಎಂದು ಮದದಿಂದ ನಿರಾಕರಿಸಿದ್ದ

ಹರಿಶ್ಚಂದ್ರ, ಮುಂದೆ ‘ಕಂಕರಿಗೋಲ’ನ್ನು ಹಿಡಿದು ತಾನೇ ಹೊಲೆಯನಾಗುವ, ಚಾಂಡಾಲನಾಗುವ, ವೀರಬಾಹುವಿನ ಸೇವಕನಾಗುವ ಈ ಬದಲಾವಣೆ ಕಾಲಮಾನದಲ್ಲಾದ ಸಕಾರಾತ್ಮಕ ಮೌಲ್ಯಪಲ್ಲಟಗಳನ್ನು ಪ್ರತಿಬಿಂಬಿಸುತ್ತದೆ.

ಹದಿನೈದನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗಿನ ಬಹುತೇಕ ಕಾವ್ಯಗಳ ಪ್ರಧಾನ ಪಾತ್ರಗಳು ಶ್ರೀಸಾಮಾನ್ಯ ವರ್ಗದಿಂದ ಬಂದಂತಹವು. ಆದರೆ ಇವೆಲ್ಲವೂ ಸಾಮಾನ್ಯತೆಯ ಶಕ್ತಿ/ಸತ್ತ್ವಗಳನ್ನು ತಾವಿರುವ ನೆಲೆಯಲ್ಲಿಯೇ ಸಾಧಿಸಿ ಪ್ರಕಟಗೊಳಿಸುವುದಿಲ್ಲ. ಬದಲಿಗೆ ಭಕ್ತಿಯ ಪಾತಳಿಯಲ್ಲಿ ಅಸಾಮಾನ್ಯತೆಗೆ ಏರಿ ಪ್ರಶ್ನಾತೀತವಾಗಿ ಪ್ರಕಟಗೊಂಡಿವೆ. ಪ್ರಭುಲಿಂಗಲೀಲೆಯಾಗಲೀ, ಭರತೇಶ ವೈಭವವಾಗಲೀ, ಕರ್ಣಾಟ ಭಾರತ ಕಥಾಮಂಜರಿಯಾಗಲೀ, ಪ್ರಭುಲಿಂಗನೆಂಬ ಶಿವಾವತಾರಿಯ ಲೀಲೆಯಾಗಿ, ಭರತೇಶನೆಂಬ ಚಕ್ರಿಯ ವೈಭವವಾಗಿ, ಕೃಷ್ಣಭಕ್ತಿಯ ಕಥೆಯಾಗಿ ಮೂಡಿಬಂದಿದೆ. ಬಹುಶಃ ಇದಕ್ಕೆ ಆ ಕಾಲದಲ್ಲಿ ನಡೆದ ಪುರಾಣ ಮತ್ತು ಚಾರಿತ್ರಿಕ ಪುರುಷರ ದೈವೀಕರಣ ಪ್ರಕ್ರಿಯೆ ಕಾರಣವಿರಬಹುದು.

ಚಾಮರಸ ತನ್ನ ಕಾವ್ಯಕ್ಕೆ ನಾಯಕನನ್ನಾಗಿ ಆರಿಸಿಕೊಂಡದ್ದು ಸಾಮಾನ್ಯವರ್ಗದಲ್ಲಿ ಹುಟ್ಟಿ, ಅತಿಸಾಮಾನ್ಯನಾಗಿಯೇ ಬೆಳೆದು, ಕಷ್ಟಕರವಾದ ಜ್ಞಾನಮಾರ್ಗವನ್ನು ಹಿಡಿದು ತನ್ನ ಸತ್ವದಿಂದಲೇ ಸಾಧನೆಯ ಶಿಖರವೇರಿದ ಚಾರಿತ್ರಿಕ ವ್ಯಕ್ತಿ ಅಲ್ಲಮನನ್ನು. ಆದರೆ, ಲೌಕಿಕವಾಗಿದ್ದುಕೊಂಡು ಸಾಮಾನ್ಯರ ಚರಿತ್ರೆಯಾಗಬಹುದಾಗಿದ್ದ ಕಾವ್ಯವು ಚಾಮರಸನ ಕೈಯಲ್ಲಿ ‘ಶಿವನ ಅಂಶವಾಗಿ ಭೂಮಿಯಲ್ಲಿ ಜನಿಸಿ ಪವಾಡಗಳನ್ನು ಮೆರೆವ ಅಸಾಮಾನ್ಯನ ಲೀಲೆಯಾಗಿ’ ಕಡೆದು ನಿಂತಿದೆ. ಕಾವ್ಯದ ಪ್ರಾರಂಭದಲ್ಲಿ ಕವಿ ಹೇಳುವಂತೆ ಈ ಕೃತಿ ಯುದ್ಧದ ಕಥೆಯಲ್ಲ, ವಿಷಯ ವಾಸನೆಗಳ ಅಭಿವೃದ್ಧಿಯ ವಿಧಾನವಲ್ಲ, ಹೊಟ್ಟೆ ಹೊರೆಯಲಿಕ್ಕೆ ಹಿಂಸೆಯನ್ನು ಮಾಡುವ ಮಾರ್ಗವಲ್ಲ; ಇದು ಸತ್ತವರ ಕಥೆಯಲ್ಲ, ಹುಟ್ಟೆಂಬ ಬೇನೆಯಲ್ಲಿ ನೊಂದು ಬೆಂದು ಕರ್ಮದ ಕತ್ತಲೆಗೆ ಸಿಲುಕಿಕೊಳ್ಳುವವರ ಕ್ಷೇತ್ರವಲ್ಲ, ಹೊತ್ತು ಹೋಗದೆ ಪುಂಡರು ಕೇಳುವಂತಹ ಗರ್ವಿಗಳ ಸಭೆಯಲ್ಲ; ಇದು ಸತ್ಯವಂತರಾದ ಶಿವಶರಣರು ತಿಳಿಯುವಂತಹ ಕಥೆ– ಪರಬ್ರಹ್ಮನಾದ ಗುರು ಗುಹೇಶ್ವರಲಿಂಗದ ಲೀಲೆ, ಪ್ರಭುಲಿಂಗಲೀಲೆ.

ಈ ಕಾವ್ಯ ಅಲ್ಲಮನೆಂಬ ಮಾನವನು ಭಕ್ತಿಯ ಪರಿಧಿಯಲ್ಲಿ ಸ್ವಪ್ರಯತ್ನದಿಂದ ಗಳಿಸಿದ ಜ್ಞಾನಸಿದ್ಧಿಯ ಕಥೆಯಂತಿರದೆ ಜನ್ಮದಲ್ಲೇ ಅಸಮಾನ್ಯತೆಯನ್ನು ಪಡೆದ ಕಾರಣಿಕನೊಬ್ಬನ ಅಸಾಮಾನ್ಯ ಲೀಲೆಯಾಗಿದೆ. ಶಿವನು ತನ್ನ ಲೀಲೆಗಾಗಿ ತಾನೇ ಅಲ್ಲಮನಾಗಿ ಭೂಮಿಗೆ ಬರುತ್ತಾನೆ. ಏಕೆಂದರೆ ‘ಅನುಪಮವಾದ ನಿತ್ಯಸುಖವೆಂಬ ಸಿದ್ಧಿಯು ಭೂಲೋಕದ ಮಾನವ ಶರೀರದಲ್ಲದೆ ದೇವಲೋಕದ ಭೋಗೋಪ

ಭೋಗಗಳಲ್ಲಿ ಮುಳುಗಿದ ಭೋಗ ತನುವಿನಲ್ಲಿ ಆಗದ' ಕಾರಣ ಶಿವ ಮಾನವ ಶರೀರಿಯಾಗಿ ಭೂಮಿಯಲ್ಲಿ ಜನಿಸುತ್ತಾನೆ. ಮಾನವ ಶರೀರಿಯಾಗಿ ಜನಿಸಿದರೂ ಅವನು ದೇವನೇ ಆಗಿರುವುದರಿಂದ ಆತ ಪ್ರಶ್ನಾತೀತ. ಹಾಗಾಗಿ ಕಾವ್ಯದಲ್ಲಿ ಬರುವ ಸಾಮಾನ್ಯತೆಯ ಪರಿಧಿಯೊಳಗಿನ ಇನ್ನಿತರ ಪಾತ್ರಗಳು ಅಂತಿಮವಾಗಿ ಪ್ರಭುಲಿಂಗನಿಗೆ ಶರಣಾಗಲೇಬೇಕು.

ರತ್ನಾಕರವರ್ಣಿಯ 'ಭರತೇಶ ವೈಭವ' ಕವಿಯೇ ಹೇಳುವಂತೆ ಒಂದು ಹಾಡುಗಬ್ಬ. ಹಾಡುಗಬ್ಬವೆಂದರೆ ಅದರ ಕೇಳುಗರು ಶ್ರೀಸಾಮಾನ್ಯರೇ. ಹಾಗಾಗಿ ಸರಳತೆ, ನಾದ ಪ್ರಾಧಾನ್ಯತೆ ಇಲ್ಲಿನ ಭಾಷೆಯಲ್ಲಿ ಪ್ರಧಾನವಾಗಿದೆ. ಕಾವ್ಯದ ನಾಯಕ ಭಾರತ ಚಕ್ರವರ್ತಿಯಾದರೂ ಆತನ ಬದುಕಿನ ಶೈಲಿ ಮತ್ತು ಜೀವನ ತತ್ವ ಜನಪದ ಆಶಯಗಳಿಂದ ತುಂಬಿದೆ. ಇಲ್ಲಿನ ಭರತ ಭೋಗವೇ ಪ್ರಧಾನವಾದ ಚಕ್ರೇಶನಂತೂ ಅಲ್ಲದೆ, ತ್ಯಾಗ–ಯೋಗಗಳೇ ಪ್ರಧಾನವಾದ ವಿರಕ್ತನಂತೂ ಇಲ್ಲದೆ, ಎರಡೂ ಮೇಳೈಸಿದ ಮಧ್ಯಮ ಮಾರ್ಗಿ. ಇಹದ ಸಂಸಾರ ಮತ್ತು ಪರದ ನಂಬಿಕೆ ಎರಡನ್ನೂ ಒಟ್ಟಿಗೆ ಅಳವಡಿಸಿಕೊಂಡ ಬದುಕು ಜನಪದರದು. ಇಲ್ಲಿ ಅಧ್ಯಾತ್ಮ/ ಭಕ್ತಿಯೆಂಬುವು ಯಾವುದೋ ಬೇರೊಂದು ಲೋಕದ ವಿಚಾರಗಳಲ್ಲ. ಅವು ನೈಜ ಬದುಕಿನ ಅಂಗಗಳು. ದೇಹ ಮತ್ತು ಮನಸ್ಸು, ಮೋಹ ಮತ್ತು ತ್ಯಾಗ– ಇವುಗಳಲ್ಲಿ ಯಾವುದನ್ನೂ ನಿರಾಕರಿಸದೆ ಸರಳವಾಗಿ ಬದುಕುವ ಕಲೆ ಶ್ರೀಸಾಮಾನ್ಯನ ವಿವೇಕಕ್ಕೆ ಎಟುಕಿದೆ. ಹೀಗೆ ಸಾಮಾನ್ಯರ ಬದುಕಿನ ಮಧ್ಯಮ ಮಾರ್ಗವನ್ನು ಅತಿ ಎನಿಸುವಷ್ಟು ವೈಭವೀಕರಿಸಿ ಚಿತ್ರಿಸಿದರೆ 'ಭರತೇಶ ವೈಭವ'ದಂತಹ ಕೃತಿ ಮೂಡುತ್ತದೆ. ಹೀಗಾಗಿ ತಾತ್ವಿಕವಾಗಿ ಗಟ್ಟಿತನವುಳ್ಳ 'ಭರತೇಶ ವೈಭವ' ಹಲವು ಕಡೆ ತನ್ನ ವಿವರಗಳಲ್ಲಿ ಏಕವ್ಯಕ್ತಿ ಬಲಪ್ರದರ್ಶನದಂತೆ ಕಾಣುತ್ತದೆ. ಯಾವುದೇ ರಾಜನ ದಿಗ್ವಿಜಯ ಯಶಸ್ವಿಯಾಗುವುದು ಆತನೊಬ್ಬನ ಪರಾಕ್ರಮದಿಂದಲ್ಲ, ಅದು ಅವನ ಸರ್ವಸೈನ್ಯದ ಪ್ರಾಮಾಣಿಕ ಹೋರಾಟದ ಫಲ ಎಂಬ ಸಮಷ್ಟಿ ಪ್ರಜ್ಞೆಯನ್ನು ಅಂಚಿಗೆ ಸರಿಸಿ, ಭರತನೊಬ್ಬನನ್ನೇ ಹಾಡಿ ಹೊಗಳುವುದೂ ಮತ್ತು ಕಥಾನಾಯಕನಲ್ಲಿ ಭವ್ಯತೆಯನ್ನು ತರುವ ಉದ್ದೇಶದಿಂದ ಅತಿರಂಜಿತ ಮತ್ತು ಅವಾಸ್ತವ ವಿವರಗಳನ್ನು ತುಂಬಿರುವುದು ಕಾವ್ಯವನ್ನು ವಾಸ್ತವದ ನೆಲೆಯಿಂದ ದೂರಸರಿಸಿದೆ.

ಕುಮಾರವ್ಯಾಸ ಅಪ್ಪಟ ಜನತೆಯ ಕವಿ. ಯಾವ ರಾಜರ ಆಸ್ಥಾನದ ಹಂಗೂ ಇಲ್ಲದೆ ತನ್ನಷ್ಟಕ್ಕೆ ಆತ್ಮತೃಪ್ತಿಗಾಗಿ ಬರೆದ ಕವಿ; ಭಾಗವತ. ತನ್ನ ಕಾವ್ಯದ ಆರಂಭದಲ್ಲೇ

> **'ವೀರನಾರಾಯಣನೇ ಕವಿ ಲಿಪಿ**
> **ಕಾರ ಕುವರವ್ಯಾಸ ಕೇಳುವ**
> **ಸೂರಿಗಳು ಸನಕಾದಿಗಳು ಜಂಗಮ ಜನಾರ್ದನರು'**

ಎಂದು ಹೇಳಿಬಿಟ್ಟಿರುವಾಗ ಕಾವ್ಯ ಜಂಗಮ ಜನಾರ್ಧನರ ಬದುಕನ್ನು ಚಿತ್ರಿಸದೆ ಹೋಗಲು ಸಾಧ್ಯವೇ! ಎಷ್ಟಾದರೂ ಈತ ಸರಳ ಮನಸ್ಸಿನ ಹಳ್ಳಿಗರ ನಡುವೆ ಓಡಾಡಿ, ಅವರ ಸ್ವಭಾವ –ಸಂಸ್ಕೃತಿಯನ್ನು ಅರಿತವನು. ಅದನ್ನೇ ಕಾವ್ಯದ ಆವರಣವಾಗಿಸಿಕೊಂಡಿದ್ದಾನೆ. ಶ್ರೀಸಾಮಾನ್ಯರಿಗೆ ಪರಿಚಿತವಾದ ಭಾಷೆಯಲ್ಲಿ ಮನಮುಟ್ಟುವಂತೆ ಬರೆದಿರುವುದೇ ಅಲ್ಲದೆ ಕಾವ್ಯದ ಪಾತ್ರಗಳನ್ನು ಅಷ್ಟೇ ಸಹಜವಾಗಿ ನೆಲಕ್ಕಂಟಿದಂತೆ ನಿರೂಪಿಸಿದ್ದಾನೆ. ಇಲ್ಲಿ ಕಾವ್ಯದ ನಾಯಕ ಕೃಷ್ಣ. ಇದು ಕೃಷ್ಣ ಕಥೆ. ಕೃಷ್ಣ ಭಕ್ತಿಯ ಪರಿವೇಶದಲ್ಲಿ ಭಾರತ ಕಥೆಯನ್ನು ಹೇಳಲು ಹೊರಟ ಕುಮಾರವ್ಯಾಸನಿಗೆ ಯಾವ ಪಾತ್ರದ ಮೇಲೂ ವಿಶೇಷ ಆಸ್ಥೆಯೋ, ನಿರಾಕರಣೆಯೋ ಇಲ್ಲ. ಭಕ್ತಿಯಲ್ಲಿ ಎಲ್ಲರೂ ಒಂದೇ ಎಂಬ ಭಾಗವತ ಪ್ರಜ್ಞೆ ಇವನದು. ಈ ಪ್ರಜ್ಞೆ ಅವನನ್ನು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದಂತೆ ಉಳಿಸಿದೆ.

ಕನಕದಾಸರ 'ರಾಮಧಾನ್ಯ ಚರಿತೆ'ಯು ರಾಮಾಯಣದ ಕಥಾ ಪರಿವೇಷದೊಳಗೆ ಸಮಕಾಲಿನ ಸಾಮಾಜಿಕ ವೈಪರೀತ್ಯಗಳನ್ನು ವಿಮರ್ಶೆಗೆ ಒಳಪಡಿಸುವ ಒಂದು ಕಾಲ್ಪನಿಕ ಕಥಾವಸ್ತುವುಳ್ಳ ಕಾವ್ಯ. ಈ ಕಾವ್ಯ ಸಾಮಾನ್ಯ ಜನರನ್ನೇ ಉದ್ದೇಶಿಸಿ ಬರೆದ ಕಾವ್ಯವಾದ್ದರಿಂದ ನಡುಗನ್ನಡದ ಸುಭಗ ಶೈಲಿ ಮತ್ತು ಮೋಹಕತೆಗಳಿಂದ ಆಕರ್ಷಕವಾಗಿದೆ. ಜಾತಿ ಮತ್ತು ವರ್ಗಾಚರಣೆಗಳನ್ನು ಪ್ರಶ್ನಿಸುತ್ತಾ, ಸಮಾನತೆಯ ಹಕ್ಕೊತ್ತಾಯ ಮಾಡುತ್ತಾ ಶ್ರೀಸಾಮಾನ್ಯರ ಸಹಬಾಳ್ವೆಯ ಆಶಯವನ್ನು ಭತ್ತ ಮತ್ತು ರಾಗಿಗಳ ಸಂಘರ್ಷದ ಮೂಲಕ ಕಟ್ಟಿಕೊಟ್ಟಿದ್ದಾರೆ ಕವಿ. ಇಲ್ಲಿ ಬಡವರ /ದಮನಿತರ ರೂಪಕವಾಗಿರುವ ರಾಗಿ ತನ್ನ ಅಂತಃಸತ್ವದಿಂದಲೇ ರಾಮನಿಂದ ಮನ್ನಣೆ ಪಡೆಯುತ್ತದೆ. "ಶ್ರೀ ಸಾಮಾನ್ಯನೇ ಭಗವದ್ ಮಾನ್ಯಂ" ಎಂಬ ಆಧುನಿಕ ಕನ್ನಡ ಸಾಹಿತ್ಯದ ಧ್ಯೇಯವಾಕ್ಯದ ಮೂಲಬೀಜ ಕನಕದಾಸರ 'ರಾಮಧಾನ್ಯ ಚರಿತೆ'ಯಲ್ಲಿ ಅಡಗಿದೆ.

ವಡ್ಡಾರಾಧನೆಯ ನಂದಿಮಿತ್ರನ ಕಥೆಯ ಆಶಯವನ್ನೇ ಧ್ವನಿಸುವ ಮಧ್ಯಕಾಲೀನ ಘಟ್ಟದ ಕಾವ್ಯ ಹೆಳವನಕಟ್ಟೆ ಗಿರಿಯಮ್ಮನ 'ಚಂದ್ರಹಾಸನ ಕಥೆ'. ಚಂದ್ರಹಾಸನು ರಾಜನ ಮಗನಾಗಿ ಹುಟ್ಟಿದ್ದೆಷ್ಟೋ ಅಷ್ಟೇ, ಮುಂದೆ ಅದರ ರಕ್ಷೆಯಾಗಲಿ ಪ್ರಭಾವಲಯವಾಗಲೀ ಇಲ್ಲದೆ ಆತನಾರೆಂದೂ ತಿಳಿಯದೆ ಒಂದು ಬೀದಿ ಮಗುವಾಗಿ ಬೆಳೆಯುವ ಈತ ಸಾಮಾನ್ಯರಲ್ಲಿ ಸಾಮಾನ್ಯ. ಇಂತಹ ಅತಿ ಸಾಮಾನ್ಯ ಹುಡುಗನೊಬ್ಬ ತನ್ನ ಸ್ವ ಸಾಮರ್ಥ್ಯದಿಂದ, ಪರಾಕ್ರಮದಿಂದ ಮತ್ತು ದೈವಬಲದಿಂದ ಮೇಲೇರುತ್ತಾನೆ. ಕಾವ್ಯದಲ್ಲಿ ಚಂದ್ರಹಾಸನ ಕಷ್ಟ ಕಾರ್ಪಣ್ಯಗಳು ಮತ್ತು ನಂತರದ ಅಭ್ಯುದಯ ಒಂದೆಡೆಯಾದರೆ, ಅದಕ್ಕಿಂತ ಹೆಚ್ಚಾಗಿ ಓದುಗರನ್ನು ಸೆಳೆಯುವುದು ಚಂದ್ರಹಾಸನ ಜೀವವನ್ನು ಕಾಪಾಡಿದ ದಾಸಿ ಹಾಗೂ ಬೀದಿ ಮಗುವಾದ ಅವನನ್ನು ನೀರು ನೀಡಿ ಕೊಟ್ಟು ಸಾಕಿ ಸಲಹಿದ

ಊರ ಜನರ ಮಾನವೀಯಯ ಮಿಡಿತ, ಕಾಳಜಿ. ಮಗು ಯಾರದಾದರೇನು? ಜಾತಿ– ಧರ್ಮಗಳ ಹಂಗಿಲ್ಲದೆ, ತಾರತಮ್ಯದ ವಿಚಾರಗಳಿಂದ ಮನಸ್ಸನ್ನು ಕಲುಷಿತಗೊಳಿಸಿಕೊಳ್ಳದೆ ಅನಾಥರನ್ನು, ದೀನರನ್ನು ಆತುಕೊಳ್ಳುವ, ಸಲಹುವ ಜನಪದರ ಬದುಕಿನೊಳಗೆ ಹಾಸು ಹೊಕ್ಕಾಗಿರುವ ಮಾನವೀಯತೆಗಿಂತ ದೊಡ್ಡ ಆದರ್ಶ/ಮೌಲ್ಯ ಯಾವುದಿದೆ?!

ಸಂಚಿಯ ಹೊನ್ನಮ್ಮ ಬರೆದಿರುವ 'ಹದಿಬದೆಯ ಧರ್ಮ' ಕೃತಿಯು ಕಾವ್ಯರೂಪದ ಶಾಸ್ತ್ರ, ಸ್ತ್ರೀಧರ್ಮ ಬೋಧಿನಿ. ಕಾವ್ಯದ ಮೈ ಮತ್ತು ಆಶಯ ಎರಡರ ದೃಷ್ಟಿಯಿಂದಲೂ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿರುವ ಈ ಕಾವ್ಯ ಎಲ್ಲಾ ಮಹಾಕಾವ್ಯಗಳ ಹಾಗೆಯೇ ತನ್ನ ಆಶ್ರಯದಾತ ರಾಜನ ವಂಶಾವಳಿ, ವಂಶಕೀರ್ತಿ ಮತ್ತು ಮಹತ್ವವನ್ನು ಹೊಗಳುವುದರ ಮೂಲಕವೇ ಆರಂಭವಾಗುತ್ತದೆ. ಮುಂದುವರಿದು, ಉಳಿದೆಲ್ಲ ಸಂಧಿಗಳಲ್ಲಿ ಸತೀಧರ್ಮದ ಮಹತ್ವವನ್ನೂ, ಪತಿಶುಶ್ರೂಷೆಯ ವಿಧಾನ, ಅತ್ತೆ– ಮಾವಂದಿರ ಸೇವೆ, ಬಂಧು ಭಾಂದವರೊಂದಿಗೆ ನಡೆದುಕೊಳ್ಳಬೇಕಾದ ರೀತಿ, ಪತಿವ್ರತೆಯ ನಡತೆ ಮೊದಲಾದ ನೀತಿ ಬೋಧಕ ವಿಚಾರಗಳನ್ನು ನಿರೂಪಿಸಿದೆ. ಮೂಲತಃ ನೀತಿ ಬೋಧಕವೇ ಆಗಿರುವ 'ಹದಿಬದಿಯ ಧರ್ಮ' ಹೆಣ್ಣಿನ ಶಕ್ತಿಯನ್ನು ಮತ್ತು ಅವಳ ಮಹತ್ವವನ್ನು ಹೇಳುವ 'ಏಕಪತ್ನಿಯ ಪ್ರಸಂಗ' ಮೊದಲಾದ ಒಂದೆರಡು ಎಡೆಗಳಲ್ಲಿ ಮಾತ್ರ ನೀತಿನಿಷ್ಠ ಸಾಮಾನ್ಯತೆಗಿರುವ ಶಕ್ತಿ ಎಲ್ಲ ವ್ರತ– ತಪಸ್ಸುಗಳಿಗಿಂತ ಶ್ರೇಷ್ಠವಾದದ್ದು ಎಂಬುದನ್ನು ಕಥನಾತ್ಮಕವಾಗಿ ಚಿತ್ರಿಸಿದೆ.

ಶ್ರೀಸಾಮಾನ್ಯನನ್ನು ಕಾವ್ಯದೊಳಗೆ ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಳಿಸಿದ ಕೀರ್ತಿ ಆಧುನಿಕ ಕನ್ನಡ ಕಾವ್ಯಗಳಿಗೆ ಸಲ್ಲುತ್ತದೆ. ಯಾವುದು ಈವರೆಗೆ ಅಮುಖ್ಯವಾಗಿತ್ತೋ ಅದನ್ನು ಮುಖ್ಯ ಭೂಮಿಕೆಗೆ ತರುವ, ಅಂಚಿಗೆ ಸರಿಸಲ್ಪಟ್ಟದ್ದನ್ನು ಪ್ರಧಾನ ಧಾರೆಯಲ್ಲಿ ಮುನ್ನೆಲೆಗೆ ತರುವ, ಆ ಮೂಲಕ ಬದುಕಿನ ಹೊಸ ನೋಟಗಳನ್ನು ಮತ್ತು ಹೊಸ ದಾರಿಗಳನ್ನು ಶೋಧಿಸುವ ಮನೋಧರ್ಮವನ್ನು ಸಮಾಜ ಆವಾಹಿಸಿಕೊಂಡಿತು. ಇದರ ಪರಿಣಾಮವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಕಟ್ಟಕಡೆಯಲ್ಲಿದ್ದ ಶ್ರೀಸಾಮಾನ್ಯನ ಬದುಕು, ಬವಣೆ, ಔನ್ನತ್ಯ ಎಲ್ಲವೂ ಕಾವ್ಯದೊಳಗೆ ಪ್ರಧಾನವಾದವು. ಕವಿಗಳಿಗೆ ದೊರೆತ ಹೊಸ ಗ್ರಹಿಕೆಯ, ಕಾಣ್ಕೆಯ ಬೆಳಕಲ್ಲಿ ಈವರೆಗಿನ ಚರಿತ್ರೆ ಮತ್ತು ಪುರಾಣಗಳು ಹೊಸ ಅರ್ಥಗಳೊಂದಿಗೆ ಮರುವ್ಯಾಖ್ಯಾನಗೊಂಡವು. ಈ ಹಿಂಗಾಣ್ಕೆ– ಮುಂಗಾಣ್ಕೆಗಳ ಪ್ರಭಾವಲಯದಲ್ಲಿ ಕವಿ ಕೇವಲ ಕವಿಯಾಗಿರದೆ ದಾರ್ಶನಿಕನೂ ಆಗಿಬಿಟ್ಟದ್ದು ಈ ಕಾಲದ ಬಹುದೊಡ್ಡ ವಿಸ್ಮಯ ಮತ್ತು ಕನ್ನಡ ಕಾವ್ಯ ಲೋಕದ ಅದೃಷ್ಟ.

‘ಶ್ರೀರಾಮಾಯಣ ದರ್ಶನಂ’ ಕನ್ನಡದ ಅದ್ಭುತ ದರ್ಶನ ಕಾವ್ಯ. ಕುವೆಂಪುರವರ ‘ಶ್ರೀಸಾಮಾನ್ಯನೇ ಭಗವದ್ ಮಾನ್ಯಂ’ ‘ಇಲ್ಲಿ ಯಾವುದೂ ತೃಣವಲ್ಲ, ಯಾವುದು ಮಹತ್ತಲ್ಲ’ ಎಂಬ ಮಾತುಗಳು ಕೇವಲ ಶಬ್ದಗಳಾಗಿರದೆ ದಿವ್ಯರೂಪು ಪಡೆದು ‘ಶ್ರೀ ರಾಮಾಯಣ ದರ್ಶನಂ’ ನಲ್ಲಿ ದರ್ಶನ ನೀಡುತ್ತವೆ. ಇಲ್ಲಿ ಪುರುಷೋತ್ತಮನಾದ ರಾಮ, ಹದಿಬದೆಯರ ಅಧಿದೇವಿ ಸೀತೆ, ಭರತಮಾತೆ, ಊರ್ಮಿಳಾದಿಯಾಗಿ ಅರಸು ಪರಿವಾರದ ಬದುಕಿನ ಚಿತ್ರಣ ಒಂದೆಡೆಯಿದ್ದರೆ, ಅದಕ್ಕೆ ಸಮನಾಗಿ ಮಂಥರೆ, ಶಬರಿ, ಗುಹ, ಲಂಕಿಣಿ ಮೊದಲಾದ ಸಾಮಾನ್ಯ ಜನಪದರ ಬದುಕು, ನಂಬಿಕೆಗಳ ಚಿತ್ರಣ ಮತ್ತೊಂದೆಡೆಯಿದೆ. ಗೂನುಬೆನ್ನಿನ, ವಿಕಾರ ರೂಪಿನ ಮಂಥರೆ ಕಾವ್ಯದಲ್ಲಿ ರಾಜಾಜ್ಞೆ ಪಾಲಿಸುವ ಕೇವಲ ದಾದಿಯಲ್ಲ. ಆಕೆ ಮಮತೆಯ ಸುಳಿ, ಸಾಮಾನ್ಯ ತನುವಿನೊಳಗೆ ಉದಾತ್ತ ಪ್ರೇಮವುಳ್ಳವಳು. ರಾಮನ ದರ್ಶನಕ್ಕಾಗಿ ಕಾಯುವ ಶಬರಿ ಅನಂತ ನಿರೀಕ್ಷೆಯ ಭರವಸೆಯ ಕಡಲು. ಇಲ್ಲಿ ಯಾವ ಪಾತ್ರವೂ ಮಾನವತೆಯ ಪರಿಧಿಯಿಂದ ಹೊರಗೂ ಉಳಿಯುವುದಿಲ್ಲ. ಅಸಾಮಾನ್ಯತೆಯ ಅಬ್ಬರದಲ್ಲಿ ಕಳೆದು ಹೋಗುವುದಿಲ್ಲ. ಅಂತಹ ದೈತ್ಯ ರಾವಣನೇ ಕೊನೆಗೆ ಆರ್ದ್ರತೆಯ ಮೂರ್ತಿಯಾದನೆಂದರೆ ಉಳಿದವರ ವಿಚಾರ ಕೇಳಬೇಕೇ! ಹಿರಿಕಿರಿಯರೆನ್ನದೆ ಕವಿ ಕಾವ್ಯದೊಳಗೆ ಎಲ್ಲಾ ಪಾತ್ರಗಳಿಗೂ ಸಮಾನ ಪ್ರಾಧಾನ್ಯ ನೀಡಿದ್ದಾರೆ. ಬದುಕಿನ ಅವಕಾಶಗಳನ್ನು ತೆರೆದಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ‘ಮಮತೆಯ ಸುಳಿ ಮಂಥರೆ’, ‘ಶಬರಿಗಾದನು ಅತಿಥಿ ದಾಶರಥಿ’, ‘ಸಂಸ್ಕೃತಿ ಲಂಕಾ’, ‘ದಶಾನನ ಸ್ವಪ್ನ ಸಿದ್ಧಿ’ ಭಾಗಗಳು ಸಾಮಾನ್ಯರ ಬದುಕಿನ ಭವ್ಯ ಚಿತ್ರಣಗಳಾಗಿವೆ.

ಈ ಕಾಲದ ಗಮನಿಸಬಹುದಾದ ಮತ್ತೊಂದು ಮಹಾಕಾವ್ಯ ಗೋಕಾಕರ ‘ಭಾರತ ಸಿಂಧುರಶ್ಮಿ’. ಭಾರತದ ಸಂಸ್ಕೃತಿ/ ನಾಗರಿಕತೆ ಎಂದರೆ ಕೇವಲ ವೈದಿಕ ಸಂಸ್ಕೃತಿ ಮಾತ್ರವಲ್ಲ, ಅದಕ್ಕೆ ಸಮಾನಾಂತರವಾಗಿ ಮತ್ತು ಅದಕ್ಕಿಂತ ಪ್ರಾಚೀನವಾಗಿ ಹರಿದು ಬಂದಿರುವ ದ್ರಾವಿಡವೇ ಮೊದಲಾದ ಪರ್ಯಾಯ ಸಂಸ್ಕೃತಿಗಳು ಹಲವಿವೆ. ಅವೆಲ್ಲವನ್ನೂ ಸೇರಿಸಿದ ಸಪ್ತಸಿಂಧೂ ರಾಷ್ಟ್ರದ ಸ್ಥಾಪನೆಯನ್ನು ಗುರಿಯಾಗಿಸಿಕೊಂಡು, ತನ್ನ ರಾಜತ್ವದ ವೈಭೋಗವನ್ನು ತ್ಯಜಿಸಿ, ತಪೋನಿರತನಾದ ವಿಶ್ವಾಮಿತ್ರ ಬಹುಶಃ ಬಹುತ್ವ ಭಾರತದ ಕನಸು ಕಂಡ ಮೊದಲ ವ್ಯಕ್ತಿ ಎನಿಸುತ್ತಾನೆ. ಹೀಗೆ ಶ್ರೀರಾಮಾಯಣ ದರ್ಶನಂ, ಭಾರತ ಸಿಂಧುರಶ್ಮಿ, ಸಂಗ್ರಹಿತ ಜನಪದ ಮಹಾಕಾವ್ಯಗಳು ಮೊದಲಾದವು ೨೦ನೇ ಶತಮಾನ ಕನ್ನಡ ಕಾವ್ಯಲೋಕಕ್ಕೆ ನೀಡಿದ ಅಪೂರ್ವ ಕೊಡುಗೆಗಳು. ಇವುಗಳನ್ನು ನಮ್ಮ ನಾಡಿನ ‘ಸಾಂಸ್ಕೃತಿಕ ಆಸ್ತಿ/ ಭಂಡಾರ’ ಎಂದರೆ ಉತ್ಪ್ರೇಕ್ಷೆಯಾಗಲಾರದು.

❑❑

ಇಂಗ್ಲಿಷ್ ಸಾಹಿತ್ಯದಲ್ಲಿ ಯುದ್ಧದ ಕವಿಗಳು

ಓ.ಆರ್. ಪ್ರಕಾಶ್

❖

ಯುದ್ಧ ಅಥವಾ ವಾರ್ ! ಎಂಥವರಿಗಾದರೂ ಕುತೂಹಲ ಹುಟ್ಟಿಸುವಂತೆ, ಗಾಬರಿಬೀಳಿಸುವಂತೆ, ಉತ್ಸಾಹ ಹುಟ್ಟಿಸುವಂತೆ ಅಥವಾ ದು:ಖ ಪಡುವಂತೆ, ಹೀಗೆ ಹಲವು ಭಾವನೆಗಳನ್ನು ಏಕಕಾಲದಲ್ಲಿ ಹೊಮ್ಮಿಸುವ ಪದ ಮತ್ತು ವಿಷಯ. ಮೇಲಿನ ಭಾವನೆಗಳಲ್ಲಿ ನಿಮಗೆ ಯಾವ ಭಾವನೆಗಳು ಹುಟ್ಟುತ್ತವೆ ಎನ್ನುವುದು ನೀವು ಯುದ್ಧದ ಯಾವ ಕಡೆ ಇದ್ದೀರಿ ಮತ್ತು ಯುದ್ಧದ ಬಗ್ಗೆ ನಿಮ್ಮ ನಿಲುವೇನು ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ.

ಸಾಮಾನ್ಯವಾಗಿ ಯುದ್ಧ ಎಂದ ಕೂಡಲೇ ಕೆಲವರಿಗೆ ನಮ್ಮ ದೇಶದಲ್ಲಿ ಅಥವಾ ವಿಶ್ವದಲ್ಲಿ ನಡೆದ ಹಲವಾರು ಯುದ್ಧಗಳ ನೆನಪು ಬರುತ್ತದೆ. ಇದರಲ್ಲಿ ಕೆಲವರು ಸೈನಿಕರ ಶೌರ್ಯವನ್ನು ಮೆಚ್ಚಿಕೊಂಡು ಎದೆಯುಬ್ಬಿಸಿ ಮಾತನಾಡಿದರೆ ಅವರು ಆ ಯುದ್ಧದ ಪರವಾಗಿದ್ದಾರೆ ಎಂದು, ಅದನ್ನು ನಡೆಸಲು ರಾಷ್ಟ್ರನಾಯಕರು ನೀಡುತ್ತಿರುವ ಕಾರಣಗಳ ಬಗ್ಗೆ ಸಕಾರಾತ್ಮಕವಾಗಿದ್ದಾರೆ ಎಂದು, ಆ ಯುದ್ಧ ಮುಕ್ತಾಯದ ಹಂತದಲ್ಲಿ ತರಬಹುದಾದ ಪರಿಣಾಮಗಳ ಬಗ್ಗೆಯೂ ಸಹ ಸಕಾರಾತ್ಮಕವಾಗಿದ್ದಾರೆ ಎಂದು ನಾವು ತೀರ್ಮಾನಿಸಬಹುದು. ಯುದ್ಧದಲ್ಲಿ ನಡೆಯುವ ಸಾವು-ನೋವಿನ ವಿಚಾರದಲ್ಲಿಯೂ ಸಹ ಅವರು ಆಯ್ಕೆ ಮಾಡಿಕೊಂಡು ಪ್ರತಿಕ್ರಿಯಿಸುತ್ತಾರಾ ಅಂದರೆ, ನಮ್ಮ ಸೈನಿಕರ ಸಾವು-ನೋವಿನ ವಿವರಗಳನ್ನು ಅತ್ಯಂತ ವಿವರವಾಗಿ ಸಹಾನುಭೂತಿಯಿಂದ ಹೇಳಿ ವಿಷಾದವನ್ನು ವ್ಯಕ್ತಪಡಿಸುವುದು ಮತ್ತು ಶತ್ರು ಸೈನಿಕರ ಬಗ್ಗೆ ಈ ರೀತಿಯ ಭಾವನೆಗಳನ್ನು ವ್ಯಕ್ತಪಡಿಸದೇ ಇರುವುದು, ಈ ಎಲ್ಲ ವಿಚಾರಗಳೂ ಈ ಸಮಯದಲ್ಲಿ ಮುಖ್ಯವಾಗುತ್ತವೆ. ಇನ್ನು ಕೆಲವರು ಯುದ್ಧದಲ್ಲಿ ಹೋರಾಡಿದ ಎಲ್ಲ ಸೈನಿಕರ ಬಗೆಗಿನ ವಿವರಗಳನ್ನು ತಿಳಿದುಕೊಂಡಿರುತ್ತಾರಾದರೂ, ಸಮಯ

ನೋಡಿಕೊಂಡು ಯಾವುದಾದರೊಂದು ಪಕ್ಷದ ಪರವಾಗಿ ಅಥವಾ ವಿರುದ್ಧವಾಗಿ ಮಾತನಾಡುವುದು ಸಹ ಕಂಡುಬರುತ್ತದೆ. ಆದರೆ ಇಂದು ನಾವು ಚರ್ಚಿಸಲಿರುವ ವಿಷಯ ಯುದ್ಧವನ್ನು ಈ ರೀತಿಯ ದೂರದಿಂದ ನೋಡದೇ, ಸೈನಿಕನಾಗಿ ಯುದ್ಧದಲ್ಲಿ ಭಾಗವಹಿಸಿದಾಗ ಒಬ್ಬ ವ್ಯಕ್ತಿಗೆ ಆಗುವ ಭಾವನೆಗಳೇನು ಎಂಬುದರ ಬಗ್ಗೆ ಎಂದು ತಿಳಿಯಬಹುದು.

ನಾವು ಇಂಗ್ಲಿಷ್ ಸಾಹಿತ್ಯದ ಯುದ್ಧದ ಕವಿಗಳ ಬಗ್ಗೆ ಚರ್ಚೆಯನ್ನು ಆರಂಭಿಸುವುದಕ್ಕಿಂತ ಮೊದಲು ಈ ಹಿಂದೆ ಕನ್ನಡ ಚಲನಚಿತ್ರದಲ್ಲಿ ಪ್ರಸಿದ್ಧವಾಗಿದ್ದ ಒಂದು ಗೀತೆಯಿಂದ ಚರ್ಚೆಯನ್ನು ಆರಂಭಿಸೋಣ. ಇದರಿಂದ ಯುದ್ಧದ ಬಗ್ಗೆ ಒಬ್ಬ ಕವಿಗೆ/ಜನರಿಗೆ ಇರಬಹುದಾದ ನಿಲುವು/ದೃಷ್ಟಿಕೋನಗಳ ಬಗ್ಗೆ ಸ್ಪಷ್ಟತೆ ಉಂಟಾಗುತ್ತದೆ. ಇದು 'ನಾಗರಹಾವು' ಚಿತ್ರದಲ್ಲಿ ಚಿತ್ರದುರ್ಗದ ಒನಕೆ ಓಬವ್ವನ ಶೌರ್ಯ–ಕಲಿತನದ ಬಗ್ಗೆ ಇರುವ ಹಾಡು. ಇದರ ಕೆಲವು ಸಾಲುಗಳನ್ನು ನೋಡೋಣ:

ವೀರಮದಕರಿ ಆಳುತಲಿರಲು
ಹೈದರಾಲಿಯು ಯುದ್ಧಕೆ ಬರಲು,
ಕೋಟೆ ಜನಗಳ ರಕ್ಷಿಸುತಿರಲು,
ಸತತ ದಾಳಿಯು ವ್ಯರ್ಥವಾಗಲು,
ವೈರಿ ಚಿಂತೆಯಲಿ ಬಸವಳಿದ
ದಾರಿ ಕಾಣದೇ ಮಂಕಾದ

ಇಲ್ಲಿ ಮದಕರಿನಾಯಕನ್ನು ಕವಿ'ವೀರ' ಎಂಬ ಗುಣವಾಚಕದಿಂದ ಸಂಬೋಧಿಸಿ ಆತನ ಬಗ್ಗೆ ತನಗೆ ಗೌರವವಿದೆ ಎಂಬುದನ್ನು ಮೊದಲಿಗೇ ಸೂಚಿಸುತ್ತಾನೆ. ಹೈದರಾಲಿಯು ಸತತ ದಾಳಿ ಮಾಡಿದರೂ ಆತನಿಗೆ ಯಶಸ್ಸು ಸಿಗಲಿಲ್ಲ. ಆದರೆ ಈ ಬಗ್ಗೆ ಕವಿಗೆ ಸಹಾನುಭೂತಿಯಿಲ್ಲ ಅಂದರೆ, ಕವಿಯ ನಿಲುವು ಬೇರೆಡೆಗೆ ಇದೆ:

ಗೂಢಚಾರರು ಅಲೆದುಬಂದರು,
ಹೈದರಾಲಿಗೆ ವಿಷಯ ತಂದರು !
ಚಿತ್ರದುರ್ಗದ ಕೋಟೆಯಲಿ ವಾಯುವ್ಯ ದಿಕ್ಕಿನೆಡೆ
ನೋಡು ಎಂದರು,
ಕಳ್ಳಗಿಂಡಿಯ ತೋರಿದರು, ಲಗ್ಗೆ ಹತ್ತಲು ಹೇಳಿದರು !

ಇದು ಯುದ್ಧದಲ್ಲಿ ಒಂದು ಮಹತ್ವದ ಹೆಜ್ಜೆ. ಏಕೆಂದರೆ ನೇರ ಯುದ್ಧದಲ್ಲಿ ಕೋಟೆಯನ್ನು ಭೇದಿಸಿ ಶತ್ರುವನ್ನು ತಲುಪಲು ಸಾಧ್ಯವೇ ಆಗದ ಸ್ಥಿತಿಯಿದ್ದಾಗ ಆತನ ವೀಕ್ ಪಾಯಿಂಟ್ ಅಂದರೆ ದೌರ್ಬಲ್ಯಗಳನ್ನು ಗುರ್ತಿಸಿ ಅವುಗಳನ್ನು ಹಿಡಿದು

ಬಡಿದುಹಾಕುವುದು ಯುದ್ಧತಂತ್ರಗಳಲ್ಲಿ ಒಂದು. ಇದನ್ನು ಕಂಡುಹಿಡಿದ ಗೂಢಚಾರರನ್ನು ಕವಿ ಇಲ್ಲಿ ಅಭಿನಂದಿಸುತ್ತಿಲ್ಲ ಅಥವಾ ಈ ರೀತಿ ವೀಕ್ ಪಾಯಿಂಟುಗಳನ್ನು ಸೃಷ್ಟಿಸಿಕೊಂಡವರನ್ನು ಎಚ್ಚರಿಸುತ್ತಲೂ ಇಲ್ಲ; ಬದಲಿಗೆ ಆತನ ಮೆಚ್ಚುಗೆ ಬೇರೆ ವ್ಯಕ್ತಿ ಮತ್ತು ಘಟನೆಯ ಬಗ್ಗೆ ಇದೆ.

ಮುಂದೆ ಕೋಟೆಯ ಕಾವಲುಗಾರ ಊಟಕ್ಕೆ ಕುಳಿತದ್ದು– ಆತನ ಮನೆಯಲ್ಲಿ ಕುಡಿಯುವ ನೀರು ಇಲ್ಲದಿದ್ದದ್ದು–ಅದನ್ನು ತರಲೆಂದು ಆತನ ಹೆಂಡತಿ ಓಬವ್ವ ಗಡಿಗೆ ಹಿಡಿದು ಹೊರಗೆ ಹೋಗಿ ಅಲ್ಲಿ ಶತ್ರು ಸೈನಿಕರು ಕಳ್ಳಗಿಂಡಿಯಿಂದ ಕೋಟೆಯ ಒಳಗೆ ಬರಲು ಹವಣಿಸುತ್ತಿರುವುದನ್ನು ಗಮನಿಸಿದ್ದು, ಈ ಎಲ್ಲ ವಿಚಾರಗಳು ಬರುತ್ತವೆ. ಇವರನ್ನು ತಾನೇ ಮುಗಿಸಬೇಕೆಂದು ತೀರ್ಮಾನಿಸಿದ ಆಕೆ ಮನೆಯಲ್ಲಿ ಇದ್ದ ಒನಕೆಯನ್ನು ತಂದು ಕಳ್ಳಗಿಂಡಿಯ ಬಳಿ ನಿಂತದ್ದನ್ನು ಕವಿ ಹೇಳುವುದು ಹೀಗೆ:

ವೀರಗಚ್ಚೆಯ ಹಾಕಿ ನಿಂತಳು
ದುರ್ಗಿಯನ್ನು ಮನದಲ್ಲೆ ನೆನೆದಳು, ಕಾಳಿಯಂತೆ ಬಲಿಗಾಗಿ ಕಾದಳು,
ವೀರವನಿತೆ ಆ ಓಬವ್ವ, ದುರ್ಗವು ಮರೆಯದ ಓಬವ್ವ

ಇದರ ನಂತರ ಕವಿ ಯುದ್ಧವನ್ನು ಚಿತ್ರಿಸುವುದು ಹೀಗೆ:

ತೆವಳುತ ಒಳಗೆ ಬರುತಿರೆ ವೈರಿ, ಒನಕೆಯ ಬೀಸಿ ಕೊಂದಳು ನಾರಿ
ಸತ್ತವನನ್ನು ಎಳೆದು ಹಾಕುತ, ಮತ್ತೆ ನಿಂತಳು ಹಲ್ಲು ಮಸೆಯುತ,
ವೈರಿ ರುಂಡ ಚೆಂಡಾಡಿದಳು ರಕ್ತದ ಕೋಡಿ ಹರಿಸಿದಳು

ಇಷ್ಟನ್ನು ಕೇಳಿದ ನಮಗೂ ವೀರವನಿತೆ ಓಬವ್ವನ ಶೌರ್ಯದ ಬಗ್ಗೆ ಅಭಿಮಾನ ಮೂಡುತ್ತದೆ. ಇಲ್ಲಿ ಯುದ್ಧದ ಕ್ರೌರ್ಯದ ಬಗ್ಗೆಯಾಗಲೀ, ಸತ್ತ ಹೈದರಾಲಿಯ ಸೈನಿಕರ ಕುಟುಂಬದ ಬಗ್ಗೆಯಾಗಲೀ ನಾವು ಯೋಚಿಸಲು ಹೋಗುವುದಿಲ್ಲ. ಅಂದರೆ ಇದು ಯುದ್ಧವನ್ನು ದೂರದಿಂದ ನೋಡಿ, ಯಾರನ್ನು ಹೊಗಳಬೇಕು–ಯಾರನ್ನು ಮೆಚ್ಚಿಕೊಳ್ಳಬೇಕು–ಯಾರ ಬಗ್ಗೆ ಹೇಳಬೇಕು ಮತ್ತು ಯಾರ ಬಗ್ಗೆ ಹೇಳಬಾರದು ಎಂಬುದನ್ನು ಸಂಪೂರ್ಣವಾಗಿ ನಿರ್ಧರಿಸಿದ ಕವಿಯ ಭಾವವನ್ನು ವ್ಯಕ್ತಪಡಿಸುವ ಕವನ ಇದು.

ಇದೇ ರೀತಿಯಲ್ಲಿ ಇಂಗ್ಲಿಷಿನಲ್ಲಿಯೂ ಯುದ್ಧದ ಒಂದೇ ಮುಖವನ್ನು ಮೆರೆಸುವ, ಒಂದು ಭಾಗದ ಸೈನಿಕರ ಶೌರ್ಯವನ್ನು ಮೆರೆಸುವ, ಆದರೆ ಅದೇ ಯುದ್ಧದಲ್ಲಿ ಇರಬಹುದಾದ ಬೇರೆ ಭಾವಗಳ ಬಗ್ಗೆ ಏನನ್ನೂ ಹೇಳದ ಹಲವಾರು ಪದ್ಯಗಳಿವೆ. ಇದರಲ್ಲಿಯೂ ಇರುವ ಏಕಮುಖತೆ– ಒನ್‌ಸೈಡೆಡ್‌ನೆಸ್ – ಮನೋಭಾವವನ್ನು

ಗಮನಿಸೋಣ: ಇದನ್ನು ಬರೆದ ಕವಿ ರೂಪರ್ಟ್ ಬ್ರೂಕ್. ಕವನದ ಹೆಸರು: ದ ಸೋಲ್ಜರ್.

ಆರಂಭದಲ್ಲಿ ಕವಿಯ ಭಾವನೆ ಹೀಗಿದೆ: ನಾನೇದಾದರೂ ಯಾವುದಾದರೂ ಹೊರದೇಶದಲ್ಲಿ–ಕಾಣದ ದೇಶದ ಒಂದು ಮೂಲೆಯಲ್ಲಿ ಸತ್ತರೂ ನಾನು ಇಂಗ್ಲೆಂಡಿಗಾಗಿ ಸತ್ತಿದ್ದೇನೆ ಎಂಬುದನ್ನು ಸದಾ ನೆನಪಿನಲ್ಲಿಡಿ. ಅಂದರೆ ಆತನ ಅರ್ಥ: ಯಾವುದಾದರೂ ಹೊರದೇಶದಲ್ಲಿ ಇಂಗ್ಲೆಂಡಿಗಾಗಿ ಯುದ್ಧಮಾಡುತ್ತಾ ಸಾಯುವುದು ನನಗೂ ಮತ್ತು ನಿಮಗೂ ಅತ್ಯಂತ ನೆನಪಿಡುವಂತಹ ವಿಷಯವಾಗಬೇಕು ಎಂದು.

If I should die, think only this of me:
There is some corner of a foreign field
That is for ever England

ಆ ಅಪರಿಚಿತ ದೇಶದ ಮಣ್ಣಿನಲ್ಲಿ ಹುದುಗಿ ನನ್ನ ದೇಹ ಯಾರಿಗೂ ಕಾಣದಿರಬಹುದು; ಆದರೆ ನೆನಪಿಡಿ, ಈ ದೇಹ ಹುಟ್ಟಿದ್ದು ಇಂಗ್ಲೆಂಡಿನಲ್ಲಿ, ಇದು ಆಕಾರವನ್ನು ಪಡೆದದ್ದು ಇಂಗೆಂಡಿನಲ್ಲಿ; ಇದು ಇಂಗ್ಲಿಷ್‌ನ ಗಾಳಿಯನ್ನು ಉಸಿರಾಡಿದ್ದು, ಈ ನೆಲದಲ್ಲಿ ಹರಿಯುವ ನದಿಗಳ ನೀರನ್ನು ಕುಡಿದು ಮತ್ತು ಈ ದೇಹ ಮೈ ತೊಳೆದುಕೊಂಡು ಬೆಳೆದದ್ದು ಇಲ್ಲಿನ ನದಿ ಮತ್ತು ಸಮುದ್ರಗಳ ನೀರಿನಿಂದ; ಈ ದೇಹ ಕಂಡದ್ದು ಇಗ್ಲೆಂಡಿನ ಸೂರ್ಯನ ಬೆಳಕಿನಿಂದ ಆಶೀರ್ವದಿಸಿಕೊಂಡು ಬೆಳೆದದ್ದು, ಎಂಬುದನ್ನು ಎಂದಿಗೂ ಮರೆಯದಿರಿ.

In that rich earth a richer dust concealed
A dust whom England bore, shaped, made aware
A body of England's, breathing English air
Washed by her rivers, blest by Suns of home.

ಆತ ಮುಂದುವರೆದು ಹೇಳುತ್ತಾನೆ: ಇಂಗ್ಲೆಂಡಿನಲ್ಲಿ ನಾನು ಕಂಡ ದೃಶ್ಯಗಳು ಮತ್ತು ಆಲಿಸಿದ ಶಬ್ದಗಳು, ಸ್ನೇಹಿತರೊಂದಿಗೆ ಕಳೆದ ಉತ್ತಮ ಸಮಯ ಮತ್ತು ನಗೆ, ಇವೆಲ್ಲವನ್ನೂ ಹೊತ್ತು ನಾನು ಯಾವುದೋ ಅಪರಿಚಿತ ನೆಲದ ಮಣ್ಣಲ್ಲಿ ಮಣ್ಣಾಗಿ ಹೋದರೂ ನಾನು ಇಂಗ್ಲಿಷಿನ ಸ್ವರ್ಗದಲ್ಲಿಯೇ ಇರುತ್ತೇನೆ ಎಂಬುದನ್ನು ಸದಾ ನೆನಪಿಡಿ.

And her sights and sounds, dreams happy as her day,
And laughter, learnt of friends; and gentleness,
In hearts at peace, under an English heaven.

ಈ ಎಲ್ಲ ಭಾವನೆಗಳೂ ಉಜ್ವಲ ದೇಶಭಕ್ತಿಯನ್ನು ಸೂಚಿಸುವಂಥದ್ದು ಎಂಬುದನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಈ ರೀತಿಯ ಭಾವನೆಯನ್ನು ಎಂದಿಗೂ ತಪ್ಪೆಂದು ಹೇಳಲು ಸಾಧ್ಯವಿಲ್ಲ ಅಲ್ಲವೇ? ಆದರೆ ಈತ ಇದನ್ನು ಬರೆದದ್ದು ೧೯೧೫ ರಲ್ಲಿ ಗ್ರೀಸ್ ದೇಶದ ಬಳಿ ಇದ್ದ ಸ್ಕೈರೂಸ್ ಎನ್ನುವ ಪ್ರದೇಶವನ್ನು ಇಂಗ್ಲೆಂಡಿನ ಪರವಾಗಿ ವಶಪಡಿಸಿಕೊಳ್ಳಲು ಹೊರಟಿದ್ದ ಸೈನ್ಯದ ಸೈನಿಕನಾಗಿ ಎಂದು ಇತಿಹಾಸ ಹೇಳುತ್ತದೆ. ಈತ ಗ್ರೀಸ್‌ನ ಸೈನಿಕರೊಂದಿಗೆ ಹೋರಾಡುತ್ತಿದ್ದಾಗಲೇ ದೊಡ್ಡ ಖಾಯಿಲೆಯೊಂದಕ್ಕೆ ತುತ್ತಾಗಿ ಅಲ್ಲಿಯೇ ಮೃತಪಟ್ಟನೆಂದು ಇತಿಹಾಸ ಹೇಳುತ್ತದೆ. ಈಗ ನಮ್ಮ ಪ್ರಶ್ನೆ: ಗ್ರೀಸ್ ದೇಶದವರು ಸಹ ಈತನನ್ನು ದೊಡ್ಡ ನಾಯಕನಂತೆ ಪರಿಗಣಿಸುತ್ತಾರಾ ಮತ್ತು ಈತನನ್ನು ಇಂಗ್ಲೆಂಡಿನವರಂತೆಯೇ ಆರಾಧನಾ ಭಾವದಿಂದ ನೋಡುತ್ತಾರೆಯೇ ಎಂಬುದು.

ಅಂದರೆ ಯುದ್ಧಕ್ಕೆ ಗೆದ್ದವರ ಮುಖ ಮತ್ತು ಸೋತವರ ಮುಖ ಎಂಬ ಎರಡು ಆಯಾಮಗಳಿರುತ್ತವೆ ಎಂದಾಯಿತು. ಇಲ್ಲಿ ಕೇವಲ ಒಂದು ಮುಖವನ್ನು ಮಾತ್ರ ಕವಿ ನೀಡಿರುತ್ತಾನೆ ಎಂಬುದು ಸ್ಪಷ್ಟ. ಅಂದರೆ ಒನಕೆ ಓಬವ್ವನ ಹಾಡಿನಂತೆ ಈ ಕವನವೂ ಯುದ್ಧದ ಒಂದು ಮುಖವನ್ನು ಮಾತ್ರ ಚಿತ್ರಿಸುತ್ತದೆ. ಆದರೆ ನಾವೀಗ ಚರ್ಚಿಸ ಹೊರಟದ್ದು ಯುದ್ಧದ ಗೆಲುವು–ಸೋಲುಗಳ ವಿಚಾರಗಳ ಬಗ್ಗೆ ಅಲ್ಲ. ಇದರಲ್ಲಿ ಎಲ್ಲ ಕಡೆಯೂ ಇರಬಹುದಾದ ಕ್ರೌರ್ಯ, ಸಾವು–ನೋವು, ವಿಷಾದಗಳ, ಬಗ್ಗೆ ಅದರಲ್ಲಿ ಭಾಗವಹಿಸಿದವರು, ಅನುಭವಿಸಿದವರು ಬರೆದಿರುವ ಕ್ರೌರ್ಯಗಳ ಕವನಗಳ ಬಗ್ಗೆ.

* * *

ನಮಗೆಲ್ಲರಿಗೂ ಗೊತ್ತಿರುವಂತೆ ಈ ವಿಶ್ವ ಎರಡು ಮಹಾನ್ ಯುದ್ಧಗಳನ್ನು ಕಂಡಿದೆ: ೧೯೧೪–೧೮ ರ ವರೆಗೆ ಮೊದಲ ಪ್ರಪಂಚ ಯುದ್ಧ ಮತ್ತು ೧೯೩೯–೪೫ ರ ವರೆಗೆ ಎರಡನೇ ವಿಶ್ವ ಸಮರ. ಈ ಎರಡು ಯುದ್ಧಗಳ ಸಮಯದಲ್ಲಿಯೂ ಭಾರತ ಬ್ರಿಟಿಷರ ಆಳ್ವಿಕೆಯಲ್ಲಿ ಇದ್ದುದರಿಂದ ನಮ್ಮ ಸಾವಿರಾರು ಜನರು ಬ್ರಿಟನ್ನಿನ ಪರವಾಗಿ ಮತ್ತು ಅವರು ತಮ್ಮ ಶತ್ರುಗಳೆಂದು ಭಾವಿಸಿದವರ ವಿರುದ್ಧವಾಗಿ ಭಾಗವಹಿಸಿದ್ದು ಐತಿಹಾಸಿಕ ಸತ್ಯ. ಆದರೆ ಇದರಲ್ಲಿ ಭಾಗವಹಿಸಿದ್ದ ಬಹುಪಾಲು ಜನರು ನಿರಕ್ಷರಿಗಳೋ ಅಥವಾ ಕಡಿಮೆ ಕಲಿತವರಾದ್ದರಿಂದಲೋ ಅವರುಗಳು ತಮ್ಮ ಅನುಭವಗಳನ್ನು ಬರಹರೂಪದಲ್ಲಿ ಅಂದರೆ ಕತೆ–ಕವನ–ಆತ್ಮಚರಿತ್ರೆ ಇತ್ಯಾದಿಗಳ ರೂಪದಲ್ಲಿ ದಾಖಲಿಸಲಿಲ್ಲ. ಕೆಲವೇ ಕೆಲವು ಕವಿಗಳು ಈ ಬಗ್ಗೆ ಬರೆದಿದ್ದಾರಾದರೂ ಇವರಲ್ಲಿ ಯಾರೂ ನೇರವಾದ ಯುದ್ಧದಲ್ಲಿ ಸೈನಿಕರಾಗಿ ಪಾಲ್ಗೊಂಡವರಾಗಿರುವುದಿಲ್ಲ. ಇದರ ಬದಲಿಗೆ ಸೈನಿಕರಿಂದ ಅವರ ಅನುಭವಗಳನ್ನು ಕೇಳಿ ತಮ್ಮ ರೀತಿಯಲ್ಲಿ ಅರ್ಥೈಸಿಕೊಂಡು ತಮ್ಮದೇ ಆದ

ವ್ಯಾಖ್ಯಾನದೊಂದಿಗೆ ಸಾಹಿತ್ಯವನ್ನು ಸೃಷ್ಟಿಸಿದವರು. ಅಂದರೆ ಯುದ್ಧಗಳ ಬಗ್ಗೆ ಬಂದಿರುವ ಸಾಹಿತ್ಯ ಒಂದು ರೀತಿಯಲ್ಲಿ ಸೆಕೆಂಡ್ ಹ್ಯಾಂಡ್ ಅನುಭವದ ಸಾಹಿತ್ಯ ಎನ್ನಬಹುದು.

ಆದರೆ ಇಂಗ್ಲೆಂಡಿನಲ್ಲಿ ಈ ಬಗೆಯ ಸಾಹಿತ್ಯವಲ್ಲದೇ ನೇರವಾಗಿ ಸಿಪಾಯಿಗಳಾಗಿ ಯುದ್ಧಕ್ಕೆ ಹೋಗಿ, ಶೆಲ್–ತುಪಾಕಿ ದಾಳಿಗೆ ಸಿಲುಕಿ, ಟ್ರೆಂಚ್ ಮತ್ತು ಬಂಕರ್‌ಗಳಲ್ಲಿ ಅಡಗಿ ಕುಳಿತು, ಕೈಕಾಲುಗಳನ್ನು ಕಳೆದುಕೊಂಡು ಅಥವಾ ಯುದ್ಧದ ಭೀಕರತೆಯಿಂದ ಮಾನಸಿಕ ಸ್ಥಿಮಿತವನ್ನು ಕಳೆದುಕೊಂಡ ಜನರೇ ಬರೆದಿರುವ ಸಾಹಿತ್ಯ ವಿಪುಲವಾಗಿದೆ. ಇವರಲ್ಲಿ ಹಲವರು ಯುದ್ಧರಂಗದಲ್ಲಿ ತಮ್ಮೊಂದಿಗೆ ಹೆಜ್ಜೆ ಹಾಕುತ್ತಿದ್ದವರು ಹೆಣವಾಗಿ ಉರುಳಿದ ನಂತರ ಅವರ ದೇಹದ ಮೇಲೆ ಕಾಲಿಟ್ಟುಕೊಂಡು ಹೋಗಿ ಶತ್ರು ಎಂದೆನಿಕೊಂಡವರನ್ನು ಕೊಂದವರು. ನಂತರ ಆ ಶತ್ರುಗಳೂ ಸಹ ನಮ್ಮಂತೆಯೇ ಮನುಷ್ಯರು, ನಾವು ಅವರನ್ನು ಅವರು ಎಂದೂ ಮಾಡಿರದ ತಪ್ಪಿಗಾಗಿ ಅವರನ್ನು ಕೊಂದಿದ್ದೇವೆ; ಇದರ ಹಿಂದೆ ಬೇರೆ ಯಾರದ್ದೋ ಏನೋ ಉದ್ದೇಶ–ಸ್ವಾರ್ಥ–ಪ್ರತಿಷ್ಠೆ–ರಕ್ತದಾಹಗಳು ಇವೆ ಎಂಬುದನ್ನು ಅರ್ಥಮಾಡಿಕೊಂಡವರು ಬರೆದಿರುವ ಕವನ–ಕಾದಂಬರಿಗಳಿವೆ. ಈ ಕಾದಾಟದಲ್ಲಿ ಬದುಕಿ ಉಳಿದವರು ಹಲವಾರು ಮೆಡಲ್–ಬಿರುದು, ಬಾವಲಿಗಳನ್ನು ಪಡೆದರೂ ಭಯಂಕರವಾದ ದೈಹಿಕ ಮಾನಸಿಕ ಮತ್ತು ನೈತಿಕ ನೋವು–ಹಿಂಸೆಗಳ ಭಾರವನ್ನು ಅನುಭವಿಸಿದವರು. ಅಂದರೆ ನಾವು ಈ ದಿನ ಚರ್ಚಿಸಲು ಹೊರಟದ್ದು ಈ ರೀತಿಯ 'ಸೋಲ್ಜರ್ ಕವಿ'ಗಳ ಮನೋಭಾವ–ದೃಷ್ಟಿಕೋನಗಳ ಬಗ್ಗೆ. ಇವರುಗಳನ್ನು ಇಂಗ್ಲಿಷ್ ಸಾಹಿತ್ಯದಲ್ಲಿ 'ಯುದ್ಧದ ಕವಿಗಳು'ಎಂದೇ ಕರೆದಿದ್ದಾರೆ. ಇವರೆಲ್ಲರ ಬಗ್ಗೆ ಒಂದು ಸಾಲಿನಲ್ಲಿ ಹೇಳುವುದಾದರೆ: ಇವರೆಲ್ಲರೂ ಯುದ್ಧವನ್ನು ಅದರ ಎಲ್ಲ ರೂಪ–ಆಯಾಮಗಳಲ್ಲಿ ತಿರಸ್ಕರಿಸಿದವರು; ಇವರು ಯಾರ ಪರವಾಗಿಯೂ ಅಥವಾ ವಿರುದ್ಧವಾಗಿಯೂ ಬರೆಯುವುದಿಲ್ಲ. ಇವರನ್ನು ನಾವು ಈ ಹಿಂದೆ ನೋಡಿದ 'ದೇಶಭಕ್ತ' ಕವಿ ಎಂದಾಗಲೀ ಅಥವಾ 'ಶೌರ್ಯವನ್ನು ಮೆಚ್ಚುವ ಕವಿ'ಎಂದಾಗಲೀ ಹಣೆಪಟ್ಟಿ ಹಾಕಲು ಬರುವುದಿಲ್ಲ. ಇವರೆಲ್ಲರೂ ಒಂದು ರೀತಿಯಲ್ಲಿ 'ಯುದ್ಧವಿರೋಧಿ ಮನೋಭಾವದ ಸಾಹಿತಿಗಳು'. ಈ ರೀತಿಯ ಕವಿಗಳ ಒಂದು ದೊಡ್ಡ ಪಟ್ಟಿಯೇ ಇದೆ. ಇವರಲ್ಲಿ ಪ್ರಮುಖರು ಇವರು:

1) Rupert Brooke---- 1887-1915
2) Wilfred Owen-----1839-1918;
3) Siegfried Sasoon---- 1886-1967
4) Edmund Blunder---1896-1974
5) Ernest Hemmingway--- novelist

* * *

Wilfred Owen: ಇಂಗ್ಲಿಷ್ ಸಾಹಿತ್ಯದ ಯುದ್ಧಕವಿಗಳ ಪೈಕಿ ಅತ್ಯಂತ ಪ್ರಸಿದ್ಧನಾವನು ವಿಲ್‌ಫ್ರೆಡ್ ಓವನ್. ಈತ ೨೫ ರ ತುಂಬು ಹರೆಯದಲ್ಲೇ ಸತ್ತವನು. ಈತನ ಎಲ್ಲ ಪದ್ಯಗಳಲ್ಲಿಯೂ ಯುದ್ಧದ ಭೀಕರತೆ, ಅದರ ಮೃಗೀಯ ಶಕ್ತಿ ಮತ್ತು ರೌದ್ರತೆಗಳನ್ನು ಚಿತ್ರಿಸಿದಂತೆಯೇ ಅಲ್ಲಿ ಇರಬೇಕಾದ ಕರುಣೆ, ಎಲ್ಲೆಲ್ಲೂ ಕಾಣುತ್ತಿದ್ದ ಅಸಹಾಯಕತೆ ಮತ್ತು ಇದರಲ್ಲಿ ಪಾಲ್ಗೊಂಡವರೆಲ್ಲರಿಗೂ ಅಗತ್ಯವಾಗಿ ಇರಲೇಬೇಕಾಗಿದ್ದ ಸಾಮಾನ್ಯಜ್ಞಾನಗಳು ಇಲ್ಲದಿದ್ದುದರ ಬಗ್ಗೆ, ಹೀಗೆ ವಿಲ್ಫ್ರೆಡ್ ಓವನ್ ಯುದ್ಧ ವಿರೋಧಿ ಭಾವನೆಯನ್ನು ದಟ್ಟವಾಗಿ ಮತ್ತು ನೇರವಾಗಿ ಹೇಳಿ ಯುದ್ಧವನ್ನು ಹೊಗಳುತ್ತಿದ್ದವರ ಮನಸ್ಸನ್ನೂ ಸಹ ತಟ್ಟಿದಂತಹ ಕವಿ.

೧೯೧೪ ರ ಆಗಸ್ಟ್ ತಿಂಗಳಲ್ಲಿ ಜರ್ಮನಿ ಬೆಲ್ಜಿಯಂ ಅನ್ನು ಆಕ್ರಮಿಸಿದಾಗ, ಇಂಗ್ಲೆಂಡ್ ಬೆಲ್ಜಿಯಂನ ಪರವಾಗಿ ತನ್ನ ಸೈನ್ಯವನ್ನು ಕಳಿಸಿದ ಪ್ಲಟೂನಿನ ನಾಯಕನಾಗಿ ಬಡಿದಾಡಲು ಹೋದ ಓವನ್. ಹೀಗೆ ಹೋರಾಡುವಾಗ ಆತ ಜರ್ಮನಿಯವರು ತೋಡಿದ್ದ ಒಂದು ಶೆಲ್ ಗುಂಡಿಗೆ ಬಿದ್ದು ಮೂರು ದಿನಗಳ ಕಾಲ ಅದರೊಳಗೇ ಸಿಕ್ಕಿಹಾಕಿಕೊಂಡು ನರಕಯಾತನೆಯನ್ನು ಅನುಭವಿಸಿದ. ಅಲ್ಲಿಂದ ರಕ್ಷಿಸಿ ಕರೆದುಕೊಂಡು ಬಂದು ವೈದ್ಯಕೀಯ ಚಿಕಿತ್ಸೆ ನೀಡಿದ ಕೆಲವೇ ದಿನಗಳಲ್ಲಿ ಆತನನ್ನು ಮತ್ತೆ ಯುದ್ಧರಂಗಕ್ಕೆ ಕಳಿಸಲಾಯಿತು. ವೈದ್ಯರ ಪ್ರಕಾರ ದೈಹಿಕವಾಗಿ ದೃಢಕಾಯನಾಗಿದ್ದರೂ ಓವನ್ ಅತ್ಯಂತ ದೊಡ್ಡ ಮಾನಸಿಕ ಕ್ಷೋಭೆಗೊಳಗಾಗಿದ್ದ. ಯುದ್ಧಭೂಮಿಯಲ್ಲಿ ಕಾರ್ಯಾಚರಣೆಗೆ ಇಳಿಸಿದರೂ ಅಲ್ಲಿ ಆತನ ವರ್ತನೆ ವಿಚಿತ್ರವಾಗಿತ್ತು. ಇದನ್ನು ಕಂಡ ಆತನ ಕಮಾಂಡರ್ ಆತನನ್ನು ಮತ್ತೆ ಆಸ್ಪತ್ರೆಗೆ ಸೇರಿಸಿದ. ಅಲ್ಲಿದ್ದ ಮಾನಸಿಕ ತಜ್ಞರು ಈತ Neurasthenia ಅಂದರೆ **ಶೆಲ್‌ಶಾಕ್** ಎಂಬ ಮಾನಸಿಕ ಖಾಯಿಲೆಯಿಂದ ನರಳುತ್ತಿದ್ದಾನೆಂದು ತೀರ್ಮಾನಿಸಿ ಓವನ್‌ನನ್ನು ನೇರ ಯುದ್ಧಕ್ಕೆ ಕಳಿಸಬಾರದು ಎಂಬ ಶಿಫಾರಸ್ಸು ಮಾಡಿದರು. ಇದಲ್ಲದೇ ಆತನಿಗಾಗಿರುವ ಮಾನಸಿಕ ಆಘಾತದಿಂದ ಹೊರಬರುವ ಪ್ರಯತ್ನವಾಗಿ ಆತ ಸಾಹಿತ್ಯದ ವ್ಯವಸಾಯವನ್ನು ಮಾಡುವುದು ಒಳ್ಳೆಯದೆಂದೂ ಸಹ ತಿಳಿಸಿದರು. ಅವರ ಸಲಹೆಯನ್ನು ಒಪ್ಪಿದ ವಿಲ್‌ಫ್ರೆಡ್ ಓವೆನ್ ತನ್ನ ನಾಲ್ಕು ಪದ್ಯಗಳನ್ನು ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ಕಳಿಸಿಕೊಟ್ಟ; ಯುದ್ಧಗಳ ಬಗ್ಗೆ ತಾನು ಬರೆದಿರುವ ಪದ್ಯಗಳಲ್ಲಿ ಇರುವ ಉದ್ದೇಶ-ಭಾವನೆಯನ್ನು ಆತ ಸಾರಾಂಶೀಕರಿಸುವುದು ಹೀಗೆ:

My subject is war:
And the pity of war:

ಈತನ ಅತ್ಯಂತ ಪ್ರಸಿದ್ಧ ಪದ್ಯ–Strange Meeting ಬಗ್ಗೆ ವಿವರವಾಗಿ ನೋಡೋಣ: ಇದರಲ್ಲಿ ಆತ ಒಂದು ಕಥಾನಕವನ್ನು ಸೃಷ್ಟಿಸುತ್ತಾನೆ. ಅದು ಹೀಗಿದೆ:

ನಾನು ಯುದ್ಧರಂಗದಿಂದ ಅದು ಹೇಗೋ ತಪ್ಪಿಸಿಕೊಂಡು ಒಂದು ಆಳವಾದ– ಬಹುಕಾಲದ ಹಿಂದೆಯೇ ತೋಡಿದ್ದ ಗ್ರಾನೈಟ್‌ನ ಕಾರ್ಗತ್ತಲ ಸುರಂಗದೊಳಕ್ಕೆ ಬಿದ್ದುಬಿಟ್ಟೆನೆಂದು ಕಾಣುತ್ತದೆ.

It seems that out of battle I escaped
Down some profound dull tunnel, long since scooped

ಮುಂದುವರೆದು ಆತ ಹೇಳುತ್ತಾನೆ: ಇಲ್ಲಿ ನಾನೊಬ್ಬನೇ ಬಿದ್ದದ್ದಲ್ಲ, ಅಲ್ಲಿ ಹಲವಾರು ಜನರ ನರಳಾಟಗಳು ಕೇಳಿಬಂದವು. ನಾನು ಸುರಂಗದ ಕತ್ತಲಿಗೆ ಹೊಂದಿಕೊಂಡ ಕೂಡಲೇ ಗಮನಿಸಿದೆ

One sprang up and stared
Lifting distressful hands, as if to bless,
With piteous recognition in fixed eyes
By his dead smile I knew we stood in Hell.

ಆ ಸುರಂಗದಲ್ಲಿ ವ್ಯಕ್ತಿಯೊಬ್ಬ ತನ್ನ ಎದುರಿಗಿದ್ದ ಕವಿಯನ್ನು ಕಂಡು ತನ್ನ ಕರುಣಾಜನಕ ಕೈಗಳನ್ನು ಆಶೀರ್ವದಿಸಲೋ ಎಂಬಂತೆ ಎತ್ತಿ ಮೃತನಗೆಯನ್ನು ಬೀರಿ ನಿಂತಾಗ ಕವಿಗೆ ಧಡಕ್ಕನೆ ಈಗ ನಾವಿಬ್ಬರೂ ಇರುವುದು ನರಕದಲ್ಲಿ ಎಂಬ ಜ್ಞಾನೋದಯವಾಯಿತು. ಮುಂದೆ ಕವಿಯೇ ಸಂಭಾಷಣೆಯನ್ನು ಆರಂಭಿಸಿದ:

ತಾನಿರುವುದು ಎಲ್ಲಿ ಎಂಬ ಅರಿವು ಆತನಿಗೆ ಬಂದದ್ದು ಹೀಗೆ: ಆ ಕತ್ತಲಿನ– ಭಯಾನಕವಾದ ಸುರಂಗವೇ ನರಕ ಎಂಬುದು ಅರ್ಥವಾದದ್ದು ತನ್ನೆದುರಿಗಿದ್ದ ವ್ಯಕ್ತಿಯ ಮುಖದ ಮೇಲಿದ್ದ ಮೃತನಗೆಯನ್ನು ಕಂಡು.

And by his smile, I knew that sullen hall
By his dead smile we stood in Hell

ಆ ವ್ಯಕ್ತಿಯ ಮುಖವೋ ಸಾವಿರಾರು ಭಯಗಳಿಂದ ಹಲವಾರು ನೆರಿಗೆಗಳನ್ನು ಹೊಂದಿತ್ತು; ಆತನ ಮುಖಕ್ಕೆ ಜೀವಂತಿಕೆಯನ್ನು ನೀಡುವ ರಕ್ತದ ಸಂಪರ್ಕವೇ ಇರಲಿಲ್ಲ.

With a thousand fears the vision's face was grained
Yet no blood reached there from upper ground

ಸ್ವಲ್ಪ ಸುಧಾರಿಸಿಕೊಂಡು ಕವಿಯೇ ತನ್ನೆದುರಿಗಿದ್ದ ವ್ಯಕ್ತಿಯನ್ನು ಮಾತಿಗೆಳೆದ. ಆತನನ್ನು "ವಿಚಿತ್ರ ಮಿತ್ರನೇ" ಎಂದು ಸಂಬೋಧಿಸಿ "ನಾವಿರುವ ಈ ಜಾಗದಲ್ಲಿ ದು:ಖ ಪಡಲು ಏನೂ ಉಳಿದಿಲ್ಲ" ಎಂಬುದನ್ನು ನೆನಪಿಸಿದ. ಇದಕ್ಕೆ ಉತ್ತರವಾಗಿ ಆ ವ್ಯಕ್ತಿಯೂ "ಏನೂ ಇಲ್ಲ, ಆದರೆ ನಾವು ಬದುಕದೇ ಉಳಿದ ವರ್ಷಗಳನ್ನು ಬಿಟ್ಟು"

ಎಂದು ಜೋರಾಗಿ ಉತ್ತರಿಸಿದ. ಅಂದರೆ ಇಬ್ಬರೂ ತಮ್ಮ ಯೌವನ ಕಾಲದಲ್ಲೇ ಸತ್ತಿದ್ದಾರೆ ಎಂಬುದು ತಿಳಿಯುತ್ತದೆ.

Strange friend, I said, "here is no cause to mourn"
"None" said the other "Save the undone years"
Whatever hope is yours
Was my life also

ಕವಿಯ ಎದುರಿಗಿದ್ದ ವ್ಯಕ್ತಿಯೂ ಹಲವಾರು ವಿಚಿತ್ರ ಸಂಗತಿಗಳನ್ನು ಹೇಳಿದ: ಭೂಮಿಯ ಮೇಲೆ ಇನ್ನೂ ಬದುಕಿರುವ ಜನರು(ನಾವು ಅಂದರೆ ಸತ್ತ ಸೈನಿಕರು) ಯುದ್ಧದಲ್ಲಿ ಎಷ್ಟೆಲ್ಲಾ ಜನರನ್ನು ಸಾಯಿಸಿದೆವು, ಎಷ್ಟೆಲ್ಲಾ ಆಸ್ತಿಗಳನ್ನು ಹಾಳುಮಾಡಿದೆವು ಎಂಬುದನ್ನು ಹೇಳಿಕೊಳ್ಳುತ್ತಾ ಸಮಾಧಾನಪಟ್ಟುಕೊಳ್ಳುತ್ತಾರೆ.

Now men will go content with what we have spoiled
Or discontent, boil bloody, and be spilled

ಕವಿಯನ್ನು ಸ್ಪಷ್ಟವಾಗಿ ಗುರ್ತಿಸಿದ ಆ ವಿಚಿತ್ರ ಸ್ನೇಹಿತ, ನಿನ್ನೆ ದಿನ ನೀನು, ಈಗಿನಂತೆಯೇ ನಿನ್ನ ಹುಬ್ಬುಗಂಟಿಟ್ಟಿದ್ದೆ ಮತ್ತು ನನಗೆ ಚೂರಿ ಹಾಕಿ ಕೊಂದಿದ್ದೆ; ಆ ರೀತಿ ನಿನ್ನಿಂದ ಹತನಾದ ಶತ್ರು ನಾನೇ ಎಂಬ ಆಘಾತಕಾರಿ ಸತ್ಯವನ್ನು ಸಹ ಹೇಳಿಬಿಟ್ಟ:

I am the enemy you killed, my friend.
I knew you in this dark; for so you frowned
Yesterday through me as you jabbed and killed

ಇಷ್ಟನ್ನು ಹೇಳಿದ ಆ ವ್ಯಕ್ತಿ ಎತ್ತಿದ್ದ ಕೈಯಿನ ಏಟನ್ನು ಕವಿ ಅಂದರೆ ಮತ್ತೊಬ್ಬ ಸೈನಿಕ ತಪ್ಪಿಸಿಕೊಂಡನಷ್ಟೇ ಅಲ್ಲದೇ ಆತನಿಗೆ ಎದುರಾಗಿ ಪೆಟ್ಟುಕೊಡಲು ತನ್ನ ಕೈಗಳನ್ನು ಎತ್ತಲೇ ಇಲ್ಲ, ಏಕೆಂದರೆ ಆತನ ತೋಳುಗಳು ನಿಷ್ಕ್ರಿಯವಾಗಿದ್ದವು.

I parried; but my hands were loath and cold

ಕೊನೆಗೆ ಆತ ಹೇಳಿದ್ದು.

Let us sleep now.........

* * *

ಈ ಕವನದಲ್ಲಿ ಕವಿ ಯುದ್ಧದಲ್ಲಿ ಹೋರಾಡಿದ ಸೈನಿಕನಾಗಿದ್ದರೂ ಆತ ಶೌರ್ಯದ ಬಗ್ಗೆ ಹೇಳಿಲ್ಲ; ತಾನು ಮಾಡಿರುವ ತ್ಯಾಗ ಅಥವಾ ಮಾತೃಭೂಮಿಯ ಔನ್ನತ್ಯದ ಬಗ್ಗೆಯೂ ಹೇಳಲಿಲ್ಲ. ಇಬ್ಬರು ಸೈನಿಕರೂ ಒಬ್ಬರೊನ್ನೊಬ್ಬರು ನೋಡಿರದಿದ್ದರೂ,

ಯಾರನ್ನು ಕಂಡರೆ ಯಾರಿಗೆ ದ್ವೇಷ-ಕೋಪಗಳು ಇಲ್ಲದಿದ್ದರೂ ಯಾರದೋ ಸ್ವಾರ್ಥಕ್ಕೆ ಪಕ್ಕಾಗಿ ತಾವಿಬ್ಬರೂ ಹೋರಾಡಿದ ವಿಷಯವನ್ನು ಹೇಳುತ್ತಾನೆ. ಕೊನೆಯಲ್ಲಿ ಆತ ಹೇಳುವ ಮಾತು-**"ಲೆಟ್ ಅಸ್ ಸ್ಲೀಪ್ ನೌ"**. ಇದನ್ನು ಯಾವ ಅರ್ಥದಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆಯೇ ಹಲವಾರು ವಿಮರ್ಶಕರು ಹಲವಾರು ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ. ಒಬ್ಬರು ಇದನ್ನು "ಆಗಿದ್ದೆಲ್ಲಾ ಆಗಿಹೋಯಿತು, ನಾನು-ನೀನು ಈಗ ಸತ್ತು ಹೋಗಿದ್ದೇವೆ, ನಮಗುಳಿದಿರುವುದು ಸುಮ್ಮನೆ ಗೋರಿಯಲ್ಲಿ ಮಲಗೋದಷ್ಟೆ" ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದರೆ ಮತ್ತೊಬ್ಬರು, "ಯುದ್ಧವೆಲ್ಲಾ ಮುಗಿದ ಮೇಲೆ ಮತ್ಯಾಕೆ ನೀನು ನನ್ನ ವಿರುದ್ಧ ಕೈಎತ್ತಿದ್ದು? ಈಗ ಯುದ್ಧವನ್ನು ಮುಂದುವರೆಸುವ ಅಗತ್ಯವಿಲ್ಲ; ಬಾ ಇಬ್ಬರೂ ಶಾಂತರಾಗೋಣ" ಎಂಬ ಭಾವ ಇದರಲ್ಲಿದೆ ಎಂದು ಹೇಳುತ್ತಾರೆ. ಮತ್ತೊಬ್ಬ ವಿಮರ್ಶಕರು ಇದರಲ್ಲಿರುವುದು ಭಯಂಕರವಾದ ತಣ್ಣಗಿನ ವಿಷಾದ ಮತ್ತು ವ್ಯಂಗ್ಯ ಎಂದು ವ್ಯಾಖ್ಯಾನಿಸುತ್ತಾರೆ. ಏನೇ ಆದರೂ ಈ ಪದ್ಯವನ್ನು ಓದಿದ ಬಳಿಕ ಇಲ್ಲಿರುವ ಯುದ್ಧದ ವಿಷಾದ ಮತ್ತು ಜೀವಗಳ ನಷ್ಟದ ಭಾವ ನಮ್ಮನ್ನು ಆವರಿಸಿಕೊಳ್ಳುವುದು ಸುಳ್ಳಲ್ಲ ಅಲ್ಲವೇ?

ಇದಕ್ಕೆ ಪೂರಕವಾಗಿ ಇಂಗ್ಲಿಷಿನ ಇನ್ನೊಬ್ಬ ಕವಿ **Siegfried Sasoon**ನ **The General** ಪದ್ಯವನ್ನು ನೋಡಬಹುದು. ಇದರ ಆರಂಭ ಹೀಗಿದೆ:

Good morning, Good morning, General said,
When we met him last week on our way to the line

ಅಂದರೆ ಒಬ್ಬ ಸೈನಿಕ ಮತ್ತೊಬ್ಬ ಸೈನಿಕನಿಗೆ ಮೆಲುದನಿಯಲ್ಲಿ ಹೀಗೆ ಹೇಳುತ್ತಾನೆ: ನಮ್ಮ ಜನರಲ್ ನಾವುಗಳೆಲ್ಲರೂ ಬೆಳಗಾಗೆದ್ದು ಸರತಿಯ ಸಾಲಿನಲ್ಲಿ ನಿಲ್ಲಲು ಹೋಗುತ್ತಿದ್ದಾಗ ಮುಗುಳ್ನಗುತ್ತಾ ಗುಡ್‌ಮಾರ್ನಿಂಗ್, ಗುಡ್‌ಮಾರ್ನಿಂಗ್ ಎಂದು ಹೇಳುತ್ತಿದ್ದಾನಲ್ಲಾ, ಈಗ ಏನಾಗಿದೆ ಗೊತ್ತಾ?

Now , the soldiers he smiled at are
most of them dead
And we are cursing his staff
for this incompetent swine !

ಆತ ಮುಗುಳ್ನಗುತ್ತಾ ಗುಡ್‌ಮಾರ್ನಿಂಗ್ ಹೇಳುತ್ತಿದ್ದ ಬಹುತೇಕ ಸೈನಿಕರೆಲ್ಲಾ ಈಗ ಹತರಾಗಿ ಹೋಗಿದ್ದಾರೆ; ನಾವೆಲ್ಲಾ ಈ 'ಅಪ್ರಯೋಜಕ ಹಂದಿ' ಮಾಡಿದ ತಪ್ಪಿಗಾಗಿ ಅವನ ಸಹೋದ್ಯೋಗಿಗಳಿಗೆ ಹಿಡಿ ಶಾಪ ಹಾಕುತ್ತಿದ್ದೇವೆ ಎಂದು ಉಸುರುತ್ತಾನೆ. ಅಂದರೆ ತನ್ನ ಜೊತೆಗಾರರಾಗಿದ್ದವರೆಲ್ಲಾ ಈಗ ಗೋರಿಯಲ್ಲಿ ತಣ್ಣಗೆ ಮಲಗಿರಲು

ಕಾರಣ ಈ ಜನರಲ್‌ನ ತಪ್ಪು ನಿರ್ಧಾರದಿಂದಲೇ ಎನ್ನುವುದು ಈ ಸೈನಿಕನಿಗೆ ಗೊತ್ತಿದೆ. ಈತನ ಮೋಸದ, ಗುಳ್ಳೆ ನರಿಯಂತಹ ನಗುವನ್ನು ಈ ಅನಾಮಧೇಯ ಸೈನಿಕ ಮುಂದುವರೆಸಿ ಹೇಳುವುದು ಹೀಗೆ:

He is a cherry old card, grunted Harry to Jack
As they slogged upto Arras with rifle and Pack.

ಅಂದರೆ, ಈ ಮಾತನ್ನು ಹೇಳಿದವನ್ನು ಹ್ಯಾರಿ ಎಂಬ ಸೈನಿಕ; ಇವನ ಜೊತೆಯಲ್ಲಿದ್ದವನು ಜ್ಯಾಕ್ ಎಂಬ ಸೈನಿಕ: ಇವರಿಬ್ಬರೂ ರೈಫಲ್ಲನ್ನು ಹೊತ್ತು ಬೆನ್ನಿನ ಮೇಲೆ ದೊಡ್ಡ ಬ್ಯಾಗನ್ನು ಹೊತ್ತಿದ್ದವರು. ಒಬ್ಬ ಹೇಳಿದ: "ಈ ಜನರಲ್‌ನ ಸುಳ್ಳು ಮುಗುಳ್ನಗುವನ್ನು ನೋಡು– ಅದು, ಅದು ಬಾಡಿ ಹೋದ ಚೆರ್ರಿ ಹಣ್ಣಿನ ಬಿರಿದ ಪಕಳೆಯಂತಿದೆ" ಎಂದು ಹ್ಯಾರಿ ತನ್ನ ಸ್ನೇಹಿತ ಜ್ಯಾಕ್‌ನ ಕಿವಿಯಲ್ಲಿ ಗೊಣಗುಟ್ಟಿದ.

Tired with dull grief
Grown old before my day
I sit in solitude and only hear
Long silent laughters, murmurings of display.

The lost intensities of hope and fear
In those old marshes, yet the rifles die.

ಈ ಪದ್ಯದ ಕೊನೆಯ ಸಾಲುಗಳು ಇವು: ಯಾರು ಯಾರಿಗೆ ಹೇಳಿದ್ದು ಎನ್ನುವುದು ಇಲ್ಲಿ ಮುಖ್ಯವಲ್ಲ. ಇಬ್ಬರ ಭಾವಗಳೂ ಹೀಗಿವೆ: ವಿಷಾದದ ದು:ಖದಿಂದ ನಾವು ಸುಸ್ತಾಗಿದ್ದೇವೆ, ವಯಸ್ಸಾಗುವ ಮೊದಲೇ ಮುದಿತನ ಬಂದಿದೆ; ನಾನು ಒಬ್ಬನೇ ಒಂಟಿತನದಲ್ಲಿ ಮೂಲೆಯಲ್ಲಿ, ಈಗಾಗಲೇ ಶಾಶ್ವತವಾಗಿ ನಿಂತುಹೋಗಿರುವ ನಗೆಯನ್ನು ಕೇಳಿಸಿಕೊಳ್ಳುತ್ತಾ ಕುಳಿತಿದ್ದೇನೆ; ಆದರೆ ಬಂದೂಕುಗಳು ಸಾಯುವ ಈ ಸಮಯದಲ್ಲಿ ನನಗಿರುವುದು ಅತ್ಯಂತ ತೀವ್ರವಾದ ಭಯ ಮತ್ತು ಬದುಕುಳಿಯ ಬಹುದೆಂಬ ಆಸೆಗಳ ನಡುವೆ ತೂಗುಯ್ಯಾಲೆಯಾಡುತ್ತಾ ಇದ್ದೇನೆ.

ಈ ಪದ್ಯದಲ್ಲಿ ನಮಗೆ ಕಾಣುವುದು ಸೈನಿಕರ ವಿಷಾದ, ಭಯ ಮತ್ತು ನಿರಾಶೆಗಳು; ಇವುಗಳಿಗೆ ಈ ಭಾವನೆಗಳು ಕೇವಲ ಬ್ರಿಟಿಷ್ ಸೈನಿಕರದ್ದು ಎಂಬ ಹಣೆಪಟ್ಟಿಯನ್ನೇನೂ ಹಚ್ಚಬೇಕಾಗಿಲ್ಲ. ಯಾವುದೇ ಜನರಲ್ ತಾನು ಯುದ್ಧರಂಗಕ್ಕೆ ಹೋಗದೆ ಸುರಕ್ಷಿತವಾದ ಕೊಠಡಿಯಲ್ಲಿ ಕುಳಿತು ಇತರ ಸೈನಿಕರನ್ನು ಕಳಿಸುವುದು–ತಾನು ಸದಾ ಕಾಲ ಮುಗುಳ್ನಗುತ್ತಾ ಇದ್ದು ಸೈನಿಕರನ್ನು ಕಷ್ಟಕ್ಕೆ ದೂಡಿ ಅವರು ಸತ್ತರೂ ತಿಳಿಯದಂತೆ

ಇರುವುದು– ಅವರೆಲ್ಲರೂ ರೈಫಲ್ ಮತ್ತು ಬ್ಯಾಕ್‌ಪ್ಯಾಕ್‌ಗಳನ್ನು ಹೊತ್ತು ಯುದ್ಧರಂಗಕ್ಕೆ ಹೋಗಿ ಅಲ್ಲಿಂದ ಹೆಣವಾಗಿ ಹೋಗುವುದು; ಇದಾದ ನಂತರವು ಉಳಿದ ಸೈನಿಕರನ್ನು ಮುಗುಳ್ನಗುತ್ತಾ ದೊಡ್ಡ ದೇಶಭಕ್ತಿಯ ಭಾಷಣ ಮಾಡಿ ಯುದ್ಧರಂಗಕ್ಕೆ ಕಳಿಸುವುದು. ಇವೆಲ್ಲವುಗಳನ್ನು ದಿನವೂ ನೋಡುತ್ತಿರುವ ಸೈನಿಕರಿಗೆ ಅಂದರೆ, ಸಾವಿನ ಈ ಚಕ್ರ ತಮ್ಮ ಕಣ್ಣಮುಂದೆಯೇ ನಡೆಯುತ್ತಿರುವಾಗ ಸೈನಿಕರಿಗೆ ಅವರ ಜನರಲ್‌ನ ಬಗ್ಗೆ, ಯುದ್ಧದ ಬಗ್ಗೆ ಹುಟ್ಟುವ ಭಾವನೆಗಳು ಹೇಗಿರಬಹುದು ಎಂಬುದನ್ನು ವಿಷಾದ ಮತ್ತು ವ್ಯಂಗ್ಯಭರಿತ ದನಿಯಲ್ಲಿ ಹೇಳುತ್ತದೆ ಈ ಕವನ.

Edmund Blunden: ೧೯೧೫ ರಲ್ಲಿ ಬ್ರಿಟಿಷ್ ಸೈನ್ಯಕ್ಕೆ ಸೇರಿಕೊಂಡ ಎಡ್‌ಮಂಡ್ ಬ್ಲಂಡನ್ ೧೯೧೬ ರಿಂದ ೧೯೧೮ ರ ವರೆಗೆ ನಡೆದ ಹಲವಾರು ಯುದ್ಧಗಳಲ್ಲಿ ಪಾಲ್ಗೊಂಡು ಹಲವಾರು ಮಿಲಿಟರಿ ಪ್ರಶಸ್ತಿಗಳನ್ನು ಪಡೆದ. ಆ ಸಮಯದಲ್ಲಿ ಸಾಮಾನ್ಯವಾಗಿ ಬಳಸುತ್ತಿದ್ದ ವಿಷಗಾಳಿಯ ಹೊಡೆತಕ್ಕೆ ಸಿಕ್ಕು ಪ್ರಚಂಡವಾದ ಮಾನಸಿಕ ಮತ್ತು ದೈಹಿಕ ಹೊಡೆತಕ್ಕೆ ಸಿಕ್ಕಿಹಾಕಿಕೊಂಡ ಬ್ಲಂಡನ್ ತನಗಾದ ಮಾನಸಿಕ ಒತ್ತಡದಿಂದ ಹೊರಬರಲೇ ಇಲ್ಲ. ಎರಡನೇ ಮಹಾಯುದ್ಧವನ್ನೂ ಕಂಡ ಈತ ಹಲವಾರು ಯುದ್ಧವಿರೋಧಿ ಕವನಗಳನ್ನು ಬರೆದು ೧೯೭೪ ರಲ್ಲಿ ತೀರಿಹೋದ. ಈತನ ಒಂದು ಚಿಕ್ಕ ಕವನ ಹೀಗಿದೆ: ಕವನದ ಶೀರ್ಷಿಕೆ: Report On Experience

I have been young, and now I'm not too old
And I have seen the righteous forsaken
His health, his honour and his quality taken
This is not we were formerly told.

ಈ ಪದ್ಯದ ಅರ್ಥ ಬಹುಸರಳ ಮತ್ತು ಬಹಳ ಚೂಪಾಗಿದೆ: ಈ ಪದ್ಯ ಬರೆಯುವ ಸಮಯಕ್ಕೆ ಕವಿ ತನ್ನ ಮುಖ್ಯವಾದ ಯೌವನವನ್ನು ಕಳೆದುಕೊಂಡಿದ್ದಾನೆ ಆದರೆ ಮುದುಕನಾಗಿಲ್ಲ ಹೌದು. ಆದರೆ ಆತನ ಗೌರವ, ಶಕ್ತಿ, ಯೌವನದ ಕಸುವು, ಜೀವನದ ಗುಣಮಟ್ಟ ಎಲ್ಲವೂ ಕಳೆದುಹೋಗಿದೆ; ಇವನನ್ನು ಅಥವಾ ಇಂಥವರನ್ನು ಯುದ್ಧಕ್ಕೆ ಕಳುಹಿಸುವಾಗ ದೇಶದ ನಾಯಕರು, ಇವುಗಳು ಜರುಗತ್ತವೆ ಎಂದಾಗಲೀ, ಈ ರೀತಿಯ ನಷ್ಟವಾಗುತ್ತದೆ ಎಂದಾಗಲೀ ಎಂದೂ ಹೇಳಿರಲಿಲ್ಲ, ನಂತರ ಇದೇ ಜನರಲ್ ಉಳಿದ ಸೈನಿಕರನ್ನು ಇದೇ ಸುಳ್ಳು ಮುಗುಳ್ನಗೆಯಿಂದ ಉಳಿದ ಸೈನಿಕರನ್ನು ರಣರಂಗಕ್ಕೆ ಕಳಿಸುವುದು, ಬದಲಿಗೆ ದೊಡ್ಡ ದೊಡ್ಡ ಮಾತುಗಳನ್ನಾಡಿ ಅವರನ್ನು ಹುರಿದುಂಬಿಸಿ ಯುದ್ಧರಂಗಕ್ಕೆ ಕಳಿಸಿದ್ದರು. ಅಲ್ಲಿಗೆ ಹೋಗಿ ಬದುಕಿ ಬಂದರೂ ಈತನಿಗೆ ತನ್ನ ಜೀವನದಲ್ಲಿ ಅತ್ಯಮೂಲ್ಯವಾದ ಎಲ್ಲವನ್ನೂ ಕಳೆದುಕೊಂಡಿದ್ದೇನೆ ಎಂಬುದು ಅರಿವಾಯಿತು.

ಇದು ಎಲ್ಲ ಸೈನಿಕರ ಅನುಭವವೂ ಆಗಿರುತ್ತದೆ ಅಲ್ಲವೇ? ಇದು ದೇಶದ ಯುವಕರ ಜೀವನದ ಕನಸುಗಳನ್ನು–ಯೌವನವನ್ನು ಯುದ್ಧ ಹೇಗೆ ಕಸಿದುಕೊಳ್ಳುತ್ತದೆ ಎಂದು ಸೂಚ್ಯವಾಗಿ ಹೇಳಿ ಉಳಿದದ್ದನ್ನು ಅರ್ಥಮಾಡಿಕೊಳ್ಳಲು ನಮಗೇ ಬಿಡುತ್ತದೆ.

* * *

Ivor Gurvey: ಇವೊರ್ ಗರ್ವೆ

ಈತನಿಗೆ ಚಿಕ್ಕಂದಿನಿಂದಲೂ ಕಣ್ಣಿನ ದೃಷ್ಟಿ ಸ್ವಲ್ಪ ಮಂದವಾಗಿದ್ದರೂ ಅಂದರೆ ಸೈನ್ಯಕ್ಕೆ ಸೇರಲು ಈತ ಸಂಪೂರ್ಣವಾಗಿ ಫಿಟ್ ಅಲ್ಲದಿದ್ದರೂ ಅದು ಹೇಗೊ ೧೯೧೭ ರಲ್ಲಿ ಬ್ರಿಟಿಷ್ ಸೈನ್ಯಕ್ಕೆ ಸೇರಿಕೊಂಡ. ಈತ ಫ್ರಾನ್ಸ್‌ನ ನೆಲದಲ್ಲಿ ಇಂಗ್ಲೆಂಡಿನ ಪರವಾಗಿ ಹಲವಾರು ಯುದ್ಧಗಳಲ್ಲಿ ಪಾಲ್ಗೊಂಡ. ಆ ಸಮಯದಲ್ಲಿ ಜರ್ಮನಿಯ ಸೈನಿಕರು ಬಳಸುತ್ತಿದ್ದ ವಿಷಗಾಳಿಯ ಹೊಡೆತಕ್ಕೆ ಸಿಲುಕಿ ಮಾರಣಾಂತಿಕವಾಗಿ ಗಾಯಗೊಂಡು ರಣರಂಗದಲ್ಲಿ ನೇರ ಕಾರ್ಯಾಚಾರಣೆಗೆ ಅನ್‌ಫಿಟ್ ಆದ ಈತನನ್ನು ಇಂಗ್ಲೆಂಡಿನಲ್ಲಿದ್ದ ರಾಯಲ್ ಕಾಲೇಜ್ ಆಫ್ ಮ್ಯೂಸಿಕ್‌ಗೆ ಸೇರ್ಪಡೆ ಮಾಡಲಾಯಿತು. ಸ್ವಲ್ಪಕಾಲ ಇಲ್ಲಿ ಚಿಕಿತ್ಸೆ ಪಡೆದರೂ ಸಂಪೂರ್ಣ ಆರೋಗ್ಯವನ್ನು ಪಡೆಯದ ಈತನನ್ನು ೧೯೩೭ ರಲ್ಲಿ ಲಂಡನ್ನಿನ ಮಾನಸಿಕ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಸಾಕಷ್ಟು ಕಾಲ ಚಿಕಿತ್ಸೆ ಪಡೆದ ಈತ ಸ್ವಲ್ಪ ಸಾಹಿತ್ಯದ ಕೃಷಿ ಮಾಡಿ ಅಲ್ಲಿಯೇ ತೀರಿಕೊಂಡ. ಈತನ ಅತ್ಯಂತ ಪ್ರಸಿದ್ಧ ಪದ್ಯ: The Silent One.

ಇಲ್ಲಿ ಕವಿ ತಾವು ಇಬ್ಬರು ಸ್ನೇಹಿತರಿದ್ದ ಬಗ್ಗೆ ಹೇಳುತ್ತಾನೆ. ಇವರಿಬ್ಬರೂ ಸೈನಿಕರು. ಒಬ್ಬ ಉತ್ತಮ ಮಾತುಗಾರ, ಧೈರ್ಯಶಾಲಿ ಮತ್ತು ದೇಶದ ಬಗ್ಗೆ ಅದ್ಭುತವಾದ ಆದರಾಭಿಮಾನ ಹೊಂದಿದ್ದ ದೇಶಭಕ್ತ. ಈತ ಎಲ್ಲರನ್ನೂ ನಗುನಗುತ್ತಾ ಮಾತನಾಡಿಸುತ್ತಿದ್ದ.

Who died on the wires and hung the trees, one of two
Who for his hours of life had chattered through,
Infinite lovely chatter of Bucks accent

ಈಗ ಆತ ಇದ್ದಕ್ಕಿದ್ದಂತೆ ಸತ್ತುಹೋಗಿರುವುದು ಮತ್ತು ಅಷ್ಟು ಒಳ್ಳೆಯ ಮಾತುಗಾರನಾಗಲಿ, ಧೈರ್ಯಶಾಲಿಯೂ ಅಲ್ಲದ ತಾನು ಇನ್ನೂ ಬದುಕಿರುವುದರ ಬಗ್ಗೆ ಕವಿ ಗೋಳಿಟ್ಟುಕೊಳ್ಳುತ್ತಾನೆ. ಇಡೀ ಪದ್ಯದಲ್ಲಿ ಕವಿ ವ್ಯಕ್ತಪಡಿಸುವುದು ಯುದ್ಧದಲ್ಲಿ ತಾನು ಕಳೆದುಕೊಂಡ ತನ್ನ ಉತ್ತಮ ಸ್ನೇಹಿತನೊಂದಿಗಿದ್ದ ಬಾಂಧವ್ಯ ಮತ್ತು ಸ್ನೇಹಗಳ ಬಗ್ಗೆ.

But I weak, hungry and willing only for the chance
Darkness shot at: I was afraid,
No hole, no way to be seen
Nothing but the chance of death.

ಇವೆರಡೂ ಆತನ ಸಾವಿನೊಂದಿಗೆ ಹಠಾತ್ತಾಗಿ ಕಡಿದುಹೋದಾಗ ಇನ್ನು ಮುಂದಿನ ಜೀವನದಲ್ಲಿ ತಾನು ಯಾರೊಂದಿಗೆ ತನ್ನ ಭಾವನೆಗಳನ್ನು ಮತ್ತು ಮಾತುಗಳನ್ನು ಅಥವಾ ಸುಖ–ದು:ಖವನ್ನು ಹಂಚಿಕೊಳ್ಳಬೇಕು ಎಂಬ ಘೋರ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾನೆ.

ಇಲ್ಲಿಯೂ ಸಹ ಕವಿ ಯುದ್ಧವನ್ನು ಹೊಗಳುವುದಾಗಲೀ, ಸೈನಿಕರ ಶೌರ್ಯವನ್ನು ಮೆರೆಸುವುದಾಗಲಿ, ಶತ್ರುಗಳನ್ನು ಹೀಗಳೆಯುವುದನ್ನಾಗಲಿ ಮಾಡದೇ ಯುದ್ಧದ ವಿವರಣೆಗಳಲ್ಲಿ ಸಾಮಾನ್ಯವಾಗಿ ಕಾಣದ ಸಾವು ಮತ್ತು ಅದರಿಂದ ಉಂಟಾಬಹುದಾದ ಆತ್ಮೀಯರ ಬೇರ್ಪಡುವಿಕೆಗಳ ಬಗ್ಗೆ ಮಾತ್ರ ಅತ್ಯಂತ ತೀವ್ರವಾಗಿ ಬರೆದಿದ್ದಾನೆ.

ಈ ರೀತಿಯ ಮೊದಲ ಅಥವಾ ಎರಡನೇ ಪ್ರಪಂಚಯುದ್ಧಕ್ಕೆ ಸಂಬಂಧಿಸಿಲ್ಲದಿದ್ದರೂ ಇಂಗ್ಲಿಷ್ ಸಾಹಿತ್ಯದ ಕವಿಗಳು ಯುದ್ಧೋನ್ಮಾದದ ಬಗ್ಗೆ–ಸ್ವಾರ್ಥಿಗಳು ಕಾರಣವಿದ್ದೋ ಇಲ್ಲದೆಯೋ ಯುದ್ಧಗಳನ್ನು ಘೋಷಿಸುತ್ತಾ ದೇಶದ ಸಂಪನ್ಮೂಲಗಳನ್ನು ಹಾಳುಗೆಡವುತ್ತಾ ಮತ್ತು ದೇಶದ ಯುವಜನತೆಯ ಜೀವವನ್ನು ಬಲಿಕೊಡುವುದರ ನಿರರ್ಥಕತೆಯ ಬಗ್ಗೆ ಸದಾಕಾಲವೂ ಎಚ್ಚರಿಸುತ್ತಲೇ ಬಂದಿದ್ದಾರೆ.

ಇದರಲ್ಲಿ ಒಂದು ಪದ್ಯವೆಂದರೆ After Blenheim by Robert Southey. ಇದು ೧೭೭೦ ರಷ್ಟು ಹಿಂದೆಯೇ ಬರೆದದ್ದು. ಅಂದರೆ ನಾವು ನೆನಪಿಡಬೇಕಾದ್ದು: ಅದು ಯಾವುದಾದರೊಂದು ದೇಶ ಮತ್ತೊಂದು ದೇಶದ ವಿರುದ್ಧ ಯುದ್ಧವನ್ನು ಸಾರಿತೆಂದರೆ ಆಗ ಸಾವಿರಾರು ಜನರು ಅವರ ಮಾತಿಗೆ ಮರುಳಾಗಿ ತಮ್ಮ ಜೀವವನ್ನು ಪಣವಾಗಿಡುತ್ತಿದ್ದ ಕಾಲ. ಆದರೆ ಕವಿಗಳನ್ನು ದೇಶದ 'ಅಂತರಾತ್ಮನ ಕಾವಲುಗಾರರು' Conscience Keepers – ಎಂದು ಕರೆಯಲಾಗಿದೆ. ಇದರಲ್ಲಿ ವ್ಯಕ್ತಪಡಿಸಿರುವ ಭಾವನೆಗಳು ಆ ಕಾಲಕ್ಕೆ ಜನಪ್ರಿಯ ಭಾವನೆಗಳಾಗಿರಲಿಲ್ಲ. ಇದರ ಕೆಲವು ಸಾಲುಗಳನ್ನು ಈಗ ನೋಡೋಣ:

ಈ ಪದ್ಯ ಒಂದು ರೀತಿಯಲ್ಲಿ ಲಾವಣಿ ಅಥವಾ ಕಥನ ಕವನದ ರೀತಿಯಲ್ಲಿದೆ: ಬೇಸಿಗೆ ದಿನದ ಒಂದು ಸಂಜೆ, ಕ್ಯಾಸ್ಪರ್ ಎನ್ನುವ ವಯೋವೃದ್ಧ ರೈತ ತನ್ನ ಜಮೀನಿನ ಕೆಲಸ ಕಾರ್ಯಗಳೆಲ್ಲವನ್ನೂ ಮುಗಿಸಿ ಆರಾಮದ ಭಾವದಲ್ಲಿ ವಿಶ್ರಾಂತಿಯನ್ನು

ತೆಗೆದುಕೊಳ್ಳುತ್ತಿದಾಗ ಆತನ ಮೊಮ್ಮಗ ಪೀಟರ್‌ಕಿನ್ ಮತ್ತು ಮೊಮ್ಮಗಳು ವಿಲ್‌ಹೆಮಿನ್ ಎನ್ನುವ ಎದುರಿನ ಬಯಲಿನಲ್ಲಿ ಆಟವಾಡುತ್ತಿದ್ದರು. ಆಗ ಅವರಿಗೆ ಒಂದು ದೊಡ್ಡದಾದ– ಗುಂಡನೆಯ ಮತ್ತು ನಯವಾದ ವಸ್ತುವೊಂದು ಮಣ್ಣಿನಲ್ಲಿ ಸಿಕ್ಕಿತು. ಆ ಮಕ್ಕಳಿಗೆ ಅದೇನೆಂದು ತಿಳಿಯದೆ ಎದುರಿಗೆ ಕುಳಿತಿದ್ದ ತಮ್ಮ ತಾತನ ಬಳಿ ಕೊಟ್ಟು ಅದೇನೆಂದು ಕೇಳಿದರು. ಇದನ್ನು ನೋಡಿದ ಕ್ಯಾಸ್ಪರ್ ನಿಟ್ಟುಸಿರು ಬಿಟ್ಟು:

It was a summer evening,
Old Kasper's work was done,
And by him sported on the green
His little grand child Wilhelmine.
She saw her brother Peterkin
Roll something large and round

ಇದು ಆ ದೊಡ್ಡ ಯುದ್ಧದಲ್ಲಿ ಸತ್ತ ಯಾರೋ ಒಬ್ಬ ಬಡಪಾಯಿಯ ತಲೆಬುರುಡೆ; ನಾನು ಜಮೀನಿನಲ್ಲಿ ಹಲವಾರು ಈ ಹಿಂದೆ ಬಾರಿ ನೇಗಿಲು ಹಿಡಿದು ಉಳುಮೆ ಮಾಡುತ್ತಿದ್ದಾಗ ಇಂತಹ ನೂರಾರು ತಲೆಬುರುಡೆಗಳು ಸಿಗುತ್ತಿದ್ದವು. ಇವೆಲ್ಲವೂ ಆ ದೊಡ್ಡ ವಿಜಯವನ್ನು ಕಂಡ ಯುದ್ಧದಲ್ಲಿ ಸತ್ತ ಸೈನಿಕರವು, ಎಂದು ಉತ್ತರಿಸಿದ.

'Tis some poor fellow's skull, said he
Who fell in the great victory

ಇದರ ಬಗ್ಗೆ ಕುತೂಹಲಗೊಂಡ ಮೊಮ್ಮಕ್ಕಳು ಆ ಯುದ್ಧ–ಅದರ ವಿಜಯೋತ್ಸವಗಳ ಬಗ್ಗೆ ಹೆಚ್ಚಿನ ವಿಷಯಗಳನ್ನು ಹೇಳಬೇಕೆಂದು ಪ್ರೀತಿಯಿಂದ ಅಜ್ಜನನ್ನು ಆಗ್ರಹಿಸಿದ್ದರಿಂದ ಆತ ಇದರ ಇತಿಹಾಸವನ್ನು ಚುಟುಕದಲ್ಲಿ ಹೇಳಿದ:

It was the English, Kasper cried
Who put the French to rout

ಇಂಗ್ಲಿಷರು ಫ್ರೆಂಚರ ಮೇಲೆ ಯುದ್ಧ ಸಾರಿದ ಕ್ಷಣ ಅದು; ಅವರಿಬ್ಬರೂ ಯಾವ ಕಾರಣಕ್ಕಾಗಿ ಕಾದಾಡುತ್ತಿದ್ದರೆಂಬುದು ತನಗೆ ಅಂದೂ ಗೊತ್ತಿರಲಿಲ್ಲ, ಇಂದೂ ಗೊತ್ತಿಲ್ಲ;

But what they fought each other for
I could not well make out.

ಆದರೆ ತನಗೆ ಅಥವಾ ತನ್ನ ತಂದೆಗೆ–ಆತನೂ ರೈತನೇ– ಇಂತಹ ಅಮಾಯಕರಿಗೆ ಈ ಯುದ್ಧ ಯಾವ ರೀತಿ ತೊಂದರೆ ಉಂಟುಮಾಡಿತು ಎಂಬುದನ್ನು ಆತ ಸ್ಪಷ್ಟವಾಗಿ ಕಟ್ಟಿಕೊಟ್ಟ:

My father lived at Belnheim then,
They burnt his dwelling to the ground
And he was forced to fly
Nor had he where to rest his head

ಅಂದರೆ ಈತನ ತಂದೆಯ ಮನೆಯನ್ನು ಸೈನಿಕರು ನೆಲಸಮ ಮಾಡಿದರು; ಪಾಪ ಹೀಗೆ ಮನೆಯನ್ನು ಕಳೆದುಕೊಂಡ ಆತನಿಗೆ ಹೋಗಲು ಇನ್ನಾವುದೇ ನೆಲೆಯಿರಲಿಲ್ಲ, ಕೊನೆಯ ಪಕ್ಷ ನೆಮ್ಮದಿಯಿಂದ ಮಲಗಲು ಒಂದು ಸಣ್ಣ ಜಾಗವೂ ಇರಲಿಲ್ಲ; ಅವರು ಚಿಕ್ಕಮಕ್ಕಳನ್ನು ಹೊಂದಿದ್ದ ಹಲವಾರು ತಾಯಂದಿರು ಮತ್ತು ಹಸುಗೂಸುಗಳನ್ನು ಸಾಯಿಸಿದರು; ಇಡೀ ಹಳ್ಳಿಗೆ ಬೆಂಕಿ ಹಚ್ಚಿದರು–ಕತ್ತಿಯಿಂದ ಸಾವಿರಾರು ಕೊಲೆಗಳನ್ನು ಮಾಡಿದರು;

With fire and sword, the country round
Was wasted far and wide;
And many a childing mother then,
And new born baby died;
For many thousand bodies here
Lay rotting in the Sun

ಈ ಯುದ್ಧ ಮುಗಿದ ನಂತರ ಇಡೀ ಹಳ್ಳಿಯಲ್ಲಿ ಭಯಾನಕ ದೃಶ್ಯವಾಯಿತು, ಎಲ್ಲರ ಜಮೀನುಗಳಲ್ಲಿ ಸಾವಿರಾರು ಹೆಣಗಳು ದೊರಕಲಾರಂಭಿಸಿದವು. ಆದರೆ ಒಂದು ದೊಡ್ಡ ವಿಜಯವನ್ನು ತಂದುಕೊಡುವ ಯುದ್ಧ ನಡೆದ ನಂತರ ಇಂಥಾದ್ದೆಲ್ಲಾ ಸಹಜವೇ ಎಂದು ಎಲ್ಲರೂ ಹೇಳುತ್ತಾರಲ್ಲವೇ ಎಂದು ತನ್ನ ಮಾತನ್ನು ಮುಗಿಸಿದ.

ಆದರೆ ಇವೆಲ್ಲವನ್ನೂ ಆಸಕ್ತಿಯಿಂದ ಆಲಿಸುತ್ತಿದ್ದ ಆತನ ಮೊಮ್ಮಗಳು ಕೂಡಲೇ_ ಛೇ ಛೇ, ಇಲ್ಲ, ಇವೆಲ್ಲವೂ ಭಯಂಕರ ದುಷ್ಟತನದ್ದು" ಎಂದು ಉದ್ಗರಿಸಿದಳು, ಆಗ ವೃದ್ಧ "ಇಲ್ಲ ಮಗು, ಇಡೀ ವಿಶ್ವವೇ ಆ ಯುದ್ಧವನ್ನು ಅತ್ಯಂತ ದೊಡ್ಡ ಯುದ್ಧ ಮತ್ತು ಅವರು ಅಲ್ಲಿ ಪಡೆದದ್ದು ಅತ್ಯಂತ ದೊಡ್ಡ ವಿಜಯ ಎಂದು ಕರೆಯಿತು ಎಂದು ಪ್ರತಿಕ್ರಿಯಿಸಿದ. ಇಷ್ಟೇ ಆಸಕ್ತಿಯಿಂದ ತಾತನ ಕಥಾನಕವನ್ನು ಆಲಿಸುತ್ತಿದ್ದ ಮೊಮ್ಮಗ ಪೀಟರ್‌ಕಿನ್, ಈ ಯುದ್ಧದ ನಂತರ ಯಾವ ಒಳ್ಳೆಯ ಅಂಶ ಹೊರಬಂದಿತು? ಎಂದು ಮುಗ್ಧವಾಗಿ ಕೇಳಿದ. ತಾತ ಕ್ಯಾಸ್ಪರ್ ಅಷ್ಟೇ ಮುಗ್ಧವಾಗಿ ಅಥವಾ ಭಯಂಕರ ವಿಷಾದ ಅಥವಾ ವ್ಯಂಗ್ಯದಿಂದ, "ಅಯ್ಯೋ ಅದರ ಬಗ್ಗೆ ನಾನೇನೂ ಹೇಳು ಸಾಧ್ಯವಿಲ್ಲ; ಆದರೆ ಇಡೀ ವಿಶ್ವ ಈ ಯುದ್ಧದಲ್ಲಿ ಗಳಿಸಿದ್ದು ಅತ್ಯಂತ ದೊಡ್ಡ ವಿಜಯ ಎಂದು ಕರೆಯಿತು" ಎಂದು ಹೇಳಿ ನಿಟ್ಟುಸಿರು ಬಿಟ್ಟ.

“Why, ‘twas a very wicked thing !
Said little Wilhelmine,

“But what good came of it at at last?
Quoth little Peterkin.

“ Why, that I cannot tell”, said he,
“But it was a famous victory”

* * *

ಇಲ್ಲಿಯವರೆಗೂ ನಾವು ಓದಿದ ಪದ್ಯಗಳೆಲ್ಲವೂ ಯಾವುದೇ ದೇಶದ ಅಥವಾ ಯಾವುದೇ ಪಕ್ಷದ ಪರವಾಗಿ ಇಲ್ಲದೆ ಕೇವಲ ಯುದ್ಧವನ್ನು ಮತ್ತು ಅದರಲ್ಲಿ ಇರಬಹುದಾದ ಕಟುವಾಸ್ತವಗಳನ್ನು ವಸ್ತುನಿಷ್ಠವಾಗಿ ಗಮನಿಸಿವೆ ಇದಕ್ಕೆ ಕಾರಣವೆಂದರೆ ಈ ಪದ್ಯಗಳನ್ನು ಬರೆದವರೆಲ್ಲರೂ ಸ್ವತಃ ಸೈನಿಕರಾಗಿದ್ದವರೇ ಮತ್ತು ಯುದ್ಧವನ್ನು ನೇರವಾಗಿ ಅದರ ಹಸಿ ಕರಾಳತೆಯನ್ನು ಕಂಡಿದ್ದವರೇ ಆಗಿರುವುದು. ಈ ರೀತಿಯ ಯುದ್ಧವಿರೋಧಿ ಭಾವನೆಯ ಪದ್ಯಗಳನ್ನು ಬರೆಯಲಿಕ್ಕೆ ಯುದ್ಧಗಳಲ್ಲಿ ಸೆಣಸಾಡಲು ಅಗತ್ಯವಾದಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಿನ ಧೈರ್ಯ, ಶಕ್ತಿ ಮತ್ತು ಆತ್ಮವಿಶ್ವಾಸಗಳು ಬೇಕು ಎಂಬುದು ನಮಗೆ ತಿಳಿದಿರಬೇಕು. ಏಕೆಂದರೆ ಎಲ್ಲೆಲ್ಲೂ ಯುದ್ಧದ ಉನ್ಮಾದ ತುಂಬಿರುವಾಗ, ದೇಶಭಕ್ತಿ–ಪ್ರಾಣಾರ್ಪಣೆ; ಶತ್ರುದೇಶದವರ ಮೋಸ ಅಥವಾ ದ್ರೋಹಗಳ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗ, ಯಾವುದೇ ಒಬ್ಬ ಕವಿ ಯುದ್ಧವೇ ಬೇಡ ಎಂದಾಗಲೀ ಅಥವಾ ಯುದ್ಧ ಎಂದರೆ ಕೇವಲ ಕ್ರೌರ್ಯ ಎಂದಾಗಲೀ ಬರೆದರೆ ಅದನ್ನೇ ಹಿಡಿದು ಆತನಿಗೆ ಬೇರೆಯದ್ದೇ ಆದ ಒಂದು ಹಣೆಪಟ್ಟಿಯನ್ನು ಕಟ್ಟಿಬಿಡುವಂತಹ ಅಪಾಯವೂ ಇರುತ್ತದೆ. ಕವಿಯಾದವನು ಈ ರೀತಿಯ ಅಪಾಯಕ್ಕೆ ತನ್ನನ್ನು ಒಡ್ಡಿಕೊಂಡೇ ತನಗೆ ಅನಿಸಿದ್ದನ್ನು ನೇರವಾಗಿ ಹೇಳಿ ಸಾಮಾನ್ಯವಾಗಿ ಜನರ ಗುಂಪಿನಲ್ಲಿ ಮರೆಯಾಗಿರಬಹುದಾದ ಸೂಕ್ಷ್ಮಭಾವನೆಗಳನ್ನು ತಟ್ಟಿ ಎಬ್ಬಿಸುವ ಕೆಲಸ ಮಾಡಬೇಕಾಗುತ್ತದೆ. ಇದನ್ನು ಇಂಗ್ಲಿಷ್ ಸಾಹಿತ್ಯದಲ್ಲಿ ಹಲವಾರು ಕವಿಗಳು ಮಾಡಿದ್ದಾರೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

❒❒

ಲೇಖಕರ ವಿಳಾಸಗಳು

1. **ಡಾ. ಸಿ.ಯು. ಮಂಜುನಾಥ್,** ನಂ. 148, 7ನೇ 'ಸಿ'ಮುಖ್ಯರಸ್ತೆ, ಕಲ್ಯಾಣಗೃಹ ನಿರ್ಮಾಣ ಸಂಘದ ಬಡಾವಣೆ, ವಿಜಯನಗರ 2ನೇಹಂತ, ಹಂಪಿನಗರ, ಬೆಂಗಳೂರು– 560104 ಮೊ–9845031692
2. **ಡಾ. ಎನ್.ಆರ್. ಲಲಿತಾಂಬ,** ನಂ. 335, 'ವಸಿಷ್ಠ' 14ನೇ ಅಡ್ಡರಸ್ತೆ. ಸರಸ್ವತಿನಗರ ವಿಜಯನಗರ ಬೆಂಗಳೂರು–560040 ಮೊ: 9845427581
3. **ಎಸ್.ಆರ್. ವಿಜಯಶಂಕರ,** 2/103, ಓಂಕಾರ್ ಅಪಾರ್ಟ್‌ಮೆಂಟ್ಸ್, 8ನೇ ಮುಖ್ಯರಸ್ತೆ, 12 ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು– 560003 ಮೊ – 9880302450
4. **ಡಾ. ಗುರುಪಾದ ಮರಿಗುದ್ದಿ,** ಕವಿಶೈಲ ಮಹಾದೇವ ನಗರ, ಸಂಕೇಶ್ವರ 591313 ಜಿ. ಬೆಳಗಾವಿ ಮೊ– 94494 65617
5. **ಡಾ. ಸಿ.ಕೆ. ಜಗದೀಶ್,** # 09, ಸುಮ್ಮನೆ, 6ನೇ ತಿರುವು, ಮುನಿಕೊಂಡಪ್ಪ ಲೇ ಔಟ್, ನಾಗಸಂದ್ರ ಅಂಚೆ, ಬೆಂಗಳೂರು–560073 ಮೊ–9844615910
6. **ಡಾ. ಪೂರ್ಣಿಮಾ ಎಸ್.,** ಕನ್ನಡ ಸಹಪ್ರಾಧ್ಯಾಪಕಿ, ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೇಸ್ ಸ್ಟಡೀಸ್, ಕೆಂಗೇರಿ ಉಪನಗರ, ಬೆಂಗಳೂರು– 560060 ಮೊ. 8277121204
7. **ಡಾ. ಜಯಪ್ರಕಾಶ್ ಶೆಟ್ಟಿ ಎಚ್.,** 'ತೆನೆ' ಸರ್ವಪ್ರಕಾಶನಗರ ಅಂಕದಕಟ್ಟೆ, ಕೋಟೇಶ್ವರ, ಕುಂದಾಪುರ ತಾಲೂಕು 576222. ಮೊ:
8. **ಉಮೇಶ ಶಿರೂರು**. # 313, ಜಿ.ಆರ್. ಗ್ರೀನ್ಲೇನ್ ಅಪಾರ್ಟ್‌ಮೆಂಟ್, ಚುಂಚಘಟ್ಟ ಮುಖ್ಯರಸ್ತೆ, ಜೆ.ಪಿ.ನಗರ, ಬೆಂಗಳೂರು–560062 ಮೊ– 9448353910
9. **ಡಾ. ಶೋಭಾರಾಣಿ ಎನ್.,** ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು ಮೊ:
10. **ಓ.ಆರ್. ಪ್ರಕಾಶ್,** ಪ್ರವಾಚಕರು, ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು.